ಗ್ರಾಮೀಣ ಮಹಿಳೆಯರ ಶಿಕ್ಷಣದ ಪ್ರಮುಖ ಸಮಸ್ಯೆಗಳು

ಒಂದು ಸ್ತ್ರೀವಾದಿ ಸಮಾಜಶಾಸ್ತ್ರೀಯ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ
ಎಂ.ಸರಸ್ವತಮ್ಮ

ಮಾರ್ಗದರ್ಶಕರು
ಡಾ.ಶೈಲಜ ಇಂ.ಹಿರೇಮಠ
ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೧೬

ಗ್ರಾಮೀಣ ಮಹಿಳೆಯರ ಶಿಕ್ಷಣದ ಪ್ರಮುಖ ಸಮಸ್ಯೆಗಳು

ಒಂದು ಸ್ತ್ರೀವಾದಿ ಸಮಾಜಶಾಸ್ತ್ರೀಯ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ
ಎಂ.ಸರಸ್ವತಮ್ಮ

ಮಾರ್ಗದರ್ಶಕರು
ಡಾ.ಶೈಲಜ ಇಂ.ಹಿರೇಮಠ
ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಎಂ.ಸರಸ್ವತಮ್ಮ ಇವರು ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಗ್ರಾಮೀಣ ಮಹಿಳೆಯರ ಶಿಕ್ಷಣದ ಪ್ರಮುಖ ಸಮಸ್ಯೆಗಳು: ಒಂದು ಸ್ತ್ರೀವಾದಿ ಸಮಾಜಶಾಸ್ತ್ರೀಯ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಮಹಿಳಾ ಅಧ್ಯಯನ** ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

Hiremath

ಡಾ.ಶೈಲಜ ಇಂ.ಹಿರೇಮಠ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: 25/8/2016

ಸಂಶೋಧಕರ ಪ್ರಮಾಣ ಪತ್ರ

ಗ್ರಾಮೀಣ ಮಹಿಳೆಯರ ಶಿಕ್ಷಣದ ಪ್ರಮುಖ ಸಮಸ್ಯೆಗಳು: ಒಂದು ಸ್ತ್ರೀವಾದಿ ಸಮಾಜಶಾಸ್ತ್ರೀಯ ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಮಹಿಳಾ ಅಧ್ಯಯನ ವಿಭಾಗದ, ಪ್ರಾಧ್ಯಾಪಕರಾದ **ಡಾ.ಶೈಲಜ ಇಂ.ಹಿರೇಮಠ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

[signature]

ಎಂ.ಸರಸ್ವತಮ್ಮ
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ:
ದಿನಾಂಕ: 25/8/2016

ಪರಿವಿಡಿ

ಅರಿಕೆ

ಭಾರತ ಗ್ರಾಮಗಳ ದೇಶವಾಗಿದ್ದು ಶೇ.೮೦ಕ್ಕೂ ಹೆಚ್ಚು ಮಹಿಳೆಯರು ಗ್ರಾಮಗಳಲ್ಲೇ ವಾಸಿಸುತ್ತಾರೆ. ಗ್ರಾಮೀಣ ಮಹಿಳೆ ನಗರ ಮಹಿಳೆಗಿಂತ ಹೆಚ್ಚು ವಂಚನೆಗೊಳಗಾಗಿದ್ದಾಳೆ. ಗ್ರಾಮೀಣ ಸಮಾಜದಲ್ಲಿ ಯಾವುದೇ ಸವಲತ್ತು ಸಿಗುವಾಗಲೂ ಅದು ಮೊದಲು ಗಂಡಿಗೆ ದೊರೆತರೆ ಅನಂತರ ಹೆಣ್ಣಿಗೆ ಸಿಗುತ್ತದೆ.

ಭಾರತೀಯ ಮಹಿಳೆ, ವಿಶೇಷವಾಗಿ ಗ್ರಾಮೀಣ ಮಹಿಳೆಯು ಶಿಕ್ಷಣ ಮತ್ತು ಸ್ಥಾನಮಾನಗಳಿಂದ ವಂಚಿತಳಾಗಿದ್ದಾಳೆ. ಗ್ರಾಮೀಣ ಸಮಾಜದಲ್ಲಿ ಸ್ತ್ರೀ ಪುರುಷ ಎಂಬ ಸಾಮಾಜಿಕ ತಾರತಮ್ಯಗಳು ಹೆಚ್ಚಾಗಿ ಕಂಡುಬರುತ್ತವೆ. ಶಿಕ್ಷಣವು ಗ್ರಾಮೀಣ ಮಹಿಳೆಗೆ ಸಾಮಾಜಿಕ ಶ್ರೇಣೀಕರಣದಲ್ಲಿ ಮೇಲ್ಮುಖ ಚಲನೆಗೆ ಅವಕಾಶವನ್ನು ಮಾಡಿಕೊಡುತ್ತದೆ.

ಗ್ರಾಮೀಣ ಮಹಿಳಾ ಸಾಕ್ಷರತಾ ಪ್ರಮಾಣಕ್ಕೆ ಹೋಲಿಸಿದರೆ ಪಟ್ಟಣದ ಮಹಿಳೆಯ ಸಾಕ್ಷರತಾ ಪ್ರಮಾಣದಲ್ಲಿ ಹೆಚ್ಚಳವು ಗೋಚರಿಸುತ್ತದೆ. ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಲಿಂಗ ತಾರತಮ್ಯ ಹೆಚ್ಚಾಗಿ ಕಂಡು ಬರುತ್ತದೆ. ಈ ಲಿಂಗ ಅಸಮಾನತೆಯು ಮಹಿಳೆಯರ ಮೇಲೆ ತುಂಬಾ ದುಷ್ಪರಿಣಾಮವನ್ನು ಬೀರುತ್ತದೆ.

ಆದುದರಿಂದ ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಇರುವ ಪ್ರಮುಖ ಸಮಸ್ಯೆಗಳಾವುವು, ಆ ಸಮಸ್ಯೆಗೆ ಇರುವ ಕಾರಣಗಳಾವುವು ಎಂಬುದನ್ನು ಸ್ತ್ರೀವಾದಿ ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ.

ಈ ಅಧ್ಯಯನಕ್ಕೆ ಕನ್ನಡ ವಿಶ್ವವಿದ್ಯಾಲಯವು ಒಂದು ಮಹತ್ತರವಾದ ಅವಕಾಶವನ್ನು ಕಲ್ಪಿಸಿಕೊಟ್ಟಿದೆ, ಅದಕ್ಕಾಗಿ ವಿಶ್ವವಿದ್ಯಾಲಯಕ್ಕೆ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳು. ನನ್ನ ಅಧ್ಯಯನದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಮಲ್ಲಿಕಾ ಎಸ್. ಘಂಟಿ, ಹಾಗೆಯೇ ಮಾನ್ಯ ಕುಲಸಚಿವರಾದ ಡಾ. ಡಿ. ಪಾಂಡುರಂಗ ಬಾಬು ಅವರುಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಈ ಪ್ರಬಂಧವು ಉತ್ತಮ ಮಟ್ಟದಲ್ಲಿ ರೂಪುಗೊಳ್ಳಲು ಅತ್ಯುತ್ತಮವಾದ ಸಲಹೆ, ಸೂಚನೆಯನ್ನು ನೀಡಿ ಉತ್ತಮ ಮಾರ್ಗದರ್ಶನ ನೀಡಿದ ಡಾ. ಶೈಲಜ ಇಂ. ಹಿರೇಮಠ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಶಿವಾನಂದ ಎಸ್. ವಿರಕ್ತಮಠ ಅವರಿಗೂ ಮತ್ತು ವಿಭಾಗದ ಬೋಧಕೇತರ ಸಿಬ್ಬಂದಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಪಿಎಚ್.ಡಿ. ಸಹಸಂಶೋಧನ ವಿಧ್ಯಾರ್ಥಿಗಳಾದ ಭೀಮೇಶ್, ಹನುಮೇಶ್, ಭುವನೇಶ್ವರಿ, ಅಪ್ಪಣ್ಣ ಮತ್ತು ಉಮಾರವರಿಗೂ ನನ್ನ ವಂದನೆಗಳು.

ಹಂಪಿ ವಿಶ್ವವಿದ್ಯಾಲಯದಲ್ಲಿ ನನ್ನ ಪಿಎಚ್.ಡಿ. ಅಧ್ಯಯನ ಮಾಡಲು ಪ್ರೇರೇಪಿಸಿದ ಡಾ. ಡಿ.ವಿ.ಪರಶಿವಮೂರ್ತಿ, ಪ್ರಾಧ್ಯಾಪಕರು, ಕನ್ನಡ ವಿಭಾಗದ ಮುಖ್ಯಸ್ಥರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು ಅವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಶಿಕ್ಷಣ ಮತ್ತು ಯಶಸ್ಸಿಗೆ ಕಾರಣರಾದ ನನ್ನ ತಂದೆ-ತಾಯಿಯರಾದ ಲೇಟ್ ಕೆ.ಪಿ. ಮುನಿಯಪ್ಪ, ಮುನಿಯಮ್ಮ ಮತ್ತು ನನ್ನ ಅಣ್ಣಂದಿರಾದ ಎಂ. ಅಪ್ಪಾಜಿ, ಎಂ. ಪ್ರಕಾಶ್, ಎಂ. ಪಿಳ್ಳಪ್ಪನವರಿಗೂ ನನ್ನ ತುಂಬು ಹೃದಯದ ವಂದನೆಗಳು.

ನನ್ನ ಜೀವನದ ಕಷ್ಟಸುಖಗಳಲ್ಲಿ ಭಾಗಿಯಾಗಿ ನನ್ನ ಪಿಎಚ್.ಡಿ. ಅಧ್ಯಯನಕ್ಕೆ ಒತ್ತಾಸೆ ನೀಡಿದ ನನ್ನ ಬಾಳ ಸಂಗಾತಿ ಟಿ.ಕೆ. ಧನಂಜಯರವರಿಗೂ ನನ್ನ ವಂದನೆಗಳು. ಮಗಳಾದ ಟಿ.ಡಿ. ತಾರಿಣಿ, ಮಗ ಟಿ.ಡಿ. ಉಲ್ಲಾಸ್‌ರವರು ಸಹ ನನ್ನ ಪಿಎಚ್.ಡಿ. ಅಧ್ಯಯನಕ್ಕೆ ಬೆಂಬಲವನ್ನು ನೀಡಿದ್ದಾರೆ. ಅವರುಗಳನ್ನು ಪ್ರೀತಿಯಿಂದ ನೆನೆಯುವೆ.

ನನ್ನ ಪಿಎಚ್.ಡಿ. ಅಧ್ಯಯನಕ್ಕೆ ಸಹಕರಿಸಿದ ಹೆಬ್ಬಗೋಡಿ ಗ್ರಾಮಪಂಚಾಯಿತಿ ಮತ್ತು ಸಮಂದೂರು ಗ್ರಾಮ ಪಂಚಾಯಿತಿಯ ಮಹಿಳಾ ಸಂದರ್ಶಿತರಿಗೂ, ಹಿರಿಯ ನಾಗರೀಕರಿಗೂ, ಶಾಲಾ ಮುಖ್ಯೋಪಾಧ್ಯಾಯರಿಗೂ ಮತ್ತು ಸಂದರ್ಶಿತ ವಿದ್ಯಾರ್ಥಿಗಳಿಗೂ ತುಂಬು ಹೃದಯದ ವಂದನೆಗಳು.

ಎಂ. ಸರಸ್ವತಮ್ಮ

ಸಂಶೋಧನಾ ವಿದ್ಯಾರ್ಥಿನಿ

ಪಟ್ಟಿಯ ವಿವರಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಶಿಕ್ಷಣವೆಂದರೆ ಕೇವಲ ಬುದ್ಧಿವಂತಿಕೆಯನ್ನು ಗಳಿಸುವುದಾಗಲಿ ಅಥವಾ ಕೇವಲ ಅನುಭವವನ್ನು ಗಳಿಸುವುದಾಗಲೀ ಆಗಿರದೆ; ಅದು ಮನುಷ್ಯರ ಅಭ್ಯಾಸ, ವರ್ತನೆ ಮತ್ತು ಚಾತುರ್ಯಗಳನ್ನು ಅಭಿವೃದ್ಧಿಗೊಳಿಸುತ್ತದೆ. ಶಿಕ್ಷಣವು ಮಾನವನ ಸುಪ್ತ ಶಕ್ತಿಗಳ ಸ್ವಾಭಾವಿಕ, ಸಮಗ್ರ ಅಭಿವೃದ್ಧಿಯೆನಿಸಿಕೊಂಡಿದೆ. ಮಕ್ಕಳನ್ನು ಉತ್ತಮ ನಾಗರಿಕರಾಗಿ ಇತರರೊಡನೆ ಸ್ನೇಹ-ಕರುಣೆ ಮುಂತಾದ ಮಾನವೀಯ ಮೌಲ್ಯಗಳೊಡನೆ ಬೆಳೆಸುವುದೇ ಶಿಕ್ಷಣವಾಗಿದೆ. ಆಳವಾದ ಮತ್ತು ವ್ಯಾಪಕವಾದ ಜ್ಞಾನವನ್ನು ಒಳಗೊಂಡಂತೆ ಅಪೇಕ್ಷಿತ ಮಟ್ಟದ ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುವ ಪ್ರಕ್ರಿಯೆಗಳ ಸಮೂಹವೇ ಶಿಕ್ಷಣವಾಗಿದೆ. ವ್ಯಕ್ತಿಗೆ ಸತ್ಯರೂಪವನ್ನು ತಿಳಿಸಿ ಅದನ್ನು ಆಚರಣೆಗೆ ತರುವುದೇ ಶಿಕ್ಷಣವಾಗಿದೆ. ಅಂತರಿಕವಾಗಿರುವುದನ್ನು ಹೊರಹಾಕಿಸಿ ಬಾಹ್ಯ ಜಗತ್ತಿನ ಸಂಬಂಧ ಪಡೆಯುವಂತೆ ಮಾಡುವುದೇ ಶಿಕ್ಷಣವಾಗಿದೆ. ಸತ್ಯ ಸೌಂದರ್ಯಗಳ, ಸಭ್ಯತೆಯ ಪ್ರಜ್ಞೆಯೇ ಶಿಕ್ಷಣ. ಅಂದರೆ ಮಾನವನಲ್ಲಿ ಸುಪ್ತವಾಗಿರುವ ಸ್ವಾಭಾವಿಕ, ಮಾನಸಿಕ, ಅಧ್ಯಾತ್ಮಿಕ ಮೊದಲಾದ ವಿವಿಧ ಜ್ಞಾನಾಂಶಗಳ ಸಂಶೋಧನೆಯೇ ಶಿಕ್ಷಣವಾಗಿದೆಯೆನ್ನಬಹುದು. ಮಗುವಿನ ಶಿರ-ಉರ-ಕರಗಳ ವಿಕಾಸವಾಗಿ ಮಕ್ಕಳಲ್ಲಿ ಶ್ರದ್ಧೆ, ಧ್ಯೇಯ, ವಿವೇಕ, ನಿಗ್ರಹ, ಮೊದಲಾದ ಸದ್ಗುಣಗಳು ನೆಲೆಸುವಂತೆ ಮಾಡುವುದೇ ಶಿಕ್ಷಣವಾಗಿದೆ. ವ್ಯಕ್ತಿಗೆ ಸೂಕ್ತ ಮಾರ್ಗದರ್ಶನ ನೀಡಿ ಕತ್ತಲಿನಿಂದ ಬೆಳಕಿಗೆ ಕರೆತರುವ ಕಾರ್ಯವನ್ನು ಶಿಕ್ಷಣವು ಮಾಡುತ್ತಿದೆ.[೧]

ಶಿಕ್ಷಣವು ಮಾನವ ಸಮಾಜದ ಮೂಲಭೂತ ಅಗತ್ಯಗಳಲ್ಲಿ ಒಂದು. ಮಾನವ ಸಮಾಜದ ಅಸ್ತಿತ್ವವೇ ಸಂಸ್ಕೃತಿಯ ಸಂಚರಣೆಯ ಮೇಲೆ ನಿಂತಿದೆ. ಪ್ರತಿಯೊಂದು ಸಮಾಜವು ಪರಿಸರದೊಂದಿಗೆ ಹೊಂದಿಕೊಳ್ಳಲು ಶಿಕ್ಷಣದ ಮೇಲೆ ಅವಲಂಬಿಸಬೇಕಾಗುತ್ತದೆ. ಬದಲಾಗುತ್ತಿರುವ ಸಮಾಜದೊಡನೆ ಹೊಂದಿಕೊಳ್ಳುವ ಅಗತ್ಯತೆಯನ್ನು ಶಿಕ್ಷಣದ ಮೂಲಕವೇ ಕಲಿತುಕೊಳ್ಳುತ್ತಾರೆ.

'ಶಿಕ್ಷಣ' ಎಂಬ ಪದವು ಲ್ಯಾಟಿನ್ ಭಾಷೆಯ 'ಎಜುಕೇರ್' ಎಂಬ ಪದದಿಂದ ಬಂದಿದೆ. ಎಜುಕೇರ್ ಎಂದರೆ ಮೇಲಕ್ಕೆ ತರುವುದು, ಮುಂದಕ್ಕೆ ತರುವುದು ಎಂದರ್ಥ. ಅಷ್ಟೇ ಅಲ್ಲದೆ ಎಜುಕೇರ್ ಎಂಬ ಪದವು ತರಬೇತುಗೊಳಿಸು, ಮಾರ್ಗದರ್ಶಿಸು, ಬೋಧಿಸು ಇತ್ಯಾದಿ ಪರ್ಯಾಯ ಪದಗಳನ್ನು ಸೂಚಿಸುತ್ತದೆ.

ಮಾನವಜೀವಿಯು ಶಾರೀರಿಕ, ಬೌದ್ಧಿಕ, ಅಧ್ಯಾತ್ಮಿಕ ಸಮರ್ಥಗಳ ವಿಕಸನ ಮತ್ತು ಪ್ರಕಟಣೆಗಳನ್ನು ಶಿಕ್ಷಣವೆಂದು ಹೇಳಬಹುದು. ಸ್ವಾಮಿ ವಿವೇಕಾನಂದರ ಪ್ರಕಾರ "ಮಾನವನಲ್ಲಿ ಆಗಲೆ ಇರುವ ಪರಿಪೂರ್ಣತೆಯನ್ನು ಪ್ರಕಟಿಸುವುದೇ ಶಿಕ್ಷಣ" ಎನ್ನುತ್ತಾರೆ.

ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣವು ಸಹಾಯಕವಾಗಿದೆ. ಜೀವನದ ಮೌಲ್ಯಗಳಲ್ಲಿ ಉತ್ತಮವಾದುದನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಅಪೇಕ್ಷಿತ ವಾದುದು ಮತ್ತು ಅನಪೇಕ್ಷಿತವಾದುದನ್ನು ತಿಳಿಯಪಡಿಸಿ, ಸರಿಯಾದ ಮಾರ್ಗವನ್ನು ಅನುಸರಿಸು ವಂತೆ ಪ್ರಚೋದನೆ ಮಾಡುವ ಗುಣವನ್ನು ಶಿಕ್ಷಣವು ಒಳಗೊಂಡಿದೆ. ಮನುಷ್ಯರ ಜೀವನವನ್ನು ಹಸನುಗೊಳಿಸುವ ಮತ್ತು ಸಮಾಜದ ಸಹಕಾರಿ ಜೀವನಕ್ಕೆ ಅಗತ್ಯವಾದ ಮಾಗದರ್ಶನವನ್ನು ನೀಡುತ್ತದೆ.[೨]

ಔಪಚಾರಿಕ ಶಿಕ್ಷಣವು ಪ್ರತ್ಯಕ್ಷ ಶಿಕ್ಷಣ, ಪ್ರಜ್ಞಾಪೂರ್ವಕವಾಗಿ ನೀಡುವ ಶಿಕ್ಷಣ, ವ್ಯವಸ್ಥಿತವಾಗಿ ಶಾಲಾ ಕಾಲೇಜುಗಳಲ್ಲಿ ಅಭ್ಯಾಸ ಪತ್ರಿಕೆಗಳನ್ನನುಸರಿಸಿ ನೀಡುವ ಶಿಕ್ಷಣವಾಗಿದೆ. ಕ್ರಮವಾಗಿ ತರ್ಕಸಮ್ಮತವೆನಿಸುವಂತೆ ಪೂರ್ವಬಾವಿಯಾಗಿ ನಿಯೋಜಿತ ವ್ಯವಸ್ಥಿತ ವಿಧಾನದಲ್ಲಿ ನೀಡುವ ಯಾವುದೇ ವಿಧವಾದ ಶಿಕ್ಷಣವು ಔಪಚಾರಿಕ ಶಿಕ್ಷಣವಾಗಿದೆ.

ಮಹಿಳೆಯರಿಗೆ ಔಪಚಾರಿಕ ಶಿಕ್ಷಣದ ಅವಶ್ಯಕತೆ

ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ನೀಡುವುದು ಸರ್ಕಾರದ ಆದ್ಯಕರ್ತವ್ಯ. ಸಂವಿಧಾನದಲ್ಲಿಯೂ ಸಹ ಸ್ತ್ರೀ ಶಿಕ್ಷಣ ಕುರಿತು ಪ್ರಸ್ತಾಪವಿದೆ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬಾಲಕಿಯರ ಶಿಕ್ಷಣ ಕುರಿತು ಪಸ್ತಾಪಿಸಲಾಗಿದೆ. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ಸಾಮಾಜಿಕ ಜವಾಬ್ದಾರಿ ಹಾಗೂ ಮಾನವ ಹಕ್ಕುಗಳ ವಿಷಯವಾಗಿದೆ. ಹಿಂದಿನ ಕಾಲದಲ್ಲಿ ಸ್ತ್ರೀ ಶಿಕ್ಷಣ ಅಷ್ಟಾಗಿ ಪ್ರಚಲಿತದಲ್ಲಿರಲಿಲ್ಲ. ಸ್ವಾತಂತ್ರ್ಯನಂತರ ಸ್ತ್ರೀ ಶಿಕ್ಷಣಕ್ಕೆ ಹೆಚ್ಚು ಮಹತ್ವ ದೊರೆಯಿತು.

೧. ಮಾನವ ಹಕ್ಕುಗಳ ದೃಷ್ಟಿಯಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕಿದೆ. ಸಂವಿಧಾನದ ೨೮ನೇ ಅನುಚ್ಛೇದವು "ಶಿಕ್ಷಣ ಒಂದು ಹಕ್ಕು ಎಂದು ಪರಿಗಣಿಸಿದೆ.

೨. ಲಿಂಗತಾರತಮ್ಯವನ್ನು ಹೋಗಲಾಡಿಸಲು ಅನಕ್ಷರತೆ ನಿರ್ಮೂಲನೆ ಮಾಡಲು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲೇಬೇಕು.

೩. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಆ ಮಗು ಬೆಳೆದು ದೊಡ್ಡವಳಾದ ಮೇಲೆ ಸಾಮಾಜಿಕ, ಆರ್ಥಿಕ ಹಾಗೂ ನೈತಿಕವಾಗಿ ಸಬಲಗೊಂಡು ಸ್ವಾವಲಂಬನೆಯನ್ನು ಪಡೆಯಲು ಅನುಕೂಲವಾಗುತ್ತದೆ.

೪. ಜೋಮ್ ಟಿಎನ್ ಸಮ್ಮೇಳನದಲ್ಲಿ ಸೇರಿದ ೧೫೫ ದೇಶಗಳ ಅಂತರ ಸರ್ಕಾರ ಸಂಸ್ಥೆಗಳು, ಹಾಗೂ ಸರ್ಕಾರೇತರ ಸಂಸ್ಥೆಗಳು ಹೆಣ್ಣುಮಕ್ಕಳಿಗೆ ಅಗತ್ಯ ಶಿಕ್ಷಣವನ್ನು ನೀಡಬೇಕೆಂದು ಪ್ರತಿವಾದಿಸಿದವು.

೫. ಯಾವುದೇ ಅಭಿವೃದ್ಧಿ ಹೊಂದುತ್ತಿರುವ ದೇಶವು ಹೂಡಬೇಕಾದ ಮುಖ್ಯವಾದ ಬಂಡವಾಳವೆಂದರೆ ಹೆಣ್ಣುಮಕ್ಕಳ ಶಿಕ್ಷಣ, ಸುಶಿಕ್ಷಿತ ಮಹಿಳೆಯು ಉತ್ತಮ ಸಮಾಜವನ್ನು ನಿರ್ಮಾಣ ಮಾಡುವುದರಿಂದ ಅವಳಿಗೆ ಶಿಕ್ಷಣ ನೀಡಬೇಕಾದ ಅಗತ್ಯವಿದೆ.

೬. ಮಹಿಳೆಯರು ಹಿಂದಿನಿಂದಲೂ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಆದುದರಿಂದ ಅವರಿಗೆ ಶಿಕ್ಷಣದ ಸವಲತ್ತು ನೀಡಬೇಕೆಂದು ಸಂವಿಧಾನವು ೧೫(೩)ನೇ ವಿಧಿ ತಿಳಿಸಿದೆ. ಆದುದರಿಂದ ಸ್ತ್ರೀಯರಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲು ಶಿಕ್ಷಣವನ್ನು ನೀಡಬೇಕಿದೆ.

೭. ಮಹಿಳೆಯರು ಪುರುಷರಷ್ಟೆ ಸಾಮರ್ಥ್ಯವನ್ನು ಹೊಂದಿದ್ದಾರೆ. ಆ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಆತ್ಮಸ್ಥೈರ್ಯದ ಅವಶ್ಯಕತೆ ಇದೆ. ಔಪಚಾರಿಕ ಶಿಕ್ಷಣವು ಮಹಿಳೆಯರಿಗೆ ಆತ್ಮಸ್ಥೈರ್ಯವನ್ನು ಉಂಟುಮಾಡುತ್ತದೆ.

೮. ಮಹಿಳೆಯರಿಗೆ ಇರುವ ಸಾಮಾಜಿಕ ಕಳಂಕವನ್ನು ಹೋಗಲಾಡಿಸಿ ಸ್ತ್ರೀಯರಲ್ಲಿ ಸ್ಫೂರ್ತಿಯನ್ನುಂಟು ಮಾಡಲು ಔಪಚಾರಿಕ ಶಿಕ್ಷಣದ ಅವಶ್ಯಕತೆ ಇದೆ.

೯. ಔಪಚಾರಿಕ ಶಿಕ್ಷಣವು ಮಹಿಳೆಯರ ಜೀವನವನ್ನು ವರ್ತಮಾನ ಹಾಗೂ ಭವಿಷ್ಯತ್ ಕಾಲಗಳೆರಡರಲ್ಲು ಉತ್ತಮಗೊಳಿಸುವಲ್ಲಿ ಸಂದೇಹವಿಲ್ಲ. ಔಪಚಾರಿಕ ಶಿಕ್ಷಣ ಕೇವಲ ಉದ್ಯೋಗ ಒದಗಿಸುವುದು ಮಾತ್ರವಲ್ಲದೆ, ಅವರ ಜೀವನ ಸ್ಥಿತಿ ಹಾಗೂ ಸನ್ನಿವೇಶಗಳನ್ನು ಸುಧಾರಿಸುತ್ತದೆ. ಮಹಿಳೆಯರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಶಿಕ್ಷಣದ ಅವಶ್ಯಕತೆ ಇದೆ.

೧೦. ಮಹಿಳೆಯು ಉತ್ತಮ ಕೆಲಸಗಾರ್ತಿ ಮತ್ತು ನಾಗರಿಕಳಾಗಲು ಅಗತ್ಯವಾದ ಎಲ್ಲಾ ಕೌಶಲ್ಯಗಳನ್ನು ಪಡೆಯಲು ಅವಳಿಗೆ ಶಿಕ್ಷಣ ನೀಡಬೇಕಿದೆ.

ಒಬ್ಬ ಪುರುಷನಿಗೆ ಶಿಕ್ಷಣ ನೀಡಿದರೆ ಅದು ಅವನಿಗೆ ಮಾತ್ರ ಉಪಯೋಗವಾಗಬಹುದು. ಆದೇ ಶಿಕ್ಷಣವನ್ನು ಒಬ್ಬ ಸ್ತ್ರೀ ಪಡೆದರೆ ಇಡೀ ಕುಟುಂಬವೇ ಸುಸಂಸ್ಕೃತವಾಗುವುದರಲ್ಲಿ ಸಂದೇಹವಿಲ್ಲ. ಸ್ತ್ರೀ ಶಿಕ್ಷಣವು ಸಮಾಜ ಸುಧಾರಣೆಗೆ ಆರ್ಥಿಕ ಪುರೋಭಿವೃದ್ಧಿಗೆ ಹಾಗೂ ರಾಷ್ಟ್ರೀಯ ಸೌಹಾರ್ದತೆಗೆ ಅತ್ಯಂತ ಅವಶ್ಯಕವಾಗಿದೆ. ಭಾರತದಲ್ಲಿ ಸ್ತ್ರೀ ಶಿಕ್ಷಣ ಪ್ರಗತಿಪರವಾಗಿದೆ ಎಂಬುದು ನಿಸ್ಸಂದೇಹವೆನಿಸಿದರೂ ಇತರ ದೇಶಗಳಿಗೆ ಹೋಲಿಸಿದಾಗ ಅದು ಇನ್ನೂ ಮಂದಗತಿಯಲ್ಲೇ ಸಾಗುತ್ತಿದೆ.

ಭಾರತ ಗ್ರಾಮಗಳ ದೇಶವಾಗಿದ್ದು ಪರಂಪರೆಯಲ್ಲಿ ರೂಢಿಗತವಾಗಿ ಹೆಣ್ಣಿಗೆ ಬಂದ ನಂಬಿಕೆಗಳು ಚಾಲ್ತಿಯಲ್ಲಿದ್ದು, ಹೆಣ್ಣಿಗೆ ಬಾಲ್ಯದಲ್ಲಿಯೇ ವಿವಾಹ ಮಾಡುವ, ಶಿಕ್ಷಣದಿಂದ ದೂರವಿಡುವ ಮತ್ತು ದಿನಕ್ಕೆ ೧೪ ಗಂಟೆ ದುಡಿದರೂ ಆರ್ಥಿಕ ಸ್ವಾವಲಂಬಿಗಳಲ್ಲದ ಅಧೀನತೆಯು ಪ್ರಾಪ್ತವಾಗಿದೆ. ನಗರದಲ್ಲಿ ಹೆಣ್ಣು ಮಗುವಿಗೆ ಇರುವ ಅವಕಾಶಗಳಿಗೂ ಹಾಗೂ ಗ್ರಾಮದಲ್ಲಿ ಹೆಣ್ಣು ಮಗುವಿಗೆ ಇರುವ ಅವಕಾಶಗಳಿಗೂ ಬಹಳ ಅಂತರವಿದೆ. ಈ ಅಂತರ ಅವರಿಬ್ಬರ ಜೀವನಕ್ರಮಗಳಲ್ಲಿ ಸಿಗುವ ಸಂಪನ್ಮೂಲಗಳ ನಡುವೆ ವ್ಯತ್ಯಾಸವನ್ನುಂಟುಮಾಡುವುದರಿಂದ ಗ್ರಾಮೀಣ ಮಹಿಳೆ, ನಗರ ಮಹಿಳೆಗಿಂತ ಹೆಚ್ಚು ವಂಚನೆಗೊಳಗಾಗಿದ್ದಾಳೆ. ಗ್ರಾಮೀಣರಲ್ಲಿ ಯಾವುದೇ ಸವಲತ್ತು ಸಿಗುವಾಗಲೂ ಅದು ಮೊದಲು ಗಂಡಿಗೆ ದೊರೆತರೆ ಅನಂತರ ಹೆಣ್ಣಿಗೆ ಸಿಗುತ್ತದೆ.[೩]

ಮಹಿಳೆಯರ ಸ್ಥಾನಮಾನ ಸುಧಾರಿಸುವ ಎರಡು ಪ್ರಮುಖ ಅಂಶಗಳೆಂದರೆ ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂಬನೆ(ಉದ್ಯೋಗ). ಮಹಿಳೆಗೆ ಶಿಕ್ಷಣ ಉತ್ತಮ ಸ್ಥಾನವನ್ನು ತಂದು ಕೊಡುವ ಪ್ರಮುಖ ಸಾಧನವಾಗಿದೆ. ಶಿಕ್ಷಣವು ಸಾಮಾಜಿಕ ಶ್ರೇಣೀಕರಣದಲ್ಲಿ ಮೇಲ್ಮುಖ ಚಲನೆಗೆ ಅವಕಾಶವನ್ನು ಮಾಡಿಕೊಡುತ್ತದೆ.

ಶಿಕ್ಷಣದ ಅವಕಾಶಗಳು ಲಭ್ಯವಾದಂತೆ ಮಹಿಳೆಯರಿಗೆ ಆಯ್ಕೆಮಾಡಿಕೊಳ್ಳುವ ಸಾಮರ್ಥ್ಯ ನಿಧಾನವಾಗಿ ಹೆಚ್ಚಾಗುತ್ತದೆ. ಆದುದರಿಂದ ಶಿಕ್ಷಣ ನೀಡುವಲ್ಲಿ ಇರುವ ಅಡ್ಡಿಗಳನ್ನು ಹೋಗಲಾಡಿಸು ವುದರ ಜೊತೆಜೊತೆಗೆ ಲಿಂಗತಾರತಮ್ಯವನ್ನು ಹೋಗಲಾಡಿಸುವ ಶಿಕ್ಷಣ ನೀಡುವ ಮೂಲಕ ಹೆಣ್ಣಿನ ಜೀವನ ವಿಧಾನವನ್ನು ಪುನರ್ ರಚಿಸುವ ಅಗತ್ಯವಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಮಹಿಳೆಯ ಸಾಕ್ಷರತೆ ಮತ್ತು ಶಿಕ್ಷಣವನ್ನು ಕುಟುಂಬದ ಮೇಲಿನ ಹೊರೆಯೆಂದು ಭಾವಿಸಲಾಗುತ್ತಿದೆ. ಅವರ ಶಿಕ್ಷಣದ ಮೇಲೆ ಬಂಡವಾಳ ತೊಡಗಿಸು

ವುದೆಂದರೆ ಮತ್ತೊಬ್ಬರ ಮನೆಯ ಗಿಡಕ್ಕೆ ನೀರು ಹಾಕಿದಂತೆ ಎಂದು ಭಾವಿಸಲಾಗುತ್ತಿದೆ.

ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿದಾಗ ತಿಳಿದು ಬರುವುದೇನೆಂದರೆ ಮಹಿಳಾ ಶಿಕ್ಷಣದ ಅವಶ್ಯಕತೆ ಅವಳ ಸಂಪ್ರದಾಯಬದ್ದ ಪಾತ್ರಗಳನ್ನು ಮತ್ತು ಕೌಟುಂಬಿಕ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಬೇಕೆ ವಿನ: ಅವಳ ವೈಯಕ್ತಿಕ ಸಾಮಾಜಿಕ ಬದುಕನ್ನು ಉತ್ತಮಪಡಿಸಲು ಅಥವಾ ಪುರುಷರಿಗೆ ಶಿಕ್ಷಣ ನೀಡುವ ಉದ್ದೇಶಗಳಂತೆ ಕಂಡು ಬರುವುದಿಲ್ಲ. ಸ್ತ್ರೀಯರಿಗೆ ಶಿಕ್ಷಣ ನೀಡುವಲ್ಲಿಯೂ ಪುರುಷ ಪ್ರಧಾನ ಮೌಲ್ಯಗಳು ಪಾತ್ರವಹಿಸುತ್ತ ಲಿಂಗತಾರತಮ್ಯ ಸೃಷ್ಟಿಸುತ್ತವೆ.

ಕುಟುಂಬದ ಹೊರಗಡೆ ಪುರುಷರಂತೆ ಉತ್ತಮ ಉದ್ಯೋಗ, ಸ್ಥಾನ, ಅಂತಸ್ತನ್ನು ಪಡೆದುಕೊಳ್ಳಬೇಕಾದರೆ ಮಹಿಳೆಗೆ ಔಪಚಾರಿಕ ಶಿಕ್ಷಣ ಬಹಳ ಮುಖ್ಯ ಆದರೆ ಮಹಿಳೆಗೆ ಔಪಚಾರಿಕ ಶಿಕ್ಷಣ ನೀಡುವಲ್ಲಿ ಹೆಚ್ಚು ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ. ಲಿಂಗತಾರತಮ್ಯ ಧೋರಣೆಯು ಮಹಿಳೆಯ ಸರ್ವತೋಮುಖ ಅಭಿವೃದ್ಧಿಗೆ ಅಡ್ಡಿಯನ್ನು ಉಂಟು ಮಾಡುತ್ತದೆ.

ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳುವ ದಿಸೆಯಲ್ಲಿ ಅಕ್ಷರಜ್ಞಾನ ಮತ್ತು ಶಿಕ್ಷಣದ ಪಾತ್ರ ತುಂಬಾ ಮಹತ್ವದ್ದಾಗಿದೆ. ಒಬ್ಬ ಒಳ್ಳೆಯ ತಾಯಿಯಾಗಲು ಮಹಿಳೆಗೆ ಸಾಕ್ಷರತೆ ಮತ್ತು ಶಿಕ್ಷಣ ಅಗತ್ಯ, ನಿಜ. ಆದರೆ ಅದಕ್ಕಿಂತ ಮುಖ್ಯವಾಗಿ ಅವಳು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಕೂಡ ಸಾಕ್ಷರತೆಯ ಅಗತ್ಯವಿದೆ.[೪]

೨೦೧೧ರ ಜನಗಣತಿಯ ಪ್ರಕಾರ ಭಾರತದ ಸಾಕ್ಷರತೆಯ ಪ್ರಮಾಣ ಶೇ.೭೪.೦೪. ಪುರುಷರ ಸಾಕ್ಷರತೆಯ ಪ್ರಮಾಣ ಶೇ ೮೨.೧೪, ಸ್ತ್ರೀ ಸಾಕ್ಷರತೆಯ ಪ್ರಮಾಣ ಶೇ.೬೫.೪೬ ಆಗಿದೆ. ಕರ್ನಾಟಕದ ಸಾಕ್ಷರತೆಯ ಪ್ರಮಾಣ ಶೇ.೭೫.೩೬ ಆಗಿದೆ. ಪುರುಷರ ಸಾಕ್ಷರತೆಯ ಪ್ರಮಾಣ ಶೇ.೮೨.೪೨ ಆಗಿದೆ ಮತ್ತು ಸ್ತ್ರೀ ಸಾಕ್ಷರತೆಯ ಪ್ರಮಾಣ ಶೇ. ೬೬.೦೧ ಆಗಿದೆ.[೫]

ಭಾರತೀಯ ಮಹಿಳೆ, ವಿಶೇಷವಾಗಿ ಗ್ರಾಮೀಣ ಮಹಿಳೆಯು ಶಿಕ್ಷಣ ಮತ್ತು ಸ್ಥಾನ ಮಾನಗಳಿಂದ ವಂಚಿತಳಾಗಿದ್ದಾಳೆ. ಗ್ರಾಮೀಣ ಸಮಾಜದಲ್ಲಿ ಸ್ತ್ರೀ-ಪುರುಷ ಎಂಬ ಭೇದಗಳಿಂದ ಲಿಂಗತಾರತಮ್ಯ ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ೧೯೮೩ರ ಸುಮಾರಿಗೆ ಶೇಕಡ ೮೬.೨ರಷ್ಟು ಜನ ಅನಕ್ಷರಸ್ಥರಾಗಿದ್ದರು. ಇದು ೧೯೯೪ರಲ್ಲಿ, ಅಂದರೆ ಸುಮಾರು ಹನ್ನೊಂದು ವರ್ಷಗಳ ನಂತರವೂ, ಅನಕ್ಷರತೆಯ ಮಟ್ಟ ಕೇವಲ ಶೇಕಡ ೨ರಷ್ಟು ಮಾತ್ರ ಕಡಿಮೆಯಾಗಿರುವುದು ಕಂಡು ಬರುತ್ತದೆ. ಇದರಿಂದ ಗ್ರಾಮೀಣ ಪ್ರದೇಶದ ಬದಲಾವಣೆಗೆ ಅವಶ್ಯಕವಾಗಿರುವ ಶೈಕ್ಷಣಿಕ ಸ್ಥಿತಿಗತಿ ಚಿಂತಾಜನಕವಾಗಿರುವುದು ನಮಗೆ ಮನದಟ್ಟಾಗುತ್ತದೆ. ಪ್ರಾಥಮಿಕ ಹಂತದಲ್ಲಿ

ಕೇವಲ ಶೇಕಡ ೨.೧ರಿಂದ ಶೇಕಡ ೩.೯ಕ್ಕೆ ಏರಿಕೆ. ಅಂದರೆ ಶೇಕಡ ೧ರಷ್ಟು ಬದಲಾವಣೆ ಮಾತ್ರ ಆಗಿರುತ್ತದೆಂಬುದು ಗಮನಾರ್ಹ ಸಂಗತಿ. ಇನ್ನು ಪದವಿ ಪಡೆದುಕೊಂಡವರ ಸಂಖ್ಯೆಯು ಗ್ರಾಮಗಳಲ್ಲಿ ಇನ್ನೂ ನಗಣ್ಯವಾಗಿದೆ. ಅದು ಶೇಕಡ ೦.೩ರಷ್ಟು ಮಾತ್ರ ಆಗಿದೆ. ಆದರೆ ಇದು ನಗರ ಪ್ರದೇಶದಲ್ಲಿ ೧೪.೬ರಷ್ಟು ಇದ್ದದ್ದು ಕಂಡು ಬರುತ್ತದೆ. ಇದರಿಂದ ಹಳ್ಳಿಗಳಿಗೆ ಹೋಲಿಸಿದರೆ ಪಟ್ಟಣದ ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿನ ಹೆಚ್ಚಳವು ಗೋಚರಿಸುತ್ತದೆ. ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಲಿಂಗತಾರತಮ್ಯವು ಹೆಚ್ಚಾಗಿ ಕಂಡುಬರುತ್ತದೆ.[೬]

ಅಧ್ಯಯನದ ಉದ್ದೇಶ

ಈ ಅಧ್ಯಯನದ ಪ್ರಮುಖ ಉದ್ದೇಶವೇನೆಂದರೆ ಗ್ರಾಮೀಣ ಮಹಿಳೆಯರು ಔಪಚಾರಿಕ ಶಿಕ್ಷಣ ಪಡೆಯಲು ಇರುವ ಪ್ರಮುಖ ಸಮಸ್ಯೆಗಳೇನು ಎಂಬುದನ್ನು ಅರ್ಥ ಮಾಡಿಕೊಳ್ಳುವುದಾಗಿದೆ.

- ಭಾರತೀಯ ಸಮಾಜದ ಇತಿಹಾಸದಲ್ಲಿ ಔಪಚಾರಿಕ ಮಹಿಳಾ ಶಿಕ್ಷಣವು ಬೆಳೆದು ಬಂದ ರೀತಿಯನ್ನು ಅಧ್ಯಯನ ಮಾಡುವುದು.
- ಗ್ರಾಮೀಣ ಮಹಿಳಾ ಶಿಕ್ಷಣದ ಸಮಸ್ಯೆಗೆ ಇರುವ ಪ್ರಮುಖ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳನ್ನು ಅರ್ಥಮಾಡಿಕೊಳ್ಳುವುದು.
- ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಇರುವ ಅಡೆ-ತಡೆಗಳಾವುವು ಎಂದು ಗುರುತಿಸುವುದು.
- ಗ್ರಾಮೀಣ ಮಹಿಳಾ ಶಿಕ್ಷಣದ ಮೇಲೆ ಪ್ರಭಾವ ಬೀರುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವುದು.
- ಗ್ರಾಮೀಣ ಮಹಿಳೆಯರ ಎಲ್ಲಾ ಸಮಸ್ಯೆಗಳಿಗೆ ಗ್ರಾಮೀಣ ಮಹಿಳಾ ಶಿಕ್ಷಣದ ಹಿನ್ನಡೆಯೇ ಕಾರಣ ಎಂಬುದನ್ನು ಅಧ್ಯಯನದ ಮೂಲಕ ದೃಢೀಕರಿಸುವುದು.
- ಗ್ರಾಮೀಣ ಮಹಿಳಾ ಶಿಕ್ಷಣದ ಬಗ್ಗೆ ಈಗಾಗಲೇ ಇರುವ ಪೂರ್ವ ಕಲ್ಪಿತ ಪ್ರಾಕ್ ಕಲ್ಪನೆ ಸರಿಯಿದೆಯೇ ಎಂದು ಪರಿಶೀಲಿಸುವುದು ಹಾಗೂ ಭಿನ್ನತೆಯಿದ್ದಲ್ಲಿ ಕಾರಣಗಳನ್ನು ಗುರುತಿಸುವುದು.
- ಶಿಕ್ಷಣ ಸಂಸ್ಥೆಯು ಲಿಂಗ ಅಸಮಾನತೆ ಅಂಶಗಳನ್ನು ಒಳಗೊಂಡಿದೆಯೇ ಎಂಬುದನ್ನು ತಿಳಿಯುವುದು. ಅಸಮಾನತೆಗೆ ಪರಿಹಾರಗಳನ್ನು ಕಂಡುಕೊಳ್ಳುವುದು.

- ಗ್ರಾಮೀಣ ಮಹಿಳಾ ಶಿಕ್ಷಣವನ್ನು ಸ್ತ್ರೀವಾದಿ ದೃಷ್ಟಿಕೋನದಲ್ಲಿ ವಿಶ್ಲೇಷಿಸುವುದು.
- ಗ್ರಾಮೀಣ ಮಹಿಳೆ ಮತ್ತು ಗ್ರಾಮೀಣ ಪುರುಷರಿಗೆ ಸಂಬಂಧಿಸಿದಂತೆ ಇರುವ ಶೈಕ್ಷಣಿಕ ತಾರತಮ್ಯಗಳ ಕಾರಣಗಳನ್ನು ತಿಳಿಯುವುದಾಗಿದೆ.
- ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಂಚವಾರ್ಷಿಕ ಯೋಜನೆಗಳಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳನ್ನು ತಿಳಿಯುವುದು.
- ಸ್ತ್ರೀ ಪುರುಷರಿಗೆ ಸಂಬಂಧಿಸಿದಂತೆ ಇರುವ ದ್ವಿಮುಖ ಸಾಮಾಜಿಕ ನೀತಿಗಳು ಶಿಕ್ಷಣ ಸಂದರ್ಭದಲ್ಲಿಯೂ ಹೇಗೆ ಅನ್ವಯಿಸಲ್ಪಡುತ್ತವೆ ಎಂಬುದನ್ನು ತಿಳಿದುಕೊಳ್ಳುವುದು.

ಪ್ರಾಕ್ ಕಲ್ಪನೆ(ಪೂರ್ವ ಕಲ್ಪನೆ)(Hypothesis)

- ಮೇಲುಜಾತಿಯ ಜನರು ಮಹಿಳೆಯರ ಔಪಚಾರಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಾರೆ. ಕೆಳಜಾತಿಯ ಶೋಷಿತ ಜನರು ಮಹಿಳಾ ಶಿಕ್ಷಣಕ್ಕೆ ಹೆಚ್ಚು ಗಮನ ನೀಡುವುದಿಲ್ಲ.
- ಅವಿಭಕ್ತ ಕುಟುಂಬದಲ್ಲಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುವುದಿಲ್ಲ. ವಿಭಕ್ತ ಕುಟುಂಬದಲ್ಲಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುತ್ತಾರೆ.
- ವಿದ್ಯಾವಂತ ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುತ್ತಾರೆ. ಅವಿದ್ಯಾವಂತ ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುವುದಿಲ್ಲ. ಬೇಗ ಮದುವೆ ಮಾಡಲು ಪ್ರಯತ್ನಿಸುತ್ತಾರೆ.
- ಬೆಂಗಳೂರು ನಗರಕ್ಕೆ ಹತ್ತಿರದಲ್ಲಿರುವ ಗ್ರಾಮದ ಜನರು ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುತ್ತಾರೆ. ಬೆಂಗಳೂರು ನಗರದಿಂದ ದೂರವಿರುವ ಗ್ರಾಮದ ಜನರು ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುವುದಿಲ್ಲ. ನಗರ-ಗ್ರಾಮ ಅಂತರವು ಮಹಿಳಾ ಶಿಕ್ಷಣದ ಮೇಲೆ ಪ್ರಭಾವ ಬೀರುತ್ತದೆ.
- ಉತ್ತಮ ಆರ್ಥಿಕ ಸ್ಥಿತಿಯನ್ನು ಹೊಂದಿರುವ ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುತ್ತಾರೆ. ಬಡ ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುವುದಿಲ್ಲ.
- ವಿದ್ಯಾವಂತ ಮಹಿಳೆಯರು ತಮ್ಮ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುತ್ತಾರೆ. ಅವಿದ್ಯಾವಂತ ಮಹಿಳೆಯರು ತಮ್ಮ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುವುದಿಲ್ಲ.
- ಖಾಸಗಿ ಶಾಲೆಯಲ್ಲಿ ಗ್ರಾಮೀಣ ಮಹಿಳೆಗೆ ಉತ್ತಮ ಸೌಲಭ್ಯಗಳಿವೆ, ಆದರೆ ಖಾಸಗಿ ಶಾಲೆಗೆ ಗ್ರಾಮೀಣ ಮಹಿಳೆಯರ ಪ್ರವೇಶ ತೀರ ಕಡಿಮೆ.

- ಸರ್ಕಾರಿ ಶಾಲೆಗಳಲ್ಲಿ ಗ್ರಾಮೀಣ ಮಹಿಳೆಯರಿಗೆ ಉತ್ತಮ ಸೌಲಭ್ಯಗಳಿರುವುದಿಲ್ಲ.
- ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದರೂ, ಗ್ರಾಮೀಣ ಮಹಿಳೆಯರಿಗೆ ಅವುಗಳ ಲಾಭ ಸಂಪೂರ್ಣವಾಗಿ ತಲುಪಿಲ್ಲ.
- ಭಾರತದಲ್ಲಿ ಜಾಗತೀಕರಣದಿಂದಾಗಿ ಮಹಿಳಾ ಶಿಕ್ಷಣದಲ್ಲಿ ಹೆಚ್ಚು ಸುಧಾರಣೆಯಾಗಿದೆ. ಆದರೆ ಇದರ ಲಾಭವನ್ನು ಹೆಚ್ಚು ಪಡೆದುಕೊಂಡವರು ನಗರದ, ಮೇಲ್ಜಾತಿಯ ಮತ್ತು ಮೇಲ್ವರ್ಗದ ಮಹಿಳೆಯರಾಗಿದ್ದಾರೆಯೇ ಹೊರತು ಹಿಂದುಳಿದ ಗ್ರಾಮೀಣ ಮಹಿಳೆಯರಲ್ಲ.
- ನಗರೀಕರಣ ಮತ್ತು ಔದ್ಯೋಗಿಕರಣವು ಜನರಲ್ಲಿ ಆಧುನಿಕತೆಯನ್ನುಂಟು ಮಾಡುತ್ತದೆ. ಆಧುನಿಕತೆಯು ಮಹಿಳಾ ಶಿಕ್ಷಣವನ್ನು ಉತ್ತಮಗೊಳಿಸುತ್ತದೆ.

ಅಧ್ಯಯನದ ವ್ಯಾಪ್ತಿ

ಈ ಅಧ್ಯಯನಕ್ಕೆ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ತಾಲ್ಲೂಕು ಬೆಂಗಳೂರಿನಿಂದ ೩೫ ಕಿ.ಮಿ. ದೂರದಲ್ಲಿದೆ. ಈ ತಾಲ್ಲೂಕಿನ ಅರ್ಧಭಾಗವು ನಗರ ಮತ್ತು ಕೈಗಾರೀಕೀಕರಣದ ಪ್ರಭಾವಕ್ಕೆ ಒಳಗಾಗಿದೆ. ಇನ್ನುಳಿದ ಅರ್ಧಭಾಗವು ಕಾಡುಗಳಿಂದ ಆವೃತವಾಗಿದೆ. ಈ ತಾಲ್ಲೂಕು ಪಕ್ಕದ ತಮಿಳು ನಾಡಿಗೆ ಹೊಂದಿಕೊಂಡಿದೆ. ಈ ಅಧ್ಯಯನಕ್ಕೆ ಆನೇಕಲ್ ತಾಲ್ಲೂಕಿಗೆ ಸೇರಿರುವ ೨ ಗ್ರಾಮ ಪಂಚಾಯಿತಿಗಳನ್ನು ತೆಗೆದುಕೊಳ್ಳಲಾಗಿದೆ.

ಬೆಂಗಳೂರು ನಗರಕ್ಕೆ ಹತ್ತಿರವಿರುವ(೨೦ ಕಿ.ಮಿ. ದೂರ) ಹೆಬ್ಬಗೋಡಿ ಗ್ರಾಮ ಪಂಚಾಯಿತಿಯಲ್ಲಿ ಬರುವ ೪ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಗ್ರಾಮಗಳೆಂದರೆ ವೀರಸಂದ್ರ, ಗೊಲ್ಲಹಳ್ಳಿ, ಹೆಬ್ಬಗೋಡಿ ಜನತಾ ಕಾಲೋನಿ, ಹೆಬ್ಬಗೋಡಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ಗ್ರಾಮದಲ್ಲಿ ೨೫ ಜನ ಒಕ್ಕಲಿಗ ಮತ್ತು ೨೫ ಜನ ಪರಿಶಿಷ್ಟ ಜಾತಿಯ ಕುಟುಂಬದ ಹಿರಿಯ ಮಹಿಳೆಯರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವರನ್ನು ಸಂದರ್ಶನ ಮಾಡಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲಾಗಿದೆ.

ಬೆಂಗಳೂರು ನಗರಕ್ಕೆ ದೂರವಿರುವ(೪೫ ಕಿ.ಮಿ. ದೂರ) ಸಮಂದೂರು ಗ್ರಾಮ ಪಂಚಾಯಿತಿಯಲ್ಲಿ ಬರುವ ೪ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಗ್ರಾಮಗಳೆಂದರೆ ಸಮಂದೂರು, ಎಸ್.ತಿಮ್ಮಸಂದ್ರ, ಎಸ್.ಮಡಿವಾಳ, ಮಾರನಾಯಕನಹಳ್ಳಿ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ಗ್ರಾಮದಲ್ಲೀ ೨೫ ಜನ ಒಕ್ಕಲಿಗ ಮತ್ತು ೨೫

ಜನ ಪರಿಶಿಷ್ಟಜಾತಿಯ ಕುಟುಂಬದ ಹಿರಿಯ ಮಹಿಳೆಯರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವರನ್ನು ಸಂದರ್ಶನ ಮಾಡಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲಾಗಿದೆ.

ಹೆಬ್ಬಗೋಡಿ ಗ್ರಾಮ ಪಂಚಾಯಿತಿಯಲ್ಲಿ ಬರುವ ೨ ಖಾಸಗಿ ಶಾಲೆಯ ೧೦ ಶಿಕ್ಷಕರನ್ನು, ೧೨ ಮಹಿಳಾ ವಿದ್ಯಾರ್ಥಿಗಳನ್ನು ಮತ್ತು ೨ ಸರ್ಕಾರಿ ಶಾಲೆಯ ೧೦ ಶಿಕ್ಷಕರನ್ನು, ೧೩ ಮಹಿಳಾ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ಅಧ್ಯಯನಕ್ಕೆ ಮಾಹಿತಿಯನ್ನು ಪಡೆಯಲಾಗಿದೆ.

ಸಮಂದೂರು ಪಂಚಾಯಿತಿಯಲ್ಲಿ ಬರುವ ೨ ಖಾಸಗಿ ಶಾಲೆಯ ೧೦ ಶಿಕ್ಷಕರನ್ನು ೧೨ ಮಹಿಳಾ ವಿದ್ಯಾರ್ಥಿಗಳನ್ನು ಮತ್ತು ೨ ಸರ್ಕಾರಿ ಶಾಲೆಯ ೧೦ ಶಿಕ್ಷಕರನ್ನು ೧೩ ಮಹಿಳಾ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲಾಗಿದೆ.

ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ೪ ಗ್ರಾಮಗಳಲ್ಲಿ ತಲಾ ೨೫ ಹಿರಿಯ ನಾಗರೀಕರನ್ನು ಸಂದರ್ಶನ ಮಾಡಿ ಅಧ್ಯಯನದ ಮಾಹಿತಿಯನ್ನು ಪಡೆಯಲಾಗಿದೆ.

ಸಮಂದೂರು ಗ್ರಾಮ ಪಂಚಾಯಿತಿಯ ೪ ಗ್ರಾಮಗಳಲ್ಲಿ ತಲಾ ೨೫ ಹಿರಿಯ ನಾಗರೀಕರನ್ನು ಸಂದರ್ಶನ ಮಾಡಿ ಅಧ್ಯ್ಯನಕ್ಕೆ ಮಾಹಿತಿಯನ್ನು ಪಡೆಯಲಾಗಿದೆ.

ಈ ಅಧ್ಯಯನದಲ್ಲಿ ಒಕ್ಕಲಿಗ ಮತ್ತು ಪರಿಶಿಷ್ಟ ಜಾತಿಯವರನ್ನು ಆಯ್ದು ಕೊಳ್ಳಲು ಪ್ರಮುಖ ಕಾರಣವೇನೆಂದರೆ ಈ ಪ್ರಾಂತ್ಯದ ಗ್ರಾಮಗಳಲ್ಲಿ ಈ ಜಾತಿಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಒಕ್ಕಲಿಗ ಜಾತಿಯ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಮುಂದುವರಿದ ಪ್ರಬಲ ಜಾತಿಯಾಗಿದೆ. ಪರಿಶಿಷ್ಟ ಜಾತಿಯು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಾತಿಯಾಗಿರುವುದರಿಂದ ಅವರು ಮಹಿಳಾ ಶಿಕ್ಷಣದ ಬಗ್ಗೆ ಹೊಂದಿರುವ ಅಭಿಪ್ರಾಯಗಳ ಭಿನ್ನತೆಯನ್ನು ಗುರುತಿಸಲು ಈ ಎರಡು ಜಾತಿಗಳನ್ನು ವಿಶೇಷವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಸಾಮಾಜಿಕ ಸಂಸ್ಥೆಯಾದ ಜಾತಿಯು ಮಹಿಳೆಯರ ಔಪಚಾರಿಕ ಶಿಕ್ಷಣದ ಮೇಳೆ ನೇರ ಪ್ರಭಾವವನ್ನು ಬೀರುತ್ತದೆ. ಈ ಅಧ್ಯಯನದ ಕ್ಷೇತ್ರದಲ್ಲಿ ವಕ್ಕಲಿಗ ಮತ್ತು ಪರಿಶಿಷ್ಟಜಾತಿಯ ಜನಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ. ವಕ್ಕಲಿಗ ಜಾತಿಯು ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಮುಂದುವರಿದ ಜಾತಿಗಳಾಗಿವೆ. ಪರಿಶಿಷ್ಟಜಾತಿಯ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ವಕ್ಕಲಿಗ ಜಾತಿಗೆ ಹೋಲಿಸಿದಾಗ ಹಿಂದುಳಿದ ಜಾತಿಗಳಾಗಿವೆ.

ಜಾತಿಯ ಈ ಸ್ಥಿತಿಗತಿಗಳು ಆ ಜಾತಿಯ ಜನರ ಜೀವನ ಶೈಲಿ, ಜೀವನ ಅವಕಾಶಗಳ ಮೇಲೆ ನೇರ ಪ್ರಭಾವವನ್ನು ಬೀರುತ್ತವೆ. ಹಾಗೆಯೆ ಮಹಿಳೆಯ ಔಪಚಾರಿಕ ಶಿಕ್ಷಣದ ಮೇಲೆಯು ನೇರ ಪ್ರಭಾವವನ್ನು ಬೀರುವುದರಿಂದ ಈ ಎರಡು ಜಾತಿಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ನಗರಕ್ಕೆ ಹತ್ತಿರವಿರುವ ನಾಲ್ಕು ಹಳ್ಳಿಗಳನ್ನು ಮತ್ತು ನಗರದಿಂದ ದೂರವಿರುವ ನಾಲ್ಕು ಹಳ್ಳಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳ ಮೇಲೆ ನಗರೀಕರಣ, ಔದ್ಯೋಗಿಕರಣ ಮತ್ತು ಆಧುನೀಕರಣ ನೇರ ಪ್ರಭಾವವನ್ನು ಬೀರಿ ಮಹಿಳೆಯ ಔಪಚಾರಿಕ ಶಿಕ್ಷಣಕ್ಕೆ ಸಹಕರಿಸುತ್ತದೆ.

ನಗರದಿಂದ ದೂರವಿರುವ ಹಳ್ಳಿಗಳಲ್ಲಿ ನಗರೀಕರಣ, ಔದ್ಯೋಗಿಕರಣ ಮತ್ತು ಆಧುನೀಕರಣದ ಪ್ರಭಾವ ಹೆಚ್ಚಾಗಿ ಕಂಡು ಬರುವುದಿಲ್ಲ. ನಗರದಿಂದ ದೂರವಿರುವ ಹಳ್ಳಿಯ ಜನರು ಇನ್ನೂ ಸಂಪ್ರದಾಯವಾದಿಗಳಾಗಿದ್ದಾರೆ. ಆದುದರಿಂದ ಅವರು ಮಹಿಳೆಯ ಔಪಚಾರಿಕ ಶಿಕ್ಷಣಕ್ಕೆ ಮಹತ್ವ ನೀಡುವುದಿಲ್ಲ. ಅವರು ಪುರುಷ ಶಿಕ್ಷಣಕ್ಕೆ ನೀಡುವ ಪ್ರಾಮುಖ್ಯತೆಯನ್ನು ಮಹಿಳಾ ಶಿಕ್ಷಣಕ್ಕೆ ನೀಡದೆ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ. ಆದುದರಿಂದ ಈ ವ್ಯತ್ಯಾಸ ಅರಿಯಲು ಅಧ್ಯಯನಕ್ಕೆ ನಗರಕ್ಕೆ ಹತ್ತಿರವಿರುವ ಮತ್ತು ನಗರಕ್ಕೆ ದೂರವಿರುವ ನಗರಗಳನ್ನು ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಮಹಿಳೆಯರ ಔಪಚಾರಿಕ ಶಿಕ್ಷಣದ ಬಗ್ಗೆ ಸಮಾಜದ ಸಂಪೂರ್ಣ ಚಿತ್ರಣ ಪಡೆಯಲು ಮಹಿಳೆಯರನ್ನಲ್ಲದೆ, ಗ್ರಾಮಗಳ ಹಿರಿಯ ನಾಗರೀಕರನ್ನು, ಮತ್ತು ಸರ್ಕಾರಿ ಮತ್ತು ಖಾಸಗಿ ಶಾಲಾ ಶಿಕ್ಷಕರನ್ನು, ಮತ್ತು ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ಮಹಿಳೆಯರ ಔಪಚಾರಿಕ ಶಿಕ್ಷಣ ಬಗೆಗಿನ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಅಧ್ಯಯನದ ವಿಧಿವಿಧಾನ ಮತ್ತು ವೈಧಾನಿಕತೆ

ಈ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಪ್ರಾಥಮಿಕ ಆಕರಗಳು ಮತ್ತು ಅನುಷಂಗಿಕ ಆಕರಗಳಿಂದ ಸಮಗ್ರವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಪ್ರಾಥಮಿಕ ಮೂಲದ ಮಾಹಿತಿಯನ್ನು ಸಂಗ್ರಹಿಸಲು ಪಾಲು ನಮೂನೆ ಮಾದರಿ (Cota Sampling)ಯನ್ನು ಅಳವಡಿಸಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಮೊದಲು ೪ ಬಗೆಯ ಪ್ರಶ್ನಾವಳಿಗಳನ್ನು ತಯಾರಿಸಲಾಗಿದೆ. ಮೊದಲನೆಯದು ಕುಟುಂಬದ ಹಿರಿಯ ಮಹಿಳೆಯನ್ನು ಸಂದರ್ಶನ ಮಾಡಲು ತಯಾರಿಸಲಾಗಿದೆ. ಎರಡನೆಯ ಪ್ರಶ್ನಾವಳಿಯನ್ನು ಗ್ರಾಮದ ಹಿರಿಯ ನಾಗರೀಕರನ್ನು ಸಂದರ್ಶನ ಮಾಡಲು ತಯಾರಿಸಲಾಗಿದೆ. ಮೂರನೆಯದು

ಶಾಲೆಯ ಶಿಕ್ಷಕರನ್ನು ಸಂದರ್ಶನ ಮಾಡಲು, ನಾಲ್ಕನೆಯದು ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಲು ತಯಾರಿಸಲಾಗಿದೆ.

ಪ್ರಾಥಮಿಕ ಮೂಲದ ಮಾಹಿತಿ ಸಂಗ್ರಹಣೆಗಾಗಿ ಪ್ರಶ್ನಾವಳಿಯಲ್ಲಿ ನೇರ ಪ್ರಶ್ನಾವಳಿ, ಲಿಖಿತ ಪ್ರಶ್ನಾವಳಿ ಮತ್ತು ಕೆಲವು ಸಂದರ್ಭಗಳಲ್ಲಿ ಅಲಿಖಿತ(ಮೌಖಿಕ) ಪ್ರಶ್ನಾವಳಿಯನ್ನು ಅಳವಡಿಸಲಾಗಿದೆ.

ಈ ಅಧ್ಯಯನದಲ್ಲಿ ಬೆಂಗಳೂರು ನಗರಕ್ಕೆ ಹತ್ತಿರವಿರುವ(೨೦ ಕಿ.ಮಿ. ದೂರ) ಹೆಬ್ಬಗೋಡಿ ಪಂಚಾಯಿತಿಯಲ್ಲಿ ಬರುವ ಗ್ರಾಮಗಳಾದ ವೀರಸಂದ್ರ, ಗೊಲ್ಲಹಳ್ಳಿ, ಹೆಬ್ಬಗೋಡಿ, ಜನತಾ ಕಾಲೋನಿ, ಹೆಬ್ಬಗೋಡಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ಗ್ರಾಮದಿಂದ ೨೫ ಜನ ಒಕ್ಕಲಿಗ ಮತ್ತು ೨೫ ಜನ ಪರಿಶಿಷ್ಟ ಜಾತಿಯ ಕುಟುಂಬದ ಹಿರಿಯ ಮಹಿಳೆಯರನ್ನು ಪ್ರಶ್ನಾವಳಿ ಮೂಲಕ ಸಂದರ್ಶನ ಮಾಡಿ ಅಧ್ಯಯನಕ್ಕೆ ಮಾಹಿತಿ ಸಂಗ್ರಹಿಸಲಾಗಿದೆ.

ಬೆಂಗಳೂರು ನಗರದಿಂದ ದೂರವಿರುವ (೪೫ ಕಿ.ಮಿ. ದೂರ) ಸಮಂದೂರು ಗ್ರಾಮ ಪಂಚಾಯಿತಿಯಲ್ಲಿ ಬರುವ ೪ ಗ್ರಾಮಗಳಾದ ಸಮಂದೂರು, ಎಸ್.ತಿಮ್ಮಸಂದ್ರ, ಎಸ್.ಮಡಿವಾಳ, ಮಾರನಾಯಕನಹಳ್ಳಿ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ಗ್ರಾಮದಿಂದ ೨೫ ಜನ ಒಕ್ಕಲಿಗ ಮತ್ತು ೨೫ ಜನ ಪರಿಶಿಷ್ಟ ಜಾತಿಯ ಕುಟುಂಬದ ಹಿರಿಯ ಮಹಿಳೆಯನ್ನು ಪ್ರಶ್ನಾವಳಿ ಮೂಲಕ ಸಂದರ್ಶನ ಮಾಡಿ ಮಾಹಿತಿಯನ್ನು ಲಿಖಿತ ರೂಪದಲ್ಲಿ ದಾಖಲಿಸಿ ಕೊಳ್ಳಲಾಗಿದೆ.

ನಗರಕ್ಕೆ ಹತ್ತಿರವಿರುವ ಗ್ರಾಮ ಪಂಚಾಯಿತಿಯ ೧೦೦ ಜನ ಒಕ್ಕಲಿಗ ಮತ್ತು ೧೦೦ ಜನ ಪರಿಶಿಷ್ಟ ಜಾತಿಯ ಒಟ್ಟು ೨೦೦ ಮಹಿಳೆಯರನ್ನು ಸಂದರ್ಶಿಸಲಾಗಿದೆ.

ಅಂತೆಯೇ ನಗರದಿಂದ ದೂರವಿರುವ ಗ್ರಾಮ ಪಂಚಾಯಿತಿಯ ೧೦೦ ಜನ ಒಕ್ಕಲಿಗ ಮತ್ತು ೧೦೦ ಜನ ಪರಿಶಿಷ್ಟ ಜಾತಿಯ ಒಟ್ಟು ೨೦೦ ಜನ ಮಹಿಳೆಯರನ್ನು ಸಂದರ್ಶಿಸಲಾಗಿದೆ.

ನಗರಕ್ಕೆ ಹತ್ತಿರವಿರುವ ಹೆಬ್ಬಗೋಡಿ ಗ್ರಾಮ ಪಂಚಾಯಿತಿಯಲ್ಲಿ ಬರುವ ೨ ಖಾಸಗಿ ಶಾಲೆಯ ೧೦ ಶಿಕ್ಷಕರನ್ನು, ೧೨ ಮಹಿಳಾ ವಿದ್ಯಾರ್ಥಿಗಳನ್ನು ಮತ್ತು ೨ ಸರ್ಕಾರಿ ಶಾಲೆಯ ೧೦ ಶಿಕ್ಷಕರನ್ನು ೧೩ ಮಹಿಳಾ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ಈ ಅಧ್ಯಯನಕ್ಕೆ ಮಾಹಿತಿಯನ್ನು ಪಡೆಯಲಾಗಿದೆ.

ನಗರಕ್ಕೆ ದೂರವಿರುವ ಸಮಂದೂರು ಗ್ರಾಮ ಪಂಚಾಯಿತಿಯಲ್ಲಿ ಬರುವ ೨ ಖಾಸಗಿ ಶಾಲೆಯ ೧೦ ಶಿಕ್ಷಕರನ್ನು, ೧೨ ಮಹಿಳಾ ವಿದ್ಯಾರ್ಥಿಗಳನ್ನು ಮತ್ತು ೨ ಸರ್ಕಾರಿ ಶಾಲೆಯ

೧೦ ಶಿಕ್ಷಕರನ್ನು ೧೩ ಮಹಿಳಾ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ಈ ಅಧ್ಯಯನಕ್ಕೆ ಮಾಹಿತಿಯನ್ನು ಪಡೆಯಲಾಗಿದೆ.

ಅಂತೆಯೇ ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ೪ ಗ್ರಾಮಗಳಲ್ಲಿ ತಲಾ ೨೫ ಹಿರಿಯ ನಾಗರಿಕರನ್ನು, ಅಂದರೆ ಒಟ್ಟು ೧೦೦ ಹಿರಿಯ ನಾಗರೀಕರನ್ನು ಸಂದರ್ಶನ ಮಾಡಿ ಪ್ರಾಥಮಿಕ ಮಾಹಿತಿ ಪಡೆಯಲಾಗಿದೆ.

ಸಮಂದೂರು ಗ್ರಾಮ ಪಂಚಾಯಿತಿಯ ೪ ಗ್ರಾಮಗಳಲ್ಲಿ ತಲಾ ೨೫ ಹಿರಿಯ ಮುಖಂಡರನ್ನು, ಅಂದರೆ ಒಟ್ಟು ೧೦೦ ಹಿರಿಯ ನಾಗರೀಕರನ್ನು ಸಂದರ್ಶನ ಮಾಡಿ ಮಾಹಿತಿಯನ್ನು ಲಿಖಿತ ರೂಪದಲ್ಲಿ ದಾಖಲಿಸಲಾಗಿದೆ.

ಈ ಅಧ್ಯಯನಕ್ಕೆ ಬೇಕಾದ ಅನುಷಂಗಿಕ ಆಕರಗಳನ್ನು ಜನಗಣತಿ, ಗ್ರಾಮ ಪಂಚಾಯಿತಿಯ ಕಛೇರಿ, ತಹಸೀಲ್ದಾರ್ ಕಛೇರಿಯಿಂದ ಪಡೆಯಲಾಗಿದೆ. ಇದರ ಜೊತೆಗೆ ಮಾಸಪತ್ರಿಕೆಗಳು, ದಿನಪತ್ರಿಕೆಗಳು, ಅಧ್ಯಯನಕ್ಕೆ ಸಂಬಂದಿತ ಹಲವಾರು ಪುಸ್ತಕಗಳು ಮತ್ತು ಅಂತರ್ಜಾಲವನ್ನು ಪೂರಕ ಮಾಹಿತಿಗಾಗಿ ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

ಈ ಅಧ್ಯಯನದಲ್ಲಿ ಹೆಚು ಕ್ಷೇತ್ರಕಾರ್ಯದ ಅನುಭವಾತಕ ವಿಧಾನದ ಮಾಹಿತಿಯನ್ನು ಪ್ರಥಮ ಮೂಲಕ ಆಕರವಾಗಿ ಬಳಸಿಕೊಳಲಾಗಿದೆ. ಅಧ್ಯಯನದಲ್ಲಿ ಪರಿಮಾsಾತಕ ಮತ್ತು ಗುsಾತಕ ಸಂಶೋಧನಾ ವಿಧಾನಗಳ ಮೂಲಕ ವಿಷಯಗಳನ್ನು ಸಂಗ್ರಹಿಸಲಾಗಿದೆ.

ಮಾಹಿತಿ ಸಂಗ್ರಹsೆಗಾಗಿ ಅವಲೋಕನ, ಸಂದರ್ಶನ, ರ ತ ಮತ್ತು ಅರ ತ ಪ್ರಶ್ನಾವ´, ಸಾಮಾdಕ ಸಂಶೋಧನೆ ತಂತ್ರಗಳನ್ನು ಅಳವಡಿಸಿ ಮಾಹಿತಿ ಪಡೆದುಕೊಳಲಾಗಿದೆ.

ಅಧ್ಯಯನದ ಶೈಕ್ಷಣಿಕ ಮಹತ್ವ

- ಈ ಅಧ್ಯಯನವು ಗ್ರಾಮೀಣ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಮತ್ತು ಮಹಿಳೆಯರ ಶಿಕ್ಷಣದ ಮಟ್ಟವನ್ನು ಅರಿಯಲು ಸಹಾಯವಾಗಿದೆ.
- ಈ ಅಧ್ಯಯನವು ವಿಶೇಷವಾಗಿ ಮಹಿಳಾ ಸಮಸ್ಯೆಗಳಲ್ಲೊಂದಾದ ಮಹಿಳಾ ಶಿಕ್ಷಣದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.
- ಮಹಿಳಾ ಶಿಕ್ಷಣದ ಸಮಸ್ಯೆ ಕೇವಲ ಮಹಿಳೆಯರ ಸಮಸ್ಯೆ ಮಾತ್ರವಲ್ಲ, ಅದು ಸಮಾಜದ ಸಮಸ್ಯೆ. ಸಮಸ್ಯೆಯ ಪ್ರಭಾವ ಸಮಾಜದ ಮೇಲಾಗುತ್ತದೆ. ಆದುದರಿಂದ ಸಮಾಜದಲ್ಲಿ

ಎಲ್ಲರೂ ಅಧ್ಯಯನದ ಅಂಶಗಳನ್ನು ಪಠ್ಯ ಕ್ರಮದಿಂದ ತಿಳಿದುಕೊಂಡಾಗ ಮಾತ್ರ ಈ ಸಮಸ್ಯೆಯನ್ನು ನಿವಾರಣೆ ಮಾಡಲು ಸಹಾಯವಾಗುತ್ತದೆ.

- ಈ ಅಧ್ಯಯನದ ಅಂಶಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿದಾಗ ಮಹಿಳೆಯರು ಜಾಗೃತರಾಗಲು, ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿಯಲು ಹಾಗೂ ಮುಂದೆ ಮಹಿಳೆಯರು ಶಿಕ್ಷಣದ ಸಮಸ್ಯೆಗಳನ್ನು ತಾವೇ ನಿವಾರಿಸಿಕೊಳ್ಳಲು ಸಹಾಯವಾಗುತ್ತದೆ.
- ಈ ಅಧ್ಯಯನವು ವಿಶೇಷವಾಗಿ ಗ್ರಾಮೀಣ ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡಲು ಸಹಾಯವಾಗುತ್ತದೆ.
- ಈ ಅಧ್ಯಯನವು ಸಮಾಜದಲ್ಲಿನ ಲಿಂಗತಾರತಮ್ಯವನ್ನು ದೃಢೀಕರಿಸುತ್ತದೆ. ಲಿಂಗತಾರತಮ್ಯವು ಮಹಿಳಾ ಶಿಕ್ಷಣದಲ್ಲಿ ಅಸಮಾನತೆಯನ್ನುಂಟು ಮಾಡುವುದನ್ನು ತಿಳಿಸುತ್ತದೆ, ಸಮಾಜದಲ್ಲಿ ಸಮಾನತೆಯನ್ನು ಒದಗಿಸಿಕೊಡುವ ದೃಷ್ಟಿಯಿಂದ ಅಧ್ಯಯನವು ಮಹತ್ವವನ್ನು ಪಡೆಯುತ್ತದೆ.
- ೨೦೧೪-೧೫ನೇ ಬಜೆಟ್‌ನಲ್ಲಿ ಶಾಲಾ ಪಠ್ಯಪುಸ್ತಕದಲ್ಲಿ ಲಿಂಗಸಂವೇದನೆಯ ಪ್ರತ್ಯೇಕ ಅಧ್ಯಾಯವನ್ನು ಸೇರಿಸುವಂತೆ ಹೇಳಿರುವುದರಿಂದ ಈ ಅಧ್ಯಯನವು ಪಠ್ಯಕ್ರಮಕ್ಕೆ ಹೆಚ್ಚು ಅನುಕೂಲವಾಗುತ್ತದೆ.

ಸಮಕಾಲೀನ ಸಮಸ್ಯೆಗಳಿಗೆ ಪ್ರಸ್ತುತ ಅಧ್ಯಯನದ ಅವಶ್ಯಕತೆ

ಸಮಕಾಲೀನ ಭಾರತದಲ್ಲಿ ಭಿನ್ನ-ವಿಭಿನ್ನ ಸ್ತ್ರೀಯರ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಇಂದಿನ ಸ್ತ್ರೀಯರ ಪ್ರಮುಖ ಸಮಸ್ಯೆಗಳೆಂದರೆ ಶಿಕ್ಷಣದಿಂದ ವಂಚಿತಳಾಗಿರುವುದು, ವರದಕ್ಷಿಣೆ ಸಮಸ್ಯೆ, ಕೊಲೆ, ಅತ್ಯಾಚಾರ, ಹೆಂಡತಿಯನ್ನು ಶಿಕ್ಷಿಸುವುದು, ಆತ್ಮಹತ್ಯೆ, ಹೆಣ್ಣು ಶಿಶುಹತ್ಯೆ, ಹೆಣ್ಣು ಭ್ರೂಣ ಹತ್ಯೆ, ಹಿಂಸೆ, ದೌರ್ಜನ್ಯ, ಮರ್ಯಾದೆ ಹತ್ಯೆ ಮುಂತಾದವು ಸ್ತ್ರೀಯರ ಸರ್ವೆಸಾಮಾನ್ಯ ಸಮಸ್ಯೆಗಳಾಗಿವೆ. ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಪ್ರತಿಭಟಿಸಲು ಮಹಿಳೆಯರಿಗೆ ಔಪಚಾರಿಕ ಶಿಕ್ಷಣದ ಅಗತ್ಯವಿದೆ.

ಸ್ತ್ರೀಯು ಶಿಕ್ಷಣ ಪಡೆದು, ಆರ್ಥಿಕವಾಗಿ ಸ್ವಾವಲಂಬಿಯಾದರೆ ಅವಳಿಗೆ ಸಮಾಜದಲ್ಲಿ ಪುರುಷನಂತೆ ಸರಿಸಮಾನ ಸ್ಥಾನಮಾನ ದೊರೆಯುತ್ತದೆಂಬ ವಾದವನ್ನು ಚಿಂತಕರು ಮಂಡಿಸುತ್ತಾರೆ. ಆದರೆ, ಸ್ತ್ರೀವಾದಿ ಹಿನ್ನೆಲೆಯಲ್ಲಿ ಪ್ರಾಯೋಗಿಕವಾಗಿ ವಿಶ್ಲೇಷಿಸಿದಾಗ ನಮಗೆ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ ಶಿಕ್ಷಣ ಪಡೆದು ಆರ್ಥಿಕವಾಗಿ ಸ್ವಾವಲಂಬಿಯಾದ ಮಹಿಳೆಯರು ಸಹ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಅಂದರೆ ಮಹಿಳೆಗೆ ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ನೀಡುವುದರ ಜೊತೆಗೆ ಸಮಾಜದಲ್ಲಿನ ಜನರ ಪುರುಷ ಪ್ರಧಾನ

ದೃಷ್ಟಿಕೋನ ಬದಲಾಗಬೇಕಾಗುತ್ತದೆ. ಕುಟುಂಬದ ಸದಸ್ಯರ ಮತ್ತು ಸಮಾಜದ ಜನರ ಭಾವನೆಯಲ್ಲಿ ಸ್ತ್ರೀಯರ ಬಗ್ಗೆ ಧನಾತ್ಮಕ ಮನೋಭಾವನೆಗಳು ಮೂಡದ ಹೊರತು, ಸ್ತ್ರೀ ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂಬನೆಯಿಂದ ಮಾತ್ರವೇ ಮಹಿಳೆಯರು ಸಮಸ್ಯೆಗಳಿಂದ ಮುಕ್ತರಾಗಲು ಸಾಧ್ಯವಿಲ್ಲ. ಆದರೆ ಅವಿದ್ಯಾವಂತ ಹಾಗೂ ಆರ್ಥಿಕ ಅವಲಂಬಿತ ಮಹಿಳೆಯರಿಗೆ ಹೋಲಿಸಿದಾಗ ವಿದ್ಯಾವಂತ ಮತ್ತು ಆರ್ಥಿಕ ಸ್ವಾವಲಂಬಿ ಮಹಿಳೆಯರ ಬದುಕು ಸುಧಾರಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಅಧ್ಯಯನಗಳಿಂದ ತಿಳಿದು ಬರುತ್ತದೆ.

ಸ್ತ್ರೀಯು ಶಿಕ್ಷಣ ಪಡೆದು ಆರ್ಥಿಕವಾಗಿ ಸ್ವಾವಲಂಬಿಯಾದರೆ ಅವಳು ಸಮಾಜದಲ್ಲಿ ಪುರುಷರಿಗೆ ಸರಿಸಮಾನ ಸ್ಥಾನಮಾನ ದೊರೆಯುತ್ತದೆ ಎಂಬ ವಾದವನ್ನು ಚಿಂತಕರು ಮಂಡಿಸುತ್ತಾರೆ. ಸ್ತ್ರೀಯು ಶಿಕ್ಷಣ ಪಡೆಯಲು ಸಮಾಜದಲ್ಲಿರುವ ವಾಸ್ತವವಾದ ತೊಂದರೆಗಳೇನು ಎಂಬುದನ್ನು ಅರಿಯಲು ಮಹಿಳಾ ಶಿಕ್ಷಣದ ಅಧ್ಯಯನ ಮಾಡುವುದು ತುಂಬಾ ಅವಶ್ಯಕವಾಗಿದೆ. ಮಹಿಳಾ ಶಿಕ್ಷಣದ ಅಧ್ಯಯನದ ಮುಖಾಂತರ ಮಹಿಳಾ ಶಿಕ್ಷಣಕ್ಕೆ ಇರುವ ಪ್ರಮುಖ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಡೆತಡೆಗಳನ್ನು ಕಂಡುಕೊಳ್ಳಬೇಕಾಗುತ್ತದೆ. ನಂತರ ಮಹಿಳಾ ಶಿಕ್ಷಣ ಮತ್ತು ಮಹಿಳಾ ಸಮಸ್ಯೆಗಳನ್ನು ನಿವಾರಿಸಲು ಅಗತ್ಯವಿರುವ ಕ್ರಮಗಳನ್ನು ಸರ್ಕಾರ ಕೈಗೊಳ್ಳಲು ಸಾಧ್ಯವಾಗುತ್ತದೆ. ಸಮಕಾಲೀನ ಮಹಿಳಾ ಸಮಸ್ಯೆಗಳಿಗೆ ಮಹಿಳೆ ಶಿಕ್ಷಣದಿಂದ ವಂಚಿತಳಾಗಿರುವುದು ಪ್ರಮುಖ ಕಾರಣವಾಗಿದೆ. ಮಹಿಳಾ ಶಿಕ್ಷಣ ಮಟ್ಟವನ್ನು ಹೆಚ್ಚಿಸುವುದರಿಂದ ಮಹಿಳೆಯು ಸಮಸ್ಯೆಗಳಿಂದ ಮುಕ್ತಿಯನ್ನು ಹೊಂದಬಹುದು. ಮಹಿಳಾ ಶಿಕ್ಷಣ ಕುರಿತು ಅಧ್ಯಯನ ಮಾಡುವುದರಿಂದ ಜನರಲ್ಲಿ ಪುರುಷ ಪ್ರಧಾನ ದೃಷ್ಟಿಕೋನ ಬದಲಾಗಿ, ಶಿಕ್ಷಣ ಸಂದರ್ಭದಲ್ಲಿ ಸಮಾನ ದೃಷ್ಟಿಕೋನ ಮೂಡಿಬರಲು ಸಾಧ್ಯವಾಗುತ್ತದೆ.

ಈ ಅಧ್ಯಯನವು ಸಮಕಾಲೀನ ಸಮಸ್ಯೆಗಳಲ್ಲಿ ಒಂದಾದ ಮಹಿಳಾ ಶಿಕ್ಷಣ ಸಮಸ್ಯೆಗೆ ಕಾರಣಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಸರ್ಕಾರವು ಮಹಿಳಾ ಶಿಕ್ಷಣ ಅಭಿವೃದ್ಧಿಗೆ ಪೂರಕವಾದ ನೀತಿ ಯೋಜನೆ, ಕ್ರಮಗಳನ್ನು ಕೈಗೊಳ್ಳಲು ಮಹಿಳಾ ಶಿಕ್ಷಣ ಅಧ್ಯಯನವು ಬಹಳ ಸಹಾಯಕವಾಗುತ್ತದೆ.

ಈ ಅಧ್ಯಯನವು ಸಮಕಾಲೀನ ಮಹಿಳಾ ಸಮಸ್ಯೆಗಳೊಂದಿಗೆ ಸಂಬಂಧವನ್ನು ಹೊಂದಿದೆ. ಈ ಅಧ್ಯಯನವು ಶಿಕ್ಷಣ ಸಂದರ್ಭದಲ್ಲಿನ ಲಿಂಗತಾರತಮ್ಯದೊಂದಿಗೆ ಗಮನ ಸೆಳೆಯುತ್ತದೆ. ಶಿಕ್ಷಣ ನೀಡುವಲ್ಲಿ ಇರುವ ಲಿಂಗತಾರತಮ್ಯ ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ನೆರವಾಗುತ್ತದೆ.

ಈ ಅಧ್ಯಯನವು ಮಹಿಳಾ ಶಿಕ್ಷಣಕ್ಕೆ ಇರುವ ಪ್ರಮುಖ ಸಮಸ್ಯೆಗಳಾವುವು, ಸ್ತ್ರೀ ಶಿಕ್ಷಣ ಪಡೆಯುವುದರಿಂದ ಯಾವ ರೀತಿ ಸಮಕಾಲೀನ ಸ್ತ್ರೀ ಸಮಸ್ಯೆಗಳಿಂದ ಮುಕ್ತಳಾಗಬಹುದು ಎಂಬುವುದನ್ನು ತಿಳಿಸುತ್ತದೆ. ಹೆಚ್ಚಿನ ಸ್ತ್ರೀ ಸಮಸ್ಯೆಗಳಿಗೆ ಪುರುಷ ಪ್ರಧಾನ ಮೌಲ್ಯಗಳು ಕಾರಣವಾಗಿರುವುದರಿಂದ, ವಿಶೇಷವಾಗಿ ಗಂಡು ಮಕ್ಕಳಿಗೆ ಬಾಲ್ಯದಲ್ಲಿಯೇ ಹೆಣ್ಣುಮಕ್ಕಳ ಹಾಗೂ ಮಹಿಳೆಯರ ವಿಷಯದಲ್ಲಿ ಸಂವೇದನಾಶೀಲತೆ ಬೆಳಸಿಕೊಳ್ಳಲು ಈ ಅಧ್ಯಯನದಿಂದ ಅನುಕೂಲವಾಗುತ್ತದೆ.

ಸಮಾಜ ಮತ್ತು ರಾಷ್ಟ್ರಕ್ಕೆ ಪ್ರಸ್ತುತ ಅಧ್ಯಯನ ಅವಶ್ಯಕತೆ

ರಾಷ್ಟ್ರದ ಜನ ಸಂಖ್ಯೆಯಲ್ಲಿ ಅರ್ಧದಷ್ಟು ಜನ ಸಂಖ್ಯೆಯು ಮಹಿಳೆಯರೇ ಇದ್ದಾರೆ. ರಾಷ್ಟ್ರದ ಶೇ.೩೪.೫೪ ರಷ್ಟು (೨೦೧೧ರ ಜನಗಣತಿ ಪ್ರಕಾರ) ಮಹಿಳೆಯರು ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ. ಅವರನ್ನು ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ದೇಶದ ಆರ್ಥಿಕ ಹಿನ್ನಡೆಗೆ ಮಹಿಳಾ ಅನಕ್ಷರತೆಯು ಒಂದು ಪ್ರಮುಖ ಕಾರಣವಾಗಿದೆ. ರಾಷ್ಟ್ರವು ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಮಹಿಳೆಯರನ್ನು ರಾಷ್ಟ್ರದ ಅಭಿವೃದ್ಧಿಗೆ ಬಳಸಿಕೊಳ್ಳಬೇಕಾಗಿದೆ. ಆದುದರಿಂದ ಮಹಿಳೆಯರು ಶಿಕ್ಷಣ ಪಡೆಯಲು ಇರುವ ಪ್ರಮುಖ ಸಮಸ್ಯೆಗಳಾವುವು ಎಂದು ಸರ್ಕಾರ ಗಮನ ಹರಿಸಬೇಕಾಗುತ್ತದೆ. ಭಾರತದ ಮಹಿಳಾ ಜನ ಸಂಖ್ಯೆಯಲ್ಲಿ ಶೇ.೮೦ ರಷ್ಟು ಮಹಿಳೆಯರು ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಆದುದರಿಂದ ಪ್ರಸ್ತುತ ಈ ಅಧ್ಯಯನವು ಗ್ರಾಮೀಣ ಮಹಿಳಾ ಶಿಕ್ಷಣದ ಪ್ರಮುಖ ಸಮಸ್ಯೆಗಳಿಗೆ ಸಂಬಂಧಿಸಿದುದರಿಂದ ರಾಷ್ಟ್ರದ ಸಾಮಾಜಿಕ ನೀತಿ, ಸಾಮಾಜಿಕ ಯೋಜನೆಗಳನ್ನು ರೂಪಿಸಲು ಬಹಳ ಸಹಕಾರಿಯಾಗಿದೆ.

ಈ ಅಧ್ಯಯನದ ಅಂಶಗಳನ್ನು ಸಮಾಜದ ಜನರು ಅರ್ಥಮಾಡಿಕೊಂಡಾಗ ಸಮಾಜ ದಲ್ಲಿನ ಲಿಂಗತಾರತಮ್ಯವನ್ನು ಹೋಗಲಾಡಿಸಿ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಸಹಕಾರಿ ಯಾಗುತ್ತದೆ.

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಗ್ರಾಮೀಣ ಮಹಿಳೆಯರ ಪ್ರಮುಖ ಸಮಸ್ಯೆಗಳಲ್ಲಿ ಶಿಕ್ಷಣ, ಅನಕ್ಷರತೆ ಗ್ರಾಮೀಣ ಮಹಿಳೆಯರ ಎಲ್ಲಾ ಸಮಸ್ಯೆಗಳಿಗೆ ಮೂಲವಾಗಿವೆ. ಗ್ರಾಮೀಣ ಮಹಿಳೆಯರ ಅನಕ್ಷರತೆಗೆ ಹಲವಾರು ಕಾರಣಗಳಿವೆ. ಲಿಂಗತಾರತಮ್ಯದಂತಹ ಸಮಸ್ಯೆ ಗ್ರಾಮಗಳಲ್ಲಿ ಹೆಚ್ಚಾಗಿ ಕಂಡು

ಬರುವುದರಿಂದ ಶಿಕ್ಷಣ ನೀಡುವಲ್ಲಿ ಪುರುಷ ಮತ್ತು ಮಹಿಳೆಯರಲ್ಲಿ ಹೆಚ್ಚು ತಾರತಮ್ಯ ಕಂಡು ಬರುತ್ತದೆ. ಗ್ರಾಮಗಳಲ್ಲಿ ಶಿಕ್ಷಣ ನೀಡುವಲ್ಲಿ ಮೊದಲ ಆದ್ಯತೆಯನ್ನು ಗಂಡು ಮಕ್ಕಳಿಗೆ ನೀಡುತ್ತಾರೆ. ನಂತರ ಹೆಣ್ಣು ಮಕ್ಕಳಿಗೆ ನೀಡುತ್ತಾರೆ. ಆದುದರಿಂದ ಶಿಕ್ಷಣದಲ್ಲಿ ಹೆಚ್ಚು ಲಿಂಗತಾರತಮ್ಯ ಕಂಡು ಬರುತ್ತದೆ. ಗ್ರಾಮೀಣ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಂಶೋಧನೆಗಳು ಈಗಾಗಲೇ ನಡೆದಿವೆ ಮತ್ತು ಇನ್ನೂ ನಡೆಯಬೇಕಿವೆ.

೧. **ಡಾ.ಎಸ್.ನಯನತಾರರವರ 'ಗ್ರಾಮೀಣ ಪರಿಸರದಲ್ಲಿ ಶಿಕ್ಷಣ'(೧೯೮೫)** ಪಿಎಚ್.ಡಿ.ಯ ಪೌಢಪ್ರಬಂಧವಾಗಿದೆ. ಈ ಸಂಶೋಧನೆಯಲ್ಲಿ ತುಮಕೂರು ಜಿಲ್ಲೆಯಲ್ಲಿನ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಬಗ್ಗೆ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದಲ್ಲಿ ಗ್ರಾಮಗಳಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸದೆ ಶಾಲೆ ಬಿಡಲು ಇರುವ ಕಾರಣಗಳನ್ನು ಅಧ್ಯಯನ ಮಾಡಲಾಗಿದೆ. ಶಾಲೆ ಸೇರುವ ಮಕ್ಕಳಲ್ಲಿ ಹೆಚ್ಚಿನವರು ಗಂಡು ಅಥವ ಹೆಣ್ಣುಮಕ್ಕಳೇ ಎಂದು ಗುರುತಿಸುವುದಾಗಿದೆ. ಹೆಣ್ಣುಮಕ್ಕಳು ಶಾಲೆ ಬಿಡಲು ಇರುವ ಕಾರಣಗಳನ್ನು ಗುರುತಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ಶಾಲೆ ಬಿಡುವುದಕ್ಕೆ ಇರುವ ಕಾರಣಗಳನ್ನು ಕಂಡು ಹಿಡಿಯುವುದಾಗಿದೆ. ಶಾಲೆ ಬಿಡುವ ಮಕ್ಕಳ ಆರ್ಥಿಕ ಹಿನ್ನೆಲೆಯನ್ನು ಅಧ್ಯಯನ ಮಾಡುವುದು. ಶಾಲೆ ಬಿಡುವುದಕ್ಕೂ ಮತ್ತು ಶಾಲಾ ಸೌಲಭ್ಯಗಳ ಲಭ್ಯತೆಗೂ ಸಂಬಂದವಿದೆಯೇ ಎಂದು ಗುರುತಿಸುವುದಾಗಿದೆ.

ನಯನತಾರರವರ ಅಧ್ಯಯನದಲ್ಲಿ ಕಂಡುಬರುವ ಅಧ್ಯಯನ ಅಂಶಗಳೆಂದರೆ–ಗ್ರಾಮೀಣ ಶಿಕ್ಷಣ ಅಭಿವೃದ್ಧಿಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕು.

ಗ್ರಾಮಗಳಲ್ಲಿ ಮಕ್ಕಳಿಗೆ ಉಚಿತ ಸಮವಸ್ತ್ರ, ಪಠ್ಯಪುಸ್ತಕ, ಮಧ್ಯಾಹ್ನದ ಊಟವನ್ನು ನೀಡುವುದರಿಂದ ಮಕ್ಕಳು ಶಾಲೆ ಬಿಡುವ ಸಂಖ್ಯೆ ಕಡಿಮೆಗೊಳಿಸಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಗ್ರಾಮಗಳಲ್ಲಿ ಏಕ ಶಿಕ್ಷಕರಿಗಿಂತ ಹೆಚ್ಚು ಶಿಕ್ಷಕರನ್ನು ನೇಮಕ ಮಾಡಬೇಕೆಂದು ಸಲಹೆ ನೀಡಿದ್ದಾರೆ. ಹೊಸ ಬೋಧನಾ ಪದ್ಧತಿಯಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಿ ಶಾಲೆಗೆ ಬರುವಂತೆ ಮಾಡಬೇಕೆಂದು ಹೇಳಿದ್ದಾರೆ.

ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಅಂಗನವಾಡಿ ಮತ್ತು ಶಿಶು ವಿಹಾರ ಕೇಂದ್ರಗಳನ್ನು ತೆರೆಯುವುದರಿಂದ ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಕಡಿಮೆಯಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.[೭]

೨. **ಕಲಾವತಿಯವರ 'ಗ್ರಾಮೀಣ ಮಹಿಳೆಯ ಶೈಕ್ಷಣಿಕ ಸ್ಥಾನಮಾನ'(೧೯೯೪) ಪಿಎಚ್.ಡಿ.** ಪ್ರೌಢ ಪ್ರಬಂಧವಾಗಿದೆ. ಈ ಅಧ್ಯಯನದಲ್ಲಿ ಗ್ರಾಮೀಣ ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸುವಲ್ಲಿ ಶಿಕ್ಷಣದ ಮಹತ್ವವೇನು ಎಂಬುದನ್ನು ವಿವರಿಸಲಾಗಿದೆ. ತಾಯಿಯ ಶಿಕ್ಷಣ ಮಕ್ಕಳ ಶಿಕ್ಷಣದ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೀರುವುದನ್ನು ಅಧ್ಯಯನದಲ್ಲಿ ವಿವರಿಸಿದ್ದಾರೆ. ಈ ಅಧ್ಯಯನದಲ್ಲಿ ಗಂಡು ಮಕ್ಕಳ ಶಿಕ್ಷಣಕ್ಕೆ ನೀಡುವ ಪ್ರಾಮುಖ್ಯತೆಯನ್ನು ಹೆಣ್ಣುಮಕ್ಕಳ ಶಿಕ್ಷಣಕ್ಕೆ ನೀಡದೆ ತಾರತಮ್ಯ ಮಾಡುವುದನ್ನು ವಿವರಿಸಿದ್ದಾರೆ. ಅಧ್ಯಯನದಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇರುವ ಪ್ರಮುಖ ಅಡ್ಡಿ ಆತಂಕಗಳನ್ನು ವಿವರಿಸಿದ್ದಾರೆ. ಅವುಗಳೆಂದರೆ ಹೆಣ್ಣುಮಕ್ಕಳು ಪೋಷಕರಿಗೆ ಮನೆ ಕೆಲಸಗಳಲ್ಲಿ ನೆರವಾಗಬೇಕಾಗಿರುವುದರಿಂದ ಹೆಚ್ಚು ಸಂದರ್ಭ ಗಳಲ್ಲಿ ಶಿಕ್ಷಣಕ್ಕೆ ಅಡ್ಡಿಯುಂಟಾಗುತ್ತದೆ. ಹೆಣ್ಣುಮಕ್ಕಳನ್ನು ಬೇರೆಯವರ ಆಸ್ತಿಯೆಂದು ತಿಳಿದಿರು ವುದರಿಂದ ಹೆಣ್ಣುಮಕ್ಕಳ ಶಿಕ್ಷಣ ಲಾಭದಾಯಕವಲ್ಲ ಎಂದು ಭಾವಿಸಿ ಹೆಚ್ಚು ಪ್ರೋತ್ಸಾಹ ನೀಡದಿರುವುದು. ಗ್ರಾಮೀಣ ಜನರಲ್ಲಿ ವಿದ್ಯಾವಂತ ಹೆಣ್ಣುಮಕ್ಕಳು ಗ್ರಾಮಕುಟುಂಬಗಳಿಗೆ ಹೊಂದಾಣಿಕೆಯಾಗುವುದಿಲ್ಲ ಎಂಬ ಭಾವನೆ ಇರುವುದರಿಂದ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುವುದಿಲ್ಲ ಎಂಬುದನ್ನು ಅಧ್ಯಯನದಲ್ಲಿ ತಿಳಿಸಿದ್ದಾರೆ. ಗ್ರಾಮೀಣ ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಹೊಂದಿರುವ ಉದಾಸೀನತೆ ಅವರ ಕಲಿಕಾಸಾಮರ್ಥ್ಯದ ಮೇಲೆ ಪ್ರಭಾವ ಬೀರುತ್ತದೆ ಮತ್ತು ಶಿಕ್ಷಣದ ಹಿನ್ನಡೆಗೆ ಕಾರಣವಾಗಿರುತ್ತದೆ ಎಂದು ಅಧ್ಯಯನದಲ್ಲಿ ತಿಳಿಸಿದ್ದಾರೆ.[೮]

೩. **ಎ.ಎಸ್. ಸೀತಾರಾಮು, ಎಂ.ಡಿ. ಉಷಾದೇವಿ ಅವರ 'ಎಜುಕೇಷನ್ ಇನ್ ರೂರಲ್ ಏರಿಯಾಸ್ ಕಾನ್‌ಸ್ಟ್ರೇನ್ಸ್‌ಸ್ ಅಂಡ್ ಪ್ರಾಸ್ಪೆಕ್ಟೀವ್'(೧೯೮೫)**, ಅಧ್ಯಯನವು ಮ್ಯಾಕ್ರೊ(macro) ಅಧ್ಯಯನವಾಗಿದ್ದು ಗ್ರಾಮೀಣ ಪ್ರದೇಶದಲ್ಲಿ ಶಾಲೆ ಬಿಟ್ಟುಬಿಡುವುದಕ್ಕೆ ಇರುವ ಕಾರಣಗಳನ್ನು ಕಂಡುಕೊಳ್ಳಲಾಗಿದೆ. ೧೯೬೧ರಲ್ಲಿ ಮೈಸೂರು(ಇಂದಿನ ಕರ್ನಾಟಕ) ರಾಜ್ಯವು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿತು. ಈ ಕಾಯ್ದೆಯನ್ವಯ ೬ರಿಂದ ೧೧ ವರ್ಷ ವಯಸ್ಸಿನ ಶೇ.೯೮ರಷ್ಟು ಮಕ್ಕಳು ಶಾಲೆಗೆ ದಾಖಲಾದರೂ ಸಹ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದವರು ಶೇ.೩೩% ಮಾತ್ರ ಎಂದು ಅಧ್ಯಯನದ ಅವಧಿಯಲ್ಲಿ ತಿಳಿದುಬಂದಿದೆ. ಶಾಲೆ ಬಿಡುವುದಕ್ಕೆ ಇರುವ ಕಾರಣಗಳನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶಾಲೆ ಬಿಡುವುದಕ್ಕೆ ಕಾರಣ ವ್ಯವಸಾಯ ಪ್ರಧಾನ ಕುಟುಂಬಗಳು. ವ್ಯವಸಾಯ ಕೆಲಸಗಳಲ್ಲಿ ಪಾಲ್ಗೊಳ್ಳಲು ಶಾಲೆ ಬಿಡುವಿಕೆ ಹೆಚ್ಚಾಗಿ ಕಂಡುಬರುತ್ತದೆ. ಹೆಚ್ಚಾಗಿ ಶಾಲೆ ಬಿಡುವವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರೇ ಆಗಿದ್ದಾರೆ. ಹೆಣ್ಣುಮಕ್ಕಳು ಗ್ರಾಮಗಳಲ್ಲಿ ಶಾಲೆ ಬಿಡಲು ಇರುವ ಪ್ರಮುಖ ಕಾರಣವೇನೆಂದರೆ ಮನೆಯ ಕೆಲಸಗಳನ್ನು ಮಾಡಬೇಕಾಗಿರುವುದು ಮತ್ತು ಕೆಲವು ಸಂದರ್ಭಗಳಲ್ಲಿ ಮನೆಯ ಹೊರಗಡೆ ದುಡಿದು ಆದಾಯ ತರಬೇಕಾಗಿರುವುದು

ಸಹ ಗ್ರಾಮೀಣರಲ್ಲಿ ಶಾಲೆ ಬಿಡುವುದಕ್ಕೆ ಕಾರಣವಾಗಿದೆ ಎಂದು ಅಧ್ಯಯನದಿಂದ ತಿಳಿದು ಬಂದಿದೆ.[೯]

೪. 'ಡ್ರಾಪ್-ಔಟ್ಸ್ ಇನ್ ಎಲಿಮೆಂಟರಿ ಎಜುಕೇಷನ್'(೨೦೧೦) ಅಭಿಜಿತ್‌ಕುಮಾರ್ ಪಾಲ್‌ರವರ ಅಧ್ಯಯನದಲ್ಲಿ ಶಾಲೆ ಬಿಡುವುದಕ್ಕೆ ಕಾರಣಗಳನ್ನು ತಿಳಿಸಿದ್ದಾರೆ. ಅವಿದ್ಯಾವಂತ ತಂದೆ ತಾಯಿಗಳಿಗೆ ಶಿಕ್ಷಣದ ಮಹತ್ವ ತಿಳಿದಿರುವುದಿಲ್ಲ. ಆದುದರಿಂದ ಅವರು ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದಿಲ್ಲ. ತಂದೆ ತಾಯಿಗಳ ಬಡತನದ ಪರಿಸ್ಥಿತಿಯು ಸಹ ಮಕ್ಕಳು ಶಾಲೆ ಬಿಡುವುದಕ್ಕೆ ಕಾರಣಗಳಲ್ಲೊಂದು ಎಂದು ತಿಳಿಸಿದ್ದಾರೆ. ಈ ಅಧ್ಯಯನದಲ್ಲಿ ಪಿತೃ ಪ್ರಾಧಾನ್ಯತೆಯು ಗಂಡುಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ. ಹೆಣ್ಣುಮಕ್ಕಳು ಮನೆ ಕೆಲಸಗಳನ್ನು ಮಾಡಬೇಕಾಗಿರುವುದು ಮತ್ತು ಕೆಲವು ಸಂದರ್ಭದಲ್ಲಿ ಮನೆಯ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಬೇಕಾದ ಸಂದರ್ಭವು ಸಹ ಗ್ರಾಮಗಳಲ್ಲಿ ಹೆಣ್ಣುಮಕ್ಕಳು ಶಾಲೆ ಬಿಡುವುದಕ್ಕೆ ಪ್ರಮುಖ ಕಾರಣವೆಂದು ಹೇಳಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಪೋಷಕರಿಗೆ ಶಿಕ್ಷಣದ ಬಗ್ಗೆ ಜಾಗೃತಿ ಇಲ್ಲದಿರುವುದು ಮತ್ತು ಗ್ರಾಮಗಳಲ್ಲಿ ಶಾಲೆ ಲಭ್ಯವಿಲ್ಲದಿರುವುದು ಶಾಲೆ ಬಿಡುವುದಕ್ಕೆ ಕಾರಣವಾಗಿದೆ. ಗ್ರಾಮಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುತ್ತಾರೆ. ಹಿಂದುಳಿದ ಗ್ರಾಮಗಳಲ್ಲಿ ಹೆಣ್ಣುಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿ ವಿವಾಹ ಮಾಡುವುದು ಅವರ ಶಿಕ್ಷಣವನ್ನು ಮೊಟಕುಗೊಳಿಸುತ್ತದೆ.[೧೦]

೫. 'ಹಿಸ್ಟರಿ ಆಫ್ ಎಜುಕೇಷನ್'(೨೦೦೬) ಎಂ. ಆಂಜನಪ್ಪ. ಈ ಅಧ್ಯಯನವು ಬ್ರಿಟಿಷ್ ಭಾರತದಲ್ಲಿನ ೧೮೫೪ರಿಂದ ೧೯೪೭ರವರೆಗಿನ ಶಿಕ್ಷಣ ಪದ್ಧತಿಯನ್ನು ವಿವರಿಸುತ್ತದೆ. ವಿಶೇಷವಾಗಿ ಮೈಸೂರು ರಾಜ್ಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಮಾಡಲಾಗಿದೆ. ಮೈಸೂರು ರಾಜರ ಆಳ್ವಿಕೆಯಲ್ಲಿ ೧೮೬೯ರಲ್ಲಿ ಹೆಣ್ಣುಮಕ್ಕಳಿಗೆಂದು ಸರ್ಕಾರಿ ಶಾಲೆಗಳು ಪ್ರಾರಂಭವಾಗಿ ೧೯೭೮ರ ತನಕ ಕೇವಲ ೧೧ ಹೆಣ್ಣುಮಕ್ಕಳ ಸರ್ಕಾರಿ ಶಾಲೆಗಳಿದ್ದವು. ಕೇವಲ ೪೬೮ ಹೆಣ್ಣುಮಕ್ಕಳು ಮಾತ್ರ ಶಿಕ್ಷಣ ಪಡೆಯುತ್ತಿದ್ದರು. ಅದರಲ್ಲಿ ಶೇ.೯೭ರಷ್ಟು ಹಿಂದು ಹೆಣ್ಣುಮಕ್ಕಳು ಮತ್ತು ಕೇವಲ ೩ರಷ್ಟು ಮುಸ್ಲಿಂ ಹೆಣ್ಣುಮಕ್ಕಳಾಗಿದ್ದರು. ಅದರಲ್ಲಿ ಹೆಚ್ಚಿನ ಸಂಖ್ಯೆಯವರು ಬೆಂಗಳೂರು ನಗರಕ್ಕೆ ಸೇರಿದ್ದರು ಎಂಬ ಮಾಹಿತಿ ದೊರೆಯುತ್ತದೆ. ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಬೆಳೆದು ಬಂದ ಮಾಹಿತಿ ನೀಡುತ್ತದೆ. ಶಿಕ್ಷಣಕ್ಕೆ ಸಂಬಂಧಿತ ಕಾಯ್ದೆ ಮತ್ತು ಶಿಕ್ಷಣದ ಅಭಿವೃದ್ಧಿ, ಶಿಕ್ಷಣಕ್ಕೆ ಹಣಕಾಸು ವ್ಯವಸ್ಥೆಯ ವಿಧಾನವನ್ನು ವಿವರಿಸಲಾಗಿದೆ.[೧೧]

೬. 'ಕರ್ನಾಟಕ ಪ್ರಗತಿ ಪಥ'(೧೯೭೪) ಎಂ.ಬಿ. ನಂಜಪ್ಪ, ಗೊ.ರು. ಚನ್ನಬಸಪ್ಪ, ಮತ್ತು ಸಿ.ಕೆ. ಪರಶುರಾಮಪ್ಪ. ಕರ್ನಾಟಕ ಸರ್ಕಾರ ಈ ಗಂಥದಲ್ಲಿ ಮೊದಲನೆಯ ಪಂಚವಾರ್ಷಿಕ

ಯೋಜನೆಯಿಂದ ನಾಲ್ಕನೆ ಪಂಚವಾರ್ಷಿಕ ಯೋಜನೆಯವರೆಗಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿವರಿಸಲಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆಯೂ ವಿವರಿಸಲಾಗಿದೆ. ವಿಶೇಷವಾಗಿ ಮಹಿಳಾ ಶಿಕ್ಷಣದ ಪ್ರಗತಿ ಮತ್ತು ಮಹಿಳಾ ಶಿಕ್ಷಣಕ್ಕೆ ಸರ್ಕಾರ ಕೈಗೊಂಡ ಯೋಜನೆಯ ಬಗ್ಗೆ ಮಾಹಿತಿಯು ದೊರೆಯುತ್ತದೆ.[೧೨]

೭. 'ಇಕ್ವಾಲಿಟಿ ಇನ್ ಎಜುಕೇಷನ್'(೨೦೦೨) ರಮೇಶ್ ಕನ್ಬರ್ಗಿಯವರ ಗ್ರಂಥದಲ್ಲಿ ಶಿಕ್ಷಣದಲ್ಲಿ ಸಮಾನತೆ ತರಲು ಭಾರತ ಸರ್ಕಾರ ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳನ್ನು ವಿವರಿಸಿದ್ದಾರೆ. ವಿಶೇಷವಾಗಿ ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಶಿಕ್ಷಣದ ಮುಖಾಂತರ ಸಮಾನತೆಯನ್ನು ತರಲು ಹಲವರು ವಿಶೇಷ ಕಾರ್ಯಕ್ರಮಗಳನ್ನು ಭಾರತ ಮತ್ತು ಕರ್ನಾಟಕ ಸರ್ಕಾರ ಕೈಗೊಂಡಿರುವ ಯೋಜನೆಗಳನ್ನು ವಿವರಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದುದೆಂದರೆ 'ನಮ್ಮ ಮಗಳು ನಮ್ಮ ಶಕ್ತಿಯೋಜನೆ'. ಈ ಯೋಜನೆಯು ೧೯೯೬-೯೭ರಲ್ಲಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ತಂದಿತು. ಈ ಯೋಜನೆಯಲ್ಲಿ ೫ರಿಂದ ೬ ವರ್ಷದ ಶಾಲೆ ಸೇರಿದ ಹೆಣ್ಣುಮಕ್ಕಳಿಗೆ ೨,೦೦೦ ರೂಗಳ ಎಲ್.ಐ.ಸಿ. ಪಾಲಿಸಿಯನ್ನು ಮಾಡಿಸಲಾಯಿತು. ಆ ಪಾಲಿಸಿಯ ಹಣ ಹೆಣ್ಣುಮಗು ತನ್ನ ೧೮ನೇ ವರ್ಷದ ಶಿಕ್ಷಣವನ್ನು ಪೂರ್ಣಗೊಳಿಸಿದಾಗ ೪,೮೦೦ ರೂಗಳು ಸಿಗುವಂತೆ ಮಾಡಲಾಯಿತು. ಇದರಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಉತ್ತೇಜನ ಸಿಕ್ಕಿದಂತಾಯಿತು. **ಬಾಲಿಕ ಸಂವೃದ್ಧಿಯೋಜನೆ:** ಈ ಯೋಜನೆಯು ಗ್ರಾಮ ಮತ್ತು ನಗರ ಪ್ರದೇಶಗಳೆರಡಕ್ಕೂ ಅನ್ವಯವಾಗುವ ಯೋಜನೆಯಾಗಿದೆ. ಈ ಯೋಜನೆಯಲ್ಲಿ ಗ್ರಾಮ ಮತ್ತು ಕುಟುಂಬದ ಮಹಿಳೆಯರ ಬಗ್ಗೆ ಇರುವ ನಕಾರಾತ್ಮಕ ಧೋರಣೆಯನ್ನು ಹೋಗಲಾಡಿಸಿ ಸಕಾರಾತ್ಮಕ ಭಾವನೆ ತುಂಬುವುದಾಗಿದೆ. ಈ ಯೋಜನೆಯಲ್ಲಿ ೧ರಿಂದ ೩ನೇ ತರಗತಿ ಓದುವ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಪ್ರತಿ ವರ್ಷ ೩೦೦ ರೂಗಳನ್ನು, ೪ನೇ ತರಗತಿ ಓದುವ ಹೆಣ್ಣುಮಕ್ಕಳಿಗೆ ೫೦೦ ರೂಗಳನ್ನು, ೫ನೇ ತರಗತಿಗೆ ೬೦೦ ರೂಗಳನ್ನು, ೬ನೇ ಮತ್ತು ೭ನೇ ತರಗತಿಗೆ ೭೦೦ ರೂಗಳನ್ನು, ೮ನೇ ತರಗತಿಗೆ ೮೦೦ ರೂಗಳನ್ನು ಹಾಗೂ ೯ನೇ ಮತ್ತು ೧೦ನೇ ತರಗತಿಗೆ ಒಂದು ಸಾವಿರ ರೂಗಳನ್ನು ಹೆಣ್ಣುಮಕ್ಕಳ ಶಿಕ್ಷಣಕ್ಕೆ ನೀಡುವ ಮೂಲಕ ಮಹಿಳಾ ಶಿಕ್ಷಣವನ್ನು ಉತ್ತೇಜಿಸಲಾಯಿತು. ಮಹಿಳಾ ಶಿಕ್ಷಣವನ್ನು ಉತ್ತೇಜಿಸಲು ಶಿಕ್ಷಣದಲ್ಲಿ ತಂದ ಸುಧಾರಣೆಗಳನ್ನು ವಿವರಿಸಲಾಗಿದೆ.[೧೩]

೮. ರಾಮ್ ಜೆ. ಜೋಷಿ(೧೯೭೩)ರವರ 'ಸಮಕಾಲೀನ ಭಾರತದಲ್ಲಿ ಮಹಿಳೆಯರ ಸಾಮಾಜಿಕ-ಆರ್ಥಿಕ ಪಾತ್ರಗಳಲ್ಲಿನ ಬದಲಾವಣೆಯಿಂದ ಕುಟುಂಬ ಜೀವನದ ಮೇಲಿನ ಪರಿಣಾಮ

ಗಳು' ಲೇಖನದಲ್ಲಿ ಮಹಿಳೆಯರ ಹಲವಾರು ಅಭಿವೃದ್ಧಿ ಅಂಶಗಳನ್ನು ಚರ್ಚಿಸಿದ್ದಾರೆ. ಶಿಕ್ಷಣ, ಉದ್ಯೋಗ, ಕಾನೂನು, ಮಹಿಳೆಯ ಹಕ್ಕುಗಳು, ಅವರ ಕೌಟುಂಬಿಕ ಜೀವನದ ಮೇಲೆ ಬೀರುವ ಪರಿಣಾಮಗಳನ್ನು ವಿವರಿಸಿದ್ದಾರೆ. ಪರಿಸರದ ಅಂಶಗಳು ಮತ್ತು ಸಾಂಸ್ಥಿಕ ಅಂಶಗಳು ಮಹಿಳೆಯ ಉತ್ತಮ ಸ್ಥಾನಮಾನಕ್ಕೆ ಹೇಗೆ ಕಾರಣವಾಗಿವೆ ಎಂಬುದನ್ನು ವಿವರಿಸಿದ್ದಾರೆ. ಭಾರತದಲ್ಲಿನ ಮುಂದುವರಿದ ವಿಜ್ಞಾನ ಮತ್ತು ತಂತ್ರಜ್ಞಾನ, ಶೈಕ್ಷಣಿಕ ಜಾಗೃತಿ ಮತ್ತು ಹೊಸ ಕಾನೂನುಗಳು ಮಹಿಳೆಯರ ಸ್ಥಾನಮಾನದ ಹೆಚ್ಚಳಕ್ಕೆ ಕಾರಣವಾಗಿವೆ ಎಂದು ವಿವರಿಸಿದ್ದಾರೆ.[೧೪]

೯. **'ವುಮೆನ್ ಇನ್ ಮಾಡ್ರನ್ ಇಂಡಿಯಾ'(೧೯೭೭), ನೀರಾ. ಎ. ದೇಸಾಯಿ,** ಭಾರತೀಯ ಇತಿಹಾಸದಲ್ಲಿ ಮಹಿಳಾ ಸ್ಥಾನಮಾನದಲ್ಲಿ ಉಂಟಾದ ಬದಲಾವಣೆಯನ್ನು ವಿವರಿಸಲಾಗಿದೆ. ಬ್ರಿಟಿಷ್ ಆಳ್ವಿಕೆಯ ಪೂರ್ವ ಭಾರತೀಯ ರಾಜಕೀಯ ಚಳುವಳಿಗಳು ಯಾವ ರೀತಿ ಮಹಿಳಾ ಸ್ಥಾನಮಾನ ಬದಲಾವಣೆಗೆ ಕಾರಣವಾದವು ಎಂಬುದನ್ನು ವಿವರಿಸಿದ್ದಾರೆ. ಮಹಿಳಾ ಪರ ಕಾನೂನುಗಳು ಮಹಿಳೆಯ ಉತ್ತಮ ಸ್ಥಾನಮಾನಕ್ಕೆ ಕಾರಣವಾಗಿವೆ ಎಂಬುದನ್ನು ತಿಳಿಸಿದ್ದಾರೆ. ಭಾರತೀಯ ಇತಿಹಾಸದುದ್ದಕ್ಕೂ ಮಹಿಳೆಯ ಸ್ಥಾನಮಾನ ಯಾವ ರೀತಿ ಬದಲಾವಣೆಗೆ ಒಳಗಾಗಿದೆ ಎಂಬುದನ್ನು ವಿವರಿಸಿದ್ದಾರೆ. ಕೊನೆಯದಾಗಿ, ನೀರಾ ದೇಸಾಯಿಯವರು ಸ್ವಾತಂತ್ರ್ಯ ಭಾರತದಲ್ಲಿ ಮಹಿಳೆಯು ಹಳೆಯದನ್ನು ಸಂಪೂರ್ಣವಾಗಿ ಬಿಡಲಾಗದೆ ಮತ್ತು ಹೊಸ ಸಾಮಾಜಿಕ ನಿಯಮಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳಲಾಗದೆ ಗೊಂದಲಕ್ಕೆ ಒಳಗಾಗಿದ್ದಾಳೆ. ಒಟ್ಟಿನಲ್ಲಿ ಭಾರತೀಯ ಮಹಿಳೆಗೆ ಇನ್ನೂ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೧೫]

೧೦. **'ಸ್ತ್ರೀವಾದ'(೨೦೦೩) ಡಾ.ಎಚ್.ಎಸ್. ಶ್ರೀಮತಿ** ಅವರ ಕೃತಿಯಲ್ಲಿ ಹೆಣ್ಣನ್ನು ಸಮಾಜದಲ್ಲಿ ಅರ್ಥಿಸುವ ರೀತಿ ಮತ್ತು ವಿವರಣೆಯನ್ನು ನೀಡಲಾಗಿದೆ. ಲಿಂಗಭೇದ ಮತ್ತು ಸಾಮಾಜಿಕ ಲಿಂಗದ ವಿವರಣೆ ನೀಡಿದ್ದಾರೆ. ಸುವ್ಯವಸ್ಥೆಯಲ್ಲಿ ಜೈವಿಕ ಲಿಂಗದ ಆಧಾರದ ಮೇಲೆ ಸಾಮಾಜಿಕ ಲಿಂಗ ತಾರತಮ್ಯವನ್ನು ಮಾಡುತ್ತಾರೆ ಎಂಬುದನ್ನು ವಿವರಿಸಲಾಗಿದೆ. ಸ್ತ್ರೀವಾದದ ಅರ್ಥವಿವರಣೆ, ಸ್ತ್ರೀವಾದದ ಬಗೆಗಳು ಮತ್ತು ಸಿದ್ಧಾಂತಗಳನ್ನು ವಿವರಿಸಲಾಗಿದೆ. ಸಮಾಜದಲ್ಲಿ ಲಿಂಗ ತಾರತಮ್ಯದ ನೆಲೆಗಳನ್ನು ವಿವರಿಸುತ್ತ ಪಿತೃಪ್ರಾಧಾನ್ಯತೆಯನ್ನು ವಿವರಿಸಿದ್ದಾರೆ. ಪಿತೃ ಪ್ರಾಧ್ಯಾನ್ಯತೆಯೆ ಸ್ತ್ರೀ ಶೋಷಣೆಯ ನೆಲೆ ಎಂಬುದನ್ನು ವಿವರಿಸಿದ್ದಾರೆ. ಲಿಂಗ ತಾರತಮ್ಯದ ಸಾಮಾಜೀಕರಣದ ಪ್ರಕ್ರಿಯೆಯಲ್ಲಿಯೇ ಪ್ರಾರಂಭವಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ಪಿತೃಪ್ರಾಧಾನ್ಯತೆಯಲ್ಲಿ ಅಧಿಕಾರಹೀನ ಪರಿಸ್ಥಿತಿಯ ಮಹಿಳೆಯ ಸ್ಥಿತಿಗತಿಗಳನ್ನು ವಿವರಿಸಲಾಗಿದೆ. ಆಧುನಿಕ ಸಮಾಜದಲ್ಲಿಯೂ ಸಂಸ್ಕೃತಿ ಎಂಬ ಹೋಮಾಗ್ನಿಯಲ್ಲಿ ಹೆಣ್ಣು ಬದಕನ್ನು

ಪೂರ್ಣಾಹುತಿಯಾಗಿ ಕಲ್ಪಿಸುತ್ತಾ ಬಂದಿದೆ ಎಂದು ಹೇಳಿದ್ದಾರೆ. ಹೆಣ್ಣು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸಂಸ್ಕೃತಿಯ ರಕ್ಷಕಳು ಎಂಬ ಬಿರುದಿನೊಂದಿಗೂ ಹರಕೆಯ ಕುರಿಯಂತಾಗಿದ್ದಾಳೆ ಎಂದು ಅಭಿಪ್ರಾಯಿಸಿದ್ದಾರೆ. ಆಧುನಿಕ ಯುಗದಲ್ಲಿ ಹೆಣ್ಣು ವಿದ್ಯಾವಂತಳಾಗಿ ಆರ್ಥಿಕ ಹಾಗೂ ರಾಜಕೀಯ ವಲಯದಲ್ಲಿ ಪ್ರವೇಶ ಪಡೆದು ಉತ್ತಮ ಸ್ಥಾನಮಾನ ಪಡೆದಿದ್ದಾಳೆ ಎಂಬುದು ಸಹ ವಿದ್ಯೆ ಅಥವಾ ಭ್ರಮೆ ಎಂದು ಅಭಿಪ್ರಾಯಿಸಿದ್ದಾರೆ.[೧೬]

೧೧. **'ಸಾಕ್ಷರತೆಯ ಲಿಂಗ ಸಂಬಂಧಿ ಆಯಾಮಗಳು: ಕರ್ನಾಟಕದ ಸಾಧನೆಗಳು' (೨೦೧೦), ಟಿ.ಆರ್. ಚಂದ್ರಶೇಖರ್** ಅವರ ಲೇಖನದಲ್ಲಿ ಮಹಿಳಾ ಸಾಕ್ಷರತೆ ಮತ್ತು ಲಿಂಗ ತಾರತಮ್ಯದ ನೆಲೆಗಳನ್ನು ವಿವರಿಸಿದ್ದಾರೆ. ಮಹಿಳೆ ಮತ್ತು ಪುರುಷರ ನಡುವಿನ ಸಾಕ್ಷರತಾ ಅಂತರವೂ ಲಿಂಗ ಅಸಮಾನತೆಯ ಬಹುಮುಖ್ಯ ಸೂಚಿಯಾಗಿದೆ. ಸಮಾಜದಲ್ಲಿ ಗಂಡು ಹೆಣ್ಣುಗಳ ನಡುವೆ ಸಮಾನ ಅವಕಾಶಗಳಿದ್ದ ಪಕ್ಷದಲ್ಲಿ ಪುರುಷರು ಹಾಗೂ ಮಹಿಳೆಯರ ಸಾಕ್ಷರತೆಯಲ್ಲಿ ಸಮಾನತೆಯಿರಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಶಿಕ್ಷಣವನ್ನು ಕುಟುಂಬದ ಮೇಲಿನ ಹೊರೆಯೆಂದು ಭಾವಿಸುತ್ತಾರೆ. ಆದುದರಿಂದಲೇ ಅವರು ಮಹಿಳಾ ಶಿಕ್ಷಣಕ್ಕೆ ಒತ್ತು ನೀಡುವುದಿಲ್ಲವೆಂದು ಹೇಳಿದ್ದಾರೆ. ಮಕ್ಕಳಿಗೆ ಶಿಕ್ಷಣವಿಲ್ಲದಿರುವುದು ಸಾಮಾಜಿಕ ವೈಫಲ್ಯವೆಂದು ಮತ್ತು ಅದೊಂದು ಅಸ್ವಾತಂತ್ರ್ಯವೆಂದು ಪರಿಭಾವಿಸಿದ್ದಾರೆ. ಮಹಿಳಾ ಶಿಕ್ಷಣಕ್ಕೆ ಅಡ್ಡಿಯಾಗಿರುವ ಪಿತೃಪ್ರಧಾನ ವಾರಸುದಾರಿಕೆ ಪ್ರಧಾನ ಪಾತ್ರವಹಿಸುತ್ತದೆ ಎಂದು ಹೇಳಿದ್ದಾರೆ. ಮಹಿಳೆಗೆ ಶಿಕ್ಷಣ ಕೊಡುವುದೆಂದರೆ ಪಕ್ಕದ ಮನೆಯ ಗಿಡಕ್ಕೆ ನೀರೆರೆದಂತೆ ಎಂಬ ಭಾವನೆ ಗ್ರಾಮೀಣ ಜನರಲ್ಲಿ ಇರುವುದರಿಂದ ಅವರು ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದಿಲ್ಲ. ಜೊತೆಗೆ ವರದಕ್ಷಿಣೆ, ಉನ್ನತ ಗಂಡಿನೊಂದಿಗೆ ವಿವಾಹ ಮುಂತಾದವು ಮಹಿಳಾ ಶಿಕ್ಷಣಕ್ಕೆ ವಿರುದ್ಧವಾಗಿ ಕೆಲಸ ಮಾಡಬಲ್ಲವು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೧೭]

೧೨. **'ಗ್ರಾಮೀಣ ಪ್ರದೇಶಗಳಿಗೆ ಜಂಡರ್ ತಿಳುವಳಿಕೆ ಕಾರ್ಯಕ್ರಮಗಳ ಅಗತ್ಯ: ಒಂದು ಪರಿಶೀಲನೆ' (೨೦೦೬), ಆರ್. ಸುನಂದಮ್ಮ.** ಈ ಲೇಖನದಲ್ಲಿ ಭಾರತೀಯ ಗ್ರಾಮಗಳಲ್ಲಿ ಜಂಡರ್ ತಿಳುವಳಿಕೆಯ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಕಂಡು ಬರುವ ಅಗಾಧ ಲಿಂಗತಾರತಮ್ಯವನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಗ್ರಾಮಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣದಲ್ಲಿ ಉಂಟಾಗುವ ಲಿಂಗ ತಾರತಮ್ಯವನ್ನು ವಿವರಿಸುತ್ತ, ನಗರದ ಹೆಣ್ಣುಮಕ್ಕಳಿಗೆ ಮತ್ತು ಗ್ರಾಮದ ಗಂಡು ಮಕ್ಕಳಿಗೆ ಶಿಕ್ಷಣದಲ್ಲಿ ದೊರೆಯುವ ಅವಕಾಶಗಳು, ಗ್ರಾಮೀಣ ಹೆಣ್ಣುಮಕ್ಕಳಿಗೆ ದೊರೆಯದ ಶಿಕ್ಷಣದಿಂದ ವಂಚಿತಳಾಗಿದ್ದಾಳೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮೀಣ ಸಮಾಜದಲ್ಲಿ ಆಡುವ ಮಾತು, ನೋಡುವ ದೃಷ್ಟಿ, ಓದುವ

ಪಠ್ಯ, ಬದುಕುವ ವಿಧಾನ, ಯೋಚಿಸುವ ರೀತಿ ಮತ್ತು ಬಳಸುವ ಭಾಷೆ ಇವೆಲ್ಲದರಲ್ಲೂ ಲಿಂಗತಾರತಮ್ಯ ಮಡುಗಟ್ಟಿದೆ. ಇದನ್ನು ಹೋಗಲಾಡಿಸಲು ಗ್ರಾಮೀಣ ಜನರಲ್ಲಿ ಜಂಡರ್ ತಿಳುವಳಿಕೆ ಕಾರ್ಯಕ್ರಮಗಳ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಜಂಡರ್ ವಿಭಾಗೀಕರಣವು ಜೈವಿಕ ಉಗಮವಾದುದಲ್ಲ. ಅದು ಸಮಾಜ ಮತ್ತು ಸಂಸ್ಕೃತಿಯ ಉತ್ಪನ್ನ, ಸಾಮಾಜಿಕ ತಾರತಮ್ಯವನ್ನು ನಾಶಪಡಿಸಿ ಮಾನವೀಯತೆಯ ಕಡೆಗೆ ಚಿಂತಿಸಿದಲ್ಲಿ ಮಾತ್ರ ಲಿಂಗ ತಾರತಮ್ಯವನ್ನು ಕಡೆಗಣಿಸಬಹುದೆಂದು ತಿಳಿಸಿದ್ದಾರೆ. ಹಿಂಸಾರಹಿತ ಸಮಾಜದ ನಿರ್ಮಾಣವಾಗ ಬೇಕಾದರೆ, ಸ್ತ್ರೀ-ಪುರುಷರಲ್ಲಿ ಸಮಾನತೆ ಅತ್ಯಂತ ಮುಖ್ಯವಾದುದು ಎಂದು ಹೇಳಿದ್ದಾರೆ.[೧೮]

೧೩. **'ಮಹಿಳಾ ಚಳುವಳಿ: ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'(೨೦೦೭) ಹಾಲತಿ ಸೋಮಶೇಖರ್** ಅವರ ಗ್ರಂಥದಲ್ಲಿ ವಿವಿಧ ಕಾಲಘಟ್ಟದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ. ನಾಗರಿಕತೆಯ ಪೂರ್ವದಲ್ಲಿ ಮಹಿಳೆಯೇ ಗುಂಪಿನ ನಾಯಕಿಯಾಗಿದ್ದು, ಪುರುಷನಷ್ಟೇ ಸ್ಥಾನಮಾನವನ್ನು ಹೊಂದಿದ್ದರು ಎಂದು ವಿವರಿಸಿದ್ದಾರೆ. ಅಲ್ಲಿ ಲಿಂಗಭೇದವಾಗಲಿ, ಹೆಣ್ಣು ಗಂಡು ಎಂಬ ಭೇದಭಾವಗಳಾಗಲಿ, ಪುರುಷ ಸ್ತ್ರೀಯರಿಗೆ ಭಿನ್ನ ಸಮಸ್ಯೆಯಾಗಲಿ ಇಲ್ಲವಾದುದರಿಂದ ಸ್ತ್ರೀ ಶೋಷಣೆಗೆ ಒಳಗಾಗಿರಲಿಲ್ಲ. ಪುರುಷರಷ್ಟೆ ಸ್ಥಾನಮಾನವನ್ನು ಹೊಂದಿದ್ದರು ಎಂದು ವಿವರಿಸಿದ್ದಾರೆ. ಶಿಲಾಯುಗದಲ್ಲಿಯೂ ಲಿಂಗಭೇದ ವ್ಯತ್ಯಾಸಗಳು ಕಂಡು ಬರುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ನಾಗರಿಕತೆ ಬೆಳೆದಂತೆ ಹೆಣ್ಣು ಪುರುಷನ ಗುಲಾಮಳಾದುದನ್ನು ಚರಿತ್ರೆಯಲ್ಲಿ ಕಾಣಬಹುದು ಎಂದು ವಿವರಿಸಿದ್ದಾರೆ. ಕುಟುಂಬ ವ್ಯವಸ್ಥೆ ಜಾರಿಗೆ ಬಂದು ಮಾತೃ ಪ್ರಧಾನತೆ ಮತ್ತು ಪಿತೃಪ್ರಧಾನ ವ್ಯವಸ್ಥೆ ಪ್ರಾರಂಭವಾಗಿ ಲಿಂಗ ಶ್ರಮ ವಿಭಜನೆ ಪ್ರಾರಂಭವಾದಾಗಿನಿಂದ ಸ್ತ್ರೀಶೋಷಣೆ ಪ್ರಾರಂಭವಾಯಿತು ಎಂಬ ಮಾತನ್ನು ಹೇಳಿದ್ದಾರೆ. ಪ್ರಾಚೀನ ನಾಗರಿಕತೆಯಲ್ಲಿಯೂ ಸ್ತ್ರೀ ಸಹಗಮನ ಪದ್ಧತಿ, ದೇವದಾಸಿ ಪದ್ಧತಿಗಳು ಆಚರಣೆಯಿದ್ದುದಕ್ಕೆ ಪುರಾವೆಗಳಿವೆ ಎಂಬ ಮಾತನ್ನು ಹೇಳಿ ಎಲ್ಲ ವರ್ಗದ ಮಹಿಳೆಯ ಸ್ಥಾನಮಾನ ಉತ್ತಮವಾಗಿರಲಿಲ್ಲವೆಂಬ ಅಭಿಪ್ರಾಯ ವನ್ನು ವ್ಯಕ್ತಪಡಿಸಿದ್ದಾರೆ. ಮೊಗಲರ ಕಾಲ ಮತ್ತು ಬ್ರಿಟಿಷರ ಕಾಲದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮವಾಗಿರಲಿಲ್ಲ. ಸಾ. ಚಳುವಳಿಗಳು, ಸಾ. ಸುಧಾರಣಾ ಚಳುವಳಿಗಳು, ಸ್ವಾತಂತ್ರ್ಯ ಹೋರಾಟಗಾರರ ಪ್ರಯತ್ನಗಳಿಂದಾಗಿ ಸ್ತ್ರೀ ಸ್ಥಾನಮನ ಉತ್ತಮಗೊಂಡಿತು. ಆಧುನಿಕ ಸಮಾಜದಲ್ಲಿ ಸ್ತ್ರೀ ಸ್ಥಾನಮಾನ ಉತ್ತಮವಾಗುತ್ತ ಬಂದಿದೆ. ಪಿತೃಪ್ರಧಾನತೆಯು ದ್ವಿಮುಖ ನೀತಿಗಳನ್ನು ಸ್ತ್ರೀ ಪುರುಷರಿಗೆ ವಿಧಿಸಿ ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಮಾನಸಿಕವಾಗಿ ಜನರು ಸ್ತ್ರೀಯನ್ನು ಪುರುಷರಷ್ಟೆ ಸಮಾನಳು ಎಂದು ಭಾವಿಸಿದಾಗ ಸಂಪೂರ್ಣ ಸ್ವಾತಂತ್ರ್ಯ ಸಿಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಭಾರತೀಯ

ಸಮಾಜದಲ್ಲಿ ವಿವಿಧ ಕಾಲಘಟ್ಟದಲ್ಲಿ ಸ್ತ್ರೀ ಸ್ಥಾನಮಾನ, ಪರಿಸ್ಥಿತಿಗಳು ಮತ್ತು ಕಾರಣಗಳನ್ನು ಸಂಪೂರ್ಣವಾಗಿ ವಿವರಿಸುವ ಉತ್ತಮ ಗ್ರಂಥವಾಗಿದೆ.[೧೯]

೧೪. **'ಮಹಿಳೆ ಬಿಡುಗಡೆಯ ಹಾದಿಯಲ್ಲಿ'(೧೯೯೬) ಎನ್. ಗಾಯತ್ರಿ** ಅವರ ಕೃತಿಯಲ್ಲಿ ಭಾರತೀಯ ಇತಿಹಾಸದಲ್ಲಿ ಮಹಿಳೆಯ ಸ್ಥಿತಿಗತಿಗಳ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಸಮಾಜದಲ್ಲಿ ಹೆಣ್ಣು ಮಗುವಿನ ಬಗ್ಗೆ ಇರುವ ತಾತ್ಸಾರವನ್ನು ವಿವರಿಸಿದ್ದಾರೆ. ಆ ತಾತ್ಸಾರಕ್ಕೆ ಇರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳನ್ನು ವಿವರಿಸಿದ್ದಾರೆ. ವಿವಾಹ ಬಂದನದಲ್ಲಿ ಸ್ತ್ರೀ ಜೀವನವನ್ನು ವಿವರಿಸಿದ್ದಾರೆ. ಹಿಂದೂ ವಿವಾಹದ ಬಗೆಗಳು, ವಿವಾಹ ವಿಚ್ಛೇದ ಶಾಸನ, ಬಹು ಪತ್ನಿತ್ವದಿಂದ ಹೆಣ್ಣಿನ ಶೋಷಣೆಯನ್ನು ವಿವರಿಸಿದ್ದಾರೆ. ಬಹುಪತ್ನಿತ್ವ ನಿಷೇಧ ಕಾಯಿದೆಯ ಅನುಕೂಲವನ್ನು ವಿವರಿಸಿದ್ದಾರೆ. ಕ್ರೈಸ್ತರ ವಿವಾಹ ಕಾಯಿದೆ, ಪಾರ್ಸಿ ವಿವಾಹ ಕಾಯಿದೆ, ಸಿವಿಲ್ ವಿವಾಹಗಳನ್ನು ವಿವರಿಸಿದ್ದಾರೆ. ವರದಕ್ಷಿಣೆಯ ಘೋರಸ್ವರೂಪ, ಮಹಿಳೆಯ ಮೇಲೆ ಯಾವ ರೀತಿ ಶೊಷಣೆಗೆ ಕಾರಣವಾಗಿದೆಯೆಂದು ಪ್ರಸಂಗಗಳ ಸಹಿತ ಮನಮಿಡಿಯುವಂತೆ ವಿವರಿಸಿದ್ದಾರೆ. ಜೊತೆಗೆ ೧೯೬೧ರ ವರದಕ್ಷಿಣಾ ನಿಷೇಧ ಕಾಯಿದೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಹೆಣ್ಣಿನ ಆಸ್ತಿ, ಹಕ್ಕುಗಳ ಬಗ್ಗೆ ವಿವರಿಸಲಾಗಿದೆ. ಹೆಣ್ಣು ತಂದೆಯ ಆಸ್ತಿಯಿಂದ ವಂಚಿತಳಾಗಿರುವುದಕ್ಕೆ ಕಾರಣಗಳನ್ನು ವಿವರಿಸಲಾಗಿದೆ. ವಿಧವೆಯ ಸ್ಥಿತಿಗತಿಗಳು, ವಿಧವೆಯ ಶೋಚನೀಯ ಸ್ಥಿತಿಗಳ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ವಿಧವೆಯ ಪುನರ್ವಿವಾಹದ ಕಾನೂನನ್ನು ವಿವರಿಸಲಾಗಿದೆ. ಸತಿಪದ್ಧತಿಯ ಘೋರ ರೂಪ, ಹೆಣ್ಣಿನ ಅತ್ಯಾಚಾರದ ಸ್ವರೂಪ, ಮತ್ತು ವೇಶ್ಯೆಯರ ಶೋಚನೀಯ ಸ್ಥಿತಿ. ಬಿಡುವಿಲ್ಲದ ದುಡಿಯುವ ಹೆಣ್ಣಿನ ಸ್ಥಿತಿ, ಎಲ್ಲವನ್ನೂ ಪ್ರಸಂಗ ಸಹಿತ ವಿವರಿಸಿ ಶೋಷಣೆಯಿಂದ ಹೊರಬರಲು ಸರ್ಕಾರ ರೂಪಿಸಿರುವ ಕಾನೂನು ಕಾಯ್ದೆಗಳು ಹೇಗೆ ಹೆಣ್ಣನ್ನು ಶೋಷಣೆಯಿಂದ ಬಿಡುಗಡೆಗೊಳಿಸಲು ಕಾರಣವಾಗಿವೆ ಎಂಬುದನ್ನು ಚೆನ್ನಾಗಿ ವಿವರಿಸಿದ್ದಾರೆ.[೨೦]

೧೫. **'ಮೂರನೆಯ ಜಗತ್ತಿನ ರಾಷ್ಟ್ರಗಳಲ್ಲಿ ಮಹಿಳೆ ಮತ್ತು ಶೈಕ್ಷಣಿಕ ಆಯಾಮಗಳು' (೨೦೦೪), ಶಾಂತಾ ಅಸ್ಪಿಗೆ** ಅವರ ಲೇಖನದಲ್ಲಿ ಮುಂದುವರಿಯುತ್ತಿರುವ ದೇಶಗಳಲ್ಲಿ ಮಹಿಳೆಯ ಸ್ಥಾನಮಾನ ಮತ್ತು ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಮೂರನೆಯ ವಿಶ್ವದ ದೇಶಗಳಲ್ಲಿ ಮಹಿಳೆಯ ಸ್ಥಿತಿ ತೀರಾ ನಿರಾಶಾದಾಯಕವಲ್ಲದಿದ್ದರೂ, ಗೌರವ ತರುವ ಸ್ಥಿತಿಯಲ್ಲಂತೂ ಇಲ್ಲವೆಂದು ಹೇಳಿದ್ದಾರೆ. ಭಾರತವು ಮೂರನೆ ಜಗತ್ತಿಗೆ ಸೇರಿದ ರಾಷ್ಟ್ರವಾಗಿದ್ದು ಭಾರತದ ಮಹಿಳೆಯರ ಸ್ಥಿತಿಗತಿಗಳನ್ನು ವಿವರಿಸಲಾಗಿದೆ. ಭಾರತೀಯ ಮಹಿಳೆಯರ ಶೈಕ್ಷಣಿಕ ಆಯಾಮಗಳನ್ನು ವಿವರಿಸಿದ್ದಾರೆ. ಅದರಲ್ಲಿ–

೧. ಪರಂಪರಾಗತ ಭಾರತದಲ್ಲಿ ಮಹಿಳೆಯರ ಶೈಕ್ಷಣಿಕ ಆಯಾಮಗಳು.

೨. ಬ್ರಿಟಿಷ್ ಆಡಳಿತ ಅವಧಿಯಲ್ಲಿ ಮಹಿಳೆಯವ ಶೈಕ್ಷಣಿಕ ಆಯಾಮಗಳು.

೩. ಸ್ವಾತಂತ್ರ್ಯ ನಂತರದಲ್ಲಿ ಮಹಿಳೆಯ ಶೈಕ್ಷಣಿಕ ಆಯಾಮಗಳನ್ನು ವಿವರಿಸಿದ್ದಾರೆ. ಆಯಾಮವೆಂದರೆ ಕಲಿಯುವ ಮತ್ತು ಕಲಿಸುವ ವಿವಿಧ ಹಂತಗಳು, ಸಾಕ್ಷರತೆ ಪ್ರಮಾಣ, ಡ್ರಾಪೌಟ್‌ಗಳನ್ನು ಕುರಿತು ಅಂಕಿ ಅಂಶಗಳನ್ನು ವಿವರಿಸುವುದರಿಂದ ಮಹಿಳೆಯ ಶಿಕ್ಷಣದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ಸ್ತ್ರೀ ಶಿಕ್ಷಣದ ಸುಧಾರಣೆಗೆ ಮಾನವೀಯ ನೆಲೆಯ ಸಾಮಾಜೀಕರಣ, ವೈಚಾರಿಕತೆ, ವೈಜ್ಞಾನಿಕತೆ, ಆತ್ಮವಿಶ್ವಾಸ ತುಂಬಿ, ಸಾಮಾಜಿಕ, ಆರ್ಥಿಕ ಕಾರ್ಯ ಯೋಜನೆ ಹಾಕಿಕೊಂಡು ಸ್ತ್ರೀ ಶಿಕ್ಷಣ ಅಭಿವೃದ್ಧಿಪಡಿಸಬೇಕು ಎಂದು ಅಭಿಪ್ರಾಯಿಸಿದ್ದಾರೆ.[೨೧]

ಅಧ್ಯಯನದಲ್ಲಿ ಬರುವ ಅಧ್ಯಾಯಗಳ ಸಾರಾಂಶ

ಪ್ರಸ್ತುತ ಅಧ್ಯಾಯದಲ್ಲಿ ಗ್ರಾಮೀಣ ಮಹಿಳಾ ಶಿಕ್ಷಣದ ಸಮಸ್ಯೆಯ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ವಿಧಿವಿಧಾನ, ಅಧ್ಯಯನದ ಸ್ವರೂಪ ಮತ್ತು ಮಹತ್ವಗಳನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮಹಿಳೆಯರ ಔಪಚಾರಿಕ ಶಿಕ್ಷಣ: ಚಾರಿತ್ರಿಕ ನೋಟ ಅಧ್ಯಯನವನ್ನು ಮಾಡಲಾಗಿದೆ. ಪ್ರಾಚೀನ ಭಾರತೀಯ ಸಮಾಜದಲ್ಲಿ ಮಹಿಳಾ ಶಿಕ್ಷಣ, ಮಧ್ಯಕಾಲೀನ ಭಾರತೀಯ ಸಮಾಜದಲ್ಲಿ ಮಹಿಳಾ ಶಿಕ್ಷಣ ಮತ್ತು ಆಧುನಿಕ ಭಾರತೀಯ ಸಮಾಜದಲ್ಲಿ ಮಹಿಳಾ ಶಿಕ್ಷಣದ ಸ್ಥಿತಿಗತಿಗಳನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮಹಿಳಾ ಶಿಕ್ಷಣ:ಸರಕಾರಿ ಯೋಜನೆಗಳು–ಯೋಜನೆಗಳ ಮಹತ್ವ ಮತ್ತು ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳಾ ಶಿಕ್ಷಣದ ರೂಪರೇಷನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳನ್ನು ಕೌಟುಂಬಿಕ ನೆಲೆಯಿಂದ ಅಧ್ಯಯನ ಮಾಡಲಾಗಿದೆ. ಕುಟುಂಬ ಮತ್ತು ಕೌಟುಂಬಿಕ ಸಮಸ್ಯೆಗಳು ಯಾವ ರೀತಿ ಮಹಿಳಾ ಶಿಕ್ಷಣದ ಹಿನ್ನೆಡಗೆ ಕಾರಣವಾಗಿದೆ ಎಂಬುದನ್ನು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳನ್ನು–ಸಾಮಾಜಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಸಮಾಜದಲ್ಲಿ ಜನರು ಮಹಿಳಾ ಶಿಕ್ಷಣದ ಬಗ್ಗೆ ಯಾವ ಅಭಿಪ್ರಾಯ

ವನ್ನು ಹೊಂದಿದ್ದಾರೆ ಎಂಬುದನ್ನು ಅರಿಯಲಾಗಿದೆ.

ಆರನೆಯ ಅಧ್ಯಾಯದಲ್ಲಿ ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು-ಶೈಕ್ಷಣಿಕ ಸಂಸ್ಥೆಗಳ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಮಹಿಳಾ ಶಿಕ್ಷಣಕ್ಕೆ ಶೈಕ್ಷಣಿಕ ಸಂಸ್ಥೆಗಳಲ್ಲಿರುವ ಸಮಸ್ಯೆಗಳೇನು ಮತ್ತು ಮಹಿಳಾ ಶಿಕ್ಷಣದ ಬಗ್ಗೆ ಶಿಕ್ಷಕರು ನೀಡಿರುವ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಭಾರತದಲ್ಲಿ ಸಾಕ್ಷರತೆಯ ಪರಿಶೀಲನೆ: ಲಿಂಗ ಸಂಬಂದದ ನೆಲೆಯಲ್ಲಿ.

ಎಂಟನೆಯ ಅಧ್ಯಾಯದಲ್ಲಿ ಸಮಾರೋಪ ಅಥವಾ ಅಧ್ಯಯನದ ಫಲಿತಾಂಶಗಳನ್ನು ವಿವರಿಸಲಾಗಿದೆ.

ಕೊನೆಟಿಪ್ಪಣಿಗಳು

೧ "ಶಿಕ್ಷಣ ಮತ್ತು ಜೀವನಶೈಲಿ", ಚಿದಾನಂದ ಸಾಲಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ವಿದ್ಯಾರಣ್ಯ, ಪು.೨.

೨ "ರಿಪೋರ್ಟ್ ಆಫ್ ಆಲ್ ಇಂಡಿಯಾ ಎಜುಕೇಷನಲ್ ಸರ್ವೆ": ಎಸ್.ಸಿ.ಆರ್.ಟಿ ಪಬ್ಲಿಕೇಷನ್, ನವದೆಹಲಿ

೩ *ಗ್ರಾಮೀಣ ಪ್ರದೇಶಗಳಿಗೆ ಜೆಂಡರ್ ತಿಳುವಳಿಕೆ ಕಾರ್ಯಕ್ರಮಗಳ ಅಗತ್ಯ: ಒಂದು ಪರಿಶೀಲನೆ,* ಆರ್. ಸುನಂದಮ್ಮ, "ಮಹಿಳಾ ಅಧ್ಯಯನ", ಸಂಪುಟ ೮, ಸಂಚಿಕೆ ೧, ಜನವರಿ-ಜೂನ್ ೨೦೦೬, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೮೧-೯೦

೪ "ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ", ಡಾ.ಟಿ.ಆರ್. ಚಂದ್ರಶೇಖರ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪುಟ.೧೨೫.

೫ ಅದೇ, ಪು.೧೩೧

೬ "ಶಿಕ್ಷಣ ಸಮಾಜಶಾಸ್ತ್ರ", ರಂಗಸ್ವಾಮಿ ಬೆಳಕವಾಡಿ, ಸುಭಾಷ್ ಬುಕ್ ಸ್ಟೋರ್, ಅವಿನ್ಯೂರಸ್ತೆ, ಬೆಂಗಳೂರು ೦೨, ೨೦೧೦, ಪು. ೧೯೯.

೭ "ಗ್ರಾಮೀಣ ಪರಿಸರದಲ್ಲಿ ಶಿಕ್ಷಣ", ನಯನತಾರ ಎಸ್, ಪಿಎಚ್.ಡಿ. ಅಧ್ಯಯನ ವರದಿ, ಅಶಿಷ್ ಪಬ್ಲಿಷಿಂಗ್ ಹೌಸ್, ನವದೆಹಲಿ, ೧೯೮೫.

೮ "ಗ್ರಾಮೀಣ ಮಹಿಳೆಯ ಶೈಕ್ಷಣಿಕ ಸ್ಥಾನಮಾನ", ಕಲಾವತಿಯವರ ಡಿಸ್ಕವರಿ ಪಬ್ಲಿಷಿಂಗ್ ಹೌಸ್, ನವದೆಹಲಿ, ೧೯೯೪.

೯ "ಎಜುಕೇಷನ್ ಇನ್ ರೂರಲ್ ಏರಿಯಾಸ್", "ಕಾನ್‌ಸ್ಟ್ರೀನ್ಸ್ ಅಂಡ್ ಪ್ರಾಸ್‌ಸೆಕ್ಟ್‌" ಎ.ಎಸ್. ಸೀತಾರಾಮು, ಎಂ.ಡಿ. ಉಷಾದೇವಿ, (ಐ.ಎಸ್.ಇ.ಸಿ), ಬೆಂಗಳೂರು, ಅಶೀಷ್ ಪಬ್ಲಿಷಿಂಗ್ ಹೌಸ್, ನವದೆಹಲಿ.

೧೦ "ಡ್ರಾಪ್-ಔಟ್ಸ್ ಇನ್ ಎಲಿಮೆಂಟರಿ ಎಜುಕೇಷನ್', ಅಭಿಜಿತ್ ಕುಮಾರ್ ಪಾಲ್, ಅಭಿಜಿತ್ ಪಬ್ಲಿಕೇಷ್ನನ್, ನವದೆಹಲಿ, ೨೦೧೦.

೧೧ "ಹಿಸ್ಟರಿ ಆಫ್ ಎಜುಕೇಷನ್", ಎಂ. ಆಂಜನಪ್ಪ, ಆನ್‌ಮಾಲ್ ಪಬ್ಲಿಷಿಂಗ್ ಪ್ರೈ ಲಿಮಿಟೆಡ್, ನವದೆಹಲಿ, ೨೦೦೬

೧೨ "ಕರ್ನಾಟಕ ಪ್ರಗತಿ ಪಥ", ೧೯೭೪, ಎಂ.ಬಿ. ನಂಜಪ್ಪ, ಗೊ.ರು. ಚನ್ನಬಸಪ್ಪ, ಸಿಕೆ. ಪರಶುರಾಮಯ್ಯ, ಕರ್ನಾಟಕ ಸರ್ಕಾರ, ೧೯೭೪.

೧೩ "ಈಕ್ವಾಲಿಟಿ ಇನ್ ಎಜುಕೇಷನ್", ರಮೇಶ್ ಕನ್ಬರ್ಗಿ, ಎಜುಕೇಷನ್ ಡಿಪಾರ್ಟ್‌ಮೆಂಟ್, ಕರ್ನಾಟಕ ಸರ್ಕಾರ, ೨೦೦೨.

೧೪ ಕಾನ್‌ಟೆಂಪೊರರಿ ಚೇಂಜೆಸ್ ಇನ್ ಸೋಷಿಯೋ-ಇಕನಾಮಿಕ್ ರೂಲ್ ಆಫ್ ವುಮೆನ್ ಇನ್ ಇಂಡಿಯ: ಇಟ್ಸ್ ಇಮ್‌ಪ್ಯಾಕ್ಟ್ ಆನ್ ಫ್ಯಾಮಿಲಿ ಲೈಫ್(ಇ.ಡಿ.ಎಸ್), ದಿ ಪೊಸಿಷನ್ ಆಫ್ ವುಮೆನ್ ಇನ್ ಇಂಡಿಯಾ; ಕಮಲ ಬಾಸಿನ್, ಎಲ್.ಎಸ್. ಟ್ರೈನಿಂಗ್ ಪ್ರೋಗ್ರಾಂ ಫಾರ್ ಡೆಮಾಕ್ರಸಿ, ಬೊಂಬಾಯಿ, ೧೯೭೩.

೧೫ "ವುಮೆನ್ ಇನ್ ಮಾಡ್ರನ್ ಇಂಡಿಯಾ", ನೀರಾ ಎ. ದೇಸಾಯಿ, ಒರಾ ಅಂಡ್ ಕೊ. ಪಬ್ಲಿಷರ್ಸ್ ಪ್ರೈ. ಲಿಮಿಟೆಡ್, ಬೊಂಬಾಯಿ, ೧೯೭೭

೧೬ "ಸ್ತ್ರೀವಾದ" (೨೦೦೩), ಡಾ. ಎಚ್.ಎಸ್. ಶ್ರೀಮತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭ "ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ" (೨೦೧೦), ಡಾ. ಟಿ.ಆರ್. ಚಂದ್ರಶೇಖರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮ “ಮಹಿಳಾ ಅಧ್ಯಯನ” (‘ಗ್ರಾಮೀಣ ಪ್ರದೇಶಗಳಿಗೆ ಜಂಡರ್ ತಿಳುವಳಿಕೆ ಕಾರ್ಯಕ್ರಮಗಳ ಅಗತ್ಯ: ಒಂದು ಪರಿಶೀಲನೆ’, ಆರ್. ಸುನಂದಮ್ಮ), ಸಂಪುಟ ೮, ಸಂಚಿಕೆ ೧, ಜನವರಿ–ಜೂನ್ ೨೦೦೬, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೯ “ಮಹಿಳಾ ಚಳುವಳಿ: ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ”, ಡಾ. ಹಾಲತಿ ಸೋಮಶೇಖರ್, ವಿಸ್ಮಯ ಪ್ರಕಾಶನ, ಮೈಸೂರು, ೨೦೦೭.

೨೦ “ಮಹಿಳೆ ಬಿಡುಗಡೆಯ ಹಾದಿಯಲ್ಲಿ”, ಎನ್. ಗಾಯತ್ರಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬.

೨೧ “ಮೂರನೆಯ ಜಗತ್ತಿನ ರಾಷ್ಟ್ರಗಳಲ್ಲಿ ಮಹಿಳೆ ಮತ್ತು ಶೈಕ್ಷಣಿಕ ಆಯಾಮಗಳು”, ಶಾಂತ ಅಸ್ಸಿಗೆ (ಲೇಖನ), ಮಹಿಳಾ ಅಧ್ಯಯನ ಸಂಪುಟ ೬, ಸಂಯುಕ್ತ ಸಂಚಿಕೆ, ೧–೨, ಜನವರಿ–ಡಿಸೆಂಬರ್, ೨೦೦೪, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.

ಅಧ್ಯಾಯ ಎರಡು

ಮಹಿಳೆಯ ಔಪಚಾರಿಕ ಶಿಕ್ಷಣ: ಚಾರಿತ್ರಿಕ ನೋಟ

ಅಧ್ಯಾಯ ಎರಡು

ಮಹಿಳೆಯ ಔಪಚಾರಿಕ ಶಿಕ್ಷಣ: ಚಾರಿತ್ರಿಕ ನೋಟ

ವೇದಕಾಲದಲ್ಲಿನ ಸ್ತ್ರೀಯರ ಸ್ಥಾನಮಾನ ಗೌರವಯುತವಾಗಿಯೇ ಇತ್ತು. ಶಿಕ್ಷಣ ಕೂಡ ಅಷ್ಟೇ ಸಮಾಧಾನಕರವಾಗಿತ್ತು. ಸ್ತ್ರೀಯರಿಗಿಂತ ಪುರುಷರಿಗೆ ಪ್ರಾಧಾನ್ಯತೆಯಿದ್ದಿತೇನೋ ನಿಜ ಆದರೂ ಇಬ್ಬರಿಗೂ ಸಮಾನಾದ ಶಿಕ್ಷಣ ಸಿಗುತ್ತಿತ್ತು. ಸ್ತ್ರೀಯರಿಗೂ ಸಮಾನ ಶಿಕ್ಷಣ ದೊರಕಿ ವೇದಾಭ್ಯಾಸಕ್ಕೆ ಸಮಾನ ಅವಕಾಶವಿದ್ದ ಕಾರಣ ಧಾರ್ಮಿಕ ಕಾರ್ಯಕ್ಕೆ ಮಗನೇ ಬೇಕು ಎನ್ನುವ ಪರಿಪಾಠವಿರಲಿಲ್ಲ. ಕ್ರಿಸ್ತಶಕಾರಂಭದವರೆಗೆ ಸ್ತ್ರೀ ಉಪನಯನಕ್ಕೆ ಕೂಡ ಅರ್ಹಳಾಗುತ್ತಿದ್ದಳು. ಋಗ್ವೇದದಂತಹ ಮೊತ್ತ ಮೊದಲಿನ ಸಾಹಿತ್ಯ ಕೃತಿಯಲ್ಲಿ ಸುಮಾರು ೨೦-೨೭ ಜನ ಬ್ರಹ್ಮ ವಾದಿನಿಯರು ಸೂತ್ರಗಳನ್ನು ಬರೆದಿದ್ದಾರೆ. ಉದಾ: ಘೋಷಾ, ಗೋದಾ, ವಿಶ್ವವರಾ, ಅಪಲಾ, ಲೋಪಮುದ್ರಾ, ನೀವಾವರಿ, ಇತ್ಯಾದಿ. ಆಗಿನ ಕಾಲದ ಸ್ತ್ರೀಯರಲ್ಲಿ ಬ್ರಹ್ಮವಾದಿನಿಯರು(ಉದಾ: ಗಾರ್ಗಿ, ಅತ್ರೇಯಿ, ಸುಲಭಾ, ಶಬರಿ) ಇತ್ಯಾದಿ ಮತ್ತು ಆತ್ಮವಿದ್ಯಯನ್ನರಿತ ಗೃಹಿಣಿಯರು (ಮೈತ್ರೇಯಿ) ಇದ್ದರು. ಅಂದಿನ ಮಹಿಳೆಯರಿಗೆ ಲಲಿತಕಲೆಗಳಲ್ಲಿಯೂ ಪ್ರಾಶಸ್ತ್ಯವಿತ್ತು. ಸಂಗೀತ, ನೃತ್ಯ, ವಾದ್ಯಗಾರಿಕೆಯಲ್ಲಿ ನೈಪುಣವಿತ್ತು. ಸ್ತ್ರೀಯರಿಗೆ ಯುದ್ಧ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಒಟ್ಟಾರೆ ವೇದಕಾಲದಲ್ಲಿ ಸ್ತ್ರೀ ಶಿಕ್ಷಣಕ್ಕೆ ಉತ್ತಮ ಪ್ರೋತ್ಸಾಹವಿತ್ತೆಂದು ತಿಳಿದು ಬರುತ್ತದೆ.

ಬೌದ್ಧರ ಕಾಲದಲ್ಲಿಯೂ ಸ್ತ್ರೀ ಶಿಕ್ಷಣವು ರೂಢಿಯಲ್ಲಿತ್ತೆಂಬುದಕ್ಕೆ ಅನೇಕ ಉದಾಹರಣೆಗಳಿವೆ. ಬೌದ್ಧ ಸಂಘಗಳನ್ನು ಸೇರಲಿಕ್ಕೆ ಭಗವಾನ್ ಬುದ್ಧನೇ ಅನುಮತಿಯನ್ನು ನೀಡಿದ್ದರು. ಬೌದ್ಧ ಧರ್ಮವು ಬಹುಸಂಖ್ಯಾತ ಮಹಿಳೆಯರಿಂದ ಆಕರ್ಷಿತವಾಗಿದ್ದಲ್ಲದೆ, ಆ ಧರ್ಮದ ತತ್ವಜ್ಞಾನ ಅಜೀವ ವಿಧ್ಯಾರ್ಥಿಗಳನ್ನಾಗಿ ಮಾಡಿತು. ಅಶೋಕನ ಹಿರಿಯ ಮಗಳಾದ ಸಂಘಮಿತ್ರೆಯು ಶ್ರೀಲಂಕಾಕ್ಕೆ ಬೌದ್ಧ ಧರ್ಮದ ತತ್ವಗಳ ಪ್ರಚಾರಕ್ಕೆ ಹೋದದ್ದನ್ನು ಕಾಣುತ್ತೇವೆ. ಶುಭಾ, ಅನುವಷು ಮತ್ತು ಸುಮೇಧ ಮುಂತಾದವರು ಬೌದ್ಧ ಧರ್ಮದ ಪ್ರಚಾರಕರಲ್ಲಿ ಪ್ರಮುಖರು. ಈ ಎಲ್ಲಾ

ಉದಾಹರಣೆಗಳಿಂದ ಬೌದ್ಧರ ಕಾಲದಲ್ಲಿ ಸ್ತ್ರೀಯರು ಶಿಕ್ಷಣ ಪಡೆಯುವುದರಿಂದ ವಂಚಿತರಾಗಿದ್ದಿಲ್ಲ ಎಂದು ತಿಳಿದು ಬರುತ್ತದೆ.

ಪರದಾ ಪದ್ಧತಿ ಮತ್ತು ಬಾಲ್ಯ ವಿವಾಹದಂತಹ ದುಷ್ಟ ಸಾಮಾಜಿಕ ಪದ್ಧತಿಗಳಿಂದಾಗಿ ಮುಸ್ಲಿಂ ಕಾಲದಲ್ಲಿ ಸ್ತ್ರೀ ಶಿಕ್ಷಣ ಸ್ಥಗಿತಗೊಂಡಿತು. ಸಾಮಾನ್ಯ ಕುಟುಂಬದ ಬಾಲಕಿಯರಿಗೆ ಶಿಕ್ಷಣ ಪಡೆಯುವ ಅವಕಾಶವೇ ಇರಲಿಲ್ಲ. ಆದರೆ ರಾಜ ಮಹಾರಾಜರ ಮತ್ತು ಶ್ರೀಮಂತ ಕುಟುಂಬಗಳ ಬಾಲಕಿಯರಿಗೆ ತಮ್ಮ ತಮ್ಮ ಮನೆಯಲ್ಲಿಯೇ ಶಿಕ್ಷಣ ದೊರೆಯುತ್ತಿತ್ತು. ಗುಲಬದನ್ ಬೇಗಮ್, ಸಲೀಮಾ ಸುಲ್ತಾನಾ, ನೂರಜಹಾನ್, ಮಮ್ತಾಜ್ ಮಹಲ್ ಮತ್ತು ಜಹನಾರಾಬೇಗಮ್ ಮುಂತಾದ ಕೆಲವೊಂದು ಪ್ರಸಿದ್ಧ ಮಹಿಳೆಯರು ಉನ್ನತ ಶಿಕ್ಷಣ ಮತ್ತು ಕಲಿಕೆಯನ್ನು ಹೊಂದಿದ್ದರು.

ಈ ಅವಧಿಯಲ್ಲಿ ಬಹುಭಾಗ ಸ್ತ್ರೀಯರು ನಿರಕ್ಷರಿಗಳಾಗಿದ್ದರು. ಬಾಲ್ಯವಿವಾಹ ಬಳಕೆಯಲ್ಲಿ ಬಂದುದರಿಂದ ಸ್ತ್ರೀಯರಿಗೆ ಶಿಕ್ಷಣ ಪಡೆಯಲು ಅವಕಾಶವೇ ಸಿಕ್ಕಲಿಲ್ಲ. ಲಲಿತಕಲೆಗಳು ಕೂಡ ಬರೀ ದೇವದಾಸಿಯರ ಸೊತ್ತಾಗಿದ್ದವು. ಸ್ತ್ರೀ ಶಿಕ್ಷಕಿಯರು ಇರಲಿಲ್ಲ. ಆದರೂ ೧೦ನೆಯ ಶತಮಾನದ ತನಕ ವಿಜಯಿಕಾ, ಶೀಲ ಬಟ್ಟರಿಕಾದೇವಿ ಮೊದಲಾದವರ ಹೆಸರಾದರೂ ಕೇಳಿ ಬರುತ್ತವೆ. ವೈದ್ಯಕೀಯ ವೃತ್ತಿಯನ್ನು ಕೆಲ ಸ್ತ್ರೀಯರು ಕೈಗೊಂಡಿರಬೇಕು. ಸ್ತ್ರೀ ವೈದ್ಯ ಶುಷ್ತಾ ಬರೆದ ವೈದ್ಯ ಶಾಸ್ತ್ರದ ಪುಸ್ತಕವೊಂದು ಅರಬ್ಬೀ ಭಾಷೆಯಲ್ಲಿ ೮ನೇ ಶತಮಾನದಲ್ಲಿ ಭಾಷಾಂತರಿಸಲ್ಪಟ್ಟಿತು. ರಾಜಕೀಯ ರಂಗದಲ್ಲಿಯೂ ಚಾಲುಕ್ಯ ಕುಲಕ, ವಿಜಯಿಕಾ, ಶೀಲ ಬಟ್ಟಾರಿಕಾದೇವಿ(೬೫೦ ಕ್ರಿ.ಶ) ೧೦ ಮತ್ತು ೧೧ನೆ ಶತಮಾನದ ಕಾಶ್ಮೀರದ ರಾಣಿಯರಾದ ದಿದ್ದಾ, ಸುಗಂಧಾ, ಚಾಲುಕ್ಯರ ಅಕ್ಕಾದೇವಿ, ಮೈಳಾದೇವಿ, ಲಕ್ಮೀದೇವಿ, ಗುಜರಾತದ ಕರ್ಣಾದೇವಿ, ಮಹಾರಾಷ್ಟ್ರ ಅಹಲ್ಯಾಬಾಯಿ, ತಾರಾಬಾಯಿ, ಝೂನ್ಸಿಯ ಲಕ್ಷ್ಮೀಬಾಯಿ, ಕರ್ನಾಟಕದ ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮ ಮೊದಲಾದ ವೀರ ರಾಣಿಯರು ಹೆಸರಾಗಿ ಹೋದರು.

ಇಂತಹ ರಾಜಮನತನದ ಕೆಲವು ಜನ ಹೆಸರಾಂತ ಸ್ತ್ರೀಯರನ್ನು ಬಿಟ್ಟರೆ ಸಾಮಾನ್ಯ ವರ್ಗದ ಸ್ತ್ರೀಯರು ಕತ್ತಲೆಯ ಸೆರೆಯಾಳಾಗಿದ್ದರು. ಇದಕ್ಕೆ ಕ್ರಿ.ಶ. ೧೨೦೦ ರಿಂದ ಎಡಬಿಡದೆ ನಡೆದ ಮುಸ್ಲಿಂ ದಾಳಿಗಳೇ ಕಾರಣವಾದವು. ಸ್ತ್ರೀಯರ ಶೀಲ ಸಂರಕ್ಷಣೆಯೇ ಪುರುಷರಿಗೆ ಒಂದು ಹೆಚ್ಚಿನ ಹೊಣೆಯಾಗಿ ಅವರನ್ನು ಹೊರಗೆ ಬಿಡದೆ ಕತ್ತಲೆ ಕೋಣೆಯಲ್ಲಿಟ್ಟು ರಕ್ಷಿಸತೊಡಗಿದರು. ಇದಕ್ಕಾಗಿ ಸ್ತ್ರೀಯರ ಶಿಕ್ಷಣಕ್ಕೆ ಪೂರ್ತಿ ಸಂಚಕಾರ ಬಿತ್ತು.

ಪ್ರಾಚೀನ ಭಾರತದಲ್ಲಿ ಸ್ತ್ರೀ ಅನೌಪಚಾರಿಕ ಶಿಕ್ಷಣ ಉತ್ತಮವಾಗಿತ್ತು ಎಂಬ ವಿಷಯವು ಇತಿಹಾಸದಿಂದ ತಿಳಿದು ಬರುತ್ತದೆ. ಆದರೆ ಸಮಾಜದ ಮೇಲ್ವರ್ಗದ ಕೆಲವು ಮಹಿಳೆಯರಿಗೆ ಮಾತ್ರ ಶಿಕ್ಷಣದ ಅವಕಾಶಗಳು ಲಭ್ಯವಾಗಿತ್ತು. ಮಧ್ಯಮ ಮತ್ತು ಕೆಳವರ್ಗದ ಸ್ತ್ರೀಯರಿಗೆ ಯಾವುದೇ

ಶಿಕ್ಷಣದ ಅವಕಾಶಗಳಿರಲಿಲ್ಲವಾದುದರಿಂದ, ಸಮಾಜದ ಬಹುಸಂಖ್ಯಾತ ಸ್ತ್ರೀಯರು ಶಿಕ್ಷಣದ ಅವಕಾಶಗಳಿದ್ದು ವಂಚಿತರಾಗಿದ್ದರಿಂದ ಪ್ರಾಚೀನ ಭಾರತದಲ್ಲಿ ಸ್ತ್ರೀ ಶಿಕ್ಷಣ ಉತ್ತಮವಾಗಿತ್ತು ಎಂಬ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸಮಾಜ-ಶಾಸ್ತ್ರಜ್ಞರು ಮತ್ತು ಸ್ತ್ರೀವಾದಿಗಳು ಸಹ ಈ ವಾದವನ್ನು ಅಲ್ಲಗಳೆಯುತ್ತಾರೆ

ಮಹಿಳೆಯರ ಮತ್ತು ಪುರುಷರ ನಡುವಿನ ಸಾಕ್ಷರತಾ ಅಂತರವು ಲಿಂಗ ಅಸಮಾನತೆಯ ಬಹುಮುಖ್ಯ ಸೂಚಿಯಾಗಿದೆ.

ಈ ಅಧ್ಯಾಯವು ಸಮಾಜದ ಇತಿಹಾಸದಲ್ಲಿ ಶಿಕ್ಷಣದ ಬೆಳವಣಿಗೆಯನ್ನು ತಿಳಿಸುತ್ತದೆ. ಭಾರತೀಯ ಸಮಾಜದಲ್ಲಿ ಸ್ತ್ರೀ ಶಿಕ್ಷಣಕ್ಕೆ ಕಾಲದಿಂದ ಕಾಲಕ್ಕೆ ಯಾವ ಮಹತ್ವವನ್ನು ನೀಡಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಾಯವು ನೆರವಾಗುತ್ತದೆ. ಸ್ತ್ರೀ ಶಿಕ್ಷಣ ಮತ್ತು ಸಮಾನತೆಯು ಪರಸ್ಪರ ಒಂದಕ್ಕೊಂದು ಅವಲಂಬಿತವಾಗಿರುವ ಅಂಶಗಳು. ಎಲ್ಲಿ ಸ್ತ್ರೀ ಶಿಕ್ಷಣ ಉತ್ತಮವಾಗಿರುತ್ತದೆಯೊ ಅಲ್ಲಿ ಸ್ತ್ರೀ ಸಮಾನತೆಯ ಮಟ್ಟವು ಉತ್ತಮವಾಗಿರುತ್ತದೆ. ಎಲ್ಲಿ ಸ್ತ್ರೀ ಶಿಕ್ಷಣ ಉತ್ತಮವಾಗಿರುವುದಿಲ್ಲವೊ ಅಲ್ಲಿ ಸ್ತ್ರೀ ಸಮಾನತೆಯ ಮಟ್ಟವು ಉತ್ತಮವಾಗಿರುವುದಿಲ್ಲ. ಆದುದರಿಂದ ಭಾರತೀಯ ಸಮಾಜದಲ್ಲಿ ಕಾಲದಿಂದ ಕಾಲಕ್ಕೆ ಸ್ತ್ರೀ ಶಿಕ್ಷಣ ಯಾವ ರೀತಿ ಇದೆ ಎಂದು ಅರ್ಥ ಮಾಡಿಕೊಳ್ಳುವುದರ ಮೂಲಕ ಸ್ತ್ರೀ ಸ್ಥಾನಮಾನವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದುದರಿಂದ ಭಾರತದಲ್ಲಿ ಮಹಿಳಾ ಶಿಕ್ಷಣದ ಚಾರಿತ್ರಿಕ ಹಿನ್ನೆಲೆಯೆಂಬ ಅಧ್ಯಾಯವನ್ನು ಸಂಶೋಧನೆಯಲ್ಲಿ ತರಲಾಗಿದೆ.

"ಸಮಾಜದಲ್ಲಿ ಗಂಡು ಹೆಣ್ಣುಗಳ ನಡುವೆ ಸಮಾನ ಅವಕಾಶಗಳಿದ್ದ ಪಕ್ಷದಲ್ಲಿ ಪುರುಷರ ಹಾಗೂ ಮಹಿಳೆಯರ ಸಾಕ್ಷರತೆಯಲ್ಲಿ ಅಸಮಾನತೆಯಿರಲು ಸಾಧ್ಯವಿಲ್ಲ. ಆದರೆ ವಿಶ್ವದ ಯಾವ ದೇಶದಲ್ಲಿಯೂ ಸಾಕ್ಷರತೆಯಲ್ಲಿ ಲಿಂಗ ಸಮಾನತೆ ಕಂಡುಬರುವುದಿಲ್ಲ(ಯು.ಎನ್.ಡಿ.ಪಿ.ಯು ೧೯೯೦ರಿಂದ ಪ್ರಕಟಿಸುತ್ತಿರುವ ಯಾವುದೇ ವರ್ಷದ ಮಾನವ ಅಭಿವೃದ್ಧಿ ವರದಿಗಳನ್ನು ನೋಡಿ). ಈಗಲೂ ಮಹಿಳೆಯರ ಸಾಕ್ಷರತೆ ಹಾಗೂ ಶಿಕ್ಷಣವನ್ನು ಗ್ರಾಮಾಂತರ ಪ್ರದೇಶದಲ್ಲಿ ಕುಟುಂಬದ ಮೇಲಿನ ಹೊರೆಯೆಂದೇ ಭಾವಿಸಲಾಗುತ್ತಿದೆ. ಹೆಣ್ಣಿನ ಶಿಕ್ಷಣದ ಮೇಲೆ ಬಂಡವಾಳ ತೊಡಗಿಸುವುದೆಂದರೆ ಮತ್ತೊಬ್ಬರ ಮನೆಯ ಗಿಡಕ್ಕೆ ನೀರು ಹಾಕಿದಂತೆಂದು ಭಾವಿಸಲಾಗುತ್ತಿದೆ."[೧]

ಈ ಅಧ್ಯಾಯದಲ್ಲಿ ಚರಿತ್ರೆಯಲ್ಲಿ ಮಹಿಳಾ ಶಿಕ್ಷಣವನ್ನು ಅರ್ಥ ಮಾಡಿಕೊಳ್ಳುವ ಉದ್ದೇಶದಿಂದ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ:

ಪರಂಪರಾಗತ ಭಾರತದಲ್ಲಿ ಮಹಿಳೆಯರಿಗೆ ಶಿಕ್ಷಣದಲ್ಲಿ ಅವಕಾಶಗಳಿದ್ದವು. ಧಾರ್ಮಿಕ, ಸಾಹಿತ್ಯಕ, ತಾತ್ವಿಕ ವಿಷಯಗಳನ್ನು ಕುರಿತು ಪುರುಷರೊಂದಿಗೆ ಅವರು ಮುಕ್ತವಾಗಿ ಚರ್ಚಿಸುವ ಮತ್ತು ಸಾಮಾಜಿಕ ಪ್ರಕ್ರಿಯೆಗಳಲ್ಲಿ ಸಮಾನವಾಗಿ ತೊಡಗುವ ಅವಕಾಶಗಳು ಮಹಿಳೆಯರಿಗೆ

ಇದ್ದವು ಎಂಬ ಮಾತು ಮೇಲಿಂದ ಮೇಲೆ ಪ್ರಸ್ತಾಪಗೊಳ್ಳುತ್ತದೆ. ಮೈತ್ರೇಯಿ, ಗಾರ್ಗಿ, ಲೋಪಮುದ್ರಾ, ಘೋಕ್ಷರ ಹೆಸರುಗಳನ್ನು ಇತಿಹಾಸಕಾರರು ಮತ್ತು ಸಮಾಜಶಾಸ್ತ್ರಜ್ಞರು ಉಲ್ಲೇಖಿಸುತ್ತಾರೆ. ಮಧ್ಯಕಾಲೀನ ಇತಿಹಾಸದ ಸಂದರ್ಭದಲ್ಲಿ ಭಕ್ತಿಪಂಥದ ಮಹಿಳೆಯರು ತಾತ್ವಿಕ ಚರ್ಚೆ– ಚಿಂತನೆ ನಡೆಸಿದಂತೆ ಕಂಡುಬರುತ್ತದೆ. ಅಕ್ಕಮಹಾದೇವಿ, ಕಾರಿಕಾಲಮ್ಮೆಯವರಂಥ ಕೆಲವರನ್ನು ಉಲ್ಲೇಖಿಸಬಹುದು. ರಾಜಕುಮಾರಿಯರಿಗೆ ಶಿಕ್ಷಣವನ್ನು ನೀಡಲಾಗುತಿತ್ತು ಎಂಬ ಪ್ರಸ್ಥಾಪವು ಬರುತ್ತದೆಯಾದರೂ ಅವರಿಗೆ ಲಲಿತ ಕಲೆಗಳಾದ ಸಾಹಿತ್ಯ, ಸಂಗೀತ, ನಾಟಕ ಕಲೆಗಳಲ್ಲಿ ಮಾತ್ರ ತರಬೇತಿ ನೀಡುತ್ತಿದ್ದಂತೆ ಕಂಡುಬರುತ್ತದೆ. ಇಷ್ಟಾಗಿಯೂ ಕೆಲವರು ಶಸ್ತ್ರವಿದ್ಯೆಯನ್ನು, ಆರ್ಥಿಕ ನಿರ್ವಹಣಾ ಕಲೆಯನ್ನು ಕಲಿಯುತ್ತಿದ್ದುದ್ದಕ್ಕೆ ಅಲ್ಲಲ್ಲಿ ಪುರಾವೆಗಳು ದೊರೆಯುತ್ತವೆ.”[೨]

ಸ್ತ್ರೀ ಶಿಕ್ಷಣವು ಬಹುದೀರ್ಘಕಾಲದಿಂದ ಹಲವು ಹಂತಗಳ ಮುಖಾಂತರ ಸಾಗುತ್ತಾ ಬಂದಿದೆ. ಉನ್ನತ ಮಟ್ಟದ ಸಾಮಾಜಿಕ ಪ್ರತಿಷ್ಠೆಯಿಂದ ಸ್ತ್ರೀಯರು ಸಂತೋಷವಾಗಿದ್ದ ಕಾಲವೊಂದಿತ್ತು. ನಮ್ಮ ದೇಶದ ಉಚ್ಚಮಟ್ಟದ ಸಂಸ್ಕೃತಿಯು ವಿದ್ಯಾವಂತ ಸ್ತ್ರೀಯರಿಂದ ರೂಢಿಸಿತ್ತು. ರಾಷ್ಟ್ರದ ರಾಜಕೀಯ ಸಾಮಾಜಿಕ ಸ್ಥಿತಿಗತಿಗಳ ಬದಲಾವಣೆಯೊಂದಿಗೆ ಸ್ತ್ರೀಯ ಶಿಕ್ಷಣದ ಪ್ರತಿಕೂಲ ಪರಿಣಾಮವನ್ನು ಪಡೆಯಿತು. ಸ್ತ್ರೀ ಶಿಕ್ಷಣದ ಐತಿಹಾಸಿಕ ಹಿನ್ನೆಲೆಯನ್ನು ಈ ಕೆಳಗಿನ ಹಂತಗಳಲ್ಲಿ ವಿವರಿಸಬಹುದಾಗಿದೆ.

ಬ್ರಿಟಿಷ್ ಭಾರತದಲ್ಲಿ ಮಹಿಳಾ ಶಿಕ್ಷಣ

ಭಾರತದಲ್ಲಿ ಮಹಿಳೆಯರಿಗೆ ಔಪಚಾರಿಕ ಶಿಕ್ಷಣ ದೊರೆತದ್ದು ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ. ‘ಈಸ್ಟ್ ಇಂಡಿಯಾ ಕಂಪನಿ’ಗೆ ಗುಮಾಸ್ತರು ಮತ್ತು ಅನುವಾದಕರ ಅಗತ್ಯವಿದ್ದುದರಿಂದ ಇಂಡಿಯಾದಲ್ಲಿ ಇಂಗ್ಲಿಷ್ ಶಿಕ್ಷಣವು ಆರಂಭವಾಯಿತು.

ಸ್ತ್ರೀ ಶಿಕ್ಷಣಕ್ಕೆ ಸರ್ಕಾರದ ಬೆಂಬಲ

೧೮೪೮-೧೮೫೬ರ ಅವಧಿಯಲ್ಲಿ ಭಾರತದ ಗರ್ವನರ್ ಜನರಲ್ ಆಗಿದ್ದ ಲಾರ್ಡ್ ಡಾಲ್‌ಹೌಸಿಯು ಸ್ತ್ರೀ ಶಿಕ್ಷಣದಲ್ಲಿ ಬದಲಾವಣೆಗಳಾಗದ ಹೊರತು ಇನ್ನಾವುದೇ ರೀತಿಯ ಪ್ರತ್ಯೇಕ ಬದಲಾವಣೆಯೂ ಪ್ರಧಾನವಾದ ಹಾಗೂ ಲಾಭದಾಯಕವಾದ ಪರಿಣಾಮಗಳನ್ನು ತರಲು ಸಮರ್ಥವಾಗಲಾರದು ಎಂದು ಘೋಷಿಸಿದ್ದನು.[೩]

ವಸಾಹತು ಸರ್ಕಾರದ ಆರ್ಥಿಕ ಮತ್ತು ನೈತಿಕ ಬೆಂಬಲವು ಸ್ತ್ರೀ ಶಿಕ್ಷಣ ವ್ಯಾಪಕವಾಗಲು ಅಗತ್ಯವಾಗಿತ್ತು. ಬಾಲಕಿಯರ ಶಾಲೆಗಳಿಗೆ ಜನ ಬೆಂಬಲ ಅಷ್ಟಾಗಿ ಇರಲಿಲ್ಲ. ಗಂಡು ಹುಡುಗರಿಗೆ ಶಿಕ್ಷಣ ದೊರೆತರೆ ಆ ಸಂಗತಿಯಿಂದ ಕುಟುಂಬದ ಆರ್ಥಿಕತೆಗೂ, ಪ್ರತಿಷ್ಠೆಗೂ ಇದ್ದಕ್ಕಿದ್ದಂತೆ ಬೆಲೆ

ಬಂದುಬಿಡುತಿತ್ತು. ಆದರೆ ಅದೇ ಹೆಣ್ಣುಮಕ್ಕಳಿಗೆ ಶಿಕ್ಷಣ ದೊರೆತರೆ ಈ ಲಾಭವಿರಲಿ, ಇದಕ್ಕೆ ವಿರುದ್ಧದ ಗತಿಯನ್ನೇ ಕುಟುಂಬಗಳು ಎದುರಿಸಬೇಕಾಗುತ್ತಿತ್ತು.[೪]

ಇಂಡಿಯಾದ ಜನರ ರೀತಿನೀತಿಗಳಿಗೆ ಹಾಗೂ ಇಲ್ಲಿನ ಸಾಮಾಜಿಕ ಪದ್ಧತಿಗಳಿಗೆ ಬ್ರಿಟಿಷ್ ಶಾಲೆಗಳ ಮಾದರಿ ಹೊಂದಿಕೆಯಾಗುವುದೇ ಕಷ್ಟ ಸಾಧ್ಯವೆನಿಸುತಿತ್ತು. ಸ್ತ್ರೀ ಪುರುಷರು ಪರಸ್ಪರ ಬೆರೆತು ನಡೆಯುವ ಬಗೆಗೆ ಇಲ್ಲಿ ಅತಿಸೂಕ್ಷ್ಮವಾದ ಅಭಿಪ್ರಾಯಗಳಿದ್ದದ್ದರಿಂದ ಹಲವೊಮ್ಮೆ ಇಂತಹ ಪ್ರಸಂಗಗಳಿಗೆ ಕಟ್ಟುನಿಟ್ಟಿನ ನಿಷೇಧಗಳೇ ಇದ್ದದ್ದರಿಂದ ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳೂ, ಅಧ್ಯಾಪಕಿಯರೂ ಇರಬೇಕಾದುದು ಅನಿವಾರ್ಯವೇ ಆಗುತ್ತಿತ್ತು.

ಚಿಕ್ಕ ವಯಸ್ಸಿನಲ್ಲಿ ಮದುವೆಮಾಡುವುದೇ ಸೂಕ್ತವೆಂಬ ಅಭಿಪ್ರಾಯ ಪ್ರಚಲಿತ-ವಿದ್ದದ್ದರಿಂದ ಬಾಲಕಿಯರು ಶಾಲೆಗಳಿಗೆ ಹೋಗಬಹುದಾದ ವರ್ಷಗಳೇ ಬಹಳ ಕಡಿಮೆಯಾಗುತ್ತಿದ್ದವು. ಜೊತೆಗೆ ಹೆಂಗಸರು ಅಡಿಗೆ, ಮನೆಗೆಲಸ, ಮಕ್ಕಳ ಲಾಲನೆ ಪಾಲನೆಗಳಿಗೆ ಮೀಸಲಾದವರೆಂದೇ ಇಲ್ಲಿ ಪರಿಗಣಿತವಾಗುವುದರಿಂದ ಈ ಎಲ್ಲವನ್ನು ಪೂರೈಸಿ ಅಧ್ಯಯನದ ಆಸಕ್ತಿಗಳೆಡೆಗೆ ತಿರುಗಲು ಅವರಿಗೆ ಪುರುಸೊತ್ತು ದೊರೆಯುವುದೂ ಕಷ್ಟದಾಯಕವಾದ ಸಂಗತಿಯೇ.

೧೮೫೪ರ ವೇಳೆಗೆ ಸುಮಾರು ೬೨೬ ಬಾಲಕಿಯರ ಶಾಲೆಗಳಿದ್ದವು(ಬಂಗಾಲ: ೨೮೮, ಮದ್ರಾಸ್: ೨೫೬, ಮುಂಬೈ: ೬೫, NWFP ಮತ್ತು ಔಧ್: ೧೭). ಈ ಶಾಲೆಗಳಲ್ಲಿ ಒಟ್ಟು ೨೧,೭೫೫ ವಿದ್ಯಾರ್ಥಿನಿಯರಿದ್ದರು.[೫] ಈ ಶಾಲೆಗಳು ತುಂಬಾ ಚಿಕ್ಕವು ಹಾಗೂ ಇಡೀ ಜನಸಂಖ್ಯೆಗೆ ಹೋಲಿಸಿದರೆ ಇಲ್ಲಿ ಕಲಿಯಲು ಬರುತ್ತಿದ್ದ ಬಾಲಕಿಯರ ಒಟ್ಟು ಸಂಖ್ಯೆ ನಗಣ್ಯವೆನಿಸುವಂಥದು ಎಂಬುದು ಸ್ಪಷ್ಟವೇ. ಆದರೂ ಸ್ತ್ರೀ ಶಿಕ್ಷಣದ ಬಗೆಗೆ ಇದ್ದ ನಿಲುವಿನಲ್ಲೊಂದು ಸ್ಪಷ್ಟ ಬದಲಾವಣೆ ಯಂತೂ ಪ್ರಾರಂಭವಾಗಿತ್ತು.

೧೮೮೨ರಲ್ಲಿ ಹಂಟರ್‌ರವರ ಇಂಡಿಯನ್ ಎಜುಕೇಷನ್ ಕಮಿಷನ್ನು ಭಾರತದಲ್ಲಿ ಶಿಕ್ಷಣದ ಪ್ರಗತಿಯನ್ನು ಕುರಿತು ಪರಿಶೀಲನೆ ನಡೆಸಿ ಬಾಲಕಿಯರಿಗಾಗಿ ಪ್ರಾಥಮಿಕ ಶಾಲೆಗಳನ್ನು, ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲು ಹಲವಾರು ಗಂಭೀರ ಪ್ರಯತ್ನಗಳೇನೋ ನಡೆದವು. ಮಹಿಳೆಯರ ಉನ್ನತ ಶಿಕ್ಷಣ ಅಥವಾ ಸ್ತ್ರೀ ಪುರುಷರ ಸಹಶಿಕ್ಷಣದ ಮಾತು ಮಾತ್ರ ವಿರೋಧಗಳನ್ನೆದುರಿಸುತ್ತಲೆ ಇದ್ದವು.[೬] ಶಾಲೆಗೆ ಹೋಗಲರ್ಹ ವಯಸ್ಸಿನ ಪ್ರತಿಶತ ೯೮ಕ್ಕಿಂತಲೂ ಹೆಚ್ಚಿನ ಹುಡುಗಿಯರು ಶಾಲೆಗಳಿಗೆ ದಾಖಲಾಗಿರಲಿಲ್ಲ ಎಂಬ ಸಂಗತಿಯನ್ನು ಗಂಭೀರವಾಗಿ ಪರಿಗಣಿಸಿದ ಹಂಟರ್ ಕಮಿಷನ್ ವರದಿಯು ಬಾಲಕಿಯರ ಶಾಲೆಗಳಿಗೆ ಹೆಚ್ಚು ಧಾರಾಳವಾಗಿ ಅನುದಾನಗಳನ್ನು ನೀಡಬೇಕೆಂದೂ, ಹೆಚ್ಚು ವಿದ್ಯಾರ್ಥಿವೇತನ ಹಾಗೂ ಬಹುಮಾನಗಳನ್ನು ನೀಡುವ

ಮೂಲಕ ಬಾಲಕಿಯರಿಗೆ ಅವಕಾಶಗಳನ್ನು ಹೆಚ್ಚಿಸಬೇಕೆಂದೂ ಹೇಳಿತು. ಮುಂದಿನ ಎರಡು ದಶಕಗಳಲ್ಲಿ ಉನ್ನತ ಶಿಕ್ಷಣವು ತೀವ್ರವಾಗಿ ವಿಸ್ತರಿಸಿತು. ೧೮೮೧-೮೨ರಲ್ಲಿ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಒಟ್ಟು ಆರು ಮಂದಿ ಮಹಿಳೆಯರಷ್ಟೇ ಇದ್ದರಾದರೆ ಶತಮಾನದ ಕೊನೆಯ ವೇಳೆಗೆ ಈ ಸಂಖ್ಯೆ ೨೬೪ರಷ್ಟಾಯಿತು. ಇದೇ ವೇಳೆಗೆ ಪ್ರಾಥಮಿಕ ಶಾಲೆಗಳಲ್ಲಿ ಬಾಲಕಿಯರ ದಾಖಲಾತಿ ಸಂಖ್ಯೆ ೨೦೫೪ರಿಂದ ೪೧,೫೮೨ಕ್ಕೆ ಏರಿತೆಂಬುದೂ ಗಮನಾರ್ಹ ಸಂಗತಿಯಾಗಿದೆ.[೭]

ಹಂಟರ್ ಕಮಿಷನ ವರದಿಯಿಂದ ಶತಮಾನದ ಅಂತ್ಯದ ವೇಳೆಗೆ ಪಸರಿಸಿದ ಸ್ತ್ರೀ ಶಿಕ್ಷಣ ಗಾಥೆಯಲ್ಲಿ ಮೂವರು ಪ್ರಮುಖ ಶಿಕ್ಷಣವೇತ್ತರನ್ನು ಗುರುತಿಸಬಹುದು. ಮುಂಬೈ ಮತ್ತು ಪೂನಾಗಳಲ್ಲಿ ೧೮೮೯ರಲ್ಲಿ ಶಾರದಾ ಸದನವನ್ನು ಸ್ಥಾಪಿಸಿದ ಪಂಡಿತಾ ರಮಾಬಾಯಿ, ೧೮೯೩ರಲ್ಲಿ ಕಲ್ಕತ್ತಾದಲ್ಲಿ ಮಹಾಕಾಲಿ ಪಾಠಶಾಲೆಯನ್ನು ಆರಂಭಿಸಿದ ಮಾತಾಜಿ ತಪಸ್ವಿನಿ, ಹಾಗೂ ೧೮೯೬ರಲ್ಲಿ ವಿಧವೆಯರಿಗಾಗಿ ಪೂನಾದಲ್ಲಿ ಶಾಲೆಯೊಂದನ್ನು ತೆರೆದ ಡಿ.ಕೆ. ಕರ್ವೆ ಆ ಕಾಲಕ್ಕೆ ಈ ಮೂವರು ನಡೆಸಿದ ಪ್ರಯತ್ನಗಳನ್ನು ವಿಶೇಷಗಳೆಂದೇ ಪರಿಗಣಿಸಬೇಕಾಗುತ್ತದೆ. ಏಕೆಂದರೆ ಸ್ತ್ರೀ ಶಿಕ್ಷಣದ ರೂಪಿಕೆ ಹಾಗೂ ನಿರ್ವಚನಗಳ ಸಂದರ್ಭಗಳಲ್ಲಿ ಸ್ವತಃ ಮಹಿಳೆಯರು ಪಾಲ್ಗೊಳ್ಳಲು ಇಲ್ಲಿ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲಾಯಿತು.

ಪಂಡಿತಾ ರಮಾಬಾಯಿ

ಸ್ತ್ರೀ ಶಿಕ್ಷಣವನ್ನು ಮುನ್ನಡೆಸಿದ ಧುರೀಣೆಯೆಂದೂ, ಮಹಿಳಾ ಹಕ್ಕುಗಳಿಗಾಗಿ ಹೋರಾಟಕ್ಕಿಳಿದ ಛಲಗಾತಿಯೆಂದು ಪಂಡಿತಾ ರಮಾಬಾಯಿಯವರ ಮುಖ್ಯ ಸಾಧನೆಗಳನ್ನು ಗುರುತಿಸಬೇಕಾಗುತ್ತದೆ. ಆಕೆಯ ತಂದೆ ಆಕೆಯ ವಿದ್ಯಾಭ್ಯಾಸಕ್ಕೆ ಬೆಂಬಲವಾಗಿ ನಿಂತದ್ದಷ್ಟೇ ಅಲ್ಲದೆ ಅವಿವಾಹಿತೆಯಾಗಿ ಉಳಿಯುವ ಅವರ ತೀರ್ಮಾನಕ್ಕು ಸಮ್ಮತಿಸಿದರು. ಆಕೆಯ ತಂದೆ–ತಾಯಿಯರು ತೀರಿಕೊಂಡಾಗ ಆಕೆಗೆ ಹದಿನಾರು ವರ್ಷಗಳಾಗಿತ್ತಷ್ಟೇ. ಅವಿವಾಹಿತೆಯಾದ ಹುಡುಗಿಗೆ ಸಂಸ್ಕೃತವನ್ನು ಓದುವಷ್ಟು ವಿದ್ಯಾಭ್ಯಾಸವಾಗಿತ್ತು. ಆಕೆಯೂ ಆಕೆಯ ಸೋದರನೂ ಕೂಡಿ ಭಾರತದ ಉದ್ದಗಲಕ್ಕು ಪ್ರವಾಸ ಮಾಡುತ್ತ ಸ್ತ್ರೀಶಿಕ್ಷಣ ಹಾಗೂ ಸಮಾಜದ ಸುಧಾರಣೆಯ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರು. ಕಲ್ಕತ್ತಾದ ಗಣ್ಯರು ರಮಾಬಾಯಿಯವರನ್ನು ವಿದ್ಯಾಧಿದೇವತೆ 'ಸರಸ್ವತಿ' ಎಂದು ಪ್ರಶಂಶೆ ಮಾಡಿದರು. ಬ್ರಾಹ್ಮಣ ಪಂಡಿತವೇತ್ತರಂತೆಯೇ ಜ್ಞಾನನಿಧಿಯಾದ ಆಕೆಯನ್ನು 'ಪಂಡಿತಾ' ಎಂದೇ ಕರೆದರು. ಆದರೆ ಈ ರೀತಿಯ ಪ್ರಶಂಸೆಯನ್ನು ಸಹಿಸದ ಹಲವರು ಈರ್ಷೆ ಅಸಮಾಧಾನ ಗಳಿಂದ ಆಕೆಯ ಭಾಷಣಗಳಲ್ಲಿ ಗಲಾಟೆ ಎಬ್ಬಿಸುತ್ತಿದ್ದುದೂ ಉಂಟು.[೮]

ರಮಾಬಾಯಿಯವರ ಸೋದರ ಕಲ್ಕತ್ತದಲ್ಲಿ ನಿಧನಗೊಂಡ ನಂತರ ಆತನ ಆಪ್ತಮಿತ್ರ

ಬಿಪಿನ್ ಬಿಹಾರಿದಾಸ್ ಮೇದಾನಿಯನ್ನು ರಮಾ ಮದುವೆಯಾದರು. ಇಪ್ಪತ್ಮೂರನೆಯ ವಯಸ್ಸಿನಲ್ಲಿ ರಮಾ ಹೆಣ್ಣುಮಗುವಿನ ತಾಯಿಯಾದರು. ದುರದೃಷ್ಟವಷಾತ್ ಇದರ ಮರು ವರ್ಷವೆ ಪತಿಯನ್ನು ಕಳೆದುಕೊಂಡರು.

ನಂತರ ರಮಾಬಾಯಿಯವರು ಪೂನಾದ ಸಮಾಜ ಸುಧಾರಕರೊಂದಿಗೆ ತಮ್ಮನ್ನು ಗುರುತಿಸಿಕೊಂಡು ಆರ್ಯ ಮಹಿಳಾ ಸಮಾಜದಲ್ಲಿ ಕಾರ್ಯನಿರತರಾಗಿ ಮಹಿಳೆಯರ ಶಿಕ್ಷಣದ ಬಗ್ಗೆ ತಮ್ಮ ಗಮನ ಹರಿಸತೊಡಗಿದರು. ಪೂನಾದಲ್ಲಿ ಹಂಟರ್ ಆಯೋಗದೆದುರು ಮಹಿಳಾ ವೈದ್ಯರು ಹಾಗೂ ಅಧ್ಯಾಪಕಿಯರ ತೀವ್ರ ಅಗತ್ಯವನ್ನು ನಿದರ್ಶನ ಸಹಿತವಾಗಿ ವಿವರಿಸಿದರು. ಸ್ವತಃ ತಾನೇ ಇಂಗ್ಲಿಷ್ ಕಲಿಯಬೇಕೆಂದೂ, ವೈದ್ಯಕೀಯವನ್ನು ಅಭ್ಯಸಿಸಬೇಕೆಂದೂ ತೀರ್ಮಾನಿಸಿದ ರಮಾಬಾಯಿ ಇಂಗ್ಲೆಂಡ್‌ನ ವಾಂಟೇಜ್ ಇನ್ ಅಕ್ಸ್‌ಫರ್ಡ್‌ಶೈರ್ ಮೂಲದ ಆಂಗ್ಲೊ ಕೆಥೊಲಿಕ್ ಕಮ್ಯೂನಿಟಿ ಆಫ್ ಸೈಂಟ್ ಮೇರಿವ ವರ್ಜಿನ್‌ನ ಸದಸ್ಯರಲ್ಲಿ ನೆರವು ಕೋರಿದರು. ಅವರು ಕೆಲಮಟ್ಟಿನ ಧನಸಹಾಯವನ್ನೇನೊ ಮಾಡಿದರು, ಉಳಿದ ಖರ್ಚು ರಮಾಬಾಯಿಯವರೇ ಬರೆದ 'ಸ್ತ್ರೀಧರ್ಮನೀತಿ' ಎಂಬ ಕೃತಿಯ ಮಾರಾಟದಿಂದ ನಿರ್ವಹಿಸಬೇಕಾಯಿತು.

೧೮೮೩ರಲ್ಲಿ ರಮಾಬಾಯಿ ತಮ್ಮ ಪುಟ್ಟ ಮಗಳೊಂದಿಗೆ ಆನಂದಿಬಾಯಿ ಭಗತ್ ಎಂಬ ಜೊತೆಗಾತಿಯನ್ನು ಕೂಡಿಕೊಂಡು ಇಂಗ್ಲೆಂಡಿನತ್ತ ಪಯಣ ಮಾಡಿದರು. ಬಹುಬೇಗನೆ ಅವರೆಲ್ಲರೂ ವಾಂಟೇಜ್‌ನಲ್ಲಿ ವಾಸ್ತವ್ಯ ಹೂಡಿದರು. ಕೆಲವು ತಿಂಗಳುಗಳಲ್ಲಿ ಆನಂದಿಬಾಯಿ ಆತ್ಮಹತ್ಯೆ ಮಾಡಿಕೊಂಡುಬಿಟ್ಟಳು (ಏಕೆ ಏನು ಎಂಬ ದಾಖಲೆಗಳಾವುವೂ ದೊರೆತಿಲ್ಲ). ಈ ಪ್ರಸಂಗದಿಂದ ರಮಾಬಾಯಿ ಅಲ್ಲಾಡಿ ಹೋದರು.

ರಮಾಬಾಯಿಗೆ ಆಗಿನ್ನೂ ಇಪ್ಪತ್ತೈದು ವರ್ಷಗಳಷ್ಟೆ. ಇಷ್ಟು ಚಿಕ್ಕ ವಯಸ್ಸಿಗೆ ತಂದೆ, ತಾಯಿ, ಸೋದರ, ಪತಿ, ಆಪ್ತಗೆಳತಿಯೆಂಬ ದೊಡ್ಡ ಸಾವಿನ ಸರಣಿಯನ್ನೇ ಅವರು ಕಾಣಬೇಕಾಯಿತು. ೧೮೮೬ ರವರೆಗೆ ಶಿಕ್ಷಣವನ್ನೇನೊ ಮುಂದುವರೆಸಿದರು. ಆ ಸಂದರ್ಭದಲ್ಲಿ ಆಕೆಯ ಸೋದರ ಸಂಬಂಧಿ ಆನಂದಿಬಾಯಿ ಜೋಷಿಯವರು ಅಮೇರಿಕಾದಲ್ಲಿ ಪದವಿ ಪಡೆಯುವ ಸಮಾರಂಭವಿತ್ತು. ರಮಾಬಾಯಿ ಈ ಸಂದರ್ಭದಲ್ಲಿ ಅಮೇರಿಕಾದಲ್ಲಿರಲು ಆಶಿಸಿ ಹಡಗು ಹತ್ತಿದರು. ತಮ್ಮ ಈ ಪ್ರಯಾಣದ ಖರ್ಚಿನ ನಿರ್ವಹಣೆಗಾಗಿ ಹಾಗೂ ತನ್ನ ಜೀವನಧ್ಯೇಯದ ಪ್ರಸಾರಕ್ಕಾಗಿ ರಮಾಬಾಯಿ 'ದ ಹೈಕಾಸ್ಟ್ ಹಿಂದೂ ವಿಮೆನ್" ಎಂಬ ಕೃತಿಯೊಂದನ್ನು ಬರೆದರು. ಅಮೆರಿಕಾ ಬಿಡುವುದಕ್ಕೂ ಮೊದಲೇ ಈ ಕೃತಿಯ ಹತ್ತು ಸಾವಿರ ಪ್ರತಿಗಳು ಖರ್ಚಾದವು.

೧೮೮೭ರಲ್ಲಿ ಬೋಸ್ಟನ್ ಅನುಯಾಯಿಗಳು "ರಮಾಬಾಯಿ ಅಸೋಸಿಯೇಷನ್ ಎಂಬುದನ್ನು ಸ್ಥಾಪಿಸಿ ಭಾರತದಲ್ಲಿ ಆಕೆಯ ಕಾರ್ಯ ನಿರ್ವಹಣೆಯನ್ನು ಪ್ರೋತ್ಸಾಹಿಸಿದರು. ಅಮೇರಿಕಾ ಸಂಯುಕ್ತ

ಸಂಸ್ಥಾನಗಳು ಮತ್ತು ಕೆನಡಾದ ಉದ್ದಗಲಕ್ಕೂ ಸಂಚರಿಸಿ ಅಲ್ಲಿನ ಶಿಕ್ಷಣ ಸಂಸ್ಥೆಗಳನ್ನು, ಸೇವಾ ಸಂಸ್ಥೆಗಳನ್ನು ಸಂದರ್ಶಿಸಿ ಅವರ ಕಾರ್ಯವೈಖರಿಗಳನ್ನು ಅಭ್ಯಾಸ ಮಾಡಿದರು. ಹಲವು ಗುಂಪು, ಸಮುದಾಯಗಳನ್ನುದ್ದೇಶಿಸಿ ಮಾತನಾಡಿದರು. ೧೮೮೮ರ ಮೇ ವೇಳೆಗೆ ತಮ್ಮ ಅಸೋಸಿಯೇಷನ್‌ನ ಹೆಸರಿನಲ್ಲಿ ಮೂವತ್ತು ಸಾವಿರ ಡಾಲರ್‌ಗಳನ್ನು ಸಂಗ್ರಹಿಸಲು ಅವರಿಗೆ ಸಾಧ್ಯವಾಯಿತು.[೯]

ಭಾರತದಲ್ಲಿ ರಮಾಬಾಯಿ ವಿಧವೆಯರಿಗಾಗಿ ಮುಂಬೈನಲ್ಲಿ 'ಶಾರದಾ ಸದನ' ಎಂಬ ಶಾಲೆಯನ್ನು ತೆರೆದರು. ಸಮಾನತೆಯ ಆಶಯವನ್ನು ಹೊಂದಿದ್ದರೂ ಈ ಶಾಲೆಯ ನಿಯಮಗಳು ಬ್ರಾಹ್ಮಣ ಜಾತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದವು. ಆದುದರಿಂದ ಉತ್ತಮ ಜಾತಿಯ ಕೆಲವು ಹಿಂದೂ ವಿಧವೆಯರನ್ನೇನೋ ಈ ಶಾಲೆ ಆಕರ್ಷಿಸಿತು. ಮುಂದೆ ಡಿ.ಕೆ. ಕರ್ವೆಯವರನ್ನು ವಿವಾಹವಾಗಿ ಆನಂದಿಬಾಯಿ ಎಂದು ಹೆಸರು ಬದಲಾಯಿಸಿಕೊಂಡ ಗೋದೂಬಾಯಿ ಕೂಡ ಈ ಶಾಲೆಯವರೇ. ಹಿಂದೂಗಳಲ್ಲಿ ಬಹು ಸಂಖ್ಯಾತರು ರಮಾಬಾಯಿಯವರ ಕಾರ್ಯವೈಖರಿಯನ್ನು ಅನುಮಾನದಿಂದಲೇ ನೋಡುತ್ತಿದ್ದರು. ಈ ಅನುಮಾನವನ್ನು ನಿವಾರಿಸಲು ರಮಾಬಾಯಿಯವರು ಹಿಂದೂ ಸಮಾಜದ ಸುಧಾರಕರನ್ನು ಕಾರ್ಯನಿರ್ವಾಹಕ ಸಮಿತಿ ಸದಸ್ಯರನ್ನಾಗಿ ನೇಮಿಸಿದರು. ಆದರೂ ರಮಾಬಾಯಿಯನ್ನು ಮತ್ತು ಆಕೆಯ ಶಾಲೆಯನ್ನು ಕಟುವಾಗಿ ಟೀಕಿಸಿ ಬರೆದ ಅನೇಕ ಲೇಖನಗಳು ಮುಂಬೈ ಪತ್ರಿಕೆಗಳಲ್ಲಿ ಬರತೊಡಗಿದವು. ಆರ್ಥಿಕ ಒತ್ತಡಗಳಿಂದಾಗಿ ಶಾಲೆಯನ್ನು ಮುಂಬೈನಿಂದ ಪೂನಾಗೆ ಸ್ಥಳಾಂತರಿಸುವುದು ಅನಿವಾರ್ಯವಾಯಿತು. ಆದರೆ ಇದನ್ನು ಕೇಸರಿ ಪತ್ರಿಕೆಯು ವಿಧವೆಯರನ್ನು ಜಾತಿಗೆಡಿಸಿ ಕ್ರಿಶ್ಚಿಯನ್ನರಾಗಿಸಲು ಮಾಡುತ್ತಿರುವ ಹುನ್ನಾರವೆಂದು ಹೇಳಿ ಗುಲ್ಲೆಬ್ಬಿಸಿದರು. ೧೮೯೩ರ ವೇಳೆಗೆ ಇಪ್ಪತ್ತೈದು ಹುಡುಗಿಯರು ಶಾಲೆಯನ್ನು ಬಿಟ್ಟರು. ಆಶ್ರಯದ ಅಗತ್ಯವಿರುವ ವಿಧವೆಯರೂ ಇರಲಿಲ್ಲ. ರಮಾಬಾಯಿಗೆ ಇನ್ನಿತರ ವಿದ್ಯಾರ್ಥಿನಿ-ಯರೇನೋ ಶೀಘ್ರದಲ್ಲಿ ದೊರೆತರು. ೧೯೦೦ರ ವೇಳೆಗೆ ಶಾರದ ಸದನವು ಎಂಬತ್ತು ಮಂದಿ ಮಹಿಳೆಯರಿಗೆ ಅಧ್ಯಾಪಕಿಯರಾಗಿ, ನರ್ಸ್‌ಗಳಾಗಿ ತಮ್ಮ ಅನ್ನವನ್ನು ತಾವೇ ಗಳಿಸುವ ಸಾಮರ್ಥ್ಯ ಪಡೆಯಲು ತಕ್ಕ ತರಬೇತಿಯನ್ನು ಕೊಟ್ಟು ದಾರಿ ತೋರಿಸಿತ್ತು.[೧೦]

೧೮೯೭ರಲ್ಲಿ ಬಿದ್ದ ಬರಗಾಲದ ಸಮಯದಲ್ಲಿ ಪೂನಾದಿಂದ ಮೂವತ್ತು ಮೈಲಿಗಳಷ್ಟು ದೂರದ ಖೇಡಗಾಂವ್‌ನಲ್ಲಿ ರಮಾಬಾಯಿ ತಮ್ಮ ಎರಡನೆಯ ಶಾಲೆ 'ಮುಕ್ತಿ'ಯನ್ನು ಆರಂಭಿಸಿದರು. ಬರಗಾಲದ ಕಷ್ಟಕ್ಕೆ ಸಿಲುಕಿದ ಹೆಂಗಸರನ್ನು ಮತ್ತು ಮಕ್ಕಳನ್ನು ರಮಾಬಾಯಿ ತಮ್ಮ ಶಾರದಾ ಸದನಕ್ಕೆ ಸೇರಿಸಿಕೊಳ್ಳತೊಡಗಿದರು. ಅಲ್ಲಿ ಅವರಿಗೆ ಊಟ, ವಸತಿ, ಬಟ್ಟೆಬರೆಗಳನ್ನು ಕೊಟ್ಟದ್ದಲ್ಲದೆ ಶಾಲೆಯಲ್ಲೂ ಅವರನ್ನು ನೊಂದಾಯಿಸಿಕೊಳ್ಳಲಾಯಿತು. ೧೯೦೦ರ ವೇಳೆಗೆ ಮುಕ್ತಿ ಸಂಸ್ಥೆಯು

ಅಗಾಧವಾಗಿ ಬೆಳೆದು ಒಂದು ಪ್ರಮುಖ ಸ್ಥಾನವನ್ನೆ ಪಡೆಯಿತು. ಶಾಲೆಯಲ್ಲಿ ಓದುವವರು, ಉದ್ಯೋಗ ತರಬೇತಿ ಪಡೆಯುವವರು, ದುಡಿದು ಗಳಿಸುವವರು ಎಂದು ಸುಮಾರು ಎರಡು ಸಾವಿರ ಜನರಿಗೆ ಈ ಸಂಸ್ಥೆ ಆಶ್ರಯ ನೀಡಿತ್ತು. ಒಂದು ಅಮೇರಿಕನ್ ಸಂಸ್ಥೆಯಿಂದ 'ಮುಕ್ತಿ'ಗೆ ಆರ್ಥಿಕ ನೆರವು ದೊರೆಯುತ್ತಿತ್ತು.[೧೧]

ಶಿಕ್ಷಣದ ಬಗ್ಗೆ ರಮಾಬಾಯಿಯವರ ಕೊಡುಗೆಯನ್ನು ಆಕೆಯ ಸಮಕಾಲೀನರು ಗೌರವದಿಂದಲೇ ಗುರುತಿಸಿದರಾದರೂ, ಕ್ರಿಶ್ಚಿಯನ್ ಧರ್ಮದ ಜೊತೆಗಿನ ಆಕೆಯ ಸಂಬಂಧದಿಂದಾಗಿ ಸ್ತ್ರೀ ಶಿಕ್ಷಣಕ್ಕೆ ವಿಶೇಷವಾಗಿ ದುಡಿಯುವುದರಲ್ಲಿ ಆಕೆ ತೊಡಕುಗಳನ್ನೇ ಎದುರಿಸಬೇಕಾಯಿತು. ಆಡಳಿತದ ಅಧಿಕಾರದಲ್ಲಿ ಕ್ರಿಶ್ಚಿಯನ್ ಜನರೇ ಇದ್ದು, ದಿನ ಕಳೆದಂತೆ ಈ ಜನರ ಬಗೆಗೆ, ಈ ದೇಶದವರಿಗೆ ದ್ವೇಷ ಬೆಳೆಯುತ್ತಿದ್ದ ಸಂದರ್ಭದಲ್ಲಿ ರಮಾಬಾಯಿಯವರು ಕ್ರಿಶಿಯನ್ ಜಾತಿಗೆ ಸೇರಿದ್ದರೆಂಬುದು ಯಾರಿಗೂ ಸಹನೆಯಾಗುವ ವಿಷಯವಾಗಿರಲಿಲ್ಲ. ಪಶ್ಚಿಮ ಭಾರತದ ಬಹುಪಾಲು ಪ್ರಭಾವಶಾಲಿ ಗಂಡಸರಿಗೆ ರಮಾಬಾಯಿಯವರ ಕೆಲಸವೂ ಕೋಪ ಬರಿಸುತ್ತಿತ್ತು. ರಮಾಬಾಯಿಯ ಬಹುಪಾಲು ವಿದ್ಯಾರ್ಥಿಗಳು ಉತ್ತಮ ಜಾತಿಗಳವರೇ ಎಂಬುದು ಕೂಡ ಈ ಕೋಪಕ್ಕೆ ತುಪ್ಪವನ್ನು ಸುರಿಯುತ್ತಿದೆ ಎಂಬುದನ್ನು ರಮಾಬಾಯಿ ಗಮನಿಸುತ್ತಿದ್ದರು. ರಮಾಬಾಯಿಯ ಕಾರ್ಯವ್ಯಾಪ್ತಿ ಕೆಳಜಾತಿಯ ಮಹಿಳೆಯರಿಗಷ್ಟೆ ಸೀಮಿತವಾಗಿದ್ದಿದ್ದರೆ ಕೋಪಿಷ್ಠರಾದ ಗಂಡಸಿರಿಗೇನು ಅಭ್ಯಂತರ ವಿರುತ್ತಿರಲಿಲ್ಲ ಎಂದು ರಮಾಬಾಯಿ ಟೀಕಿಸಿದ್ದಾರೆ.[೧೨]

ರಮಾಬಾಯಿಯವರು ಇಂಥಾ ಅನೇಕ ಮೊನಚು ಹಾಗೂ ಜನರಿಗೆ ಅಪ್ರಿಯವೆನಿಸುವ ಟೀಕೆಗಳಿಗೆ ಪದೇಪದೇ ಒಳಗಾಗುತ್ತಿದ್ದ ಸಂಗತಿಗಳು ಹಲವಾರಿದ್ದವು.

ರಮಾಬಾಯಿಯವರ ಅಸಾಧಾರಣ ಪ್ರಯತ್ನಗಳು ಬಹಳಷ್ಟಿವೆ. ಇವರು ವಿಧವೆಯರನ್ನು ವಿದ್ಯಾವಂತೆಯರನ್ನಾಗಿಸುವ ಪ್ರಯತ್ನ ನಡೆಸಿದ ಮೊದಲ ಭಾರತೀಯರು. ಅವರ ಘನ ಉದ್ದೇಶವನ್ನು ಅವರ ನಿಷ್ಠಾವಂತ ವಿದ್ಯಾರ್ಥಿಗಳು ಇನ್ನೂ ಮುಂದುವರಿಸುತ್ತಿದ್ದಾರೆ.

ಮಾತಾಜಿ ಮಹಾರಾಣಿ ತಪಸ್ವಿನಿ

೧೮೯೩ರಲ್ಲಿ ಮಹಾರಾಣಿ ಮಾತಾಜಿ ತಪಸ್ವಿನಿ ಸ್ಥಾಪಿಸಿದ ಶಾಲೆಯೇ ಮಹಾಕಾಲಿ ಪಾಠಶಾಲೆ. ಈ ಶಾಲೆಗಳು ವಿದೇಶಿಯರ ಆರ್ಥಿಕ ನೆರವನ್ನಾಗಲಿ, ವಿದೇಶಿ ಅಧ್ಯಾಪಕರನ್ನಾಗಲೀ ಹೊಂದಿರಲಿಲ್ಲ. ಸ್ತ್ರೀ ಶಿಕ್ಷಣವನ್ನು ನೀಡಲು ಶಾಲೆಗಳು ಒಪ್ಪಿಕೊಂಡರೂ ಸಹ ಮುಂದೆ ಸ್ತ್ರೀ–ಪುರುಷರಿಗೆ ಸಹ ಶಿಕ್ಷಣವನ್ನಾಗಲೀ, ಸ್ತ್ರೀ–ಪುರುಷರಿಬ್ಬರಿಗೂ ಒಂದೇ ಬಗೆಯ ಪಠ್ಯಕ್ರಮ ಎಂಬುದನ್ನಾಗಲಿ ಅವರು ಒಪ್ಪಿಕೊಳ್ಳಲಿಲ್ಲ. ಹೆಣ್ಣುಮಕ್ಕಳಿಗೆ ಶಿಕ್ಷಣವೆಂದರೆ ಅದು ಕಟ್ಟುನಿಟ್ಟಿನ ರಾಷ್ಟ್ರೀಯ ನೆಲೆಯದಾಗಿದ್ದು ಮುಂದೊಂದು ದಿನ ಹೆಣ್ಣುಮಕ್ಕಳು ಹಿಂದೂ ಸಮಾಜದ ಪುನರುತ್ಥಾನಕ್ಕೆ ನೆರವನ್ನೀಯಲು

ಶಕ್ತರಾಗಬೇಕೆಂಬುದು ಉದ್ದೇಶವಾಗಿತ್ತು. ರಾಷ್ಟ್ರೀಯತಾ ಪುನರುತ್ಥಾನವಾದಿಗಳ ಕಲ್ಪನೆಗೆ ಹೊಂದಿಕೆಯಾಗುವಂತೆ ಈ ಶಾಲೆಯ ಯೋಜನೆ ಇದ್ದದ್ದು. ವಸಾಹತು ತಿಳುವಳಿಕೆಯನ್ನು ಪ್ರತಿರೋಧಿಸುವ ಒಂದೇ ಉದ್ದೇಶದಿಂದ ಸುಧಾರಣೆಯನ್ನು ವಿರೋಧಿಸಬೇಕೆಂದು ಹೇಳಿದವರೇನಲ್ಲ.[೧೩]

ಗಂಗಾಬಾಯಿ(ಮಾತಾಜಿ ಮಹಾರಾಣಿ ತಪಸ್ವಿನಿ) ದಕ್ಕನ್ ಭಾಗದ ಓರ್ವ ಬ್ರಾಹ್ಮಣ ಮಹಿಳೆ. ಸಂಸ್ಕೃತ ಭಾಷೆಯಲ್ಲೂ, ಧಾರ್ಮಿಕ ಸಾಹಿತ್ಯದಲ್ಲೂ ಸಾಕಷ್ಟು ತರಬೇತಿಯನ್ನು ಹೊಂದಿದ್ದಳು. ಈಕೆ ತನ್ನ ಮೊದಲ ಶಾಲೆಯನ್ನು ಮೂವತ್ತು ವಿದ್ಯಾರ್ಥಿಗಳೊಂದಿಗೆ ಆರಂಭಿಸಿ ದಳು.[೧೪] ಕಲ್ಕತ್ತಾಗೆ ಬರುವಾಗಲೇ ಸ್ತ್ರೀ ಶಿಕ್ಷಣವನ್ನು ಅಭಿವೃದ್ಧಿಪಡಿಸಬೇಕು; ಆ ಶಿಕ್ಷಣ ಹಿಂದೂ ಧಾರ್ಮಿಕ ಮತ್ತು ನೈತಿಕ ನಿಯಮಾವಳಿಗಳಿಗೆ ಹೊಂದಿಕೊಳ್ಳುವಂಥದಾಗಿರಬೇಕು" ಎಂಬ ಖಚಿತ ಧ್ಯೇಯವೊಂದನ್ನು ಆಕೆ ಇರಿಸಿಕೊಂಡಿದ್ದರು. ಹತ್ತು ವರ್ಷಗಳಲ್ಲಿ ಒಟ್ಟೂ ೪೫೦ ವಿದ್ಯಾರ್ಥಿಯರಿದ್ದ ಇಪ್ಪತ್ಮೂರು ಶಾಖೆಗಳು ಆರಂಭವಾದವು. ಗಂಗಾಬಾಯಿಯವರ ಮಾರ್ಗದರ್ಶನ ಹಾಗೂ ಮೇಲುಸ್ತುವಾರಿಗಳು ನಿರಂತರವಾಗಿಯೇ ಇರುತ್ತಿದ್ದವಾದರೂ, ಬಂಗಾಲದ ಅತಿ ದೊಡ್ಡ ಜಮೀನುದಾರ ದರ್ಭಾಂಗ ಮಹಾರಾಜ ಅವರ ಅಧ್ಯಕ್ಷತೆಯಲ್ಲಿ ಗಣ್ಯವ್ಯಕ್ತಿಗಳಿಂದ ಕೂಡಿದ ಒಂದು ಟ್ರಸ್ಟನ್ನು ಸ್ಥಾಪಿಸಲಾಯಿತು.

ಮೊದಮೊದಲು ಪಠ್ಯಕ್ರಮದಲ್ಲಿ ಔಪಚಾರಿಕ ಓದುಬರಹಗಳ ಬಗೆಗೂ ಅಲ್ಪಸ್ವಲ್ಪ ಅವಕಾಶಗಳನ್ನು ಕಲ್ಪಿಸಲಾಗಿತ್ತಾದರೂ, ಬರುಬರುತ್ತಾ ತುಂಬಾ ಬದಲಾವಣೆಗಳಾದವು. ೧೯೪೮ರಲ್ಲಿ ಮಹಾಕಾಲಿ ಪಾಠಶಾಲೆಯು ಕಲ್ಕತ್ತಾ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬಂತು. ಆ ಹೊತ್ತಿಗೆ ಇದ್ದ ಪಠ್ಯಕ್ರಮದಲ್ಲಿ ಮುಖ್ಯವಾಗಿ ಉಳಿದುಕೊಂಡು ಬಂದಿದ್ದದ್ದು "ಪೂಜೆಗಳು, ಧಾರ್ಮಿಕ ಆಚರಣೆಗಳು ಮಾತ್ರವೇ."[೧೫]

ಮಹಾರಾಷ್ಟ್ರದ ಮಹರ್ಷಿ ಡಾ. ಧೋಂಡೂ ಕೇಶೂಪಂತ ಕರ್ವೆ(೧೮೫೮–೬೨)

ವೃತ್ತಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಆರಂಭಿಸಿದ ಕರ್ವೆಯವರು, ಪ್ರೌಢಶಾಲಾ ಶಿಕ್ಷಕರಾಗಿ, ಕಾಲೇಜು ಉಪನ್ಯಾಸಕರಾಗಿ, ಮಹಿಳಾ ವಿಶ್ವವಿದ್ಯಾಲಯದ ಸ್ಥಾಪಕರಾಗಿ ಸೇವೆ ಸಲ್ಲಿಸುವ ಜೊತೆಯಲ್ಲಿಯೇ ಬಾಲ ವಿಧವೆಯರ ಉದ್ಧಾರಕ್ಕೆ ತಮ್ಮನ್ನು ತೊಡಗಿಸಿ–ಕೊಂಡವರು. ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದ ಕರ್ವೆಯವರು, ವಿಧವೆಯನ್ನು ಮದುವೆಯಾಗುವ ಮೂಲಕ ಶತಶತಮಾನಗಳಿಂದ ಬೇರುಬಿಟ್ಟಿದ್ದ ಮೂಢನಂಬಿಕೆಗಳನ್ನು, ಹಳೆಯ ಕಂದಾಚಾರಗಳನ್ನು ಮುರಿದು ಮುನ್ನುಗ್ಗಿ 'ಮಹರ್ಷಿ' ಎನಿಸಿದರು.

ಕರ್ವೆಯವರ ಮೊದಲ ಹೆಂಡತಿ ಕಾಯಿಲೆಯಿಂದ ತೀರಿಕೊಂಡ ನಂತರ ಕರ್ವೆಗೆ ಎರಡನೆ ಮದುವೆಯಾಗುವಂತೆ ಒತ್ತಾಯ ಬಂದಾಗಲೆಲ್ಲ ತಾನು ಒಬ್ಬ ವಿಧವೆಯನ್ನೇಕೆ ಮದುವೆಯಾಗಬಾರದು ಎಂದು ಆಲೋಚಿಸುತ್ತಿದ್ದರು. ನಂತರ ಕರ್ವೆಯವರು ೧೮೯೩ರಲ್ಲಿ ಗೋದೂಬಾಯಿಯೆಂಬ

ವಿಧವೆಯನ್ನು ಮದುವೆಯಾದರು. ಆ ಗೋದೂಬಾಯಿ ಮುಂದೆ ಆನಂದಿಬಾಯಿಯಾದಳು. ಮದುವೆಯಾದ ಕರ್ವೆ-ಗೋದೂಬಾಯಿ ದಂಪತಿಗಳು ಅನೇಕ ವಿಪತ್ತುಗಳನ್ನು ಎದುರಿಸಿದರು. ಪೂನಾದಿಂದ ತಮ್ಮ ಊರಿಗೆ ಹೋದಾಗ ಜನ ಮತ್ತು ಮನೆಯವರು ಇಬ್ಬರನ್ನೂ ಬಹಿಷ್ಕರಿಸಿದರು. ಕರ್ವೆಯವರು ಇದರಿಂದ ಧೃತಿಗೆಡಲಿಲ್ಲ. ತಮ್ಮ ಆದರ್ಶವನ್ನು ಬಿಡಲಿಲ್ಲ. ಅವರು ಯಾವಾಗಲೂ ಹೇಳುತ್ತಿದ್ದುದು "ಮನುಷ್ಯ ಪರಾವಲಂಬಿ-ಯಾಗಬಾರದು. ಅವನು ಸ್ವತಂತ್ರವಾಗಿ ಜೀವಿಸಬೇಕು. ಹೆಣ್ಣೇ ಆಗಲಿ, ಗಂಡೆ ಆಗಲಿ ಪ್ರಸಂಗ ಬಂದರೆ ತಮ್ಮ ಸ್ವಂತ ಕಾಲಮೇಲೆ ನಿಂತು ಜೀವನ ಸಾಗಿಸಬೇಕು, ಅದಕ್ಕೆ ಅಗತ್ಯವಾದ ತರಬೇತಿ ದೊರತಿರಬೇಕು" ಎನ್ನುತ್ತಿದ್ದರು. ಆನಂದಿಬಾಯಿಗೆ ಕೂಡ ನರ್ಸಿಂಗ್ ತರಬೇತಿ ಕೊಡಿಸಿ ಸಮಾಜ ಸೇವೆಯಲ್ಲಿ ಪಾಲ್ಗೊಳ್ಳಲು ಅನುವು ಮಾಡಿದರು.

ಕರ್ವೆಯವರು ಬಾಲವಿಧವೆಯರಿಗೆ ಶಿಕ್ಷಣ ನೀಡಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮಾಡುವುದೇ ಹೆಚ್ಚು ಉಚಿತವೆಂಬ ಭಾವನೆ ಅವರಲ್ಲಿತ್ತು. ೧೮೯೬ರಲ್ಲಿ ವಿಧವೆಯರಿಗಾಗಿ ಒಂದು ಆಶ್ರಮವನ್ನು ತೆರೆದರು. ಮುಂದೆ ಇದು ಶಾಲೆಯಾಗಿ ಅಭಿವೃದ್ಧಿಗೊಂಡಿತು. ಈ ಶಾಲೆಯ ಪಠ್ಯಕ್ರಮವು ಮುಖ್ಯವಾಗಿ ಬಾಲವಿಧವೆಯರು ಮುಂದೆ ಉದ್ಯೋಗಗಳನ್ನು ಗಳಿಸಿ ಸ್ವಾವಲಂಬಿಗಳಾಗಲು ನೆರವಾಗಬೇಕೆಂಬ ಆಶಯದ್ದಾಗಿತ್ತು. ಮೊದಲೇ ಬಾಲಕಿಯರಿಗೆಂದು ಇದ್ದ ಶಾಲೆಗಳ ಸಂಖ್ಯೆಯೇ ಬಲು ವಿರಳವಾಗಿತ್ತು.

ಅನಾಥ ಬಾಲಿಕಾಶ್ರಮ, ಮಹಿಳಾ ವಿದ್ಯಾಲಯ, ನಿಷ್ಕಾಮ ಕರ್ಮಮಠ ಇತ್ಯಾದಿ ಎಲ್ಲವನ್ನೂ ಕಟ್ಟಿ ಬೆಳೆಸಿದ್ದು ಮಹಿಳೆಯರಿಗಾಗಿ. ಕರ್ವೆಯವರಿಗೆ ಇನ್ನೊಂದು ಆಸೆಯಾಯಿತು. ಅದೇನೆಂದರೆ ಮಹಿಳೆಯರಿಗಾಗಿಯೇ ಒಂದು ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂಬ ಮಹದಾಸೆಯಾಯಿತು. ಜಪಾನಿನ ಮಹಿಳಾ ವಿಶ್ವವಿದ್ಯಾಲಯದ ಬಗ್ಗೆ ಲೇಖನ ಓದಿ ತಿಳಿದಿದ್ದ ಕರ್ವೆಯವರು ಅವರಿಂದ ಪ್ರಭಾವಿತರಾದರು. ಮೆಟ್ರಿಕ್ ನಂತರ, ಕಾಲೇಜು ಶಿಕ್ಷಣ ಮುಗಿಸಿದ ವಿದ್ಯಾರ್ಥಿನಿಯರು ಮುಂದೆಯೂ ಓದುವಂತಹ ಅವಕಾಶವಿರಬೇಕೆಂದು ಬಯಸಿದರು. ಅದನ್ನು ಮಾತೃಭಾಷೆಯಲ್ಲಿಯೇ ನೀಡುವಂತಿರಬೇಕೆಂದು ಆಲೋಚಿಸಿದರು. ಜಪಾನಿನ ಮಹಿಳಾ ವಿಶ್ವವಿದ್ಯಾಲಯದ ಧ್ಯೇಯವೆಂದರೆ ಜಪಾನಿ ಮಹಿಳೆಯರು ಪುರುಷನ ಸರಿಸಮನವಾಗಿ ಬೆಳೆಯಬೇಕೆಂಬುದಾಗಿತ್ತು. ಮದುವೆಯಾಗುತ್ತೇನೆನ್ನುವ ಮಹಿಳೆಗೆ ತನ್ನ ಮನೆ, ಪತಿ, ಮಕ್ಕಳ ಪೋಷಣೆಗೆ ಸರಿಯಾದ ತಿಳಿವಳಿಕೆ ಹೇಳಿಕೊಡುವುದು, ಮದುವೆಯಾಗುವುದಿಲ್ಲವೆಂದು ನಿರ್ಧರಿಸುವ ಮಹಿಳೆಯರಿಗೆ ಇನ್ನೂ ಹೆಚ್ಚಿನ ತರಬೇತಿ ಕೊಟ್ಟು ಅವರನ್ನು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಿಸುವುದು. ಪುರುಷನಿಗೆ ದೊರೆಯುವಷ್ಟೆ ಮಹಿಳೆಯರಿಗೂ ಅವಕಾಶಗಳನ್ನು ಕಲ್ಪಿಸಿ ಕೊಡುವುದಾಗಿತ್ತು. ಈ ಬಗೆಯ ಜಪಾನಿಯರ ವಿಚಾರ ಧಾರೆಯನ್ನು ಕರ್ವೆಯವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಲ್ಲದೆ ನಮ್ಮ ದೇಶದಲ್ಲಿಯೂ ಇದೇ

ಆದರ್ಶವಿಟ್ಟುಕೊಂಡು ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂಬ ದೃಢ ಸಂಕಲ್ಪ ಮಾಡಿದರು. ಕರ್ವೆಯವರ ಆಲೋಚನೆಗೆ ಡಾ. ಅನಿಬೆಸೆಂಟ್‌ರಿಂದ, ರವೀಂದ್ರನಾಥ್ ಟ್ಯಾಗೂರ್‌ರಿಂದ ಮತ್ತು ಗಾಂಧೀಜಿಯವರಿಂದ ಪ್ರೋತ್ಸಾಹ ದೊರೆಯಿತು. ಪರಿಣಾಮವಾಗಿ ಡಾ. ಆರ್.ಜಿ. ಭಂಡಾರ್‌ಕರ್ ಅವರನ್ನು ಕುಲಪತಿಯನ್ನಾಗಿಯೂ, ಪರಾಂಜಪೆಯವರನ್ನು ಉಪ ಕುಲಪತಿಯ ಸ್ಥಾನಕ್ಕೆ ನೇಮಿಸಿ ೧೯೧೬ರಂದು ಹೊಸ ಮಹಿಳಾ ವಿಶ್ವವಿದ್ಯಾಲಯವನ್ನು ಪುಣೆಯಲ್ಲಿ ಸ್ಥಾಪಿಸಲಾಯಿತು.

ವಿಶ್ವವಿದ್ಯಾಲಯವನ್ನು ಕಟ್ಟುವ ಕಾರ್ಯಕ್ಕೆ ಹಣದ ಅಗತ್ಯವಿತ್ತು. ಆದುದರಿಂದ ದೇಶದಾದ್ಯಂತ ಪ್ರವಾಸ ಮಾಡಿ ಹಣವನ್ನು ಒಗ್ಗೂಡಿಸುವ ಕೆಲಸವನ್ನು ಕರ್ವೆಯವರು ಮಾಡಿದರು. ಹೊರ ದೇಶಗಳಿಂದಲೂ ಹಣ ಬರಲಾರಂಭಿಸಿತು. ಸರ್ಕಾರದ ಮಾನ್ಯತೆ ಇಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಕಲಿಯುವವರಿಲ್ಲದೆ ಮಹಿಳಾ ವಿಶ್ವವಿದ್ಯಾಲಯ ಮೊದಲಿಗೆ ತುಂಬಾ ಆರ್ಥಿಕ ತೊಂದರೆ ಅನುಭವಿಸಿತು.

ಭಾರತೀಯ ಮಹಿಳೆಯರ ಸಾಮಾಜಿಕ ಜೀವನ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅದ್ಭುತ ಸುಧಾರಣೆ ತಂದ ಕರ್ವೆಯವರು ಮಹಿಳೆಯರ ಜೀವನಕ್ಕೆ ಹೊಸ ಭವಿಷ್ಯ ಕಲ್ಪಿಸಿದರು.

ಹಣಕಾಸಿನ ತೊಂದರೆಯಿಂದ ಬಡವಾಗುತ್ತಿದ್ದ ಮಹಿಳಾ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಚೈತನ್ಯ ನೀಡಿದವರು ಶ್ರೀ ವಿಠಲದಾಸ ಥ್ಯಾಕರ್ಸಿಯವರು. ಅವರು ಮಹಿಳಾ ವಿಶ್ವವಿದ್ಯಾಲಕ್ಕೆ ತಮ್ಮ ತಾಯಿ ನಾಥಿಭಾಯಿ ದಾಮೋದರ ಥ್ಯಾಕರ್ಸಿ ಹೆಸರಿಡಬೇಕೆಂದು ಹದಿನೈದು ಲಕ್ಷರೂಪಾಯಿ ನೀಡಿದರು. ಅವರಿಂದಾಗಿ ಪುಣೆಯಲ್ಲಿದ್ದ ವಿಶ್ವವಿದ್ಯಾಲಯ ಮುಂಬಯಿಗೆ ಸ್ಥಳಾಂತರವಾಯಿತು. 'ಎಸ್.ಎನ್.ಡಿ. ಥ್ಯಾಕರ್ಸಿ ಇಂಡಿಯನ್ ವುಮೆನ್ಸ್ ಯೂನಿವರ್ಸಿಟಿ' ಯೆಂದು ಹೆಸರಿಡಲಾಯಿತು. ಈ ವಿಶ್ವವಿದ್ಯಾಲಯಕ್ಕೆ ಗಟ್ಟಿಯಾದ ನೆಲೆ ದೊರೆಯಿತು. ಪುಣೆ, ಮುಂಬಯಿ, ಸತಾರ, ಬೆಳಗಾವಿ, ಸಾಂಗಲಿ ಮತ್ತು ಮಹಾರಾಷ್ಟ್ರದಲ್ಲೆಲ್ಲಾ ಹುಡುಗಿಯರ ಕಾಲೇಜುಗಳು ಬಲೆಯಂತೆ ಹರಡಿಕೊಂಡು ಬೆಳೆಯಲಾರಂಭಿಸಿದವು. ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿಯೂ ಕರ್ವೆಯವರು ಮಹಿಳಾ ವಿಶ್ವವಿದ್ಯಾಲಯ ಬೆಳೆಸಲು ಹಣ ಸಂಗ್ರಹಿಸುವ ಸಲುವಾಗಿ ಜಪಾನ್, ಇಂಗ್ಲೆಂಡ್, ಅಮೇರಿಕಾಗಳಲ್ಲಿ ಪ್ರವಾಸ ಕೈಗೊಂಡರು. ಇದರಿಂದಾಗಿ ಲಕ್ಷಗಟ್ಟಲೆ ವಿದೇಶಿ ಹಣ ವಿಶ್ವವಿದ್ಯಾಲಯಕ್ಕೆ ಹರಿದು ಬಂದಿತು.

ಮಹಾರಾಷ್ಟ್ರದ ಹಳ್ಳಿಗಳಲ್ಲಿ ಅನಕ್ಷರತೆ ಹೋಗಲಾಡಿಸಲು 'ಮಹಾರಾಷ್ಟ್ರ ವಿಲೇಜ್ ಪ್ರೈಮರಿ ಎಜುಕೇಷನ್ ಸೊಸೈಟಿ' ಸ್ಥಾಪಿಸಿದರು. ಹಳ್ಳಿಗಳಲ್ಲಿ ಶಾಲೆಗಳನ್ನು ಆರಂಭಿಸಿ ಸೊಸೈಟಿಯಲ್ಲಿ ಹಣ ಸಂಗ್ರಹಿಸಿಟ್ಟು ಶಾಲೆಗಳನ್ನು ನಡೆಸಿದರು. ೧೯೫೦ರವರೆಗೂ ಈ ಸೊಸೈಟಿ ಗ್ರಾಮಾಂತರ ಶಾಲೆಗಳಿಗೆ ಸಹಾಯ ನೀಡುತ್ತಿತ್ತು. ಕರ್ವೆಯವರು ೧೯೪೪ರಲ್ಲಿ 'ಸಮತಾ ಸಂಘ' ಸ್ಥಾಪಿಸಿದರು. ಮೇಲು–

ಕೀಳು, ಬಡವ–ಬಲ್ಲಿದ, ಹೆಣ್ಣು–ಗಂಡು, ಜಾತಿ–ಧರ್ಮಗಳ ಭೇದವನ್ನು ತೋರದೆ ಮಾನವರಲ್ಲಿ ಸಮಾನತೆ ತರುವ ಉದ್ದೇಶದಿಂದ 'ಸಮತಾ ಸಂಘ'ವನ್ನು ಸ್ಥಾಪಿಸಲಾಯಿತು.

೧೯೪೭ರ ವೇಳೆಗೆ "ಮಾನವಿ ಸಮತಾ" ಎಂಬ ಪತ್ರಿಕೆಯನ್ನು ಕರ್ವೆಯವರು ಸ್ಥಾಪಿಸಿ ತಮ್ಮ ೯೦ ವರ್ಷದ ಇಳಿವಯಸ್ಸಿನಲ್ಲಿಯೂ ಸಾಮಾನ್ಯರ ಬದುಕನ್ನು ಹಸನುಗೊಳಿಸುವ ಕೆಲಸ ಮಾಡಿದರು. ಮಹಿಳೆಯರಿಗಾಗಿ ಬದುಕಿ ಬದುಕು ನೀಡಿದರು.

ಇವರ ಸೇವೆಗೆ ೧೯೪೨ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ, ೧೯೫೧ ರಲ್ಲಿ ಪೂನಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ, ೧೯೫೫ ರಲ್ಲಿಭಾರತ ಸರ್ಕಾರದ ಪದ್ಮ ವಿಭೂಷಣ ಪ್ರಶಸ್ತಿ, ೧೯೫೮ ರಲ್ಲಿ ಭಾರತ ಸರ್ಕಾರದ 'ಭಾರತ ರತ್ನ' ಪ್ರಶಸ್ತಿಗಳು ಕರ್ವೆಯವರಿಗೆ ಸಂದಿವೆ. ಒಂದು ನೂರು ನಾಲ್ಕು ವರ್ಷಗಳ ತಮ್ಮ ದೀರ್ಘ ಆಯಸ್ಸಿನಲ್ಲಿ ಸ್ತ್ರೀ ಕಲ್ಯಾಣಕ್ಕಾಗಿಯೇ ಕರ್ವೆಯವರು ಹೆಚ್ಚಾಗಿ ಶ್ರಮಿಸಿದ್ದಾರೆ.[೧೫]

ಹೆಣ್ಣಿನ ಗುಲಾಮಗಿರಿಯು ನಮ್ಮ ಸಾಮಾಜಿಕ ವ್ಯವಸ್ಥೆ ಮತ್ತು ರಚನೆಗಳಲ್ಲಿ ಸೇರಿ ಹೋಗಿವೆ. ಸ್ತ್ರೀ ವಿಮೋಚನೆಗೆ ಸಾಮಾಜಿಕ ಜ್ಞಾನ ಮತ್ತು ಅರ್ಥಪೂರ್ಣ ಶಿಕ್ಷಣ ಅತ್ಯಂತ ಅವಶ್ಯಕ. ಅದಿಲ್ಲದಿದ್ದರೆ ಕೋಟ್ಯಾಂತರ ಭಾರತೀಯ ಮಹಿಳೆಯರು ಗೃಹ ಬಂಧನದಲ್ಲಿ ಗುಲಾಮರಾಗಿ ಜೀವಿಸುತ್ತಾರೆ. ಒಂದು ವ್ಯವಸ್ಥೆಯಲ್ಲಿ ಪುರುಷರಿಗೆ ವಿಶೇಷ ಸವಲತ್ತುಗಳು ಸಿಗುತ್ತಾ ಮಹಿಳೆಯರು ಅವಮಾನಗಳನ್ನು ಅನುಭವಿಸುತ್ತಿದ್ದರೆ ಅದು ಸಾಮಾಜಿಕ ನ್ಯಾಯವಾಗಲಾರದು. ಈ ಹಿನ್ನೆಲೆಯಲ್ಲಿ ಕರ್ವೆಯವರ ಸ್ತ್ರೀ ಪರ ಹೋರಾಟಗಳನ್ನು ನೋಡಿದರೆ ಕರ್ವೆಯವರ ಸಾಧನೆ ಮತ್ತು ಸಿದ್ಧಿಗಳೆರಡೂ ಅತ್ಯಂತ ದೊಡ್ಡಪ್ರಮಾಣದ್ದಾಗಿವೆ.[೧೬]

ಬೇಗಂ ರೊಕೆಯಾ ಶೇಖಾವತ್ ಹುಸೇನ್

ಬಿಹಾರದ ಭಾಗಲ್‌ಪುರ ಜಿಲ್ಲೆಯಲ್ಲಿ ೧೯೦೯ರಲ್ಲಿ ಬೇಗಂ ರೂಕೆಯ ಶೇಖಾವತ್ ಹುಸೇನ್‌ರವರು ಮುಸ್ಲಿಂ ಹೆಣ್ಣುಮಕ್ಕಳಿಗಾಗಿ ಶಾಲೆಯೊಂದನ್ನು ತೆರೆದರು. ತನ್ನ ಪತಿಯನ್ನು ಕಳೆದುಕೊಂಡ ತಾರುಣ್ಯದಲ್ಲಿ ಈ ಶಾಲೆಯನ್ನು ಆಕೆ ಆರಂಭಿಸಿದಾಗ ಪತಿಯ ಸಂಬಂಧಿಕರು ತೀವ್ರವಾಗಿ ವಿರೋಧಿಸಿದರು. ಆಕೆಯ ಮಲಮಗಳಂತೂ ಕೋಪದಿಂದ ಆಕೆಯನ್ನು ಮನೆಯಿಂದ ಹೊರಹಾಕಿದರು. ಆಗ ಬೇಗಂ ರೊಕೆಯಾ ಶಾಲೆಯನ್ನು ಮುಚ್ಚಿ ಕಲ್ಕತ್ತಾಗೆ ಬಂದು ೧೯೧೧ರಲ್ಲಿ ಶೇಖಾವತ್ ಸ್ಮಾರಕ ಬಾಲಕಿಯರ ಶಾಲೆಯನ್ನು ತೆರೆದರು.

ಬೇಗಂ ರೊಕೆಯಾ ಅವರ ಸೋದರನೂ, ಪತಿಯೂ ಶಿಕ್ಷಣದ ಬಗೆಗಿನ ಆಕೆಯ ಆಸಕ್ತಿಯನ್ನು ಪ್ರೋತ್ಸಾಹಿಸುತ್ತಿದ್ದರೆಂಬುದೂ ಆಕೆಯ ಒಂದು ಅದೃಷ್ಟವೆ. ಆದರೆ ಅಕ್ಕ ಕರಿಮುನ್ನೀಸಾ ಇಂಥಾ

ಅದೃಷ್ಟವಂತಳಲ್ಲ. ಕರಿಮುನ್ನೀಸಾ ಇಂಗ್ಲಿಷ್ ಓದುವುದನ್ನು ಕಲಿತಿದ್ದಾಳೆಂಬ ವಿಷಯ ಗೊತ್ತಾಗಿದ್ದೇ ಮನೆಯವರು ಅವಳನ್ನು ಮದುವೆಯಾಗುವವರೆಗೂ ಅಜ್ಜಿಯ ಕಟ್ಟುನಿಟ್ಟಾದ ಕಾವಲಿನಲ್ಲಿರಲು ಹೇಳಿ ಅಲ್ಲಿಗೆ ಕಳುಹಿಸಿಬಿಟ್ಟರು. ಆದರೆ ರೊಕೆಯಳ ಅಣ್ಣ ರೊಕೆಯಾಳಿಗೆ ಯಾವುದಕ್ಕಾದರೂ ಒಳ್ಳೆಯದಾದೀತು ಎಂಬ ಭಾವದಿಂದ ರಾತ್ರೋರಾತ್ರಿಯಲ್ಲಿ ರಹಸ್ಯವಾಗಿ ಇಂಗ್ಲಿಷ್ ಕಲಿಸಿದ್ದರು. ಮುಂದೆ ಆಕೆಯ ಪತಿಯಾದ ಸೈಯದ್ ಶೇಖಾವತ್ ಹುಸೇನ್ ಇಂಗ್ಲಿಷ್ ಪಾಠ ಹೇಳತೊಡಗಿದ. ಲೇಖನಗಳನ್ನು ಬರೆಯಲೂ ಪ್ರೋತ್ಸಾಹಿಸಿದ. ಮದುವೆಯಾಗಿ ಮೂರು ವರ್ಷಗಳಲ್ಲಿ ಲೇಖನಗಳನ್ನು ಬರೆಯಲಾರಂಬಿಸಿದಳು. ಕಾಲಕ್ರಮೇಣ ಆಕೆ ಲೇಖನಗಳು, ಸಣ್ಣ ಕತೆಗಳು, ಕಾದಂಬರಿಗಳನ್ನು ಬರೆದರು.[೧೭]

ಜ್ಯೋತಿಬಾ ಪುಲೆ

ಜ್ಯೋತಿಬಾ ಪುಲೆ ಮಾನವ ಧರ್ಮದ ಪ್ರತಿಪಾದಕರು. ಸ್ತ್ರೀ ವಿಮೋಚನೆಯ ಬಹು ದೊಡ್ಡ ಹೋರಾಟಗಾರರು. ಸ್ತ್ರೀ ಸಮಾಜಕ್ಕೆ ಶಿಕ್ಷಣದ ಮೂಲಕ ಜ್ಞಾನಜ್ಯೋತಿಯ ಬೆಳಕನ್ನು ನೀಡಿದರು.

ಏಳು ವರ್ಷದ ಬಾಲೆಯನ್ನು ಮದುವೆಯಾಗಿದ್ದ ಜ್ಯೋತಿಬಾ ಪುಲೆ ತನ್ನ ಹೆಂಡತಿಗೆ ವಿದ್ಯೆ ಕಲಿಸಲು ಆರಂಭಿಸಿದರು ಮತ್ತು ಸಮಾಜಕ್ಕೆ ಕಾಣಿಕೆಯಾಗುವಂತೆ ಆಕೆಗೆ ತರಬೇತಿ ನೀಡಿದರು. ಆಕೆ ಕಲಿತ ವಿದ್ಯೆ ಹೆಣ್ಣುಮಕ್ಕಳ ವಿದ್ಯಾರ್ಜನೆಗೆ ಸಹಾಯಕವಾಗಬೇಕೆಂದು ಶಿಕ್ಷಕ ತರಬೇತಿ ಮಾಡಿಸಿ ತಾವೇ ಸ್ಥಾಪಿಸಿದ ಹೆಣ್ಣುಮಕ್ಕಳ ಶಾಲೆಗೆ ಶಿಕ್ಷಕಿಯಾಗಿ ಮಾಡಿದ ಪುಲೆ ಅವರ ಸಾಮಾಜಿಕ ಅನನ್ಯತೆಯನ್ನು ಸೂಚಿಸುತ್ತದೆ. ಪುಲೆಯವರು ಭಾರತೀಯ ಸಮಾಜದ ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಸ್ತ್ರೀಯರಿಗೆ ಶಿಕ್ಷಣ ನೀಡುವುದು ಏಕೈಕ ಪರಿಹಾರವೆಂದು ನಂಬಿದ್ದವರು.

ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿದರೆ ಪ್ರಳಯವಾಗುತ್ತದೆ. ಭಗವಂತನ ಶಾಪಕ್ಕೆ ಗುರಿಯಾಗ ಬೇಕಾಗುತ್ತದೆ. ವಿದ್ಯಾವತಿಯರು ಮನೆಯಲ್ಲಿದ್ದರೆ ಮನೆಯಲ್ಲಿ ಶಾಂತಿ ಇರುವುದಿಲ್ಲ. ವಿದ್ಯಾವಂತೆಯರು ಜಗಳಗಂಟಿಯರು. ಹಿರಿಯರನ್ನು ಅವರು ಲೆಕ್ಕಿಸುವುದಿಲ್ಲ. ಎಲ್ಲೆಂದರಲ್ಲೇ ಆಡ್ಡಾಡುತ್ತಾರೆ; ಅಲೆಯುತ್ತಾರೆ. ಹೆಣ್ಣಿಗೆ ವಿದ್ಯೆ ಕಲಿಸಿದರೆ ಧರ್ಮಪತನವಾಗುತ್ತದೆ. ಹಿಂದೂ ಧರ್ಮ ಅಪಾಯಕ್ಕೊಳಗಾಗುತ್ತದೆ. ಭರತಖಂಡ ವಿನಾಶ ಹೊಂದುತ್ತದೆ ಎಂದು ಸನಾತನಿಗಳು, ಸಂಪ್ರದಾಯವಾದಿಗಳು ಬೊಬ್ಬೆ ಹಾಕುತ್ತಿದ್ದಾಗ ಪುಲೆಯವರು ಹೀಗೆ ಬೊಬ್ಬೆ ಹಾಕುವವರನ್ನು ಮೂರ್ಖರು ಎಂದು ಕರೆಯುತ್ತಾರೆ. ಮನುವಾದಿಗಳ ಅಪಪ್ರಚಾರಕ್ಕೆ ಅವರು ಅಂಜುವುದಿಲ್ಲ. ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸದೆ ದೇಶ ಅವನತಿ ಹೊಂದಿತು ಎನ್ನುತ್ತಾರೆ.

ಸ್ತ್ರೀ ಶಿಕ್ಷಣದ ಮೂಲಕ ವೈಚಾರಿಕ ಜಾಗೃತಿಯನ್ನು ಮೂಡಿಸಿದ ಕೀರ್ತಿ ಫುಲೆಯವರಿಗೆ ಸಲ್ಲುತ್ತದೆ. ವಿದ್ಯೆಯಿಂದ ವಂಚಿತರಾಗಿರುವ ಸ್ತ್ರೀಯರಿಗೆ ಶಿಕ್ಷಣ ನೀಡಿದರೆ ಮಾತ್ರ ಭಾರತೀಯರ ಸಾಮಾಜಿಕ ಸಮಸ್ಯೆಗಳು ನಿವಾರಣೆಯಾಗುತ್ತವೆಂದು ಜ್ಯೋತಿಬಾ ಫುಲೆಯವರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಮುಂದಾಗುತ್ತಾರೆ. ಹೆಣ್ಣುಮಕ್ಕಳಿಗೆಂದು ಶಾಲೆಯನ್ನು ಆರಂಭಿಸುತ್ತಾರೆ. ಶೂದ್ರನೊಬ್ಬ ಅದರಲ್ಲೂ ಹೆಣ್ಣುಮಕ್ಕಳಿಗೆಂದು ಶಾಲೆಯನ್ನು ತೆರೆದದ್ದನ್ನು ಸಹಿಸದ ಬ್ರಾಹ್ಮಣರು ಕೋಪಗೊಳ್ಳುತ್ತಾರೆ, ಅಣಕವಾಡುತ್ತಾರೆ, ಜಗತ್ತೇ ಪ್ರಳಯವಾಗುತ್ತದೆಂದು ಬೊಬ್ಬೆಯಿಡುತ್ತಾರೆ. ಸ್ತ್ರೀ ವಿದ್ಯಾಭ್ಯಾಸಕ್ಕೆ ವಿರೋಧ ವ್ಯಕ್ತಪಡಿಸುತ್ತಾರೆ. ಸ್ತ್ರೀಯರಿಗಾಗಿಯೇ ತೆರೆದ ಶಾಲೆಗೆ ಶಿಕ್ಷಕರಾಗಲು ಯಾರೂ ಬರುವುದಿಲ್ಲ. ಕೊನೆಗೆ ಫುಲೆಯವರು ತಮ್ಮ ಹೆಂಡತಿಯನ್ನೇ ಶಿಕ್ಷಕಿಯನ್ನಾಗಿ ನೇಮಿಸುತ್ತಾರೆ. ಫುಲೆಯವರ ಹೆಂಡತಿ ಸಾವಿತ್ರಿಬಾ ಫುಲೆಯವರು ಹೆಣ್ಣುಮಕ್ಕಳಿಗೆ ಕಲಿಸಲು ಮನೆಯಿಂದ ಶಾಲೆಗೆ ಹೊರಟರೆ ಹೋಗುವಾಗ ಬರುವಾಗ ಈ ಪುರೋಹಿತ ಪುರುಷೋತ್ತಮರು ನಿಂದಿಸುತ್ತಾರೆ. ಅವರ ಮೇಲೆ ಕಲ್ಲು, ಧೂಳು, ಸಗಣಿ ಎಸೆಯುತ್ತಾರೆ ಕಿರುಕುಳ ನೀಡುತ್ತಾರೆ. ಇದನ್ನೆಲ್ಲಾ ಸಾವಿತ್ರಿಬಾ ಫುಲೆಯವರು ಧೈರ್ಯದಿಂದ ಎದುರಿಸುತ್ತಾರೆ.

ಸ್ತ್ರೀಯರು ಪಾಕಶಾಲೆಯನ್ನು ಬಿಟ್ಟು ಹೊರಗೆ ಬಂದದ್ದಾದರೆ, ಉಪಾಧ್ಯಾಯ ವೃತ್ತಿಯನ್ನು ಕೈಗೊಳ್ಳುವುದಾದರೆ ವಿದ್ಯೆಗೆ ಸೂತಕ ತಗಲುವದೆಂದು, ಅದರಿಂದ ಪ್ರಾಪ್ತವಾಗುವ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲವೆಂದು ಬ್ರಾಹ್ಮಣರು ಕೂಗಾಡುತ್ತಾರೆ. ಹೆಣ್ಣಿಗೆ ವಿದ್ಯೆ ಕಲಿಸಿದರೆ, ವಿದ್ಯೆ ಕಲಿತರೆ ಧರ್ಮ ಪತನಾಭಿಮುಖಿಯಾಗುವುದೆಂದು, ದೇಶ ಪಾಪಕೂಪವಾಗುತ್ತದೆಂದು, ಸೂರ್ಯ ಚಂದ್ರಾದಿಗ್ರಹಗಳು ಭೂಮಿಗಪ್ಪಳಿಸುತ್ತವೆಂದು, ಜಗತ್ತಿನಲ್ಲಿ ಕ್ಷಾಮಡಾಮರಗಳು ಮಾರಿ ಖಾಯಿಲೆಗಳು ಹರಡುತ್ತವೆಂದವರು ಹೆದರಿಸುತ್ತಾರೆ. ಭೂಸುರರ ವಿರೋಧವನ್ನು ಕಟ್ಟಿಕೊಳ್ಳಬಾರದೆಂದು ಎಚ್ಚರಿಕೆ ನೀಡುತ್ತಾರೆ. ಆ ದಿನಗಳಲ್ಲಿ ಜಾತಿ ರಾಜಕಾರಣ ಮತ್ತು ಪುರುಷ ರಾಜಕಾರಣಗಳು ಸ್ತ್ರೀ ಶೋಷಣೆಗೆ ಎಷ್ಟರ ಮಟ್ಟಿಗೆ ಕಾರಣವಾಗಿದ್ದವು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದಾವುದಕ್ಕೂ ಸೊಪ್ಪು ಹಾಕದ ಜ್ಯೋತಿಬಾ ಫುಲೆ ಪ್ರಗತಿಪರ ಚಿಂತಕರಾದ ಬ್ರಾಹ್ಮಣ ಗೆಳೆಯರನ್ನೇ ಕಟ್ಟಿಕೊಂಡು ಅನೇಕ ಹೆಣ್ಣುಮಕ್ಕಳ ಶಾಲೆಗಳನ್ನು ತೆರೆಯುತ್ತಾರೆ.

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಡ್ಡಿಯನ್ನುಂಟುಮಾಡುವ ಬಾಲ್ಯವಿವಾಹ ಪದ್ಧತಿಯನ್ನು ನಿರ್ಮೂಲನ ಮಾಡಲು ಹೋರಾಡಿದರು. ಇದರಿಂದ ಶಾಲೆ ಪ್ರಗತಿದಾಯಕವಾಗಿ ಮುನ್ನಡೆಯಿತು. ಶಾಲೆಯ ಪ್ರಗತಿಯನ್ನು, ಹೆಣ್ಣುಮಕ್ಕಳ ಪ್ರತಿಭೆಯನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ಫುಲೆಯವರನ್ನು ಗೌರವಿಸಿತು. ಶಾಲೆಗೆ ಬ್ರಾಹ್ಮಣರೂ ಸೇರಿದಂತೆ ಅನೇಕರು ಉದಾರವಾಗಿ ವಂತಿಗೆ ನೀಡಿದರು. ಅಲ್ಲದೆ ಮೇಲಿಂದ ಮೇಲೆ ಹೆಣ್ಣುಮಕ್ಕಳ ಶಾಲೆಗೆ ಭೇಟಿ ನೀಡಿ ಸಂತೋಷ ವ್ಯಕ್ತಪಡಿಸಿದರು. ಶಿಕ್ಷಣವೆಂದರೇನೆಂದು ತಿಳಿಯದಿದ್ದ ಹೆಣ್ಣುಮಕ್ಕಳಿಗೆ ಶಿಕ್ಷಣದ ಮಹಿಮೆ ತಿಳಿಯಿತು.

ಸ್ಕಾಟ್ಲೆಂಡಿನ ಕ್ರಿಶ್ಚಿಯನ್ ಸಂಸ್ಥೆ ನಡೆಸುತ್ತಿದ್ದ ಮಹಿಳಾ ವಸತಿ ಶಾಲೆಗೆ ಶಿಕ್ಷಕರಾಗಿ ನೇಮಕವಾಗುವ ಮೂಲಕ ಫುಲೆ ಸ್ತ್ರೀ ಸುಧಾರಣೆಯಲ್ಲಿ ಮತ್ತೊಂದು ಹಂತವನ್ನೇರುತ್ತಾರೆ. ಹೆಣ್ಣುಮಕ್ಕಳ ಸ್ಥಿತಿಗತಿಗಳನ್ನು ಹತ್ತಿರದಿಂದ ಅರಿಯುವ ಅವಕಾಶ ಫುಲೆಯವರಿಗೆ ದೊರೆಯುತ್ತದೆ.

ದಿನವೆಲ್ಲಾ ಹೊಲದಲ್ಲಿ ದುಡಿಯುವ ರೈತರ ಮಡದಿಯರಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಜ್ಯೋತಿಬಾ ಫುಲೆ ತಮ್ಮ ಮನೆಯಲ್ಲಿಯೇ ವಯಸ್ಕರಿಗಾಗಿ ರಾತ್ರಿ ಶಾಲೆಯನ್ನು ತೆರೆಯುತ್ತಾರೆ. ಮಹಾರಾಷ್ಟ್ರದಲ್ಲಿ ಇದು ಮೊದಲ ರಾತ್ರಿ ಶಾಲೆಯಾಗಿತ್ತು.

ಸ್ತ್ರೀ ಶಿಕ್ಷಣವನ್ನು ಜ್ಯೋತಿ ಬಾ ಅವರು ಆರಂಭಿಸಿದರು. ಅದಕ್ಕೆ ಸ್ಥಿರರೂಪ ಕೊಟ್ಟು ಬೆಳೆಸಿದ ಯಶಸ್ಸು ಅವರ ಹೆಂಡತಿ ಸಾವಿತ್ರಿಬಾ ಫುಲೆಯವರಿಗೆ ಸಲ್ಲಬೇಕು. ೧೮೪೮ ರಿಂದ ೧೮೫೨ರ ಅವಧಿಯಲ್ಲಿ ಫುಲೆ ಮತ್ತು ಸಾವಿತ್ರಿಬಾ ಫುಲೆಯವರು ಜೊತೆಗೂಡಿ ತೆರೆದ ಶಾಲೆಗಳ ಸಂಖ್ಯೆ ೧೮ ಆಗಿತ್ತು. ಸಾವಿತ್ರಿಬಾ ಫುಲೆಯವರು ಈ ಎಲ್ಲಾ ಶಾಲೆಗಳ ಆಡಳಿತ ಜವಾಬ್ದಾರಿಯನ್ನು ಶಿಕ್ಷಕಿಯಾಗಿ, ಮುಖ್ಯೋಪಾಧ್ಯಾಯಿನಿಯಾಗಿ, ಸಂಚಾಲಕಿಯಾಗಿ ಸಮರ್ಪಕವಾಗಿ ನಿರ್ವಹಿಸಿದರು.

ಜ್ಯೋತಿ ಬಾ ಅವರು ಭಾರತದಲ್ಲಿ ಸ್ತ್ರೀ ಶಿಕ್ಷಣದ ಬಗ್ಗೆ ಅಲಕ್ಷ್ಯತಾಳಿರುವುದನ್ನು ಕಂಡು ಅಪಾರವೇದನೆ ಅನುಭವಿಸಿದರು. ಪ್ರತಿಯೊಬ್ಬ ಪುರುಷನು ತನ್ನ ಪತ್ನಿಗೆ ಪಾಠಹೇಳಿ ಶಿಕ್ಷಣ ಪ್ರಚಾರ ಕಾರ್ಯದಲ್ಲಿ ಭಾಗಿಯಾಗಬೇಕೆಂದು ಕರೆಯಿತ್ತರು. ಸ್ತ್ರೀ ಶಿಕ್ಷಣಕ್ಕೆ ಅಪಾರವಾದ ವಿರೋಧವಿದ್ದ ಕಾಲದಲ್ಲಿ ಫುಲೆ ಮಹಾರಾಷ್ಟ್ರದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದರು.

ಮೈಸೂರು ಸಂಸ್ಥಾನದಲ್ಲಿ ಮಹಿಳಾ ಶಿಕ್ಷಣ

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯ ಕಾಲದಲ್ಲಿ ೧೮೮೧ರಲ್ಲಿ ಮಹಾರಾಣಿ ಅವರ ಹೆಸರಿನಲ್ಲಿ ಸ್ಥಾಪಿತವಾಗಿದ್ದ ಬಾಲಿಕಾ ಪಾಠಶಾಲೆಯು ಸರ್ಕಾರದ ಪ್ರೋತ್ಸಾಹ ಹಾಗೂ ಸಹಾಯಗಳಿಂದ ಅಭಿವೃದ್ಧಿಹೊಂದಿ ಮುಂದೆ ಪ್ರೌಢಶಾಲೆಯಾಗಿ ಬೆಳೆಯಿತು. ೧೮೮೯ರ ನವೆಂಬರ್ ತಿಂಗಳಲ್ಲಿ ಮೈಸೂರಿಗೆ ಭೇಟಿಕೊಟ್ಟಿದ್ದ ಪ್ರಿನ್ಸ್ ಆಫ್ ವೇಲ್ಸ್(ಆಲ್ಬರ್ಟ್ ವಿಕ್ಟರ್) ಅವರು ಅದನ್ನು ಮಾದರಿ ಪಾಠಶಾಲೆ ಎಂಬುದಾಗಿ ಶ್ಲಾಘಿಸಿದರು. ಅನಂತರ ಮಹಾರಾಣಿ ಅವರ ಅಪರಿಮಿತ ಆಸಕ್ತಿ, ಉದಾರ ಪ್ರೋತ್ಸಾಹದ ಕಾರಣ ಅದು ೧೯೦೦ರಲ್ಲಿ ದ್ವಿತೀಯ ದರ್ಜೆಯ ಶಿಕ್ಷಣ ಸಂಸ್ಥೆಯಾಗಿ ನಂತರ ೧೯೦೧ರಲ್ಲಿ ಮಹಾರಾಣಿ ಅವರ ಕಾಲೇಜಾಯಿತು. ೧೮೯೭ರ ವೇಳೆಗೆ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾಗಿದ್ದ ಪ್ರಪ್ರಥಮ ಕಲಾ ವಿಭಾಗಗಳು ಮಹಾರಾಣಿ ಬಾಲಿಕಾ ಶಾಲೆಯಲ್ಲಿ ಆರಂಭಗೊಂಡಿದ್ದವು. ೧೯೦೦ರಲ್ಲಿ ಮೊದಲು ನಿಯತವಾಗಿದ್ದ ಕಾಲೇಜು ವಿಭಾಗಗಳನ್ನು ರೂಪಿಸಿ ಕೊಂಡು ೧೯೦೧ರಲ್ಲಿ ಈ ಶಾಲೆ ಮಹಾರಾಣಿ ಕಾಲೇಜಾಗಿ ಮಾರ್ಪಟ್ಟಿತು.

೧೯೦೨ರಲ್ಲಿ ಮುಸಲ್ಮಾನರು, ಕ್ರಿಶ್ಚಿಯನ್ನರು, ಯಹೂದಿಗಳು, ಅಸ್ಪೃಶ್ಯರು, ದಲಿತ ಕ್ರೈಸ್ತರು ಮುಂತಾದ ಸಮುದಾಯಗಳಿಗೆ ಸೇರಿದ ಸ್ತ್ರೀಯರೂ ಸಹ ಯಾವುದೇ ಭೇದ ಭಾವವಿಲ್ಲದೆ ವಿದ್ಯಾಭ್ಯಾಸ ಮಾಡಬಹುದೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಿ ನಾಡಿಗೆ ತಿಳಿಸಲಾಯಿತು. ಇಷ್ಟಲ್ಲದೇ ಪ್ರತಿ ವಿದ್ಯಾರ್ಥಿನಿಯರಿಗೆ ಮಾಸಿಕವಾಗಿ ೩೦(ಮೂವತ್ತು) ರೂಪಾಯಿಗಳವರೆಗೆ ವಿದ್ಯಾರ್ಥಿ ವೇತನ ಕೊಡಲು ಕಾನೂನಿನ ವ್ಯವಸ್ಥೆ ಮಾಡಲಾಯಿತು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಬಾಲಕಿ ಯೊಬ್ಬಳು ಪ್ರಥಮ ಸ್ಥಾನವನ್ನು ಪಡೆದಿದ್ದಳು ಎಂದು ೧೯೦೫ರ ವರದಿಯಲ್ಲಿ ದಾಖಲಾಗಿರುವ ಹೆಮ್ಮೆಯ ಸಂಗತಿಯು ಸ್ತ್ರೀ ಶಿಕ್ಷಣ ರಂಗದಲ್ಲಿ ಕೈಗೊಳ್ಳಲಾಗಿದ್ದ ಕ್ರಮಗಳು ಎಷ್ಟು ಫಲಪ್ರದವಾಗಿದ್ದವು ಎಂಬುದಕ್ಕೆ ಸಮರ್ಥನೆಯಾಗಿದೆ.

ವಯಸ್ಕರಾಗಿದ್ದ ವಿಧವೆಯರ ಶಿಕ್ಷಣಕ್ಕಾಗಿ ಮಹಾರಾಣಿ ಬಾಲಿಕ ಪಾಠಶಾಲೆಯಲ್ಲಿ ವಿಶೇಷ ಬಗೆಯ ಎರಡು ತರಗತಿಗಳನ್ನು ಆರಂಭಿಸಲಾಯಿತು. ಪ್ರತ್ಯೇಕವಾಗಿ ಸ್ತ್ರೀಯರಿಗಾಗಿ ವಸತಿ ಗೃಹಗಳು, ವಸತಿ ಶಾಲೆಗಳನ್ನು ಆರಂಭಿಸಲಾಯಿತು. ತರಬೇತಿ ಸಂಸ್ಥೆಗಳು ಬಾಲಕಿಯರ ಅಗತ್ಯಗಳಿಗೆ ತಕ್ಕಂತೆ ಸಮರ್ಪಕ ಪಠ್ಯ ವಿಷಯಗಳ ಯೋಜನೆ ಹಾಗೂ ನಿರೂಪಣೆಯನ್ನು ಜಾರಿಗೆ ತರಲಾಯಿತು. ಮಾತೃಭಾಷೆಯಲ್ಲಿ ಮಾತ್ರವಲ್ಲದೆ, ಇಂಗ್ಲಿಷ್ ಭಾಷೆಯಲ್ಲೂ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂದಿತು. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲೂ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂದಿತು. ಕನ್ನಡ ಹಾಗೂ ಇಂಗ್ಲಿಷ್ ಭಾಷಾ ವ್ಯಾಸಂಗ ಹಾಗೂ ದೈಹಿಕ ಶಿಕ್ಷಣದ ಸೌಲಭ್ಯಗಳು ದೊರಕಿದವು. ೧೯೧೩ರಲ್ಲಿ ಸ್ತ್ರೀ ಶಿಕ್ಷಣದಲ್ಲಿ ಪುನರ್ ವ್ಯವಸ್ಥೆ ಮಾಡಿ ಅಕ್ಷರಜ್ಞಾನ ಹಾಗೂ ಸಾಹಿತ್ಯಾತ್ಮಕ ಶಿಕ್ಷಣವನ್ನು ಒದಗಿಸುವುದರ ಜೊತೆಗೆ ಕೈಗಾರಿಕಾ ಹಾಗೂ ಗೃಹ ಕಲೆಗಳಲ್ಲಿ ಶಿಕ್ಷಣ ಪಡೆಯುವುದಕ್ಕೆ ಎಲ್ಲಾ ಸೌಲಭ್ಯಗಳನ್ನು ಜಾರಿಗೆ ತರಲಾಯಿತು. ಮನೆಯಲ್ಲೇ ಇರುತ್ತಿದ್ದ ಮಹಿಳೆಯರಿಗಾಗಿ ಗೃಹತರಗತಿಗಳ ಏರ್ಪಾಡುಗಳನ್ನು ಕೈಗೊಳ್ಳಲಾಯಿತು.

ಕರ್ನಾಟಕದ ಚರಿತ್ರೆಯ ಸಂದರ್ಭದಲ್ಲಿ ಮೊಟ್ಟ ಮೊದಲಿಗೆ ಮಹಿಳೆಯರಿಗೆ ಶಿಕ್ಷಣ ಸೌಲಭ್ಯವನ್ನು ಒದಗಿಸಿದ್ದು ೧೯ನೇ ಶತಮಾನದ ಕೊನೆಯಲ್ಲಿ. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮಹಿಳೆಯರಿಗಾಗಿ ನೀಡಿದ ಸಾಮಾಜಿಕ ನ್ಯಾಯದ ಬೆಳಕಿನಲ್ಲಿ ಅನೇಕ ಮಹಿಳೆಯರು, ವಿದ್ಯಾವಂತರಾಗಿ ರಾಜಕೀಯ, ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಗುರುತಿಸಿಕೊಂಡರು.

ಮೈಸೂರಿನಲ್ಲಿ ಮೊಟ್ಟಮೊದಲ ಕನ್ನಡ ಹೆಣ್ಣುಮಕ್ಕಳ ಶಾಲೆ ಸ್ಥಾಪಿತವಾದದ್ದು ಕ್ರಿ.ಶ. ೧೮೪೦ರಲ್ಲಿ. ಇದನ್ನು ಸ್ಥಾಪಿಸಿದವರು ಲಂಡನ್ ಮಿಷನ್‌ರವರು. ಮೈಸೂರು ನಗರದಲ್ಲಿ ಪ್ರಥಮ ಮಹಿಳಾ ಶಾಲೆ ಪ್ರಾರಂಭವಾದದ್ದು ೧೮೮೧ರಲ್ಲಿ ಇಂದಿನ ಜಗನ್ಮೋಹನ ಅರಮನೆಯ ಆವರಣದಲ್ಲಿ.

೧೮೮೧ರವರೆಗೂ ಇದು ಖಾಸಗಿ ಆಡಳಿತದಲ್ಲಿದ್ದು, ೧೮೮೨ರಲ್ಲಿ ನಾರಾಯಣ ಶಾಸ್ತ್ರಿ ರಸ್ತೆಯ ಸ್ವಂತ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿತು. ೧೯೧೬ರಲ್ಲಿ ಹೊಸದಾಗಿ ದೇಶದಲ್ಲಿಯೇ ದೇಶೀಯರಿಂದ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯದ ಒಂದು ಅಂಗವಾಗಿ ಈ ಶಾಲೆಯನ್ನು ಅಂಗೀಕರಿಸ ಲಾಯಿತು. ೧೯೧೯ರಲ್ಲಿ ಇದನ್ನು ಮೈಸೂರು ವಿಶ್ವವಿದ್ಯಾನಿಲಯ ವಹಿಸಿಕೊಂಡಿತು.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಶಿಕ್ಷಣ ನೀಡುವ ಪ್ರಮುಖ ಉದ್ದೇಶದಿಂದ ೧೯೧೩ರಲ್ಲಿ ನಜರಾಬಾದ್ ಅರಮನೆಯ ಬಂಗಲೆಯೊಂದರಲ್ಲಿ ವಾಣಿವಿಲಾಸ್ ಅರಸು ಗರ್ಲ್ಸ್ ಸ್ಕೂಲ್ ಹಾಗೂ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲ್‌ಗಳನ್ನು ತಮ್ಮ ಧನಸಹಾಯದಿಂದ ಸ್ಥಾಪಿಸಿದರು. ೧೮೯೩ರಲ್ಲಿ ಪ್ರಾರಂಭವಾಗಿದ್ದ ಅರಸು ಮಹಿಳಾ ವಸತಿ ಗೃಹವನ್ನು ೧೯೧೫ರಲ್ಲಿ ವಾಣಿವಿಲಾಸ್ ಅರಸು ಗರ್ಲ್ಸ್ ಶಾಲೆಯ ವ್ಯಾಪ್ತಿಗೆ ಸೇರಿಸಲಾಯಿತು. ಮಹಿಳಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಸತಿಗೃಹ ವ್ಯವಸ್ಥೆ ದೊರಕಿದ್ದರಿಂದ ಪಂಚಮರೆಂದು ಕರೆಸಿಕೊಳ್ಳುತ್ತಿದ್ದ ಅಸ್ಪೃಶ್ಯ ಮಹಿಳೆಯರೂ ಸಹ ಇಲ್ಲಿ ಶಿಕ್ಷಣ ಪಡೆಯಲು ಸಾಧ್ಯ ವಾಯಿತು. ೧೯೧೪-೧೫ರಲ್ಲಿ ಈ ಶಾಲೆಯಲ್ಲಿ ಆರು ಜನ ಅಸ್ಪೃಶ್ಯ ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದರೆಂದು ಮೈಸೂರು ಎಜುಕೇಷನ್ ರಿಪೋರ್ಟ್ಸ್(೧೯೧೬) ತಿಳಿಸುತ್ತದೆ.

ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಬಿ.ಆರ್. ಅಂಬೇಡ್ಕರ್, ಜವಹರಲಾಲ್ ನೆಹರೂ ಮತ್ತು ಅವರಂತಹ ಸಾಂಸ್ಕೃತಿಕ ನಾಯಕರ ಆದರ್ಶಗಳಿಂದ ಸಮಾಜದ ಹಾಗೂ ಸಂಸ್ಥಾನದ ಮುನ್ನಡೆಗೆ ಸುಶಿಕ್ಷಿತ ಸ್ತ್ರೀಯ ಪಾತ್ರ ಅಪಾರವಾದುದು ಎಂಬ ಅಂಶವನ್ನು ಮನಗಂಡಿದ್ದರು.

ಸಂಸ್ಥಾನದ ೮೩ ಗ್ರಾಮಗಳಲ್ಲಿ ಪ್ರತ್ಯೇಕ ಮಹಿಳಾ ಶಾಲೆಗಳು ಪ್ರಾರಂಭಗೊಂಡವು. ೧೯೧೫-೧೬ರಲ್ಲಿ ಸಂಸ್ಥಾನದಲ್ಲಿ ಮಹಿಳೆಯರಿಗಾಗಿ ಮೀಸಲಾದ ಶಾಲಾ ಕಾಲೇಜುಗಳ ಸಂಖ್ಯೆ ೫೨೫. ವಿದ್ಯಾರ್ಥಿನಿಯರ ಸಂಖ್ಯೆ ಕ್ರಮಾವಾಗಿ ಕಾಲೇಜುಗಳಲ್ಲಿ ೧೧೬ ಇದ್ದರೆ, ಪ್ರೌಢ ಶಾಲೆಗಳಲ್ಲಿ ೧೧,೦೮೯, ಪ್ರೈಮರಿ ಮತ್ತು ಲೋವರ್ ಸೆಕೆಂಡರಿಯಲ್ಲಿ ೨೮,೪೩೦ ಮತ್ತು ತಾಂತ್ರಿಕ ಮತ್ತು ವೃತ್ತಿಪರ ಶಾಲೆಗಳಲ್ಲಿ ೨೪೦ ಒಟ್ಟು ೪೦,೦೨೨. ಈ ಸಂಖ್ಯೆ ವರ್ಷದಿಂದ ವರ್ಷಕ್ಕೆ ಸಾವಿರ ರೀತಿಯಲ್ಲಿ ಹೆಚ್ಚಾಗತೊಡಗಿತು.

ನಾಲ್ವಡಿ ಅವರ ಆಳ್ವಿಕೆಯ ಕಾಲದಲ್ಲಿ ಸ್ತ್ರೀ ಹಾಗೂ ದಲಿತರ ಪ್ರಗತಿಯು ತ್ವರಿತಗತಿಯಲ್ಲಿ ಮುನ್ನಡೆಯಿತೆನ್ನಬಹುದು.[೧೮]

ಭಾರತೀಯ ಸಮಾಜದ ಅಧ್ಯಯನ ಮಾಡುವಾಗ ಪರಂಪರೆಯಲ್ಲಿ ಮಹಿಳೆ ನಡೆದು ಬಂದ ದಾರಿ ಮತ್ತು ಅವಳ ಶಿಕ್ಷಣದ ಸ್ಥಿತಿಗತಿಗಳು ಪ್ರಸ್ತಾಪವಾಗುತ್ತದೆ. ವೇದಗಳಕಾಲೀನ ಸಂದರ್ಭದಲ್ಲಿ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳಿದ್ದವು. ಧಾರ್ಮಿಕ, ಸಾಹಿತ್ಯಿಕ ಮತ್ತು ತಾತ್ವಿಕ ವಿಷಯಗಳನ್ನು ಕುರಿತು ಪುರುಷರೊಂದಿಗೆ ಅವರು ಮುಕ್ತವಾಗಿ ಚರ್ಚಿಸುವ ಮತ್ತು ಸಾಮಾಜಿಕ ಪ್ರಕ್ರಿಯೆಗಳಲ್ಲಿ ಸಮಾನವಾಗಿ ತೊಡಗಿಸುವ ಅವಕಾಶಗಳು ಮಹಿಳೆಯರಿಗೆ ಇದ್ದವು ಎಂಬ ಮಾತು ಮೇಲಿಂದ ಮೇಲೆ ಪ್ರಸ್ತಾಪಗೊಳ್ಳುತ್ತಿದೆ. ವೇದಗಳ ಕಾಲಗಳಲ್ಲಿ ಮಹಿಳೆಯರಿಗೆ ಶೈಕ್ಷಣಿಕ ಅವಕಾಶಗಳಿದ್ದು, ಅವರು ಮುಕ್ತವಾಗಿ ಚರ್ಚಿಸುವ ಮತ್ತು ಸಾಮಾಜಿಕ ಪ್ರಕ್ರಿಯೆಗಳಲ್ಲಿ ತೊಡಗುವ ಅವಕಾಶಗಳು ಮಹಿಳೆಯರಿಗೆ ಇದ್ದವು ಎಂಬ ಅಂಶ ಇತಿಹಾಸದಿಂದ ತಿಳಿದುಬರುತ್ತದೆ. ಗಾರ್ಗಿ, ಮೈತ್ರೇಯಿ, ಲೋಪಮುದ್ರಾ, ಘೋಷಾ ಅಂಥವರ ಮಧ್ಯಕಾಲೀನ ಇತಿಹಾಸದಲ್ಲಿ ಭಕ್ತಪಂಥದ ಮಹಿಳೆಯರು ಒಂದಿಷ್ಟು ಓದಿಕೊಂಡಂತೆ ತಾತ್ವಿಕ ಚರ್ಚೆ, ಚಿಂತನೆ ನಡೆದಂತೆ ಕಂಡುಬರುತ್ತದೆ. ಮೀರಾ, ಮಹಾದೇವಿಯಕ್ಕ, ಕಾರಿಕಾಲಮ್ಮೆಯವರನ್ನು ಉಲ್ಲೇಖಿಸಬಹುದು. ರಾಜಕುಮಾರಿಯರಿಗೆ ಶಿಕ್ಷಣವನ್ನು ನೀಡಲಾಗುತ್ತಿತ್ತು ಎಂಬ ಪ್ರಸ್ತಾಪವು ಬರುತ್ತದೆಯಾದರೂ ಅವರಿಗೆ ಲಲಿತ ಕಲೆಗಳಾದ ಸಾಹಿತ್ಯ, ಸಂಗೀತ, ನಾಟಕ ಕಲೆಗಳನ್ನು ಮಾತ್ರ ತರಬೇತಿ ನೀಡುತ್ತಿದುದು ಕಂಡುಬರುತ್ತದೆ. ಕೆಲವರು ಶಸ್ತ್ರ ವಿದ್ಯೆಯನ್ನು ಮತ್ತು ಆರ್ಥಿಕ ನಿರ್ವಹಣಾ ಕಲೆಯನ್ನು ಕಲಿಯುತ್ತಿದ್ದ ಪುರಾವೆಗಳು ದೊರೆಯುತ್ತವೆ. ಈ ಅವಕಾಶಗಳಿದುದ್ದು ಸಮಾಜದ ಮೇಲ್ವರ್ಗದ ಮಹಿಳೆಯರಿಗೆ ಮಾತ್ರವೇ ವಿನಃ ಕೆಳವರ್ಗದ ಮತ್ತು ಮಧ್ಯಮವರ್ಗದ ಮಹಿಳೆಯರಿಗೆ ಇರಲಿಲ್ಲ. ಆದುದರಿಂದ ಪ್ರಾಚೀನ ಕಾಲದಲ್ಲಿ ಸ್ತ್ರೀ ಶಿಕ್ಷಣ ಉತ್ತಮವಾಗಿತ್ತು ಎಂದು ಸಾಮಾನ್ಯೀಕರಿಸಲು ಸಾಧ್ಯವಿಲ್ಲ.

ಹೆಣ್ಣಿನ ಗತಕಾಲದ ಬದುಕಿನ ಶೋಧನೆ ಮಾಡಿದಾಗ ಅವಳು ಯಾವಾಗ ಶಿಕ್ಷಣ ಪಡೆಯುವುದರಿಂದ ವಂಚಿತಳಾದಳೂ ಅಂದಿನಿಂದಲೇ ಪುರುಷನ ಅಧೀನಕ್ಕೆ ಒಳಗಾದದ್ದು ಕಂಡುಬರುತ್ತದೆ. ಆದರೆ ವಸಾಹತುಶಾಹಿಯ ಕಾಲಮಾನದಲ್ಲಿ ಶಿಕ್ಷಣದ ಸಾರ್ವತ್ರೀಕರಣದಿಂದಾಗಿ ಮಹಿಳೆಯರ ಮೇಲಿನ ಶೋಷಣೆ ಕೆಲವಾದರೂ ಸಡಿಲವಾದವು ಎಂದು ಹೇಳಬಹುದು. ಉದಾಹರಣೆಗೆ ಬಾಲ್ಯವಿವಾಹ, ಬಹುಪತ್ನಿತ್ವ, ವೇಶ್ಯವಾಟಿಕೆಯಂತಹ ಅಮಾನವೀಯ ಸಮಸ್ಯೆಗಳು ಒಂದಿಷ್ಟಾದರೂ ಕಡಿಮೆಯಾದ ಲಕ್ಷಣಗಳು ಆಗ ಕಂಡುಬಂದವು. ಹೆಣ್ಣು ಕಲಿತು ಮಾಡು ವುದಾದರೂ ಏನು? ಎಂಬ ಭಾವನೆಗಳು ಬದಲಾದವು. ಮಹಿಳೆಯಿಂದಾಗಿಯೇ ಪ್ರತ್ಯೇಕ ಶಾಲಾ-ಕಾಲೇಜುಗಳು ಪ್ರಾರಂಭವಾದವು. ಮೇಲ್ವರ್ಗದ ಮಹಿಳೆಯರು ಮೊದಲು ಶಾಲೆಗಳಿಗೆ ಕಾಲಿಡಲು ಪ್ರಾರಂಭಿಸಿದರು. ಇಲ್ಲಿಯೂ ಮಧ್ಯಮ ಮತ್ತು ಕೆಳವರ್ಗದ ಮಹಿಳೆಯರನ್ನು

ಶಾಲೆಗಳಿಗೆ ಕಳುಹಿಸಲು ಹಿಂಜರಿಯುತ್ತಿದುದು ಕಂಡುಬರುತ್ತದೆ. ಇಡೀ ದೇಶದ ಆಗಿನ ಮಹಿಳಾ ಸಾಕ್ಷರತೆಯ ಪ್ರಮಾಣ ಶೇ.೫ಕ್ಕಿಂತಲೂ ಕಡಿಮೆಯಿತ್ತು. ಆದರೂ ಅಡುಗೆ ಮನೆಯಲ್ಲಿ ಬಂಧಿಯಾಗಿದ್ದ ಮಹಿಳೆ ಹೊರ ಪ್ರಪಂಚಕ್ಕೆ ಕಾಲಿಡಲು ಸಾಧ್ಯವಾಯಿತು.

ಮಹಿಳೆಗೆ ಶಿಕ್ಷಣ ನೀಡದಿದ್ದರೆ ಯಾವುದೇ ಬಗೆಯ ಸಾಮಾಜಿಕ ಪ್ರಗತಿಪರ ಕಾರ್ಯ ಯೋಜನೆಗಳು ಅರ್ಥಪೂರ್ಣವಾಗದಾದವು ಎಂಬುದು ವಾಸ್ತವ ಸಂಗತಿಯಾಗಿದೆ. ಪಶ್ಚಿಮ ಬಂಗಾಳದ ಮಹಾನ್ ಸಮಾಜ ಸುಧಾರಕರಾದ ಈಶ್ವರಚಂದ್ರ ವಿದ್ಯಾಸಾಗರ ಅವರು ೧೮೫೧ರಲ್ಲಿ ಬಾಲಿಕ ವಿದ್ಯಾಲಯವನ್ನು ಆರಂಭಿಸಿದ್ದು ಒಂದು ಸ್ಮರಣಾರ್ಹ ಸಂಗತಿಯಾಗಿದೆ. ಅವರು ಈ ಸಮಯದಲ್ಲಿ ಸುಮಾರು ೩೫ ಶಾಲೆಗಳನ್ನು ಹೆಣ್ಣುಮಕ್ಕಳಿಗಾಗಿ ಪ್ರಾರಂಭಿಸಿದರು. ೧೮೭೪ರಲ್ಲಿ ಪ್ರಥಮ ಭಾರಿಗೆ ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ಮಹಿಳೆಯೊಬ್ಬಳ ಪ್ರವೇಶ ಪಡೆದದ್ದು ಭಾರತೀಯ ಸ್ತ್ರೀಲೋಕದ ಮಹತ್ವದ ಹೆಜ್ಜೆ ಎಂದೇ ತಿಳಿಯಬಹುದು. ೧೮೫೪ರ ಹೊತ್ತಿಗೆ ಸುಮಾರು ೬೨೬ ಬಾಲಿಯರ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ಶಿಕ್ಷಣಲೋಕದಲ್ಲಿ ಅಪಾರವಾಗಿ ಪರಿಶ್ರಮಿಸಿದ ಜ್ಯೋತಿಬಾ ಫುಲೆಯವರು ೧೮೮೪ರಲ್ಲಿ ಕನ್ಯಾ ಶಾಲೆಯನ್ನು ಪ್ರಾರಂಭಿಸಿದ್ದಲ್ಲದೆ, ೧೮೫೧ರಲ್ಲಿ ದಲಿತ ಮಹಿಳೆಯರಿಗಾಗಿ ಮೊದಲ ಬಾರಿಗೆ ಶಾಲೆಯನ್ನು ಆರಂಭಿಸಿದರು. ಮಹಿಳೆ ಎಂಬ ಕಾರಣಕ್ಕಾಗಿ ಅನುಭವಿಸುವ ಸಂಕಷ್ಟಗಳ ಜೊತೆಗೆ ದಲಿತ ಕಾರಣವು ಸೇರಿಕೊಂಡಿರುವುದರಿಂದ ಕೆಳಜಾತಿಯ ಹೆಣ್ಣುಮಕ್ಕಳು ಇನ್ನಷ್ಟು ಕಷ್ಟಗಳನ್ನು ಅನುಭವಿಸಬೇಕಾಯಿತು. ಮೇಲ್ಜಾತಿಯ ಹೆಣ್ಣುಮಕ್ಕಳಿಗೆ ಇರುವ ಕಷ್ಟಗಳಿಗಿಂತ ದಲಿತ ಮಹಿಳೆಯರ ಕಷ್ಟಗಳು ಎರಡರಷ್ಟಿದ್ದವು. ಇಂಗ್ಲಿಶ್ ಶಿಕ್ಷಣ ಜಾರಿಗೆ ಬಂದ ಮೇಲೂ ಅದರ ಲಾಭವನ್ನು ಪ್ರಮುಖವಾಗಿ ಪಡೆದವರು ಜಾತಿವ್ಯವಸ್ಥೆಯ ಮೇಲಿನ ಸ್ತ್ರೀಯರೇ ವಿನಃ ಕೆಳಜಾತಿಯ ಮಹಿಳೆಯರಲ್ಲ. ಈ ಪರಿಸ್ಥಿತಿಯಲ್ಲಿ ಆಗ ಸಾವಿತ್ರಿಬಾಯಿ ಫುಲೆಯವರು ಮೊದಲಬಾರಿಗೆ ಶಿಕ್ಷಕರಾದದ್ದು ದಲಿತ ಮಹಿಳಾವರ್ಗದ ಅಪೂರ್ವಸಾಧನೆಯೇ ಸರಿ. ಭಾರತದಲ್ಲಿ ಸ್ತ್ರೀ ಶಿಕ್ಷಣಕ್ಕೆ ಮತ್ತು ಮಹಿಳೆಯರ ಪರಿವರ್ತನೆಗೆ ಮಹರ್ಷಿ ಕರ್ವೆಯವರ ಕೊಡುಗೆ ಅಪಾರ. ಕರ್ವೆಯವರು ತಮ್ಮ ಕುಟುಂಬ ವರ್ಗದ ಹಾಗೂ ಸಮಾಜದ ಎಲ್ಲ ರೀತಿಯ ಸಂಪ್ರದಾಯ ಗಳನ್ನು ವಿರೋಧಿಸಿ ವಿಧವೆಯೊಬ್ಬಳನ್ನು ಮದುವೆಯಾದದ್ದು ಒಂದು ಇತಿಹಾಸ. ಇದಲ್ಲದೆ ಅವರು ಪುಣೆಯಲ್ಲಿ ೧೯೦೭ರ ಸುಮಾರಿಗೆ ಒಂದು ಮಹಿಳಾ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಿದರು. ಈ ಸಮಯದಲ್ಲಿ 'ದಿ ಇಂಡಿಯನ್ ಲೇಡಿಜ್ ವಿಜನ್' ಎಂಬುದನ್ನು ಸ್ಥಾಪಿಸಿದರು. ಭಾರತದಲ್ಲೇ ಮೊಟ್ಟಮೊದಲ ವಿಶ್ವವಿದ್ಯಾಲಯದ ಖ್ಯಾತಿಗೆ ಭಾಜನವಾದ ಎಸ್.ಎನ್.ಡಿ.ಟಿ.ಮಹಿಳಾ ವಿಶ್ವವಿದ್ಯಾಲಯದ ಸ್ಥಾಪನೆಗೆ ಅಪಾರವಾದ ಕೊಡುಗೆಯನ್ನು ನೀಡಿದರು.

ಬ್ರಿಟಿಶ್ ಅಧಿಕಾರಿಗಳು ವರ್ಣ, ವರ್ಗ, ಜಾತಿ, ಲಿಂಗಗಳನ್ನು ಲೆಕ್ಕಿಸದೇ ಸರ್ವರಿಗೂ ಶಿಕ್ಷಣವನ್ನು ನೀಡಿದದ್ದು ಒಂದು ಅಭಿವೃದ್ಧಿಗೆ ಪೂರಕವಾದ ವಿಷಯವಾಗಿದೆ. ಈ ಸಂದರ್ಭದಲ್ಲೇ ನಮ್ಮ ಸಂಸ್ಥಾನವನ್ನು ಆಳುವ ದೊರೆಗಳು ಕೂಡ ಅಲ್ಲಲ್ಲಿ ಸ್ತ್ರೀ-ಪುರುಷ ಭೇದವಿಲ್ಲದೆ ಶಿಕ್ಷಣ ನೀಡಲು ಮುಂದಾದರು. ಇವರ ಜೊತೆಗೆ ನಮ್ಮ ದೇಶದ ಪುರುಷ ಸುಧಾರಕರು ಮತ್ತು ವಿದ್ಯಾವಂತ ಮಹಿಳೆಯರು ಕೂಡ ಸ್ತ್ರೀಯರ ಶೈಕ್ಷಣಿಕ ಸ್ಥಿತಿಗತಿಯ ಉನ್ನತಿಗೆ ಅಪಾರವಾಗಿ ಶ್ರಮಿಸಿದರು. ಆ ಕಾಲದ ಪ್ರಮುಖ ಸಮಾಜ ಸುಧಾರಣ ಸಂಸ್ಥೆಗಳೆಂದು ಹೆಸರು ಮಾಡಿದ್ದ ಬ್ರಹ್ಮಸಮಾಜ, ಆರ್ಯಸಮಾಜ, ಪ್ರಾರ್ಥನಸಮಾಜ ಹಾಗೂ ಥಿಯೋಸಫಿಕಲ್ ಸೊಸೈಟಿಯವರು ಕೂಡ ಮಹಿಳಾ ಸಮಸ್ಯೆಗಳಿಗೆ ಮತ್ತು ಮಹಿಳಾ ಶಿಕ್ಷಣಕ್ಕೆ ಅಪಾರವಾಗಿ ಶ್ರಮಿಸಿದ್ದಾರೆ.

ಕರ್ನಾಟಕದವರೇ ಆದ ಪಂಡಿತ್ ರಮಾಬಾಯಿ ಮತ್ತು ಭಾಗೀರಥಿ ಪುರಾಣಿಕ, ಡಾ.ಆ್ಯನಿಬೆಸೆಂಟ್, ಸಾವಿತ್ರಿಬಾಯಿ ಫುಲೆ, ವಿಮಲಾರಂದಿವೆ, ಅಹಲ್ಯಾರಂಗಳೇಕರ ಮುಂತಾದ ಸ್ತ್ರೀಯರಲ್ಲದೆ ಮಹಾತ್ಮ ಗಾಂಧೀಜಿ ಮತ್ತು ಬಿ.ಆರ್.ಅಂಬೇಡ್ಕರ್ ಅವರುಗಳು ಸ್ತ್ರೀಯರ ಸಾಮಾಜಿಕ ಶೈಕ್ಷಣಿಕ ಉನ್ನತಿಗೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಕೊನೆ ಟಿಪ್ಪಣಿಗಳು

೧. ಚಂದ್ರಶೇಖರ್, ಟಿ.ಆರ್., "ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು.೧೨೫.

೨. ಶಾಂತಾ ಅಸ್ಪಿಗೆ, *ಮೂರನೆಯ ಜಗತ್ತಿನ ರಾಷ್ಟ್ರಗಳಲ್ಲಿ ಮಹಿಳೆ ಮತ್ತು ಶೈಕ್ಷಣಿಕ ಆಯಾಮಗಳು,* 'ಮಹಿಳಾ ಅಧ್ಯಯನ', ಸಂಪುಟ ೬, ಸಂಯುಕ್ತ ಸಂಚಿಕೆ ೧-೨.

೩. ವೈ.ಬಿ. ಮಾಥುರ್, Women's Education in India, 1813-1966 (ಬಾಂಬೆ, ಏಷಿಯಾ ಪಬ್ಲಿಷಿಂಗ್, ೧೯೭೩), ಪು.೨೫.

೪. ಅದೇ, ಪು.೨೯

೫. ಅದೇ, ಪು.೨೬.

೬ ಪ್ರಮಿಳಾ ಥ್ಯಾಕರ್ಸ್, Education of Women: A Key to Progress, (ನವದೆಹಲಿ, ಶಿಕ್ಷಣ ಮತ್ತು ಯುವಜನ ಸೇವಾ ಸಚಿವಾಲಯ, ೧೯೭೦), ಪು.೬

೭ ಥ್ಯಾಕರ್ಸ್, Education of Women ಪು.೪೦-೪; ಮಾಥುರ್, ಪು.೪೦-೪.

೮. ಜ್ಯೋತ್ಸ್ನಾ ಕಪೂರ್, "Women and the Social Reform Movement in Maharashtra", M.Phil. ಪ್ರಬಂಧ, ದೆಹಲಿ ವಿಶ್ವವಿದ್ಯಾಲಯ, ೧೯೮೯, ಪು.೭೯.

೯. The Letters and Corrspondence of Pandit Ramabai, compiled by Sister

Genaraldine, ಸಂ.ಎ.ಬಿ.ಶಾ. (ಮುಂಬಯಿ, ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿ, ೧೯೭೭), ಪು.೧೪.

೧೦. ಅದೇ, ಪು.೨೫೭–೩೬೨.

೧೧. ಅದೇ, ಪು.೨೪೨–೪೧೬.

೧೨. ಅದೇ, ಪು.೨೫೭.

೧೩. ತನಿಕಾ ಸರ್ಕಾರ್ "Rhetoric Against the age of Consent", Economic and Political Weekly, 28, No.36 (Sep.4, 1993), ಪು.೧೮೬೯–೭೮.

೧೪. ಎಂ.ಎಂ.ಕೌರ್, ನವಹೆಗಲಿ, ಸ್ಟರ್ಲಿಂಗ್, ೧೯೬೮, ಪು.೮೫.

೧೫. ಲತಿಕಾ ಘೋಶ್, "Social and Educational Movement for Women and by Women, 1920-1950", Bethune School and College Centenary Volume, p.7.

೧೬. "ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ", ಡಾ. ಹಾಲತಿ ಸೋಮಶೇಖರ್, ವಿಸ್ಮಯ ಪ್ರಕಾಶನ, ಮೈಸೂರು, ೨೦೦೭, ಪು.೨೪೧–೨೫೦.

೧೭. "ಆಧುನಿಕ ಭಾರತದಲ್ಲಿ ಮಹಿಳೆ", ಮೂಲ ಜೆರಾಲ್ಡಿನ್ ಫೋಬ್ಸ್, ಕನ್ನಡಕ್ಕೆ ಎಚ್.ಎಸ್.ಶ್ರೀಮತಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು. ಮೊದಲನೆ ಮುದ್ರಣ ೨೦೦೧, ಪುಟ: ೭೧–೭೨.

೧೮. "ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು", ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩, ಪು.೨೪೯–೨೫೫.

ಅಧ್ಯಾಯ ಮೂರು

ಮಹಿಳಾ ಶಿಕ್ಷಣ: ಸರ್ಕಾರಿ ಯೋಜನೆಗಳು

ಅಧ್ಯಾಯ ಮೂರು

ಮಹಿಳಾ ಶಿಕ್ಷಣ: ಸರ್ಕಾರಿ ಯೋಜನೆಗಳು

ದೇಶದಲ್ಲಿ ಪ್ರಜಾತಂತ್ರವು ಯಶಸ್ವಿಯಾಗಬೇಕಾದರೆ ಪ್ರಮುಖವಾಗಿ ಮೂರು ಸಂಗತಿಗಳು ಅತ್ಯಗತ್ಯವಾಗಿರಬೇಕು:

೧. ಶಿಸ್ತಿನ ನಾಗರಿಕರು

೨. ಸಾರ್ವಜನಿಕ ಕಾರ್ಯಗಳಲ್ಲಿ ಬುದ್ಧಿವಂತಿಕೆಯಿಂದ ಭಾಗವಹಿಸುವ ಅವರ ಯೋಗ್ಯತೆ, ಹಾಗೂ

೩. ಅವರ ಸಹಕಾರ.

ಈ ಅಂಶಗಳಲ್ಲಿ ತರಬೇತುಗೊಳಿಸುವ ಕಾರ್ಯವನ್ನು ಶಿಕ್ಷಣವು ಯಶಸ್ವಿಯಾಗಿ ಮಾಡುತ್ತದೆ. ಹಾಗೆಯೇ ಶೈಕ್ಷಣಿಕ ಪ್ರಗತಿಯಾಗದೇ ಆರ್ಥಿಕ ಪ್ರಗತಿಯಾಗುವುದು ಸಾಧ್ಯವಾಗದ ಮಾತು. ಶಿಕ್ಷಣಾಭಿವೃದ್ಧಿಯಿಲ್ಲದೆ ಆರ್ಥಿಕ ಪ್ರಗತಿಯನ್ನು ಸಾಧಿಸಿದ ದೇಶಗಳ ಉದಾಹರಣೆ ಇತಿಹಾಸದಲಿಲ್ಲ. ಒಂದು ಪ್ರಗತಿಶೀಲ ರಾಷ್ಟ್ರಕ್ಕೆ ಆರ್ಥಿಕ, ಔದ್ಯೋಗಿಕ ಮತ್ತು ಕೃಷಿ ಅಭಿವೃದ್ಧಿ ಯೋಜನೆಗಳು ಎಷ್ಟು ಅಗತ್ಯವೋ ಶೈಕ್ಷಣಿಕ ಯೋಜನೆಯೂ ಅಷ್ಟೇ ಅಗತ್ಯ. ಶೈಕ್ಷಣಿಕ ಅಂಶಗಳನ್ನು ಗಮನಿಸದೇ ಇರುವ ಯಾವ ದೇಶದ ಯೋಜನಾ ಸಂಕಲ್ಪವೂ ಪರಿಪೂರ್ಣವೆನಿಸಿಕೊಳ್ಳಲಾರದು. ಇವೆಲ್ಲ ಮಹತ್ವವನ್ನು ಅರಿತು ದೇಶವು ಸ್ವತಂತ್ರವಾದ ನಂತರ ರಾಷ್ಟ್ರೀಯ ಗುರಿಗಳನ್ನು ಸಾಧಿಸಲು ಯೋಜನಾ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ದೇಶದ ಸರ್ವಾಂಗೀಣ ಅಭಿವೃದ್ಧಿಯೇ ಯೋಜನೆಗಳ ಮೂಲ ಉದ್ದೇಶ. ಈ ಅಭಿವೃದ್ಧಿಯಲ್ಲಿ ಶಿಕ್ಷಣವು ಒಂದು. ಅದಕ್ಕಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಾಭಿವೃದ್ಧಿಯ ಕಾರ್ಯಕ್ರಮಗಳನ್ನು ಕಾಣುತ್ತೇವೆ.

ಭಾರತದಲ್ಲಿ ಯೋಜನೆಗಳ ಹುಟ್ಟು ಮತ್ತು ಐತಿಹಾಸಿಕ ಹಿನ್ನೆಲೆ

ಪ್ರಪಂಚದಲ್ಲಿ ಮೊಟ್ಟಮೊದಲ ಯೋಜನೆಗಳು ೧೯೧೭ರಲ್ಲಿ ರೂಪುಗೊಂಡವು. ಜಗತ್ತಿನಲ್ಲೇ ಪ್ರಥಮವಾಗಿ ಯೋಜನೆಗಳನ್ನು ಆರಂಭಿಸಿ ಆರ್ಥಿಕ ಪ್ರಗತಿಯನ್ನು ಪಡೆದ ಕೀರ್ತಿ ಸೋವಿಯತ್

ರಷ್ಯಾ ದೇಶಕ್ಕೆ ಸಲ್ಲುತ್ತದೆ. ಸೋವಿಯತ್ ರಷ್ಯಾ ದೇಶವು ಯೋಜನೆಗಳ ತವರೂರು. ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮುನ್ನ ರಷ್ಯಾ ದೇಶವು ವ್ಯವಸಾಯ ಪ್ರಧಾನವಾಗಿದ್ದು, ಬಹಳ ಹಿಂದುಳಿದ ದೇಶವಾಗಿತ್ತು. ಹಸಿವು ದಾರಿದ್ರ್ಯಗಳನ್ನು ಹೋಗಲಾಡಿಸುವ ಉದ್ದೇಶದಿಂದ ರಷ್ಯಾ ದೇಶವು ಅನೇಕ ಯೋಜನೆಗಳನ್ನು ಕಾರ್ಯಗತಮಾಡಿ ಪ್ರಗತಿಯನ್ನು ಹೊಂದಿತು. ರಷ್ಯಾ ದೇಶವು ಯೋಜನೆಗಳ ಮುಖಾಂತರ ತ್ವರಿತವಾಗಿ ಪ್ರಗತಿ ಹೊಂದಿದ್ದರಿಂದ ಇತರ ದೇಶಗಳು ಆ ಕಡೆಗೆ ಗಮನ ನೀಡಿದವು. ಇಂದು ಪ್ರತಿಯೊಂದು ದೇಶದಲ್ಲಿಯೂ ಒಂದಿಲ್ಲೊಂದು ರೀತಿಯಲ್ಲಿ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಉದಾಹರಣೆಗಾಗಿ, ಚೀನಾ ದೇಶವು ಪಂಚವಾರ್ಷಿಕ ಯೋಜನೆಗಳ ಮೂಲಕ ಪ್ರಗತಿಯನ್ನು ಸಾಧಿಸಿತು. ಇದರಂತೆಯೇ ಬ್ರಿಟನ್, ಅಮೇರಿಕಾ, ಸ್ವೀಡನ್, ಆಸ್ಟ್ರೇಲಿಯಾ, ಭಾರತ ದೇಶಗಳು ಯೋಜನೆಯನ್ನು ಅನುಷ್ಠಾನಕ್ಕೆ ತಂದವು.

ಭಾರತಕ್ಕೆ ಯೋಜನೆಗಳು ಹೊಸದೇನಲ್ಲ. ಸ್ವಾತಂತ್ರ್ಯಪೂರ್ವದಲ್ಲೇ ಯೋಜನೆಗಳ ಕುರಿತು ಜನರಲ್ಲಿ ಅನೇಕ ರೀತಿಯ ಕಲ್ಪನೆಗಳು ಮೂಡಿದ್ದವು. ಭಾರತದ ದಾರಿದ್ರ್ಯವನ್ನು ಹೋಗಲಾಡಿಸಿ ಜನರ ಜೀವನಮಟ್ಟ ಹೆಚ್ಚಿಸಲು ಯೋಜನೆಗಳ ಅವಶ್ಯಕತೆಯಿದೆ ಎಂಬುದನ್ನು ನಮ್ಮ ದೇಶದ ಮುಖಂಡರು ಸ್ವಾತಂತ್ರ್ಯಪೂರ್ವದಲ್ಲಿಯೇ ಮನಗಂಡಿದ್ದರು. ಆದರೆ ಭಾರತವು ವಿದೇಶೀಯರ ಆಡಳಿತದಲ್ಲಿದ್ದುದರಿಂದ ಆಗ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಕಷ್ಟವಾಗಿತ್ತು. ಸ್ವಾತಂತ್ರ್ಯ ಸಿಕ್ಕ ನಂತರ ಭಾರತ ಸರಕಾರ ಯೋಜನಾ ಆಯೋಗವನ್ನು ರಚಿಸಿತು.

ಸರ್. ಎಂ. ವಿಶ್ವೇಶ್ವರಯ್ಯನವರು ಭಾರತದ ಯೋಜನೆಗಳ ಪಿತಾಮಹ. ಇವರು ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯನ್ನು ಸಾಧಿಸುವ ಅವಶ್ಯಕತೆಯನ್ನು ಮೊದಲಬಾರಿಗೆ ಸರ್ಕಾರದ ಹಾಗೂ ಜನರ ಮುಂದೆ ಮಂಡಿಸಿದರು.

೧೯೩೧ರಲ್ಲಿ ವಿಶ್ವೇಶ್ವರಯ್ಯನವರು ಯೋಜನೆಗಳ ಪ್ರಾಮುಖ್ಯತೆಯ ಕಡೆಗೆ ರಾಷ್ಟ್ರದ ಗಮನವನ್ನು ಸೆಳೆದರು. ಅದೇ ವರ್ಷ ಭಾರತ ರಾಷ್ಟ್ರೀಯ ಕಾಂಗ್ರೆಸ್ ಯೋಜನೆಗಳ ಕಡೆಗೆ ತನ್ನ ಗಮನವನ್ನು ಹರಿಸಿತು. ವಿಶ್ವೇಶ್ವರಯ್ಯನವರು ೧೯೩೪ "ಭಾರತಕ್ಕೆ ಯೋಜನಾ ಬದ್ಧ ವ್ಯವಸ್ಥೆ" (Planned Economy for India) ಎಂಬ ಒಂದು ಪುಸ್ತಕ ಪ್ರಕಟಿಸಿ ಭಾರತದ ಆರ್ಥಿಕ ವ್ಯವಸ್ಥೆಗೆ ೧೦ ವರ್ಷಗಳ ಯೋಜನೆ ಬೇಕೆಂದು ಅಭಿಪ್ರಾಯಪಟ್ಟರು. ಆದ್ದರಿಂದ ಸರ್. ಎಂ. ವಿಶ್ವೇಶ್ವರಯನವರು ಯೋಜನೆಯ ಪಿತಾಮಹ ಎಂದು ಕರೆಯಬಹುದು. ಅನಂತರ ೧೯೩೮ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಸುಭಾಶ್‌ಚಂದ್ರ ಬೋಸರು ರಾಷ್ಟ್ರೀಯ ಅಭಿವೃದ್ಧಿ ಸಮಿತಿಯನ್ನು ನೇಮಿಸಿದರು. ಈ ಸಮಿತಿಯು ಪಂಡಿತ ನೆಹರೂರವರ ಅಧ್ಯಕ್ಷತೆಯಲ್ಲಿ ಕೆಲಸ ಮಾಡಿ ೧೬ ವರದಿಗಳನ್ನು ಸಲ್ಲಿಸಿತು. ಇಷ್ಟೊತ್ತಿಗೆ ದ್ವಿತೀಯ ಮಹಾಯುದ್ಧವು ಪ್ರಾರಂಭವಾಗಿದ್ದರಿಂದ ಈ ಸಮಿತಿಯ ಶಿಫಾರಸ್ಸನ್ನು

ಜಾರಿಗೆ ತರಲಾಗಲಿಲ್ಲ. ದ್ವಿತೀಯ ಮಹಾಯುದ್ಧವು ೧೯೪೫ರಲ್ಲಿ ಕೊನೆಗೊಂಡ ನಂತರ ಮುಂಬೈ ಯೋಜನೆ, ಗಾಂಧಿ ಯೋಜನೆ, ಜನತಾ ಯೋಜನೆ, ರಾಷ್ಟ್ರೀಯ ಆಯೋಜನ ಸಮಿತಿಯ ಯೋಜನೆ, ಬಿರ್ಲಾ ಯೋಜನೆ ಮುಂತಾದ ಯೋಜನೆಗಳು ಪ್ರಕಟಗೊಂಡವು. ಅನಂತರ ಈ ಎಲ್ಲಾ ಯೋಜನೆ ಗಳನ್ನು ಪರಿಶೀಲಿಸಿ ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಸರಕಾರವು ೧೯೫೦ ರಲ್ಲಿ ರೂಪಿಸಿತು.

ಭಾರತದಲ್ಲಿ ಯೋಜನಾ ಆಯೋಗದ ಸ್ವರೂಪ

ಯೋಜನಾ ಆಯೋಗವು ಕೇಂದ್ರ ಸಚಿವ ಸಂಪುಟಕ್ಕೆ ಸಲಹಾ ಮಂಡಳಿಯಂತೆ ಕೆಲಸ ಮಾಡುತ್ತದೆ. ಇಲ್ಲಿ ದೇಶದ ಪ್ರಧಾನ ಮಂತ್ರಿಯು ಇದರ ಎಕ್ಸ್-ಆಫೀಸಿಯೋ ಚೇರ್ಮನ್ ರಾಗಿರುತ್ತಾರೆ. ಮತ್ತು ಒಬ್ಬರು ಆಯೋಗದ ಅಧ್ಯಕ್ಷರಾಗಿ, ಇನ್ನೊಬ್ಬರು ಆಯೋಗದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. ಹಣಕಾಸು ಸಚಿವರು ಇದರ ಎಕ್ಸ್-ಆಫೀಸಿಯೋ ಸದಸ್ಯರುಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಉಳಿದ ಸದಸ್ಯತ್ವವನ್ನು ಪ್ರಖ್ಯಾತ ಅರ್ಥಶಾಸ್ತ್ರಜ್ಞರಿಗೆ, ಶಿಕ್ಷಣ ತಜ್ಞರಿಗೆ, ಕೃಷಿ ಉದ್ದಿಮೆ ಪಂಡಿತರಿಗೆ ನೀಡಲಾಗಿರುತ್ತದೆ. ಈ ಆಯೋಗದ ಪ್ರಮುಖ ಕರ್ತವ್ಯವೆಂದರೆ, ಯೋಜನೆಯನ್ನು ರೂಪಿಸುವುದು, ಅನುಷ್ಠಾನಕ್ಕೆ ತರುವುದು ಮತ್ತು ನಿರಂತರ ಮೇಲ್ವಿಚಾರಣೆ ಮಾಡುವುದಾಗಿದೆ. ನಮ್ಮ ಯೋಜನಾ ಆಯೋಗವು ಹನ್ನೊಂದು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದು ನಿರಂತರ ಮೇಲ್ವಿಚಾರಣೆಗೈಯುತ್ತ ಬಂದು ಪ್ರಸ್ತುತದಲ್ಲಿ ಹನ್ನೆರಡನೇ ಯೋಜನೆಯನ್ನು ಕೂಡ ರೂಪಿಸಿ ಅನುಷ್ಠಾನಕ್ಕೆ ತಂದು ಪ್ರಗತಿಗೆ ಪ್ರಯತ್ನ ಮಾಡುತ್ತಿದೆ.

ಶೈಕ್ಷಣಿಕ ಯೋಜನೆಯನ್ನು ಯಾವ ದೇಶವೂ ಪ್ರತ್ಯೇಕವಾಗಿ ತಯಾರಿಸುತ್ತಿಲ್ಲ. ಇದು ಆಯಾ ದೇಶಗಳ ಸಾಮಾನ್ಯ ಯೋಜನೆಯಲ್ಲಿ ಸೇರಿಕೊಂಡಿದೆ. ಪ್ರಪಂಚದ ಬಹುತೇಕ ರಾಷ್ಟ್ರಗಳು, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಶಿಕ್ಷಣವು ಪ್ರಮುಖ ಅಸ್ತ್ರವೆಂದು ಗ್ರಹಿಸಿವೆ. ಇದರಿಂದಾಗಿ ಯೋಜನೆಗಳಲ್ಲಿ ಶಿಕ್ಷಣವನ್ನು ಸೇರಿಸಿಕೊಳ್ಳುವ ಪ್ರವೃತ್ತಿ ಮೂಡಿ ಬಂದಿತು. ಶಿಕ್ಷಣದ ಮೇಲೆ ಹೂಡುವ ಹಣ ಕೇವಲ ವ್ಯಯವಲ್ಲ. ಇತ್ತೀಚೆಗೆ ಅದು ಬಂಡವಾಳ ಎಂಬ ತತ್ವದಲ್ಲಿ ನಿರೂಪಿತವಾಗಿದೆ. ಶಿಕ್ಷಣದಿಂದಲೇ ಮಾನವ ಸಂಪನ್ಮೂಲ ಅಭಿವೃದ್ಧಿ, ಮಾನವ ಶಕ್ತಿಯಿಂದಲೇ ವಿವಿಧ ಕ್ಷೇತ್ರಗಳು ಪ್ರಗತಿ ಹೊಂದುತ್ತವೆ. ಆದ್ದರಿಂದ ಶಿಕ್ಷಣವನ್ನು ಕಡೆಗಣಿಸಕೂಡದು. ಆರ್ಥಿಕ ಅಭಿವೃದ್ಧಿಯಾಗ ಬೇಕಾದರೆ ಶಿಕ್ಷಣದ ಅಭಿವೃದ್ಧಿಯಾಗಬೇಕು. ಎಲ್ಲಿ ಶಿಕ್ಷಣದ ಪ್ರಗತಿಯಾಗಿದೆಯೋ ಅಲ್ಲಿ ಆರ್ಥಿಕ ಮುನ್ನಡೆಯಾಗಿರುವುದನ್ನು ಕಾಣುತ್ತೇವೆ. ಇದರಿಂದಾಗಿ ಸರಕಾರ ಹಮ್ಮಿಕೊಳ್ಳುವ ಆರ್ಥಿಕ, ಸಾಮಾಜಿಕ, ಔದ್ಯೋಗಿಕ ಯೋಜನೆಗಳಲ್ಲಿ ಶಿಕ್ಷಣವನ್ನು ಪರಿಗಣಿಸಿ ಅದಕ್ಕೆ ಗುರಿಗಳನ್ನು ನಿರ್ಧರಿಸಿ ಕೆಲವು ಕಾರ್ಯಕ್ರಮಗಳು ಖಚಿತಪಡಿಸುವುದು ಬೆಳೆದು ಬಂದಿತು.

ಶೈಕ್ಷಣಿಕ ಯೋಜನೆಯ ಅರ್ಥ ಮತ್ತು ಸ್ವರೂಪವನ್ನು ೧೯೫೮ ರಲ್ಲಿ ಲ್ಯಾಟಿನ್ ಅಮೇರಿಕೆಯಲ್ಲಿ ನಡೆದ ಸಮ್ಮೇಳನವು ಈ ರೀತಿ ನಿರ್ಧರಿಸಿರುತ್ತದೆ. "ಶೈಕ್ಷಣಿಕವಾದ ಸಮಗ್ರ ಯೋಜನೆ, ಇದೊಂದು ಪ್ರಕ್ರಿಯೆ ಅದು ನಿರಂತರವಾದುದು, ವ್ಯವಸ್ಥಿತವಾದುದು. ಸಾಮಾಜಿಕ ಸಂಶೋಧನೆಗಳೆಲ್ಲದರ ಅನ್ವಯವಷ್ಟೆ ಅಲ್ಲದೆ ಶಿಕ್ಷಣತತ್ವ, ತಂತ್ರಗಳೆಲ್ಲವೂ ಅಲ್ಲಿ ಅನ್ವಯಿಸುತ್ತವೆ. ಆಡಳಿತ ಮತ್ತು ಆರ್ಥಿಕ ನೀತಿಯೂ ಎಲ್ಲಾ ಕ್ರಮಬದ್ಧತೆಯನ್ನು ಒಳಗೊಂಡಿರುವ ಇದು ದೇಶದ ಸಮಗ್ರ ಯೋಜನೆಗೆ ಸಹಕಾರಿ."

ಒಟ್ಟಾರೆ ಶೈಕ್ಷಣಿಕ ಯೋಜನೆಯು ಕೂಡಾ ಒಂದು ಪ್ರಕ್ರಿಯೆ, ಅದು ಸಾಮಾನ್ಯ ಯೋಜನೆಯೊಂದಿಗೆ ಸೇರಿಸುವಂತಹದು. ದೇಶದ ವಿವಿಧ ಕ್ಷೇತ್ರಗಳ ಮಾನವ ಸಂಪನ್ಮೂಲದ ಅವಶ್ಯಕತೆಯನ್ನು ಪೂರ್ವಭಾವಿಯಾಗಿ ಅಂದಾಜು ಮಾಡಿಟ್ಟುಕೊಂಡಿರುವ ಶೈಕ್ಷಣಿಕ ಗುರಿಗಳನ್ನು ಸಾಧಿಸಲು ರೂಪಿಸಬಹುದಾದ ಹಲವಾರು ಯೋಜನಾ ಕಾರ್ಯಗಳ ಮುನ್ನೋಟದ ಒಂದು ನೀಲನಕ್ಷೆಯೇ ಶೈಕ್ಷಣಿಕ ಯೋಜನೆ.

ಈ ಹಿಂದೆ ಹೇಳಿದಂತೆ ಶಿಕ್ಷಣದಿಂದಲೇ ಆರ್ಥಿಕಾಭಿವೃದ್ಧಿ ಹಾಗೂ ಸಾಮಾಜಿಕ ಅಭಿವೃದ್ಧಿ ಹಾಗೂ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿ. ಆದ್ದರಿಂದ ಶಿಕ್ಷಣವು ಮೂಲಭೂತ ಬೇಡಿಕೆಗಳಲ್ಲಿ ಒಂದಾಗಿದೆ. ಹೀಗಿರುವಾಗ ನಮ್ಮ ದೇಶಕ್ಕೊಂದು ಶೈಕ್ಷಣಿಕ ಯೋಜನೆ ಬೇಕೇ ಬೇಕು. ಮಾನವಶಕ್ತಿಯ ಸೂಕ್ತ ತರಬೇತಿಗಾಗಿ, ಶೈಕ್ಷಣಿಕ ಸೌಲಭ್ಯಗಳ ಸಮಾನ ಹಂಚಿಕೆಗಾಗಿ, ಶಿಕ್ಷಣ ಹಾಗೂ ಆರ್ಥಿಕ ಅಭಿವೃದ್ಧಿ ಇವು ಪರಸ್ಪರ ಸಹಸಂಬಂಧ ಹೊಂದಿರುವುದರಿಂದ ನವಮನ್ವಂತರದ ಸೃಷ್ಟಿಗಾಗಿ, ಶಿಕ್ಷಣವನ್ನು ಉತ್ಪಾದನಾ ಮಾಧ್ಯಮವನ್ನಾಗಿಸಲು ಹೇಗೆ ಹಲವಾರು ಕಾರಣಗಳಿಂದಾಗಿ ಶೈಕ್ಷಣಿಕ ಯೋಜನೆಯನ್ನು ಯೋಜಿಸಲಾಗುತ್ತದೆ.

ಸಂವಿಧಾನದಲ್ಲಿ ಶಿಕ್ಷಣವು ಸಮವರ್ತಿಪಟ್ಟಿಗೆ ಸೇರಿರುವುದರಿಂದ ಶೈಕ್ಷಣಿಕ ಯೋಜನೆ ನಿರೂಪಣ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯಗಳೆರಡಕ್ಕೂ ಸಂಬಂಧಪಟ್ಟದ್ದು. ಯೋಜನಾ ಆಯೋಗ ಮತ್ತು ಶಿಕ್ಷಣ ಇಲಾಖೆಗಳು ಶಿಕ್ಷಣದ ಅಭಿವೃದ್ಧಿಗಾಗಿ ರಾಷ್ಟ್ರೀಯ ಯೋಜನೆಯನ್ನು ತಯಾರಿಸುತ್ತಿವೆ. ರಾಜ್ಯಗಳ ಶಿಕ್ಷಣ ಸಚಿವಾಲಯಗಳು, ಶಿಕ್ಷಣ ಇಲಾಖೆಗಳು ಇದಕ್ಕೆ ಸಹಾಯ ಸಹಕಾರವನ್ನು ಒದಗಿಸುತ್ತವೆ. ಯೋಜನಾ ಆಯೋಗ ಮಾರ್ಗಸೂಚಿ ಅನುಸರಿಸುತ್ತವೆ. ಹಾಗೂ ರಾಜ್ಯಗಳೂ ಕೂಡ ಶಿಕ್ಷಣ ಇಲಾಖೆಗಳ ಸಹಯೋಗದೊಂದಿಗೆ ಶೈಕ್ಷಣಿಕ ಯೋಜನೆಯನ್ನು ತಯಾರಿಸುತ್ತವೆ.

ದೇಶದ ಸರ್ವಾಂಗೀಣ ಅಭಿವೃದ್ಧಿಯೇ ಯೋಜನೆಗಳ ಮೂಲ ಉದ್ದೇಶ. ಈ ಅಭಿವೃದ್ಧಿಯಲ್ಲಿ ಶಿಕ್ಷಣವು ಒಂದು. ಅದಕ್ಕಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಾಭಿವೃದ್ಧಿಯು ಹಲವು ಕಾರ್ಯಕ್ರಮಗಳನ್ನು ಕಾಣುತ್ತೇವೆ.

ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಬಹಳ ಪ್ರಮುಖ ಸ್ಥಾನವನ್ನು ಪಡೆದಿದೆ. ಆರ್ಥಿಕ ಅಭಿವೃದ್ಧಿಯ ಇತಿಹಾಸವನ್ನು ನೋಡಿದ ಯಾರಿಗಾದರೂ ಯಾವ ರಾಷ್ಟ್ರವು ಶೈಕ್ಷಣಿಕವಾಗಿ ಮುಂದುವರೆದಿದೆಯೋ ಆ ರಾಷ್ಟ್ರ ಕೈಗಾರಿಕೆ, ವಾಣಿಜ್ಯ ಹಾಗೂ ವ್ಯವಸಾಯ ಕ್ಷೇತ್ರಗಳಲ್ಲಿ ಆರ್ಥಿಕವಾಗಿಯೂ ಮುಂದುವರೆದಿರುವುದು ತಿಳಿಯುತ್ತದೆ. ಆದುದರಿಂದ ಇಂದಿನ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಶಿಕ್ಷಣ ಮಟ್ಟ ಮತ್ತು ಆರ್ಥಿಕ ಮಟ್ಟಗಳಲ್ಲಿ ನಿರ್ದಿಷ್ಟವಾದ ಸಂಬಂಧವಿರುವುದನ್ನು ನಾವು ಕಾಣುತ್ತೇವೆ. ಆ ರಾಷ್ಟ್ರಗಳಲ್ಲಿ ಸಾಕ್ಷರತೆ ಹಾಗೂ ರಾಷ್ಟ್ರೀಯ ಆದಾಯಗಳ ಸಂಬಂಧ ಸೋಜಿಗಪಡುವಷ್ಟು ಭದ್ರವಾಗಿವೆ.

ತೀವ್ರ ಆರ್ಥಿಕ ಅಭಿವೃದ್ಧಿ ಹಾಗೂ ತಾಂತ್ರಿಕ ಪ್ರಗತಿಯಲ್ಲಿ ಮತ್ತು ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಹಾಗೂ ಸಮಾನಾವಕಾಶಗಳ ಮೌಲ್ಯಗಳ ಆಧಾರದ ಸಾಮಾಜಿಕ ಶಿಸ್ತನ್ನು ಕಲ್ಪಿಸುವಲ್ಲಿ ಶಿಕ್ಷಣ ಅತ್ಯಂತ ಮುಖ್ಯವಾದ ಅಂಶ. ಸಾಮೂಹಿಕ ಪೌರ ಸಂಬಂಧ ಕಲ್ಪಿಸಲು, ಜನತೆಯ ಶಕ್ತಿ ಸಾಮರ್ಥ್ಯಗಳನ್ನು ಸದುಪಯೋಗ ಪಡಿಸುವುದು ರಾಷ್ಟ್ರದ ಪ್ರತಿಯೊಂದು ಭಾಗದ ಸ್ವಾಭಾವಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸುವುದು–ಇವು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಆಧಾರ. ರಾಷ್ಟ್ರೀಯ ಜೀವನದ ಎಲ್ಲಾ ಶಾಲೆಗಳಲ್ಲೂ ಶಿಕ್ಷಣವು ಯೋಜಿತ ಅಭಿವೃದ್ಧಿಯ ಕೇಂದ್ರಬಿಂದುವಾಗುವಂತೆ ರಾಷ್ಟ್ರದ ಪ್ರತಿಯೊಂದು ಕುಟುಂಬವನ್ನು ಆ ವ್ಯಾಪ್ತಿಯಲ್ಲಿ ತರಲು ಶೈಕ್ಷಣಿಕ ಪ್ರಯತ್ನವನ್ನು ತೀವ್ರಗೊಳಿಸುವುದು ಮತ್ತು ವಿಸ್ತರಿಸುವುದು ಯೋಜನೆಯ ಪ್ರಮುಖ ಗುರಿಯಾಗಿದೆ.

ಭಾರತಕ್ಕೆ ಯೋಜನೆಗಳು ಹೊಸದೇನಲ್ಲ. ಸ್ವಾತಂತ್ರ್ಯಪೂರ್ವದಲ್ಲೇ ಯೋಜನೆಗಳ ಕುರಿತು ಜನರಲ್ಲಿ ಅನೇಕ ರೀತಿಯ ಕಲ್ಪನೆಗಳು ಮೂಡಿದ್ದವು. ಭಾರತದ ದಾರಿದ್ರ್ಯವನ್ನು ಹೋಗಲಾಡಿಸಿ ಜನರ ಜೀವನಮಟ್ಟ ಹೆಚ್ಚಿಸಲು ಯೋಜನೆಗಳ ಅವಶ್ಯಕತೆಯಿದೆ ಎಂಬುದನ್ನು ನಮ್ಮ ದೇಶದ ಮುಖಂಡರು ಸ್ವಾತಂತ್ರ್ಯಪೂರ್ವದಲ್ಲಿಯೇ ಮನಗಂಡಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕನಂತರ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿತು.

ಭಾರತದಲ್ಲಿ ಇದುವರೆವಿಗೂ ೧೧ ಪಂಚವಾರ್ಷಿಕ ಯೋಜನೆಗಳನ್ನು ಪೂರೈಸಿದ್ದು ೧೨ನೇ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ. ಶೈಕ್ಷಣಿಕ ಯೋಜನೆಯನ್ನು ಯಾವ ದೇಶವು ಪ್ರತ್ಯೇಕವಾಗಿ ತಯಾರಿಸುತ್ತಿಲ್ಲ. ಇದು ಆಯಾ ದೇಶಗಳ ಸಾಮಾನ್ಯ ಯೋಜನೆಯಲ್ಲಿ ಸೇರಿಕೊಂಡಿದೆ. ಪ್ರಪಂಚದ ಬಹುತೇಕ ರಾಷ್ಟ್ರಗಳು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಶಿಕ್ಷಣವು ಪ್ರಮುಖ ಅಸ್ತ್ರವೆಂದು ಗ್ರಹಿಸಿವೆ. ಇದರಿಂದಾಗಿ ಯೋಜನೆಗಳಲ್ಲಿ ಶಿಕ್ಷಣವನ್ನು ಸೇರಿಸಿಕೊಳ್ಳುವ

ಪ್ರವೃತ್ತಿ ಮೂಡಿ ಬಂದಿತು. ಶಿಕ್ಷಣದ ಮೇಲೆ ಹೂಡುವ ಹಣ ಕೇವಲ ವ್ಯಯವಲ್ಲ. ಇತ್ತೀಚೆಗೆ ಅದು ಬಂಡವಾಳವೆಂಬ ತತ್ವ ನಿರೂಪಿತವಾಗಿದೆ. ಶಿಕ್ಷಣದಿಂದಲೇ ಮಾನವ ಸಂಪನ್ಮೂಲ ಅಭಿವೃದ್ಧಿ. ಮಾನವ ಶಕ್ತಿಯಿಂದಲೇ ವಿವಿಧ ಕ್ಷೇತ್ರಗಳು ಪ್ರಗತಿ ಹೊಂದುತ್ತವೆ. ಆದ್ದರಿಂದ ಶಿಕ್ಷಣವನ್ನು ಕಡೆಗಣಿಸಕೂಡದು. ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣದ ಅಭಿವೃದ್ಧಿಯಾಗಬೇಕು. ಎಲ್ಲಿ ಶಿಕ್ಷಣದ ಪ್ರಗತಿಯಾಗಿದೆಯೋ ಅಲ್ಲಿ ಆರ್ಥಿಕ ಮುನ್ನಡೆಯಾಗಿರುವುದನ್ನು ಕಾಣಬಹುದು. ಇದರಿಂದಾಗಿ ಸರ್ಕಾರ ಹಮ್ಮಿಕೊಳ್ಳುವ ಆರ್ಥಿಕ, ಸಾಮಾಜಿಕ, ಔದ್ಯೋಗಿಕ ಯೋಜನೆಗಳಲ್ಲಿ ಶಿಕ್ಷಣವನ್ನು ಪರಿಗಣಿಸಿ ಅದಕ್ಕೆ ಗುರಿಗಳನ್ನು ನಿರ್ಧರಿಸಿ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುತ್ತಲಿವೆ. ೧೯೪೭ರ ಆಗಸ್ಟ್ ೧೫ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯಲಭಿಸಿದ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೈಕ್ಷಣಿಕ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿವೆ.

ಸಂವಿಧಾನದಲ್ಲಿ ಶಿಕ್ಷಣವು ಸಮವರ್ತಿ ಪಟ್ಟಿಗೆ ಸೇರಿರುವುದರಿಂದ ಶೈಕ್ಷಣಿಕ ಯೋಜನೆ ನಿರೂಪಣಾ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯಗಳೆರಡಕ್ಕೂ ಸಬಂಧಪಟ್ಟಿದ್ದು. ಯೋಜನಾ ಆಯೋಗ ಮತ್ತು ಶಿಕ್ಷಣ ಇಲಾಖೆಗಳು ಶಿಕ್ಷಣದ ಅಭಿವೃದ್ಧಿಗಾಗಿ ರಾಷ್ಟ್ರೀಯ ಯೋಜನೆಯನ್ನು ತಯಾರಿಸುತ್ತಿವೆ. ರಾಜ್ಯಗಳ ಶಿಕ್ಷಣ ಸಚಿವಾಲಯಗಳು, ಶಿಕ್ಷಣ ಇಲಾಖೆಗಳು ಇದಕ್ಕೆ ಸಹಾಯ, ಸಹಕಾರವನ್ನು ಒದಗಿಸುತ್ತವೆ. ಯೋಜನಾ ಆಯೋಗದ ಮಾರ್ಗಸೂಚಿಯನ್ನು ಅನುಸರಿಸುತ್ತವೆ. ಹಾಗೂ ರಾಜ್ಯಗಳು ಕೂಡ ಶಿಕ್ಷಣ ಇಲಾಖೆಗಳ ಸಹಯೋಗದೊಂದಿಗೆ ಶೈಕ್ಷಣಿಕ ಯೋಜನೆಯನ್ನು ತಯಾರಿಸುತ್ತವೆ. ಈಗಾಗಲೇ ಭಾರತದ ಯೋಜನಾ ಆಯೋಗವು ೧೧ ಯೋಜನೆಗಳನ್ನು ಹೊರಡಿಸಿದೆ. ೧೨ನೇ ಯೋಜನಾ ಕಾರ್ಯಕ್ರಗಳು ಅನುಷ್ಠಾನಕ್ಕೆ ಬರುತ್ತಿವೆ.

"ಮಹಿಳಾ ಶಿಕ್ಷಣದ ಮೇಲೆ ರಾಷ್ಟ್ರದ ಬೆಳವಣಿಗೆಯಿದೆ ಎಂಬ ಸತ್ಯವನ್ನು ಭಾರತ ಸರ್ಕಾರ ಅರಿತುಕೊಂಡಿದೆ. ಆದುದರಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹತ್ತು ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಮಹಿಳಾ ಶಿಕ್ಷಣದ ಅಭಿವೃದ್ಧಿಯ ಕಡೆ ವಿಶೇಷ ಗಮನ ಹರಿಸಿದವು. ಮಹಿಳೆಯರಿಗೆ ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಹಂತದವರೆಗೆ ಉಚಿತ ಶಿಕ್ಷಣ ನೀಡುವುದು, ವಸತಿ ನಿಲಯಗಳ ಸ್ಥಾಪನೆ, ವಿದ್ಯಾರ್ಥಿವೇತನಗಳನ್ನು ನೀಡುವುದು, ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ, ರಾಜಕೀಯ ಕ್ಷೇತ್ರ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಹಾಗೂ ಇನ್ನೂ ಮುಂತಾದ ಜನಪರ ಕಾರ್ಯ ಕ್ರಮಗಳನ್ನು ಕೈಗೊಂಡು ಮಹಿಳೆಯ ಸ್ಥಿತಿಗತಿಗಳನ್ನು ಹೆಚ್ಚಿಸಲು ಈ ಸರ್ಕಾರಗಳು ಪ್ರಯತ್ನಿಸಿವೆ ಮತ್ತು ಪ್ರಯತ್ನಿಸುತ್ತಲೂ ಇವೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಾ ಬಂದಿದೆ."[೧]

ಶಿಕ್ಷಣ ಕುರಿತಂತೆ ಪಂಚವಾರ್ಷಿಕ ಯೋಜನೆಯ ನಿಲುವುಗಳು

ಒಂದು ರಾಷ್ಟ್ರದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಮಟ್ಟವನ್ನು ನಿರ್ಧರಿಸಲು ಇರುವ ಅನೇಕ ಪ್ರಮುಖ ಅಂಶಗಳಲ್ಲಿ ಆ ರಾಷ್ಟ್ರವು ಶಿಕ್ಷಣ ಕ್ಷೇತ್ರದಲ್ಲಿ ನಡೆಸಿರುವ ಪ್ರಗತಿಯೂ ಒಂದು. ಅದರಲ್ಲೂ ಪ್ರಜಾಸತ್ತಾತ್ಮಕ ಆಡಳಿತ ತತ್ವವನ್ನು ಒಪ್ಪಿಕೊಂಡಿರುವ ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಶಿಕ್ಷಣದ ಮಹತ್ವ ಅನುಪಮವಾದುದು. ಆದುದರಿಂದ ಪಂಚವಾರ್ಷಿಕ ಯೋಜನೆಯಲ್ಲಿ ಯುವಜನಾಂಗಕ್ಕೆ ಅಭಿವೃದ್ಧಿ ಸಾಧನೆಗೆ ಅಗತ್ಯವಾದ ಶಿಕ್ಷಣವನ್ನು ನೀಡಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದಕ್ಕೆ ಆದ್ಯತೆ ನೀಡಲಾಗಿದೆ. ಶಿಕ್ಷಣದ ಅಭಿವೃದ್ಧಿಯಿಂದ ಮಾತ್ರ ಭಾರತದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯವೆಂಬುದನ್ನು ಭಾರತ ಮನಗಂಡಿದೆ.

ರಾಜ್ಯದ ಜನಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ಅಗತ್ಯಗಳನ್ನು ಪೂರೈಸುವಂತಹ ಶೈಕ್ಷಣಿಕ ಪದ್ಧತಿಯನ್ನು ಕ್ರಮೇಣವಾಗಿ ರೂಪಿಸಿಕೊಂಡು ಬರಲಾಗಿದೆ. ಸ್ವಾತಂತ್ರ್ಯಾನಂತರ ರಾಜ್ಯದಲ್ಲಿ ಅಗತ್ಯವಾದ ಕುಶಲ, ತಾಂತ್ರಿಕ ಮಾನವ ಶಕ್ತಿಯನ್ನು ಸೃಷ್ಟಿಸಲು ಮತ್ತು ಸಾರ್ವತ್ರಿಕ ಶಿಕ್ಷಣ ಸೌಲಭ್ಯಗಳನ್ನು ವಿಸ್ತರಿಸಲು ಅಗತ್ಯವಾದ ಸಾಂಸ್ಥಿಕ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗಿದೆ.

ರಾಜ್ಯವು ರಾಷ್ಟ್ರೀಯ ಶಿಕ್ಷಣ ನೀತಿಯ ಪದ್ಧತಿಯನ್ನೇ ಅಂಗೀಕರಿಸಿದೆ. ಪ್ರಸ್ತುತ ಇರುವ ಶೈಕ್ಷಣಿಕ ಪದ್ಧತಿಯ ಪ್ರಕಾರ ಹತ್ತು ವರ್ಷಗಳ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ, ಎರಡು ವರ್ಷಗಳ ಪ್ರೀ-ಯೂನಿವರ್ಸಿಟಿ ಶಿಕ್ಷಣ, ಮೂರು ವರ್ಷಗಳ ಕಾಲೇಜು ಶಿಕ್ಷಣ ವ್ಯವಸ್ಥೆಯಿದೆ.

ರಾಜ್ಯದಲ್ಲಿ ಪ್ರಾಥಮಿಕ ಹಂತಗಳಲ್ಲಿ ಶಿಕ್ಷಣದ ಮಾಧ್ಯಮ ಪ್ರಮುಖ ತಾಯಿನುಡಿಯಾದ ಕನ್ನಡ, ಅಲ್ಪಸಂಖ್ಯಾತ ಭಾಷೆಗಳಿಗೆ ಅಗತ್ಯವಾದ ರಕ್ಷಣೆಯನ್ನು ನೀಡಲಾಗಿದೆ. ಪ್ರತಿ ತರಗತಿಗೆ ಯಾವುದಾದರೂ ಅಲ್ಪಸಂಖ್ಯಾತ ಭಾಷೆಯ ೧೫ ಮಕ್ಕಳಿದ್ದರೆ ಅವರಿಗೆ ಪ್ರತ್ಯೇಕ ಶಾಲೆಯನ್ನೇ ತೆರೆಯಲಾಗುತ್ತದೆ. ಮೇಲ್ಮಟ್ಟದ ಹಂತಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡ ಎರಡೂ ಶಿಕ್ಷಣ ಮಾಧ್ಯಮಗಳಾಗಿ ಮುಂದುವರಿದಿವೆ.

ಪ್ರಥಮ ಪಂಚವಾರ್ಷಿಕ ಯೋಜನೆ (೧೯೫೧-೫೬)

ಶಿಕ್ಷಣ ಮತ್ತು ಅದರ ಆದ್ಯತೆಗಳನ್ನು ಗುರುತಿಸಿ ಶೈಕ್ಷಣಿಕ ಉತ್ತಮತೆಗಾಗಿ ಹಲವಾರು ಆಶೋತ್ತರಗಳನ್ನು ಇಟ್ಟುಕೊಳ್ಳಲಾಗಿತ್ತು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಲಾಯಿತು. ಸಮಾಜದಲ್ಲಿ ಜನರು ಸ್ವಾತಂತ್ರ್ಯಪೂರ್ವದಿಂದಲೂ ಮತ್ತು ಸ್ವಲ್ಪಮಟ್ಟಿಗೆ ಈಗಲು ಮಹಿಳೆಗೆ ಶಿಕ್ಷಣ ಕೊಡಿಸುವುದರ ಹಿಂದಿನ ಉದ್ದೇಶ ಅವಳನ್ನು ಕೇವಲ

ಉತ್ತಮ ತಾಯಿಯನ್ನಾಗಿ, ಉತ್ತಮ ಗೃಹಿಣಿಯನ್ನಾಗಿ ಮಾಡುವುದಾಗಿದೆಯೇ ಹೊರತು ಅವಳನ್ನು ವೃತ್ತಿಪರಳನ್ನಾಗಿ ಮಾಡುವುದಾಗಿಲ್ಲ.[೩]

ಸ್ವಾತಂತ್ರ್ಯದ ನಂತರವೂ ಜನರು ತಮ್ಮ ಮಗನಿಗೆ ಔಪಚಾರಿಕ ಶಿಕ್ಷಣದ ಅವಶ್ಯಕತೆ ಇದೆ, ಆದರೆ ತಮ್ಮ ಮಗಳಿಗೆ ಇಲ್ಲ ಎಂದು ಭಾವಿಸಿದ್ದರು. ಹೆಣ್ಣುಮಕ್ಕಳು ಕಲಿತು ಕುಟುಂಬದ ಹೊರಗಡೆ ದುಡಿದು ಸಂಪಾದನೆ ಮಾಡುವ ಅವಶ್ಯಕತೆಯಿಲ್ಲ ಎಂಬುದು ಬಹುಜನರ ಅಭಿಪ್ರಾಯ ವಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿಯಂತೂ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಒಪ್ಪುತ್ತಿರಲಿಲ್ಲ. ಹೆಣ್ಣು ಕಲಿತು ಮಾಡುವುದಾದರೂ ಏನು? ಶಾಲೆಗೆ ಹೋಗಿ ಶಿಕ್ಷಣ ಕಲಿಯುವುದು ಮನೆಗೆಲಸಕ್ಕೆ ಕೇಡು. ದೂರದ ಶಾಲೆ ಕಾಲೇಜಿಗೆ ಹೋಗುವುದಕ್ಕೆ ಹೆಣ್ಣುಮಕ್ಕಳಿಗೆ ರಕ್ಷಣೆಯಿಲ್ಲ ಎಂಬ ಸಾಂಪ್ರದಾಯಿಕ ಮನೋಭಾವನೆಯನ್ನು ಹೊಂದಿದ್ದರು. ಆದುದರಿಂದ ಹೆಣ್ಣುಮಕ್ಕಳು ಒಳ್ಳೆಯ ತಾಯಿಯಾಗಲು ಮತ್ತು ಉತ್ತಮ ಗೃಹಿಣಿಯಾಗಲು ಬೇಕಾದ ಅನೌಪಚಾರಿಕ ಶಿಕ್ಷಣವನ್ನು ನೀಡುವುದರ ಮೂಲಕ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಿದ್ದರು. ಸರ್ಕಾರವು ಸಹ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಗೆ ಅನೌಪಚಾರಿಕ ಶಿಕ್ಷಣವನ್ನು ನೀಡುವ ಪ್ರಯತ್ನವನ್ನು ಮಾಡಿತು.

ಸರ್ಕಾರದ ಧೋರಣೆಗಳ ಪ್ರಮುಖ ಉದ್ದೇಶ ಸಾಮಾಜಿಕ ಕಲ್ಯಾಣವಾಗಿದೆ. ಸಮಾಜದಲ್ಲಿ ಸಮಸ್ಯೆಗಳನ್ನು ಹೋಗಲಾಡಿಸಿ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಬೇಕಾಗುತ್ತದೆ. ಅದಕ್ಕೆ ಸಾಮಾಜಿಕ ಧೋರಣೆಗಳನ್ನು ರೂಪಿಸಬೇಕಾಗುತ್ತದೆ. ಆದುದರಿಂದ ಸರ್ಕಾರದ ಧೋರಣೆಗಳಿಗೂ ಮತ್ತು ಸಾಮಾಜಿಕ ಧೋರಣೆಗಳಿಗೂ ವ್ಯತ್ಯಾಸವಿರುವುದಿಲ್ಲ.

ದ್ವಿತೀಯ ಪಂಚವಾರ್ಷಿಕ ಯೋಜನೆ (೧೯೫೬–೬೧)

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಬಾಲಕಿಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆದು ಸ್ತ್ರೀ ಶಿಕ್ಷಣದ ಪ್ರಮಾಣವನ್ನು ಹೆಚ್ಚಿಸುವುದು ಹಾಗೆಯೇ ಮಹಿಳಾ ಶಿಕ್ಷಕಿಯರನ್ನು ಹೆಚ್ಚಾಗಿ ನೇಮಿಸುವ ಗುರಿಯನ್ನು ಇಟ್ಟುಕೊಳ್ಳಲಾಯಿತು. ಭಾರತದ ಸಾಕ್ಷರತೆಯಲ್ಲಿ ಸ್ತ್ರೀ–ಪುರುಷರ ಮಧ್ಯೆ ಸಾಕ್ಷರತೆಯ ಪ್ರಮಾಣ ಏರುಪೇರಾಗಿದ್ದುದನ್ನು ಗಮನದಲ್ಲಿಟ್ಟುಕೊಂಡು ಜನತೆಯನ್ನು ಪ್ರಜ್ಞಾವಂತರನ್ನಾಗಿಸಲು ಈ ಯೋಜನೆಯಲ್ಲಿಯೂ ಕೂಡ ಸಾಮಾಜಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಯಿತು.

ಹೆಣ್ಣುಮಕ್ಕಳು ಶಾಲೆಗೆ ಹೋಗುವುದನ್ನು ಪ್ರೋತ್ಸಾಹಿಸುವ ಸಲುವಾಗಿ ಒಂದನೆಯ ತರಗತಿಯಿಂದ ಎಂಟನೆಯ ತರಗತಿಯವರೆಗಿನ ಹೆಣ್ಣುಮಕ್ಕಳಿಗೆ ಹಾಜರಾತಿ ವೇತನಗಳನ್ನು

ಕೊಡಲಾಯಿತು. ಇದಕ್ಕಾಗಿ ಯೋಜನೆಯ ಅವಧಿಯಲ್ಲಿ ೧೬.೯೫ ಲಕ್ಷ ರೂಗಳು ವೆಚ್ಚವಾದವು. ಹೆಚ್ಚಿನ ಸಂಖ್ಯೆಯ ಮಕ್ಕಳು ಶಾಲೆಗೆ ಹಾಜರಾಗುವಂತೆ ಮಾಡಲು ಮಧ್ಯಾಹ್ನದ ಉಪಹಾರ ಹಾಗೂ ಹಾಜರಾತಿ ವೇತನಗಳಂತಹ ಉತ್ತೇಜನ ಕಾರ್ಯಕ್ರಮಗಳು ಜಾರಿಗೆ ಬಂದುದು ಈ ಯೋಜನೆಯಲ್ಲೇ. ಸುಮಾರು ೧೦.೨೫ ಲಕ್ಷ ರೂ ವೆಚ್ಚದಲ್ಲಿ ಜಾರಿಗೊಳಿಸಿದ ಮಧ್ಯಾಹ್ನ ಉಪಹಾರದ ಯೋಜನೆಯಿಂದ ಬಡಮಕ್ಕಳು ಕ್ರಮವಾಗಿ ಶಾಲೆಗೆ ಬರಲು ಅನುಕೂಲವಾಯಿತು. ಗ್ರಾಮಾಂತರ ಭಾಗದಲ್ಲಿ ಯೋಜನೆಯ ಅವಧಿಯಲ್ಲಿ ಮಹಿಳಾ ಶಿಕ್ಷಕಿಯರಿಗಾಗಿ ಕೆಲವು ವಸತಿ ಗೃಹಗಳನ್ನು ಕಟ್ಟಲಾಯಿತು.

ಶ್ರೀಮತಿ ದುರ್ಗಾಭಾಯಿ ದೇಶ್‌ಮುಖರವರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ಮಹಿಳಾ ಶಿಕ್ಷಣ ಸಮಿತಿಯ ಶಿಫಾರಸ್ಸುಗಳು (೧೯೫೮-೫೯):

೧. ರಾಷ್ಟ್ರೀಯ ಮತ್ತು ರಾಜ್ಯಮಟ್ಟದಲ್ಲಿ ಮಹಿಳಾ ಶಿಕ್ಷಣ ಮಂಡಳಿ ಸ್ಥಾಪನೆ ಮಾಡುವುದರ ಮೂಲಕ ಹುಡುಗಿಯರ ಹಾಗೂ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುವುದು.

೨. ಬಡ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ರಿಯಾಯಿತಿ ನೀಡಬೇಕು ಎಂದು ಶಿಫಾರಸ್ಸು ಮಾಡಿತು.

೩. ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಬೇಕೆಂದು ತಿಳಿಸಿತು.

೪. ಹುಡುಗಿಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸುವಂತೆ ಸೂಚಿಸಿತು.

೫. ಹುಡುಗ-ಹುಡುಗಿಯರಿಗೆ ಒಂದೇ ರೀತಿ ಪಠ್ಯಕ್ರಮವಿರಬೇಕೆಂದು ಸೂಚನೆ ನೀಡಿತು.

ಸ್ವಾತಂತ್ರ್ಯಪೂರ್ವದಿನಗಳಲ್ಲಿ ಸಹ ಶಿಕ್ಷಣದ ಶಾಲಾ ಕಾಲೇಜುಗಳಿಗೆ ತಮ್ಮ ಹೆಣ್ಣುಮಕ್ಕಳನ್ನು ಕಳುಹಿಸಲು ಜನರು ಹಿಂಜರಿಯುತ್ತಿದ್ದರು. ಅದರಲ್ಲಿಯೂ ಗ್ರಾಮೀಣ ಭಾಗದ ಜನರು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿಲ್ಲ, ಅವರು ಗೃಹಕೃತ್ಯಗಳನ್ನು ನಿರ್ವಹಿಸಲಿ ಎಂಬ ಧೋರಣೆಯಿತ್ತು. ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿದೆ ಎಂದು ತಮ್ಮ ಗಂಡು ಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿದ್ದರು. ಈ ರೀತಿ ಶಿಕ್ಷಣ ನೀಡುವಲ್ಲಿ ಲಿಂಗತಾರತಮ್ಯವನ್ನು ಮಾಡುತ್ತಿದ್ದರು. ಗ್ರಾಮಗಳಲ್ಲಿ ಹೆಣ್ಣುಮಕ್ಕಳು ತಮ್ಮ ಶೀಲ ಮತ್ತು ಪಾತಿವ್ರತ್ಯವನ್ನು ಕಾಪಾಡಿಕೊಳ್ಳಬೇಕೆಂಬ ನಿರ್ಬಂಧಗಳು ಹೆಚ್ಚಾಗಿ ಕಂಡು ಬರುತ್ತವೆ. ಆದುದರಿಂದ ಅವರು ತಮ್ಮ ಹೆಣ್ಣುಮಕ್ಕಳನ್ನು ಸಹಶಿಕ್ಷಣ ಶಾಲೆಗಳಿಗೆ ಕಳುಹಿಸಿದರೆ ಅವರು ತಮ್ಮ ಶೀಲವನ್ನು ಕಾಪಾಡಿಕೊಳ್ಳಲು ತೊಂದರೆಯಾಗುತ್ತದೆ ಎಂದು ತಮ್ಮ ಹೆಣ್ಣುಮಕ್ಕಳನ್ನು ಸಹಶಿಕ್ಷಣ ಕಾಲೇಜುಗಳಿಗೆ ಕಳಿಹಿಸುತ್ತಿರಲಿಲ್ಲ. ಆದುದರಿಂದ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಮಟ್ಟವನ್ನು ಹೆಚ್ಚಿಸಲು

ಮಹಿಳೆಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯುವ ಮತ್ತು ಮಹಿಳಾ ಶಿಕ್ಷಕಿಯರನ್ನು ನೇಮಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು.

ಈ ಯೋಜನೆಯಲ್ಲಿ ಹೆಚ್ಚು ಮಹಿಳಾ ಶಿಕ್ಷಕಿಯರನ್ನು ನೇಮಕ ಮಾಡಿಕೊಳ್ಳಲಾಯಿತು. ಸಾಮಾಜಿಕ ಶಿಕ್ಷಣವನ್ನು ಜನಪ್ರಿಯಗೊಳಿಸಲು ವಿವಿಧ ರೀತಿಯ ಕಾರ್ಯಕ್ರಮಗಳು ಜಾರಿಗೆ ತಂದುದರ ಫಲವಾಗಿ ಜನ ಸಾಮಾನ್ಯರಲ್ಲಿ ಸ್ವಲ್ಪಮಟ್ಟಿಗೆ ಜಾಗೃತಿಮೂಡಲು ನೆರವಾಯಿತು.

ಮೂರನೆ ಪಂಚವಾರ್ಷಿಕ ಯೋಜನೆ (೧೯೬೧-೬೬)

ಈ ಯೋಜನೆಯಲ್ಲಿ ರಾಷ್ಟ್ರದ ಅಭಿವೃದ್ಧಿಗೆ ಶಿಕ್ಷಣದ ಮಹತ್ವವನ್ನು ಅರಿತು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಯಿತು. ಮಾನವ ಸಂಪನ್ಮೂಲ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣದ ಮಟ್ಟವನ್ನು ಹೆಚ್ಚಿಸಬೇಕಾಗುತ್ತದೆ.

೧೯೬೧ರಲ್ಲಿ ಮೈಸೂರು ಸರ್ಕಾರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಶಾಸನವನ್ನು ಆಗಸ್ಟ್ ೧ರಿಂದ ಜಾರಿಗೆ ತಂದಿತು. ಪ್ರಾಥಮಿಕ ಶಿಕ್ಷಣದಲ್ಲಿ ಅತ್ಯಂತ ಮುಖ್ಯವಾದ ಕಾರ್ಯಕ್ರಮವೆಂದರೆ ೬ರಿಂದ ೧೧ನೇ ವಯಸ್ಸಿನ ಗುಂಪಿನ ಮಕ್ಕಳಿಗೆ ಶಿಕ್ಷಣ ಸೌಲಭ್ಯದ ವಿಸ್ತರಣೆಯಾಗಿತ್ತು. ಈ ಶಾಸನದ ನಿಯಮಗಳ ಪ್ರಕಾರ ಹಂತ ಹಂತದ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಿಕ್ಷಣದ ಅಂತ್ಯದವರೆಗೆ ಸಾರ್ವತ್ರಿಕವಾಗಿ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಆರಂಭಿಸಲಾಯಿತು. ೪೪೫೩ ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಯಿತು. ಹೆಚ್ಚಿನ ಸಂಖ್ಯೆಯ ಪ್ರಾಥಮಿಕ ಶಾಲೆಗಳು ಆರಂಭವಾದುದರಿಂದ ಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ೬ ರಿಂದ ೧೧ನೇ ವಯಸ್ಸಿನ ಶೇ.೯೫ ಭಾಗ ಮಕ್ಕಳು ಪ್ರಾಥಮಿಕ ಶಾಲಾ ಶಿಕ್ಷಣದ ವ್ಯಾಪ್ತಿಗೆ ಬರುವಂತಾಯಿತು. ಸುಮಾರು ೧೨,೦೦೦ಕ್ಕೂ ಹೆಚ್ಚಿನ ಉಪಾಧ್ಯಾಯರ ನೇಮಕಕ್ಕೆ ಅವಕಾಶ ವಾಯಿತು.

ಈ ಮಧ್ಯೆ ಚೀನ ಮತ್ತು ಪಾಕೀಸ್ತಾನಿಗಳ ಆಕ್ರಮಣದಿಂದ ಉಂಟಾದ ಆರ್ಥಿಕ ಕಷ್ಟಗಳಿಂದಾಗಿ ಕಡ್ಡಾಯ ಪ್ರಾಥಮಿಕ ಕಾರ್ಯಕ್ರಮದ ವಿಸ್ತರಣೆಯನ್ನು ನಿಲ್ಲಿಸಲು ನಿರ್ಧರಿಸಬೇಕಾಯಿತು. ಆದರೂ ಏಳನೇ ತರಗತಿಯವರೆಗೆ ಎಲ್ಲಾ ಸರ್ಕಾರಿ ಮತ್ತು ಸರ್ಕಾರಿ ಸಹಾಯಧನ ಪಡೆಯುವ ಶಾಲೆಗಳಲ್ಲಿ ಉಚಿತ ಶಿಕ್ಷಣ ಒದಗಿಸಲಾಯಿತು.

ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಯ ಗುರಿಯಂತೆ, ಸ್ತ್ರೀಯರ ಶಿಕ್ಷಣ ಮಟ್ಟ ಗಣನೀಯವಾಗಿ ಹೆಚ್ಚಲಿಲ್ಲ. ಆದುದರಿಂದ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಹುಡುಗ ಹಾಗೂ ಹುಡುಗಿಯರ ಪ್ರಾಥಮಿಕ ಶಿಕ್ಷಣ ಪ್ರಮಾಣದಲ್ಲಿ ಕಂಡುಬರುವ ಅಂತರವನ್ನು ಹೋಗಲಾಡಿಸುವ ದೃಷ್ಟಿಯಿಂದ ಕೆಲವು ಪೂರಕ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಲಾಯಿತು.

ಹೆಣ್ಣುಮಕ್ಕಳ ಶಿಕ್ಷಣದ ಮೇಲ್ವಿಚಾರಣೆಗಾಗಿಯೇ ಉಪ ನಿರ್ದೇಶಕರ ಸ್ಥಾನಕ್ಕೆ ಸಮನಾದ ಓರ್ವ ಅಧಿಕಾರಿಯನ್ನು ನೇಮಿಸಲಾಯಿತು. ಮಹಿಳಾ ಶಿಕ್ಷಕಿಯರಿಗಾಗಿ ಅನೇಕ ವಸತಿ ಗೃಹಗಳನ್ನು ನಿರ್ಮಿಸಲಾಯಿತಲ್ಲದೆ ಶಿಕ್ಷಕಿಯರಾಗಬಯಸುವ ಮಹಿಳೆಯರ ನೇಮಕಕ್ಕೆ ವಯೋಮಿತಿಯನ್ನು ೪೦ ವರ್ಷಕ್ಕೆ ಹೆಚ್ಚಿಸಲಾಯಿತು. ಈ ರೀತಿ ವಿವಿಧ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಮಹಿಳಾ ಶಿಕ್ಷಣವನ್ನು ಉತ್ತಮ ಪಡಿಸಲು ಪ್ರಯತ್ನಿಸಲಾಯಿತು.

ಸಾಧನೆಗಳು

ಆದರೆ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿಕೊಳ್ಳುವಂತಹ ಶೈಕ್ಷಣಿಕ ಪ್ರಗತಿಯು ಕಂಡುಬರಲಿಲ್ಲ. ಎಂಟನೆಯ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಶೇ.೩೫ ರಷ್ಟು ಹೆಚ್ಚಾದರೆ ವಿದ್ಯಾರ್ಥಿನಿಯರ ಸಂಖ್ಯೆ ಶೇ.೧೨ ರಷ್ಟು ಮಾತ್ರ ಹೆಚ್ಚಾಯಿತು. ಕಾರಣಗಳೇನೆಂದರೆ ತಾಂತ್ರಿಕ ಮತ್ತು ಆಡಳಿತಾತ್ಮಕ ತೊಂದರೆಗಳು, ಚೀನಾ ಮತ್ತು ಪಾಕಿಸ್ತಾನಗಳ ಆಕ್ರಮಣ ಪ್ರಗತಿಗೆ ಬಲವಾದ ಪೆಟ್ಟನ್ನು ನೀಡಿದವು.

ನಾಲ್ಕನೆ ಪಂಚವಾರ್ಷಿಕ ಯೋಜನೆ (೧೯೬೯-೭೪)

ಈ ಯೋಜನೆಯಲ್ಲಿ ಸಮಾಜದ ಎಲ್ಲರಿಗೂ ಸಮಾನ ಶಿಕ್ಷಣ ನೀಡುವ ಉದ್ದೇಶದಿಂದ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಕ್ರಮವನ್ನು ಕೈಗೊಳ್ಳಲಾಯಿತು.

ಮಹಿಳೆಯರ ಸ್ಥಾನಮಾನ ಕುರಿತಾದ ಮಂಡಳಿ (೧೯೭೧-೭೪)

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ೧೯೭೧ರಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸುವ ಸಂಬಂಧ ಮಂಡಳಿಯನ್ನು ರಚಿಸಿತು. ಈ ಮಂಡಳಿಯು ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಶಿಕ್ಷಣವು ಪ್ರಮುಖ ಸಾಧನವೆಂದು ಮಹಿಳಾ ಶಿಕ್ಷಣ ಉತ್ತೇಜಿಸಲು ಮಂಡಳಿಯು ಕೆಲವು ಸಲಹೆಗಳನ್ನು ನೀಡಿತು. ಅವುಗಳೆಂದರೆ –

೧. ಹುಡುಗಿಯರಿಗೆ ಪ್ರತ್ಯೇಕ ಕಾಲೇಜನ್ನು ತೆರೆಯಲು ಸಲಹೆ ಮಾಡಿತು (ಕಾಲೇಜು ಹಂತದಲ್ಲಿ ಸಹಶಿಕ್ಷಣ ಪದ್ಧತಿಯಿಂದ ಹುಡುಗರಿಂದ ಉಂಟಾಗುವ ಕೀಟಲೆ ಮತ್ತು ಲೈಂಗಿಕ ಪೀಡನೆಯ ಕಾರಣದಿಂದಾಗಿ ಬಹುಪಾಲು ಗ್ರಾಮೀಣರು ಶಾಲಾ ಶಿಕ್ಷಣದ ನಂತರ ತಮ್ಮ ಹೆಣ್ಣುಮಕ್ಕಳನ್ನು ಕಾಲೇಜುಗಳಿಗೆ ಕಳುಹಿಸುವುದಿಲ್ಲ. ಆದುದರಿಂದ ಹೆಚ್ಚು ಹೆಣ್ಣುಮಕ್ಕಳು ಸಹ ಕಾಲೇಜು ಶಿಕ್ಷಣ ಪಡೆಯಲು, ಹುಡುಗಿಯರಿಗಾಗಿಯೇ ಪ್ರತ್ಯೇಕ ಕಾಲೇಜು ತೆರೆಯಲು ಉತ್ತೇಜನ ನೀಡಬೇಕೆಂದು ಸಲಹೆ ಮಾಡಿತು).

೨. ಶಿಕ್ಷಣ ಪಠ್ಯಕ್ರಮದಲ್ಲಿ ಸಮಾನತೆಯನ್ನು ತರಲು ೧೦ನೇ ತರಗತಿಯವರೆಗೆ ಹುಡುಗ–ಹುಡುಗಿಯರಿಗೆ ಒಂದೇ ರೀತಿಯ ಪಠ್ಯಕ್ರಮ ತರುವಂತೆ ಸಲಹೆ ಮಾಡಿತು.

೩. ಶಾಲೆಗಳಲ್ಲಿ ಕಡಿಮೆ ಮಹಿಳಾ ಹಾಜರಾತಿ ಇರುವ ಪ್ರದೇಶಗಳಲ್ಲಿ ಮಹಿಳೆಯರಿಗೆ ವಿಶೇಷ ಉತ್ತೇಜನ ನೀಡುವುದರ ಮೂಲಕ ಶಾಲೆಗೆ ಬರುವ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸಲಹೆ ನೀಡಿತು.

೪. ಸ್ತ್ರೀ ಶಿಕ್ಷಣಕ್ಕೆ ಮಹತ್ವದ ಸ್ಥಾನ ಕಲ್ಪಿಸಲು ಬಾಲಕರ ಮತ್ತು ಬಾಲಕಿಯರ ಶಿಕ್ಷಣದಲ್ಲಿ ಅಂತರವನ್ನು ತಗ್ಗಿಸಲು ಹೆಚ್ಚು ಹೆಚ್ಚು ಶಾಲೆಗಳನ್ನು ತೆರೆಯಬೇಕು. ಈವರೆಗೂ ಪ್ರಾಯೋಗಿಕವಾಗಿ ನಿರ್ಲಕ್ಷಿಸಲ್ಪಟ್ಟ ಗ್ರಾಮಾಂತರ ಪ್ರದೇಶಗಳಿಗೆ ವಿಶೇಷ ಪ್ರಾತಿನಿಧ್ಯವನ್ನು ಕೊಡಬೇಕು. ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯಲು ಸಾಧ್ಯವಾಗದೆ ಇರುವ ಕಡೆ ಸಹಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕು.

ಈ ಯೋಜನೆಯಲ್ಲಿ ಹುಡುಗಿಯರ ಪ್ರವೇಶಾತಿಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಲಾಯಿತು. ಆದುದರಿಂದ ಉಚಿತ ಶಿಕ್ಷಣ, ಪಠ್ಯಪುಸ್ತಕ ಹಾಗೂ ಇತರೆ ಸಾಮಗ್ರಿಗಳನ್ನು ಪುಕ್ಕಟೆಯಾಗಿ ಇಲ್ಲವೆ ರಿಯಾಯಿತಿ ದರದಲ್ಲಿ ಪೂರೈಸುವುದು, ಮಧ್ಯಾನ್ಹೋಪಹಾರ ಯೋಜನೆಗಳನ್ನು ಹೆಚ್ಚು ವಿಸ್ತರಿಸುವುದರ ಮೂಲಕ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಲಾಯಿತು. ಹೆಣ್ಣುಮಕ್ಕಳ ಶಿಕ್ಷಣ ಮಟ್ಟವನ್ನು ಹೆಚ್ಚಿಸುವಸಲುವಾಗಿ ಹೆಣ್ಣುಮಕ್ಕಳ ಶಾಲಾ ಪ್ರವೇಶಾತಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಈ ಯೋಜನೆಯಲ್ಲಿ ನೀಡಲಾಯಿತು. ಆದರೆ ಗ್ರಾಮೀಣರ ಲಿಂಗತಾರತಮ್ಯ ಮನೋಭಾವನೆ ಬದಲಾಗಲಿಲ್ಲವಾದುದರಿಂದ ಸರ್ಕಾರದ ನಿರೀಕ್ಷೆಯಂತೆ ಮಹಿಳಾ ಶಿಕ್ಷಣಮಟ್ಟ ಹೆಚ್ಚಾಗಲಿಲ್ಲ.

ಗ್ರಾಮೀಣ ಜನರು ಸಂಪ್ರದಾಯಸ್ಥರಾಗಿದ್ದು ಪಿತೃಪ್ರಧಾನ ಮೌಲ್ಯಗಳಿಗೆ ಪ್ರಾಧಾನ್ಯತೆ ನೀಡುವುದರಿಂದ ಗಂಡು ಮಕ್ಕಳ ಶಿಕ್ಷಣಕ್ಕೆ ನೀಡುವ ಆದ್ಯತೆ ಹೆಣ್ಣುಮಕ್ಕಳ ಶಿಕ್ಷಣಕ್ಕೆ ನೀಡದಿರುವುದರಿಂದ ಮಹಿಳಾ ಶಿಕ್ಷಣದ ಹಿನ್ನಡೆಗೆ ಕಾರಣವಾಗಿದೆ.

ಐದನೆ ಪಂಚವಾರ್ಷಿಕ ಯೋಜನೆ (೧೯೭೪–೭೯)

ಐದನೆ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಶಿಕ್ಷಣಕ್ಕೆಂದು ಪ್ರತ್ಯೇಕ ಯೋಜನೆಗಳು ಬರಲಿಲ್ಲವಾದರೂ ಶಿಕ್ಷಣದ ಅಭಿವೃದ್ಧಿಗಾಗಿ ಸಾಮಾನ್ಯ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಯಿತು. ಶಿಕ್ಷಣದಿಂದಲೇ ದೇಶದ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಸಾಧ್ಯವೆಂದು ತಿಳಿದ ಯೋಜಕರು ಶಿಕ್ಷಣದ ಗುಣಮಟ್ಟವನ್ನು ಎತ್ತರಿಸಲು ಹೆಚ್ಚು ಪ್ರಾಶಸ್ತ್ಯ ನೀಡಿದರು. ಅದರಂತೆ ಈ ಯೋಜನೆಯಲ್ಲಿ ಶಿಕ್ಷಣಕ್ಕಾಗಿ ೧೨೮೫ ಕೋಟಿ ರೂಪಾಯಿಗಳನ್ನು ಮೀಸಲಿಡಲಾಯಿತು. ಈ ಯೋಜನೆಯಲ್ಲಿ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ಅದರ ಸುಧಾರಣೆಯನ್ನು ಮಾಡುವುದು, ಹಿಂದುಳಿದ ಪ್ರದೇಶಗಳ ಮೇಲೆ ಪ್ರಾಥಮಿಕ ಶಿಕ್ಷಣ ಕುರಿತು ಹೆಚ್ಚು ಗಮನವನ್ನು ಕೇಂದ್ರೀಕರಿಸುವುದು, ಬಡ ಹಾಗೂ ನಿರ್ಗತಿಕ ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ಇತರ ಸಾಮಗ್ರಿಗಳು ಹಾಗೂ ಮಧ್ಯಾಹ್ನೋಪಹಾರ ಸೌಲಭ್ಯಗಳನ್ನು ಕಲ್ಪಿಸಿ ಶಿಕ್ಷಣದತ್ತ ಹೆಚ್ಚು ಆಸಕ್ತಿ ಮೂಡಿಸುವುದಾಗಿತ್ತು.

ಈ ಯೋಜನೆಯಿಂದಾಗಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಶಸ್ತ್ಯವು ದೊರೆಯಿತು. ಹಿಂದುಳಿದ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳು ತೆರೆಯಲ್ಪಟ್ಟವು. ೬ ರಿಂದ ೧೧ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಈ ಎಲ್ಲ ಕಾರ್ಯಕ್ರಮಗಳ ಫಲವಾಗಿ ಗ್ರಾಮೀಣ ಮಹಿಳಾ ಶಿಕ್ಷಣದ ಮಟ್ಟ ಹೆಚ್ಚಾಯಿತು.

೧೯೭೫ನೇ ವರ್ಷವನ್ನು "ಅಂತರಾಷ್ಟ್ರೀಯ ಮಹಿಳಾ ವರ್ಷ"ವಾಗಿ ಆಚರಿಸಲಾಯಿತು. ಅನಂತರ ಪ್ರತಿ ವರ್ಷ ಮಾರ್ಚ್ ೮ನೇ ದಿನಾಂಕವನ್ನು "ಅಂತರಾಷ್ಟ್ರೀಯ ಮಹಿಳಾ ದಿನ"ವನ್ನಾಗಿ ಆಚರಿಸಿಕೊಂಡು ಬರಲಾಗಿದೆ.

ಆರನೆ ಪಂಚವಾರ್ಷಿಕ ಯೋಜನೆ (೧೯೮೦-೮೫)

ಈ ಯೋಜನೆಯಲ್ಲಿಯೂ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಯೋಜನೆಗಳು ಜಾರಿಗೆ ಬರಲಿಲ್ಲ. ಆದರೆ ಎಲ್ಲರಿಗೂ ಅನ್ವಯವಾಗುವ ಶೈಕ್ಷಣಿಕ ಯೋಜನೆಗಳನ್ನು ಜಾರಿಗೆ ತಂದರು.

ಆರನೆ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಶಿಕ್ಷಣಕ್ಕೆ ಹೊಸ ಯೋಜನೆಗಳನ್ನು ತರದಿದ್ದರೂ, ಹಿಂದಿನ ಯೋಜನೆಗಳಲ್ಲಿ ಮಹಿಳಾ ಶಿಕ್ಷಣ ಅಭಿವೃದ್ಧಿಗೆ ಹೇಳಿದಂತಹ ಯೋಜನೆ ಯನ್ನು ಮುಂದುವರಿಸಲಾಯಿತು.

ಶಿಕ್ಷಣವು ಸಮುದಾಯಕ್ಕೆ ಒದಗಿಸಬಹುದಾದ ಸಾಮಾಜಿಕ ಸೇವೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಹೂಡಿದ ಹಣ ತಿರುಗಿ ಬರಲಾರದೆಂಬ ಭಾವನೆ ಬದಲಾಗಿ, ಈ ಯೋಜನೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹೂಡಿದ ಹಣ ಬಂಡವಾಳ ಹೂಡಿಕೆ" ಎಂಬ ಭಾವನೆ ಮೂಡಿತು.

ಈ ಯೋಜನೆಯಲ್ಲಿ ೬ ರಿಂದ ೧೪ ವರ್ಷದ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಸಾರ್ವತ್ರಿಕ ಶಿಕ್ಷಣವನ್ನು ನೀಡುವುದು, ಉಚಿತ ಪಠ್ಯ ಪುಸ್ತಕ, ಮಧ್ಯಾಹ್ನೋಪಹಾರ ಮುಂತಾದ ಯೋಜನೆಗಳನ್ನು ಬಲಪಡಿಸುವುದು, ಶಾಲೆ ಬಿಡುವವರಿಗಾಗಿ ಅರೆಕಾಲಿಕ ಶಿಕ್ಷಣ ಯೋಜನೆಗಳನ್ನು ಪರಿಚಯಿಸಲಾಯಿತು. ಈ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಸಾಕಷ್ಟು ಬೆಳವಣಿಗೆ ಕಂಡು ಬಂದಿತು. ಶಾಲೆಗಳ ಸಂಖ್ಯೆ ಹೆಚ್ಚಾಯಿತು. ಈ ಬೆಳವಣಿಗೆಯು ಪರೋಕ್ಷವಾಗಿ ಮಹಿಳಾ ಶಿಕ್ಷಣದ ಹೆಚ್ಚಳಕ್ಕೆ ಕಾರಣವಾಯಿತು.

ಏಳನೆ ಪಂಚವಾರ್ಷಿಕ ಯೋಜನೆ (೧೯೮೫-೯೦)

ಏಳನೆ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣ, ಉತ್ಪಾದನೆ ಮತ್ತು ಅಭಿವೃದ್ಧಿ ಈ ಮೂರು ಅನ್ಯೋನ್ಯವಾದವುಗಳು. ೧೯೯೧ರ ಉದಾರೀಕರಣ ನೀತಿಯ ಅನ್ವಯ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಿಗೆ ಅನ್ವಯಿಸಿದಂತಿದ್ದು ವಿಶ್ವವ್ಯಾಪಿ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಿದೆ. ಜಾಗತೀಕರಣ ಮತ್ತು ಉದಾರೀಕರಣದ ಫಲವಾಗಿ ಇಂದು ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾಗಿವೆ. ಗುಣಮಟ್ಟದ ಶಿಕ್ಷಣ ನೀಡುವುದರ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಿ ದೇಶದ ಸರ್ವತೋಮುಖ ಅಭಿವೃದ್ಧಿ ಪಡಿಸುವುದು ಸರ್ಕಾರದ ಪ್ರಮುಖ ಗುರಿಯಾಗಿದೆ. ಆದ್ದರಿಂದಲೇ ಶಿಕ್ಷಣವೆಂಬುದೊಂದು "ಮಾನವ ಸಂಪನ್ಮೂಲ ಅಭಿವೃದ್ಧಿ" ಹಾಗೂ 'ಉತ್ಪಾದನಾರಂಗವೆಂದು ಈ ಯೋಜನೆಯು ಘಂಟಾಘೋಷವಾಗಿ ಸಾರಿದೆ. ಈ ಯೋಜನೆಯಲ್ಲಿ ಸ್ತ್ರೀ ಶಿಕ್ಷಣವನ್ನು ಅಭಿವೃದ್ಧಿಗೊಳಿಸಲು ಪ್ರತ್ಯೇಕ ಯೋಜನೆಯನ್ನು ಜಾರಿಗೆ ತರಲಾಯಿತು.

೧೯೮೬ರ ಹೊಸ ಶಿಕ್ಷಣ ನೀತಿಯು ಮಹಿಳೆಯರ ಅನಕ್ಷರತೆಯನ್ನು ಹೋಗಲಾಡಿಸಿ ಶಿಕ್ಷಣ ಕ್ಷೇತ್ರದಲ್ಲಿ ಅವರ ಸ್ಥಾನ-ಮಾನ ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

ರಾಜ್ಯ ಸರ್ಕಾರವು ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಆಸಕ್ತಿವಹಿಸಿ ಕ್ರಮಗಳನ್ನು ಕೈಗೊಂಡಿರುವುದು ಉಲ್ಲೇಖವಾಗಿದೆ. ಅವುಗಳೆಂದರೆ –

೧. ಹೆಣ್ಣುಮಕ್ಕಳಿಗೆ ೧ರಿಂದ ೧೦ನೇ ತರಗತಿಯವರೆಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ ನೀಡುತ್ತಿದೆ.

೨. ವಿದ್ಯಾರ್ಥಿ ಹಾಜರಾತಿ ವೇತನವನ್ನು ನೀಡುತ್ತಿದೆ. ಅಲ್ಲದೆ ಹೆಣ್ಣುಮಕ್ಕಳಿಗೆ ಶಾಲಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ.

೩. ರಾಜ್ಯ ಶಿಕ್ಷಣ ನಿರ್ದೇಶನಾಲಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಪ್ರತ್ಯೇಕ ವಿಭಾಗಗಳನ್ನು ತೆರೆಯಲಾಗಿದೆ.

೪. ಹೆಣ್ಣುಮಕ್ಕಳಿಗಾಗಿ ವಿಶೇಷ ಪಾಲಿಟೆಕ್ನಿಕ್‌ಗಳನ್ನು ತೆರೆದು ಸಂಕ್ಷಿಪ್ತಗೊಳಿಸಿದ ಕೋರ್ಸ್‌ಗಳನ್ನು ಅಳವಡಿಸಿದೆ.

೫. ಮಹಿಳಾ ಶಿಕ್ಷಣಕ್ಕಾಗಿ ದುಡಿಯುತ್ತಿರುವ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡುತ್ತಿದೆ.

೬. ಹೆಣ್ಣುಮಕ್ಕಳಿಗಾಗಿ ಉಚಿತ ವಿದ್ಯಾರ್ಥಿನಿ ನಿಲಯಗಳನ್ನು ತೆರೆಯಲಾಗಿದೆ.

೭. ಸಂವಿಧಾನದ ೭೩ನೇ ತಿದ್ದುಪಡಿ ಕಾಯ್ದೆಯ (೧೯೯೩) ಪ್ರಕಾರ ಸ್ತ್ರೀಯರಿಗೆ ಮೂರನೇ ಒಂದು ಭಾಗದಷ್ಟು ಸ್ಥಾನವನ್ನು ಮೀಸಲಿರಿಸಲಾಗಿದೆ.

೮. ಹೆಣ್ಣುಮಕ್ಕಳಿಗಾಗಿ ಉದ್ಯೋಗದಲ್ಲಿ ಹಾಗೂ ಉನ್ನತ ಶಿಕ್ಷಣದಲ್ಲಿ ಪ್ರವೇಶಕ್ಕೆ ಮೀಸಲಾತಿ ಕಲ್ಪಿಸಿದೆ.

ಮುಂತಾದ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು".[೪] ಈ ಎಲ್ಲಾ ಕಾರ್ಯಕ್ರಮಗಳ ಫಲವಾಗಿ ಮಹಿಳಾ ಶಿಕ್ಷಣದ ಮಟ್ಟ ಹಿಂದಿಗಿಂತಲೂ ಗಣನೀಯವಾಗಿ ಹೆಚ್ಚಳವಾಯಿತು.

ಗ್ರಾಮೀಣ ಸಮಾಜದಲ್ಲಿ ಮಹಿಳಾ ಶಿಕ್ಷಣದ ಹಿಂದುಳಿಕೆಗೆ ಹಲವಾರು ಕಾರಣಗಳಿವೆ. ಅದರಲ್ಲಿ ಮಹಿಳಾ ಶಿಕ್ಷಕರ ಕೊರತೆಯೂ ಒಂದು ಎಂಬುದನ್ನು ಸಂಶೋಧನೆಗಳು ಧೃಡಪಡಿಸಿವೆ. ಹಿಂದುಳಿದ ಗ್ರಾಮಗಳಲ್ಲಿ ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುವುದಕ್ಕೆ ಕಾರಣ ಮಹಿಳಾ ಅಧ್ಯಾಪಕರಿಲ್ಲದಿರುವುದೇ ಆಗಿದೆ. ಆದುದರಿಂದ ಈ ಯೋಜನೆಯಲ್ಲಿ ಮಹಿಳಾ ಶಿಕ್ಷಕರನ್ನು ಹೆಚ್ಚಾಗಿ ನೇಮಿಸಿಕೊಳ್ಳುವುದು, ಮಹಿಳೆಯರಿಗೆ ಪ್ರತ್ಯೇಕ ಶಾಲಾಕಾಲೇಜುಗಳನ್ನು ತೆರೆಯುವುದರ ಮೂಲಕ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹವನ್ನು ನೀಡಲಾಯಿತು.

ಮಹಿಳಾ ಶಿಕ್ಷಕಿಯರು ಹೆಣ್ಣುಮಕ್ಕಳ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಹೆಣ್ಣುಮಕ್ಕಳ ಉತ್ತಮ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಾರೆ. ಹೆಣ್ಣುಮಕ್ಕಳು ಸಹ ತಮ್ಮ ವೈಯಕ್ತಿಕ ವಿಚಾರಗಳನ್ನು ಪುರುಷ ಅಧ್ಯಾಪಕರಲ್ಲಿ ಹೇಳಿಕೊಳ್ಳಲು ಹಿಂಜರಿಯುತ್ತಾರೆ. ಆದರೆ ಮಹಿಳಾ ಶಿಕ್ಷಕಿಯರಲ್ಲಿ ನೇರವಾಗಿ ಹಿಂಜರಿಕೆಯಿಲ್ಲದೆ ಹೇಳಿಕೊಳ್ಳುತ್ತಾರೆ. ಮಹಿಳಾ ಶಿಕ್ಷಕಿಯರು ಸಹ ಹೆಣ್ಣುಮಕ್ಕಳಿಗೆ ಪುರುಷ ಶಿಕ್ಷಕರಿಗಿಂತ ಆತ್ಮೀಯವಾಗಿ ಬೋಧನೆ ಮಾಡಲು ಸಹಕಾರಿಯಾಗಿರುವುದರಿಂದ ಸರ್ಕಾರವು ಹೆಚ್ಚು ಹೆಚ್ಚು ಮಹಿಳಾ ಅಧ್ಯಾಪಕರನ್ನು ನೇಮಕ ಮಾಡಲು ಮುಂದಾಯಿತು. ಗ್ರಾಮೀಣ ಸಮಾಜದಲ್ಲಿ ಮಹಿಳಾ ಶಿಕ್ಷಣ ಹಿಂದುಳಿಕೆಗೆ ಇರುವ ಇತರೆ ಕಾರಣಗಳೆಂದರೆ ಸಂಪ್ರದಾಯ, ಬಾಲ್ಯ ವಿವಾಹ ಪದ್ಧತಿ, ಪೋಷಕರ ಅಜ್ಞಾನ, ಬಡತನ, ಶಾಲೆಗಳ ಕೊರತೆ ಮುಂತಾದವುಗಳಾಗಿವೆ.

ಎಂಟನೆ ಪಂಚವಾರ್ಷಿಕ ಯೋಜನೆ (೧೯೯೦-೯೫)

೧೯೯೦ನೇ ವರ್ಷವನ್ನು "ಹೆಣ್ಣುಮಗುವಿನ ಸಾರ್ಕ್ ವರ್ಷ" ಹಾಗೂ ೧೯೯೧ರಿಂದ ೨೦೦೦ರ ವರೆಗಿನ ದಶಕವನ್ನು "ಹೆಣ್ಣುಮಕ್ಕಳ ಸಾರ್ಕ್ ದಶಕ"ವೆಂದು ಕರೆಯಲಾಗಿದೆ.

೧೯೯೦ರ ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆಯ ಪ್ರಕಾರ ಕೇಂದ್ರ ಸರ್ಕಾರವು ೧೯೯೨ರಲ್ಲಿ "ರಾಷ್ಟ್ರೀಯ ಮಹಿಳಾ ಆಯೋಗ"ವನ್ನು ಮಹಿಳೆಯ ಹಕ್ಕು ಮತ್ತು ಹಿತಾಸಕ್ತಿಗಳನ್ನು ಕಾಪಾಡಲು ರಚಿಸಲಾಯಿತು.

ಎಂಟನೆ ಪಂಚವಾರ್ಷಿಕ ಯೋಜನೆಯಲ್ಲಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಮಹಿಳಾ ಅಭಿವೃದ್ಧಿಯು ರಾಷ್ಟ್ರದ ಅಭಿವೃದ್ಧಿಗೆ ಪೂರಕವಾದುದು ಎಂದು ಮನಗಂಡು ಮಹಿಳಾ ಶಿಕ್ಷಣ ಮತ್ತು ಉದ್ಯೋಗಕ್ಕೆ ಹೆಚ್ಚು ಆದ್ಯತೆಯನ್ನು ನೀಡಲಾಯಿತು.

ಮಹಿಳೆಯರು ಮಾನವ ಸಂಪನ್ಮೂಲದ ಭಾಗವಾಗಿದ್ದಾರೆ. ಅರ್ಧಭಾಗ ಮಾನವ ಸಂಪನ್ಮೂಲದಲ್ಲಿ ಮಹಿಳೆಯರಿದ್ದಾರೆ. ಆದರೆ ಪುರುಷರಿಗೆ ಹೋಲಿಸಿದಾಗ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಆದುದರಿಂದ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಲಾಯಿತು.

ಒಂಬತ್ತನೆ ಪಂಚವಾರ್ಷಿಕ ಯೋಜನೆ(೧೯೯೫-೨೦೦೦)

ಒಂಬತ್ತನೆ ಪಂಚವಾರ್ಷಿಕ ಯೋಜನೆಯಲ್ಲಿ ಸಾಮಾಜಿಕ-ಆರ್ಥಿಕ ಬದಲಾವಣೆ ಮತ್ತು ಅಭಿವೃದ್ಧಿಯ ಮುಖಾಂತರ ಮಹಿಳೆಯರನ್ನು ಸಶಕ್ತಿಕರಣಗೊಳಿಸುವುದನ್ನು ರಾಷ್ಟ್ರೀಯ ಯೋಜನೆಯಾಗಿ ರೂಪಿಸಲಾಯಿತು. ಮಹಿಳೆಯು ಸ್ವಾವಲಂಬಿಯಾಗಿ ಬಾಳಲು ಶಿಕ್ಷಣ ಮತ್ತು ಉದ್ಯೋಗ (ಆರ್ಥಿಕ ಸ್ವಾವಲಂಬನೆ) ಮುಖ್ಯ ಅಂಶಗಳಾಗಿವೆ. ಶಿಕ್ಷಣವು ಮಹಿಳೆಯರಲ್ಲಿ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸಿ ಉತ್ತಮ ಉದ್ಯೋಗದಲ್ಲಿ ತೊಡಗಿಸಿಕೊಂಡು ಉತ್ತಮ ಸಂಪಾದನೆ ಮಾಡಿ ಸ್ವಾವಲಂಬಿಯಾಗಲು ಉತ್ತಮ ಸಾಧನವಾಗಿದೆ. ಶಿಕ್ಷಣವು ಮಹಿಳೆಯರಲ್ಲಿ ವಿಚಾರಶೀಲತೆ ಮತ್ತು ವಿಶ್ಲೇಷಣ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಆದುದರಿಂದ ಮಹಿಳೆಯರು ಸಶಕ್ತೀಕರಣಕ್ಕೆ ಅತ್ಯವಶ್ಯಕವಾಗಿ ಬೇಕಿರುವುದು ಶಿಕ್ಷಣವಾಗಿದೆ. ಮಹಿಳೆಯರು ಸ್ವಸಹಾಯ ಗುಂಪಿನ ಮುಖಾಂತರ ಅವರನ್ನು ಸಶಕ್ತೀಕರಣಗೊಳಿಸುವುದು. ಈ ಯೋಜನೆಯಲ್ಲಿ ಮಹಿಳೆಯರನ್ನು ಶಿಕ್ಷಣದ ಮುಖಾಂತರ ಸಶಕ್ತಿಗೊಳಿಸಲು ಹೆಣ್ಣುಮಕ್ಕಳಿಗೆ ಕಾಲೇಜು ಶಿಕ್ಷಣದವರೆವಿಗೂ ಉಚಿತ ಶಿಕ್ಷಣ ನೀಡಲು ವಿಶೇಷ ಕ್ರಿಯಾ ಯೋಜನೆಯನ್ನು ೧೯೯೮ರಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯಲ್ಲಿ ಮಹಿಳಾ ಶಿಕ್ಷಕರನ್ನು ಹೆಚ್ಚಾಗಿ ನೇಮಿಸಲಾಯಿತು. ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನು ಒದಗಿಸಲಾಯಿತು.

ಹತ್ತನೆ ಪಂಚವಾರ್ಷಿಕ ಯೋಜನೆ (೨೦೦೦-೨೦೦೫)

೨೦೦೧ನೇ ವರ್ಷವನ್ನು "ಮಹಿಳಾ ಸಶಕ್ತೀಕರಣ ವರ್ಷ"ವೆಂದು ಆಚರಿಸಲಾಗಿದೆ. ಹತ್ತನೆ ಪಂಚವಾರ್ಷಿಕ ಯೋಜನೆಯಲ್ಲಿ ಅಕ್ಷರತೆಯಲ್ಲಿರುವ ಲಿಂಗತಾರತಮ್ಯವನ್ನು ಹೋಗಲಾಡಿಸುವ ಉದ್ದೇಶವನ್ನು ಹೊಂದಲಾಗಿತ್ತು. ಸರ್ವ ಶಿಕ್ಷಣ ಅಭಿಯಾನದ ಶಿಕ್ಷಣದ ಕಾರ್ಯಕ್ರಮಗಳನ್ನು ಹತ್ತನೆ ಪಂಚವಾರ್ಷಿಕ ಯೋಜನೆಯಲ್ಲಿ ಮುಂದುವರಿಸಲಾಯಿತು.

ಹನ್ನೊಂದನೆ ಪಂಚವಾರ್ಷಿಕ ಯೋಜನೆ

ಹನ್ನೊಂದನೆ ಪಂಚವಾರ್ಷಿಕ ಯೋಜನೆಯಲ್ಲಿ ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆಯನ್ನು ತಪ್ಪಿಸಲು ಕ್ರಮಗಳನ್ನು ಕೈಗೊಳ್ಳಲಾಯಿತು. ವಿಶೇಷವಾಗಿ ಗ್ರಾಮಗಳಲ್ಲಿ ಹೆಚ್ಚು ಶಾಲೆಗಳನ್ನು

ತೆರೆಯುವುದು ಮತ್ತು ಹೆಣ್ಣುಮಕ್ಕಳಿಗಾಗಿಯೇ ಪ್ರತ್ಯೇಕ ಶಾಲೆಗಳನ್ನು ತೆಗೆಯುವುದರ ಮೂಲಕ ಮಹಿಳಾ ಸಾಕ್ಷರತೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಯಿತು.

ಈ ಅವಧಿಯಲ್ಲಿ ಇನ್‌ಸೆಂಟೀವ್ ಸ್ಕೀಮ್ ಫಾರ್ ಎಜುಕೇಷನ್ ಆಫ್ ಗರ್ಲ್ಸ್ ಯೋಜನೆಯನ್ನು ಜಾರಿಗೆ ತಂದು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇರುವ ಪ್ರಮುಖ ಅಡೆತಡೆಗಳನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಯಿತು.

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇರುವ ಪ್ರಮುಖ ಅಡೆತಡೆಗಳೆಂದರೆ ಬಡತನ, ಮನೆ ಕೆಲಸದ ನಿರ್ವಹಣೆ, ಒಡಹುಟ್ಟಿದವರನ್ನು ನೋಡಿಕೊಳ್ಳುವ ಜವಾಬ್ದಾರಿ, ಹೆಣ್ಣುಮಕ್ಕಳ ದುಡಿತ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕಡಿಮೆ ಆದ್ಯತೆ, ಹೆಣ್ಣುಮಕ್ಕಳ ಮದುವೆಗೆ ಹೆಚ್ಚಿನ ಆದ್ಯತೆ ಮುಂತಾದವುಗಳಾಗಿವೆ. ಆದುದರಿಂದ ಈ ಸಮಸ್ಯೆಗಳನ್ನು ಹೋಗಲಾಡಿಸಿ ಮಹಿಳಾ ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ಹಲವಾರು ಯೋಜನೆಗಳನ್ನು ಹಾಕಿಕೊಳ್ಳಲಾಯಿತು.

ಒಂದು ಯೋಜನೆಯಿಂದ ಮುಂದಿನ ಯೋಜನೆಯನ್ನು ಗಮನಿಸಿದಾಗ ಭಾರತ ಸರ್ಕಾರ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಹೆಚ್ಚು ಆದ್ಯತೆ ನೀಡುತ್ತಿರುವುದು ಕಂಡು ಬರುತ್ತಿದೆ. ಅವುಗಳ ಪ್ರಮುಖ ಉದ್ದೇಶಗಳೆಂದರೆ ಮಹಿಳಾ ಶಿಕ್ಷಣಮಟ್ಟವನ್ನು ಹೆಚ್ಚಿಸುವುದರ ಮೂಲಕ ಮಹಿಳಾ ಸಬಲೀಕರಣವನ್ನು ಸಾಧಿಸುವುದಾಗಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ಸಮಸ್ಯೆಗಳನ್ನು ಗುರುತಿಸಿಕೊಂಡು ಪರಿಹಾರೋಪಾಯವಾಗಿ ಕೆಲವೊಂದು ವಿಶೇಷ ಕ್ರಮಗಳನ್ನು ಅಳವಡಿಸಿಕೊಳ್ಳಲಾಯಿತು. ಅವುಗಳಲ್ಲಿ ಪ್ರಮುಖವಾಗಿ:

- ಸಾಮಾಜಿಕ ಅವಕಾಶಗಳಿಂದ ವಂಚಿತರಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳಲ್ಲಿನ ಮತ್ತು ಗ್ರಾಮೀಣ ಮಹಿಳೆಯರನ್ನು ಮತ್ತು ಹೆಣ್ಣುಮಕ್ಕಳನ್ನು ವಿಶೇಷವಾಗಿ ಗುರುತಿಸಿಕೊಂಡು ಉಚಿತ ಶಿಕ್ಷಣವನ್ನು ಒದಗಿಸಲಾಯಿತು.
- ಶಾಲಾ ನೋಂದಣಿ ಸಂದರ್ಭದಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚು ಒತ್ತು ಕೊಡಲಾಯಿತು.
- ಪಠ್ಯಕ್ರಮಗಳಲ್ಲಿನ ಲಿಂಗ ಪೂರ್ವಗ್ರಹಗಳನ್ನು ಹೋಗಲಾಡಿಸುವುದು.
- ಶಿಕ್ಷಣ ಮತ್ತು ಶಿಕ್ಷಕಿಯರಲ್ಲಿ ಲಿಂಗ ಸಮಾನತೆಯ ದೃಷ್ಟಿಕೋನವನ್ನು ಬೆಳೆಸುವುದು.
- ಹೆಣ್ಣುಮಕ್ಕಳು ಶಾಲೆ ಬಿಡದಂತೆ ಆಕರ್ಷಕ ಕಲಿಕಾ ವಿಧಾನವನ್ನು ಅಳವಡಿಸುವುದು.
- ಬಡ ಮಕ್ಕಳಿಗೆ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಉಚಿತ ಸಮವಸ್ತ್ರ, ಉಚಿತ ಪುಸ್ತಕ ಮಧ್ಯಾಹ್ನದ ಊಟ ಒದಗಿಸುವುದರ ಮೂಲಕ ಹೆಣ್ಣುಮಕ್ಕಳನ್ನು ವಿಶೇಷವಾಗಿ ಗ್ರಾಮೀಣ ಹೆಣ್ಣುಮಕ್ಕಳನ್ನು ಶಿಕ್ಷಣದತ್ತ ಆಕರ್ಷಿಸಲಾಯಿತು.

ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಶಿಕ್ಷಣ(೨೦೧೨-೨೦೧೭)

ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಶಿಕ್ಷಣದ ಅಭಿವೃದ್ಧಿ ಒಂದು ಪ್ರಮುಖ ಉದ್ದೇಶವಾಗಿತ್ತು.

ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಲು ಮತ್ತು ಸಮಾಜದಲ್ಲಿ ಉತ್ತಮ ಸ್ಥಾನಮಾನ ವನ್ನು ಪಡೆದುಕೊಳ್ಳಲು ಶಿಕ್ಷಣವು ಪ್ರಮುಖವಾದುದರಿಂದ ಮಹಿಳಾ ಶಿಕ್ಷಣ ಅಭಿವೃದ್ಧಿ ಮಾಡುವ ಮೂಲಕ ಸ್ತ್ರೀ ಸಮಾನತೆಯನ್ನು ಸಾಧಿಸಲು ಸರ್ಕಾರ ಯೋಜನೆಯನ್ನು ರೂಪಿಸಿತು. ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಲಿಂಗ ಸಮಾನತೆ ತತ್ವವನ್ನು ಪ್ರತಿಪಾದಿಸುವ ಮೂಲಕ ಪ್ರಾಥಮಿಕ ಶಿಕ್ಷಣ ಪದ್ಧತಿಯಲ್ಲಿ ಸಮಾನತೆಯನ್ನು ತರುವ ಪ್ರಯತ್ನ ಮಾಡಲಾಗಿದೆ. ಲಿಂಗ ಸಮಾನತೆ ಮತ್ತು ಸ್ತ್ರೀ ಜಾಗೃತಿಯನ್ನು ಮೂಡಿಸುವ ಪಠ್ಯ ಕ್ರಮವನ್ನು ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಲಾಗಿದೆ.

ಶಿಕ್ಷಣ ಪದ್ಧತಿಯಲ್ಲಿ ಲೈಂಗಿಕ ಶೋಷಣೆ ಮತ್ತು ಸ್ತ್ರೀಯರ ವಿರುದ್ಧ ಹಿಂಸೆಯಂತಹ ಸಾಮಾಜಿಕ ಸಮಸ್ಯೆಗಳನ್ನು ಅಳವಡಿಸಿ ಸಮಾಜದ ಜನರಲ್ಲಿ ಜಾಗೃತಿ ಮೂಡಿಸಲು ಯೋಜನೆ ಹಾಕಿಕೊಳ್ಳಲಾಗಿದೆ.

ರಾಷ್ಟ್ರ ಮತ್ತು ರಾಜ್ಯಗಳ ಸಹಭಾಗಿತ್ವದಲ್ಲಿ ಸರ್ವಶಿಕ್ಷಣ ಅಭಿಯಾನ ಮತ್ತು ಮಹಿಳಾ ಸಮಸ್ಯೆ ಯೋಜನೆಗಳನ್ನು ಯೂನಿಸೆಫ್ ನೆರವಿನೊಂದಿಗೆ ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ೧೨ನೆ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಶಿಕ್ಷಣ ಅಭಿವೃದ್ಧಿಗೆ ಹೆಚ್ಚು ಹಣವನ್ನು ವ್ಯಯಿಸಲು ತೀರ್ಮಾನಿಸಲಾಗಿದೆ.

ಭಾರತ ಸ್ವಾತಂತ್ರ್ಯ ಪಡೆದ ನಂತರ ಪಂಚವಾರ್ಷಿಕ ಯೋಜನೆಯಲ್ಲಿ ದಿನದಿಂದ ದಿನಕ್ಕೆ ಮಹಿಳಾ ಶಿಕ್ಷಣಕ್ಕೆ ಅದರಲ್ಲೂ ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಉತ್ತೇಜನ ನೀಡುತ್ತಿದೆ. ಮಹಿಳೆಯರು ಈ ಅನುಕೂಲಗಳನ್ನು ಪಡೆಯುತ್ತಿದ್ದಾರೆ. ಆದರೆ ಎಲ್ಲಾ ಗ್ರಾಮೀಣ ಮಹಿಳೆಯರು ಈ ಅವಕಾಶಗಳನ್ನು ಪಡೆದುಕೊಳ್ಳುತ್ತಿಲ್ಲ. ಹಿಂದುಳಿದ ಗ್ರಾಮಗಳ ಗ್ರಾಮೀಣ ಜನರಲ್ಲಿರುವ ಸಾಂಪ್ರದಾಯಕ ಮನೋಭಾವನೆ ಬದಲಾಗಿಲ್ಲ. ಗ್ರಾಮೀಣ ಜನರಲ್ಲಿ ಮಹಿಳಾ ಶಿಕ್ಷಣ ಜಾಗೃತಿ ಇನ್ನೂ ಸಂಪೂರ್ಣವಾಗಿ ಮೂಡಿಲ್ಲ. ಹಿಂದುಳಿದ ಗ್ರಾಮೀಣ ಜನರು ತಮ್ಮ ಗಂಡು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಇನ್ನೂ ಲಿಂಗ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಆದುದರಿಂದ ಪಂಚವಾರ್ಷಿಕ ಯೋಜನೆಯ ಲಾಭಗಳನ್ನು ಪಡೆಯುವಲ್ಲಿ ಭಾರತದ ಹಿಂದುಳಿದ ಗ್ರಾಮಗಳ ಜನರು ವಿಫಲರಾಗಿದ್ದಾರೆ. ಮಹಿಳಾ ಶಿಕ್ಷಣದ ಅನುಕೂಲ ಮತ್ತು ಮಹತ್ವವನ್ನು ಈ ಗ್ರಾಮಗಳಿಗೆ ತಿಳಿಸಿಕೊಡುವ ಮೂಲಕ ಯೋಜನೆಯ ಲಾಭವನ್ನು ಪಡೆಯಲು ಸ್ಥಳೀಯ

ಅಧಿಕಾರಿಗಳು ಮತ್ತು ಸಂಘ ಸಂಸ್ಥೆಗಳು ಮತ್ತು ಶಾಲಾ ಶಿಕ್ಷಕಿಯರು ಪ್ರಯತ್ನಿಸುವ ಅಗತ್ಯ ತುಂಬಾಇದೆ.

ವಿಶ್ವವಿದ್ಯಾಲಯ ಶಿಕ್ಷಣ ಆಯೋಗ/ರಾಧಾಕೃಷ್ಣನ್ ಆಯೋಗ(೧೯೪೮-೪೯)

ದೇಶದ ಈಗಿನ ಮತ್ತು ಮುಂದಿನ ಅಗತ್ಯಗಳಿಗೆ ಸೂಕ್ತವಾಗಬಲ್ಲ ಸುಧಾರಣೆಗಳನ್ನು ಸೂಚಿಸಲು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ಸಲಹೆಗಳನ್ನು ನೀಡಲೋಸುಗ ಕೇಂದ್ರ ಸರಕಾರವು ನವೆಂಬರ್ ೪, ೧೯೪೮ರಲ್ಲಿ ಸರ್ವಪಲ್ಲಿ ಡಾ. ರಾಧಾಕೃಷ್ಣನ್‌ರವರ ನೇತೃತ್ವದಲ್ಲಿ ಹತ್ತು ಜನ ಸದಸ್ಯರುಳ್ಳ ವಿಶ್ವವಿದ್ಯಾಲಯ ಸಮಿತಿಯನ್ನು ರಚಿಸಿತು. ಈ ಸಮಿತಿಯು ದೇಶದ ಹಲವಾರು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಅವುಗಳ ಸಮಸ್ಯೆಗಳನ್ನು ಕುರಿತು ಹಲವಾರು ಶಿಕ್ಷಕರೊಂದಿಗೆ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂದರ್ಶನ ನಡೆಸಿ ಅವರ ಸಮಸ್ಯೆಗಳನ್ನು ತಿಳಿದುಕೊಂಡಿತು. ಅನಂತರ ಒಂದು ವರ್ಷದ ಅವಧಿಯಲ್ಲಿ ಸರ್ವಪಲ್ಲಿ ಡಾ. ರಾಧಾಕೃಷ್ಣನ್‌ರವರ ಸಮಿತಿಯು ತನ್ನ ವರಧಿಯನ್ನು ಸಲ್ಲಿಸಿತು. ಆ ವರಧಿಯಲ್ಲಿ ಸ್ತ್ರೀ ಶಿಕ್ಷಣಕ್ಕೆ ಸಬಂದಿಸಿದಂತೆ ಕೆಲವು ಶಿಪಾರಸ್ಸುಗಳನ್ನು ಮಾಡಿತು. ಅವುಗಳೆಂದರೆ:

೧. ಸ್ತ್ರೀಯರಿಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಬೇಕು.

೨. ಸಹ ಶಿಕ್ಷಣ ನೀಡುವಂತಹ ಮಹಾವಿದ್ಯಾಲಯಗಳಲ್ಲಿ ಶಿಸ್ತಿನ ವಾತಾವರಣ ಇರಬೇಕು.

೩. ಸ್ತ್ರೀಯರಿಗೆ ಶಿಕ್ಷಣಕ್ಕೆ ಸಂಬಂದಿಸಿದಂತೆ ಹೆಚ್ಚಿನ ಅವಕಾಶಗಳನ್ನು ಒದಗಿಸಿಕೊಡಬೇಕು.

೪. ಶಿಕ್ಷಕಿಯರಿಗೆ ಶಿಕ್ಷಕರಷ್ಟೇ ಸಮಾನ ವೇತನವನ್ನು ನೀಡಬೇಕು.

೫. ಮಾಧ್ಯಮಿಕ ಶಿಕ್ಷಣ ಹಂತದಲ್ಲಿ ಹುಡುಗಿಯರಿಗಾಗಿ ಪ್ರತ್ಯೇಕ ಶಾಲೆಗಳಿರಬೇಕು.

೬. ಮೂಲ ಶಿಕ್ಷಣ ಕೇಂದ್ರಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಸಹ ಶಿಕ್ಷಣವನ್ನು ನೀಡಬೇಕು.

ಈ ಎಲ್ಲಾ ಶಿಫಾರಸ್ಸುಗಳನ್ನು ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ಮಾಡಲಾಯಿತು.

ರಾಷ್ಟ್ರೀಯ ಮಹಿಳಾ ಆಯೋಗ(೧೯೬೪)

ಹುಡುಗರ ಮತ್ತು ಹುಡುಗಿಯರ ಶಿಕ್ಷಣದಲ್ಲಿಯ ವ್ಯತ್ಯಾಸವನ್ನು ಪರಿಶೀಲಿಸುವುದಕ್ಕಾಗಿ ಈ ಆಯೋಗವನ್ನು ರಚಿಸಲಾಯಿತು. ಈ ಆಯೋಗದ ಪ್ರಮುಖ ಶಿಫಾರಸ್ಸುಗಳೆಂದರೆ:

೧. ಹುಡುಗರ ಮತ್ತು ಹುಡುಗಿಯರ ಶಿಕ್ಷಣದಲ್ಲಿಯ ಅಂತರವನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳುವುದು.

೨. ಪ್ರಾಥಮಿಕ ಹಾಗೂ ಹುಡುಗರ ಶಾಲೆ-ಕಾಲೇಜುಗಳಲ್ಲೂ ಮಹಿಳಾ ಶಿಕ್ಷಕಿಯರನ್ನು ನೇಮಿಸುವಂತೆ ಶಿಫಾರಸ್ಸು ಮಾಡಲಾಯಿತು.

೩. ಹುಡುಗಿಯರಿಗಾಗಿ ಪ್ರತ್ಯೇಕ ಮಾಧ್ಯಮಿಕ ಶಾಲೆಯನ್ನು ತೆರೆಯುವಂತೆ ಸೂಚಿಸಿತು.

೪. ಮಾಧ್ಯಮಿಕ ಶಾಲೆಗಳಲ್ಲಿ ಮಹಿಳೆಯರಿಗೆ ಲೈಂಗಿಕ ಶಿಕ್ಷಣದ ಅರಿವುಂಟಾಗಲು ಲೈಂಗಿಕ ಶಿಕ್ಷಣ ನೀಡುವಂತೆ ಸೂಚಿಸಿತು.

ರಾಷ್ಟ್ರೀಯ ಶಿಕ್ಷಣ ನೀತಿ(೧೯೬೮)

ರಾಷ್ಟ್ರೀಯ ಶಿಕ್ಷಣ ನೀತಿಯು ಮಹಿಳೆಯರಿಗೆ ಶಿಕ್ಷಣ ನೀಡುವ ಉದ್ದೇಶ ಸಾಮಾಜಿಕ ನ್ಯಾಯ ಒದಗಿಸುವುದಕ್ಕೇ ಅಲ್ಲದೆ ಅದು ಸಾಮಾಜಿಕ ಬದಲಾವಣೆಯನ್ನು ಉಂಟುಮಾಡುತ್ತದೆ. ಆದುದರಿಂದ ಮಹಿಳಾ ಶಿಕ್ಷಣಕ್ಕೆ ಮಹತ್ವ ನೀಡಬೇಕಾಗಿದೆ ಎಂದು ವಾದಿಸಿತು. ಶಿಕ್ಷಣವು ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದರ ಜೊತೆಗೆ ಮಹಿಳೆಯರ ಸ್ಥಾನಮಾನ ಉತ್ತಮಗೊಳಿಸಲು ಅನುವುಮಾಡಿಕೊಡುತ್ತದೆ.

ಭಾರತ ಸರ್ಕಾರವು ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ತನ್ನ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಮುಖಾಂತರ ರಾಷ್ಟ್ರೀಯ ಶಿಕ್ಷಣ ಅನುಸಂಧಾನ ಹಾಗೂ ಪ್ರಶಿಕ್ಷಣ ಪರಿಷತ್ತಿನ ಮೂಲಕ ರೂಪಿಸಿ ಅದನ್ನು ಮಾಜಿ ಪ್ರಧಾನ ಮಂತ್ರಿ ದಿ. ಶ್ರೀ ರಾಜೀವ್ ಗಾಂಧಿಯವರ ನೇತೃತ್ವದಲ್ಲಿ ಸಂಸತ್ತಿನಲ್ಲಿ ಮಂಡಿಸಲ್ಪಟ್ಟು ಒಪ್ಪಿಗೆ ಪಡೆಯಿತು.

ಈ ನೀತಿಯ ಪ್ರಮುಖ ಅಂಶವೆಂದರೆ ರಾಷ್ಟ್ರದಾದ್ಯಂತ ಏಕರೀತಿಯ ಶಿಕ್ಷಣ ವ್ಯವಸ್ಥೆಯನ್ನು ಅಂಗೀಕರಿಸುವುದು ಮತ್ತು ವಿಧ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರಿಗೆ ಏಕರೀತಿಯ ವ್ಯಾಸಂಗ ಕ್ರಮಗಳನ್ನು ಅಳವಡಿಸುವುದು.

ಮಕ್ಕಳಿಗೆ ಶಿಕ್ಷಣ ನೀಡುವುದರ ಮುಖಾಂತರ ಮಹಿಳೆಯರ ಸ್ಥಾನಮಾನದಲ್ಲಿ ಬದಲಾವಣೆಯನ್ನು ತರುವ ಉದ್ಧೇಶವನ್ನು ಹೊಂದಿತ್ತು. ಮಹಿಳೆಯರನ್ನು ಸಬಲಗೊಳಿಸುವ ದಿಸೆಯಲ್ಲಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ಪರಿಣಾಮಕಾರಿ ಪಾತ್ರವಹಿಸುವುದು. ಇದು ಪುನರ್ ರಚಿತ ಪಠ್ಯಕ್ರಮ, ಪಠ್ಯಕ್ರಮಗಳನ್ನು ರೂಪಿಸುವುದು ಹಾಗೂ ಶಿಕ್ಷಕರು ಆಡಳಿತ ನಿರ್ವಾಹಕರು ಹಾಗೂ ಆಡಳಿತ ನಿರ್ಧಾರಕರುಗಳಿಗೆ ತರಬೇತಿ ನೀಡುವುದರ ಮೂಲಕ ಶಿಕ್ಷಣ ಸಂಸ್ಥೆಗಳ ಸಕ್ರೀಯ ಸಹಕಾರದೊಂದಿಗೆ ಹೊಸ ಮೌಲ್ಯಗಳನ್ನು ರೂಪಿಸಲು ಶ್ರಮಿಸುವುದು, ಮಹಿಳೆಯರ ಕುರಿತು ಅಧ್ಯಯನವನ್ನು ವಿವಿಧ ಕಲಿಕ ವಿಷಯಗಳಲ್ಲಿ ಅಳವಡಿಸುವುದರ ಜೊತೆಗೆ ಮಹಿಳೆಯರ ಅಭಿವೃದ್ಧಿಯ ಬಗ್ಗೆ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಯಿತು.

ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಭಾಗವಹಿಸುವಂತೆ ಮಾಡಲು ಹೆಚ್ಚು ಒತ್ತು ನೀಡಲಾಯಿತು. ಶಿಕ್ಷಣದಲ್ಲಿ ಲಿಂಗತಾರತಮ್ಯವನ್ನು ಹೋಗಲಾಡಿಸಿ ಸಮಾನತೆ ತರಲು ಪಕ್ಷಪಾತರಹಿತ ನೀತಿಯನ್ನು ಅಳವಡಿಸಲಾಯಿತು.

೧೯೭೧-೭೪ರ ಸ್ತ್ರೀಯರ ಸ್ಥಾನಮಾನ ಕುರಿತಾದ ಮಂಡಳಿ

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ೧೯೭೧ರಲ್ಲಿ ನೇಮಿಸಲ್ಪಟ್ಟ ಸ್ತ್ರೀಯರ ಸ್ಥಾನಮಾನ ಕುರಿತಾದ ಮಂಡಳಿಯು ೧೯೭೪ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಕೆಲವು ಸಲಹೆಗಳು ಈ ಕೆಳಗಿನಂತಿವೆ:

೧. ಸಹ-ಶಿಕ್ಷಣವನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಸಾಮಾನ್ಯ ನೀತಿನಿಯಮಗಳಿರಬೇಕು.

೨. ಹುಡುಗಿಯರಿಗಾಗಿ ಪ್ರತ್ಯೇಕ ಕಾಲೇಜುಗಳಿಗೆ ಉತ್ತೇಜನ ನೀಡುವುದು.

೩. ಸಹ-ಶಿಕ್ಷಣ ನೀಡುವ ಶಾಲೆಗಳಲ್ಲಿ ಶಿಕ್ಷಕಿಯರಿಬ್ಬರೂ ಕೆಲಸ ಮಾಡುವುದನ್ನು ಮಾನ್ಯತೆ ನೀಡುವ ನಿಯಮಗಳಲ್ಲಿ ಒಂದನ್ನಾಗಿಸುವುದು.

೪. ಹತ್ತನೆಯ ತರಗತಿಯವರೆಗೆ ಹುಡುಗಿಯರಿಗೆ ಹಾಗೂ ಹುಡುಗರಿಗೆ ಒಂದೇ ರೀತಿಯ ಪಠ್ಯಕ್ರಮವಿರುವಂತೆ ಮಾಡುವುದು.

೫. ವಸತಿ ಗೃಹ ಸೌಲಭ್ಯ ಹೊಂದಿದ ಶಾಲೆಗಳ ಹಾಗೂ ಸಂಚಾರಿ ಶಾಲೆಗಳ ಸೌಲಭ್ಯ ಒದಗಿಸುವುದು.

೬. ಶಾಲಾಪೂರ್ವ ಶಿಕ್ಷಣವನ್ನು ಒದಗಿಸಬೇಕು.

೭. ಮಕ್ಕಳು ಶಾಲೆಗೆ ಬರುವಂತೆ ಉತ್ತೇಜಿಸಿ ಮಧ್ಯಾಹ್ನೋಪಹಾರ, ಉಡುಪು, ಓದುವ ಹಾಗೂ ಬರೆಯುವ ಸಲಕರಣೆಗಳನ್ನು ಒದಗಿಸುವುದು.

೮. ಹುಡುಗಿಯರ ಪ್ರವೇಶ ಪ್ರಮಾಣ ಕಡಿಮೆಯಿರುವ ಪ್ರದೇಶಗಳಲ್ಲಿ ವಿಶೇಷ ಉತ್ತೇಜನ ನೀಡುವುದು.

೯. ಶೇಕಡ ೫೦ರಷ್ಟು ಶಿಕ್ಷಕಿಯರು ಪ್ರಾಥಮಿಕ ಶಿಕ್ಷಣದಲ್ಲಿರುವಂತೆ ಮಾಡುವುದು.

೧೦. ಶಾಲೆಗೆ ಹೋಗುವ ವಯಸ್ಸಿಗೂ ಕೆಳಗಿನ ಚಿಕ್ಕ ಮಕ್ಕಳಿಗೆ ತಮ್ಮ ಸಹೋದರಿಯರ ಜೊತೆ ಶಾಲೆಗೆ ಬರುವ ಸೌಲಭ್ಯ ಒದಗಿಸುವುದು.

ಸ್ತ್ರೀ ಶಿಕ್ಷಣಕ್ಕೆ ಮಹತ್ವದ ಸ್ಥಾನವನ್ನು ಕಲ್ಪಿಸುವುದಾದರೆ, ಬಾಲಕರ ಮತ್ತು ಬಾಲಕಿಯರ ಶಿಕ್ಷಣಕ್ರಮದಲ್ಲಿನ ಅಂತರವನ್ನು ಇಲ್ಲವಾಗಿಸಬೇಕಾದರೆ ಹೆಚ್ಚು ಹೆಚ್ಚು ಶಾಲೆಗಳನ್ನು ಬಾಲಕಿಯರಿಗಾಗಿ ತೆರೆಯಬೇಕು. ಈವರೆಗೆ ಪ್ರಾಯೋಗಿಕವಾಗಿ ನಿರ್ಲಕ್ಷಿಸಲ್ಪಟ್ಟ ಗ್ರಾಮಾಂತರ ಪ್ರದೇಶಗಳಿಗೆ ವಿಶೇಷ ಪ್ರಾತಿನಿಧ್ಯವನ್ನು ಕೊಡಬೇಕು. ವಿದ್ಯಾರ್ಥಿನಿಲಯಗಳು, ಪ್ರಯೋಗ ಶಾಲೆಗಳು, ಆಟದ ಮೈದಾನಗಳು ಮತ್ತು ಗ್ರಂಥಾಲಯಗಳ ಸ್ಥಾಪನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಸರಕಾರವು ಸಹಾಯ ಮಾಡಬೇಕು. ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯಲು ಸಾಧ್ಯವಾಗದೆ ಇರುವ ಕಡೆ ಸಹಶಿಕ್ಷಣಕ್ಕೆ ಉತ್ತೇಜನ ನೀಡಬೇಕು. ಸ್ತ್ರೀ ಶಿಕ್ಷಣವನ್ನು ಪ್ರೋತ್ಸಾಹಿಸಲು ಅರ್ಥಿಕ ಸಂಖ್ಯೆಯಲ್ಲಿ ಶಿಷ್ಯವೇತನ ಕೊಡಬೇಕು. ಸ್ತ್ರೀ ಶಿಕ್ಷಣವಿಲ್ಲದ ರಾಷ್ಟ್ರದಲ್ಲಿ ನಾವು ಸಾಮಾಜಿಕ ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸಲು ಸಾಧ್ಯವಿಲ್ಲವೆಂದು ಸಮಿತಿ ಅಭಿಪ್ರಾಯಪಟ್ಟಿದೆ.

ಸರ್ವ ಶಿಕ್ಷಣ ಅಭಿಯಾನ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಮೊಟ್ಟಮೊದಲ ರಾಷ್ಟ್ರೀಯ ಕಾರ್ಯಕ್ರಮವನ್ನು ೨೦೦೧ರಲ್ಲಿ ಪ್ರಾರಂಭಿಸಿದ್ದು ಇದನ್ನು ಸರ್ವಶಿಕ್ಷಣ ಅಭಿಯಾನವೆಂದು ಕರೆಯಲಾಗಿದೆ. ಇದು ಕೇಂದ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಗೆ ಒಳಪಟ್ಟಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದೊಂದಿಗೆ ಹಾಗೂ ರಾಜಕೀಯ ಇಚ್ಛಾಶಕ್ತಿಯೊಂದಿಗೆ ಅನುಷ್ಠಾನ ಗೊಂಡಿರುವ ಕಾರ್ಯಕ್ರಮವಾಗಿದೆ. ಶಾಲಾ ವ್ಯವಸ್ಥೆಯ ಹೊಣೆಗಾರಿಕೆಯನ್ನು ಸಮುದಾಯ ವಹಿಸಿಕೊಳ್ಳುವ ಮೂಲಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವ ಆಶಯ ವ್ಯಕ್ತಪಡಿಸಲಾಗಿದೆ.

ಬಾ ಬಾಲೆ ಶಾಲೆಗೆ

ಸರ್ವಶಿಕ್ಷಣ ಅಭಿಯಾನದಡಿ ಶಾಲೆಯಿಂದ ಹೊರಗುಳಿದ ೬ರಿಂದ ೧೪ ವರ್ಷದವರೆಗಿನ ಎಲ್ಲಾ ಮಕ್ಕಳನ್ನು ೨೦೦೩ರ ಅಂತ್ಯದೊಳಗೆ ಶಾಲೆಗೆ ಕರೆತರುವ ಗುರಿಯನ್ನು ಹೊಂದಲಾಗಿದೆ. ಇದರ ಉದ್ದೇಶ ಶಾಲೆಗೆ ಬಾರದ ೧೪ ವರ್ಷದವರೆಗಿನ ಎಲ್ಲಾ ಹೆಣ್ಣುಮಕ್ಕಳನ್ನು ಶಾಲೆಗೆ ಕರೆತರುವುದು. ೮ನೇ ತರಗತಿ ಮುಗಿಸುವವರೆಗೆ ಶಾಲೆ ಬಿಡದಂತೆ ನೋಡಿಕೊಳ್ಳುವುದು, ಅವರು ಕಲಿಕಾ ಮಟ್ಟವನ್ನು ತಲುಪುವಂತೆ ಮಾಡುವುದು ಹಾಗೂ ಲಿಂಗ ತಾರತಮ್ಯವನ್ನು ಹೋಗಲಾಡಿಸು ವುದೇ ಆಗಿದೆ. ಶಾಲೆಯಿಂದ ಹೊರಗುಳಿದಿರುವವರಲ್ಲಿ ಬಾಲಕಿಯರ ಸಂಖ್ಯೆ ಹೆಚ್ಚು. ಸಾಕ್ಷರತಾ ಪ್ರಮಾಣದಲ್ಲಿ ಪುರುಷರು ಮತ್ತು ಮಹಿಳೆಯರ ಮಧ್ಯೆ ಸುಮಾರು ಶೇಕಡ ೧೯ ವ್ಯತ್ಯಾಸವಿದೆ. ಅಂದರೆ ನಮ್ಮ ಸಮಾಜದಲ್ಲಿ ಲಿಂಗ ತಾರತಮ್ಯ ಇನ್ನೂ ಅಳಿದಿಲ್ಲ. ಈ ಕಾರ್ಯಕ್ರಮಕ್ಕಾಗಿ "ಬಾ ಬಾಲೆ ಶಾಲೆಗೆ" ಎಂಬ ಕಾರ್ಯಕ್ರಮ ರೂಪಿಸಿಕೊಂಡು ಶಿಕ್ಷಕಿಯರು ತಮ್ಮ ಶಾಲಾ ವ್ಯಾಪ್ತಿಯಲ್ಲಿ ಶಾಲೆಗೆ ಬಾರದ ಬಾಲಕಿಯರನ್ನು ಗುರುತಿಸಿ ಅವರನ್ನು ತಮ್ಮೊಳಗೆ ಹಂಚಿಕೊಂಡು

ದತ್ತು ತೆಗೆದುಕೊಳ್ಳುವುದು. ಶಾಲೆಗೆ ಬಾರದ ಹೆಣ್ಣುಮಕ್ಕಳ ಪೋಷಕರನ್ನು ಮನವೊಲಿಸಿ, ಜನ್ಮ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳದೆ, ಶಾಲೆಗೆ ದಾಖಲಿಸುವುದು.

ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಮುಂದುವರೆದ ಜಾತಿಯವರಿಗಿಂತ ಹಿಂದುಳಿದಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸರ್ವ ಶಿಕ್ಷಣ ಅಭಿಯಾನದಲ್ಲಿ ಹೆಚ್ಚು ಆದ್ಯತೆಯನ್ನು ನೀಡಲಾಯಿತು. ಇದರ ಉದ್ದೇಶ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ಹೆಣ್ಣುಮಕ್ಕಳ ಶಿಕ್ಷಣ ಮಟ್ಟವನ್ನು ಹೆಚ್ಚಿಸುವುದಾಗಿದೆ.

ನ್ಯಾಷನಲ್ ಪ್ರೋಗ್ರಾಂ ಫಾರ್ ದಿ ಎಜುಕೇಶನ್ ಆಫ್ ಗರ್ಲ್ಸ್ ಆಫ್ ಎಲಿಮೆಂಟರಿ ಲೆವಲ್ (NPEGEL)

ಈ ಕಾರ್ಯಕ್ರಮವು ಸರ್ವ ಶಿಕ್ಷಣ ಅಭಿಯಾನದ ಯೋಜನೆ ಅಡಿಯಲ್ಲಿ ಸೆಪ್ಟಂಬರ್ ೨೦೦೩ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯಲ್ಲಿ ಹೆಣ್ಣುಮಕ್ಕಳಿಗೆ ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಉಚಿತ ಪಠ್ಯ ಪುಸ್ತಕ ವಿತರಿಸುವುದು. ಪ್ರತ್ಯೇಕ ಮಹಿಳಾ ಶೌಚಾಲಯವನ್ನು ಸ್ಥಾಪಿಸುವುದು. ಶಾಲೆಯಿಂದ ಹೊರಗುಳಿದವರಿಗೆ ಬ್ರಿಡ್ಜ್ ಕೋರ್ಸ್‌ಗಳನ್ನು ಪ್ರಾರಂಭಿಸುವುದು. ಶೇ.೫೦ ರಷ್ಟು ಮಹಿಳಾ ಶಿಕ್ಷಕಿಯರನ್ನು ನೇಮಿಸುವುದು. ಶಿಕ್ಷಣ ಕಲಿಕೆಯಲ್ಲಿ ಲಿಂಗ ಸಮಾನತಾ ಅಂಶಗಳನ್ನು ಅಳವಡಿಸುವುದು. ಈ ಕಾರ್ಯಕ್ರಮದಲ್ಲಿ ಸೌಲಭ್ಯವಂಚಿತ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಕಾಳಜಿ ವಹಿಸಲಾಯಿತು. ಶಾಲಾ ಉಸ್ತುವಾರಿಯನ್ನು ನೋಡಿಕೊಳ್ಳಲು ಸ್ಥಳೀಯ ಗ್ರಾಮ ಸಮಿತಿಯನ್ನು ರಚಿಸಲಾಯಿತು. ಈ ಯೋಜನೆಯಲ್ಲಿ ಹೆಣ್ಣುಮಕ್ಕಳಿಗೆ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರವನ್ನು ವಿತರಿಸುವ ಉದ್ದೇಶ. ಹೆಣ್ಣುಮಕ್ಕಳ ಶಿಕ್ಷಣದ ವೆಚ್ಚವನ್ನು ಕಡಿಮೆ ಮಾಡುವುದರಿಂದ ಹೆಚ್ಚು ಹೆಣ್ಣುಮಕ್ಕಳು ಪ್ರಾಥಮಿಕ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ. ಈ ಯೋಜನೆ ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ರೂಪಿಸಲಾಗಿದೆ.

ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್(ECCE)

ಈ ಯೋಜನೆಯು ಶಾಲಾ ಪೂರ್ವಶಾಲೆಯಾಗಿದ್ದು, ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಬರುತ್ತದೆ. ಹೆಣ್ಣುಮಕ್ಕಳು ತಮ್ಮ ಶಾಲೆ ಬಿಟ್ಟು ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಮನೆಯಲ್ಲಿರಬೇಕಾದ ಪರಿಸ್ಥಿತಿ ತಪ್ಪಿಸಲು ಮತ್ತು ಹೆಣ್ಣುಮಕ್ಕಳು ಶಾಲೆಗೆ ಬರಲು ಪೂರ್ವತಯಾರಿ ನೀಡುವ ಉದ್ದೇಶದಿಂದ ಗ್ರಾಮಗಳಲ್ಲಿ ಶಾಲೆಗಳ ಉಸ್ತುವಾರಿಯಲ್ಲಿ ಈ ಯೋಜನೆಯನ್ನು ತರಲಾಯಿತು. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ನಡೆಸಲಾಗುತ್ತಿದೆ. ಈ ಯೋಜನೆಗೆ ಮಕ್ಕಳು ಆಟವಾಡಲು ಮತ್ತು ಕಲಿಯಲು ಅಗತ್ಯ ಸಾಮಗ್ರಿಗಳನ್ನು ಒದಗಿಸಬೇಕಾಗುತ್ತದೆ.

ಕಸ್ತೂರ ಬಾ ಗಾಂಧಿ ಬಾಲಿಕ ವಿದ್ಯಾಲಯ (KGBVs)

ಮಹಿಳಾ ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ಜುಲೈ ೨೦೦೪ರಲ್ಲಿ ವಸತಿ ಸಹಿತ ಶಾಲೆಗಳನ್ನು ಉನ್ನತ, ಪ್ರಾಥಮಿಕ ಶಿಕ್ಷಣ ಪಡೆಯುವ ಹೆಣ್ಣುಮಕ್ಕಳಿಗಾಗಿ ತೆರೆಯಲಾಯಿತು. ಈ ಶಾಲೆಗಳಲ್ಲಿ ಪ್ರವೇಶವನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಕುಟುಂಬಗಳ ಮತ್ತು ಅಲ್ಪಸಂಖ್ಯಾತ ಸಮುದಾಯದ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ತೆರೆಯಲಾಯಿತು. ಈ ಯೋಜನೆಯನ್ನು ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ತೆರೆಯಲಾಯಿತು. ಈ ಶಾಲೆಗಳಲ್ಲಿ ಶೇ.೭೫% ಮೀಸಲಾತಿಯನ್ನು ಎಸ್.ಸಿ., ಎಸ್.ಟಿ, ಒ.ಬಿಸಿ. ಮತ್ತು ಅಲ್ಪಸಂಖ್ಯಾತ ಸಮುದಾಯದ ಹೆಣ್ಣುಮಕ್ಕಳಿಗೂ ಮತ್ತು ಶೇ.೨೫% ಮೀಸಲಾತಿಯನ್ನು ಬಿ.ಪಿ.ಎಲ್. ಕುಟುಂಬದ ಹೆಣ್ಣುಮಕ್ಕಳಿಗೂ ನೀಡಲಾಗುತ್ತದೆ. ಈ ಯೋಜನೆ ೨೪ ರಾಜ್ಯಗಳಲ್ಲಿ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಜಾರಿಯಲ್ಲಿದೆ.

ಕರ್ನಾಟಕ ರಾಜ್ಯದಲ್ಲಿ ೫೮ ಕೆ.ಜಿ.ಬಿ.ವಿ. ಶಾಲೆಗಳಿವೆ. ಇವುಗಳ ಉಸ್ತುವಾರಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಮಹಿಳಾ ಸಮ್ಯೆಕ್ಯ ಪದಾಧಿಕಾರಿಗಳು ಮತ್ತು ಎನ್.ಜಿ.ಒ.ಗಳು ನೋಡಿಕೊಳ್ಳುತ್ತಿವೆ. ಈ ಯೋಜನೆಯು ಶೈಕ್ಷಣಿಕವಾಗಿ ಹಿಂದುಳಿದ ಹೆಣ್ಣುಮಕ್ಕಳು ತಮ್ಮ ಶಿಕ್ಷಣ ಮಟ್ಟವನ್ನು ಹೆಚ್ಚಿಸಿಕೊಳ್ಳಲು ತುಂಬಾ ಅನುಕೂಲವಾಗಿದೆ.

ಮಹಿಳಾ ಸಮ್ಯಕ್ಸ ಸ್ಕೀಮ್(M.S.P.)

ಈ ಯೋಜನೆಯನ್ನು ೧೯೮೮ರಲ್ಲಿ ೧೯೮೬ರ ಹೊಸ ಶಿಕ್ಷಣ ನೀತಿಯ ಅನ್ವಯ ಜಾರಿಗೊಳಿಸಲಾಯಿತು. ಮಹಿಳಾ ಸಮ್ಯಕ್ಸ ಯೋಜನೆಯು ಎಲ್ಲಾ ವಯಸ್ಸಿನ ಮಹಿಳೆಯರಿಗೆ ಅನುಕೂಲವಾಗುವಂತಹದಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ. ವಯಸ್ಕ ಮಹಿಳೆಯರಿಗೆ ವೃತ್ತಿ ತರಬೇತಿಯನ್ನು ನೀಡಲಾಗುತ್ತದೆ. ಈ ಯೋಜನೆಯಲ್ಲಿ ಮಹಿಳಾ ಸಂಘ ಮತ್ತು ಎನ್.ಜಿ.ಓ.ಗಳು ಕೇಂದ್ರ ಹಣಕಾಸು ನೆರವಿನೊಂದಿಗೆ ಮಹಿಳಾ ಶಿಕ್ಷಣವನ್ನು ಅಭಿವೃದ್ಧಿ ಪಡಿಸುವುದಾಗಿದೆ. ಈ ಯೋಜನೆಯು ಎಸ್.ಸಿ., ಎಸ್.ಟಿ. ಮತ್ತು ಭೂರಹಿತ ಕುಟುಂಬದ, ದಿನಗೂಲಿ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಿದೆ. ಈ ಯೋಜನೆಯಲ್ಲಿ ಸಶಕ್ತರಾದ ಮಹಿಳೆಯರು ತಮ್ಮ ಮಗಳ ಶಿಕ್ಷಣದ ಬಗ್ಗೆ ತಾವೇ ನಿರ್ಧಾರವನ್ನು ತೆಗೆದುಕೊಂಡು ತಮ್ಮ ಮಗಳಿಗೆ ಉತ್ತಮ ಶಿಕ್ಷಣ ನೀಡಲು ಅನುಕೂಲವಾಗುತ್ತದೆ. ಈ ಯೋಜನೆಯ ಮಹಿಳೆಯರು ಶೈಕ್ಷಣಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಹೆಚ್ಚು ಅನುಕೂಲವಾಗುತ್ತದೆ.

ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್(೨೦೦೭-೨೦೧೨)

ಮಹಿಳೆಯರನ್ನು ಸಬಲೀಕರಣಗೊಳಿಸಿ ಲಿಂಗ ಸಮಾನತೆಯನ್ನು ತರಲು ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಹೆಣ್ಣುಮಕ್ಕಳನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿ ಸಬಲೀಕರಣಗೊಳಿಸುವುದಾಗಿದೆ. ಮಹಿಳಾ ಸಾಕ್ಷರತೆಯು ಮಹಿಳಾ ಸಬಲೀಕರಣಕ್ಕೆ ಮೂಲ ಆಧಾರ. ಆದುದರಿಂದ ಎಲ್ಲಾ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಮಹಿಳಾ ಶಿಕ್ಷಣಕ್ಕೆ ಆದ್ಯತೆಯನ್ನು ನೀಡಲಾಗಿದೆ. ವಿಶೇಷವಾಗಿ ಇತ್ತೀಚಿನ ಯೋಜನೆಗಳಲ್ಲಿ ದಿನದಿಂದ ದಿನಕ್ಕೆ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ.[೫] ೨೦೦೭ರಲ್ಲಿ ಈ ಯೋಜನೆ ಜಾರಿಗೆ ಬಂತು. ೨೦೦೬-೨೦೦೭ರ ಆಯವ್ಯಯದಲ್ಲಿ ೨೨೨.೫೧ ಬಿಲಿಯನ್ ರೂಪಾಯಿಗಳನ್ನು ಈ ಯೋಜನೆಗೆ ಮೀಸಲಿಡಲಾಯಿತು.

ಮಿಡ್ ಡೇ ಮೀಲ್ ಸ್ಕೀಮ್

ಈ ಯೋಜನೆಯ ಮುಖ್ಯ ಉದ್ದೇಶ ಶಾಲಾ ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವುದು ಮತ್ತು ಶಾಲೆ ಬಿಡುವವರ ಸಂಖ್ಯೆಯನ್ನು ಕಡಿಮೆ ಮಾಡುವುದಾಗಿದೆ. ವಿಶೇಷವಾಗಿ ಮಹಿಳಾ ಶಿಕ್ಷಣದಲ್ಲಿ ಮುನ್ನಡೆಯುಂಟಾಯಿತು.

ಈ ಯೋಜನೆಯಲ್ಲಿ ಎಲ್ಲಾ ಜಾತಿಯ ಮಕ್ಕಳು ಒಟ್ಟಿಗೆ ಊಟ ಮಾಡುವುದರಿಂದ ಅವರಲ್ಲಿದ್ದ ಜಾತಿಯ ಮೇಲು-ಕೀಳು ಭಾವನೆ ಹೋಗಲು ಸಾಧ್ಯವಾಯಿತು. ಆರ್ಥಿಕವಾಗಿ ಹಿಂದುಳಿದ ಬಡ ಹೆಣ್ಣುಮಕ್ಕಳು ಶಾಲೆಗೆ ಹಾಜರಾಗುವವರ ಸಂಖ್ಯೆ ಹೆಚ್ಚಾಯಿತು. ಕರ್ನಾಟಕದಲ್ಲಿ ಮಿಡ್ ಡೇ ಮೀಲ್ ಯೋಜನೆಯನ್ನು ರಾಜ್ಯ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಕೇಂದ್ರ ಸರ್ಕಾರದ ಹಣಕಾಸು ನೆರವಿನಿಂದ ನಡೆಸುತ್ತಿವೆ.

ಹೆಣ್ಣುಮಗುವಿಗಾಗಿ ಭಾಗ್ಯಲಕ್ಷ್ಮಿ ಯೋಜನೆ: ೨೦೦೬-೨೦೦೭ರಿಂದ ಜಾರಿ

ಈ ಯೋಜನೆಯು ೨೦೦೬-೨೦೦೭ರಿಂದ ಜಾರಿಗೆ ಬಂದಿತು. ಈ ಯೋಜನೆಯಲ್ಲಿ ಬಡ ಕುಟುಂಬದಲ್ಲಿ ಹುಟ್ಟಿದ ಹೆಣ್ಣುಮಗುವಿನ ಆರೋಗ್ಯ ಕಾಪಾಡುವ ಹಾಗೂ ಶಿಕ್ಷಣಾಭಿವೃದ್ಧಿ ಸಾಧಿಸಲು, ಹೆಣ್ಣುಮಕ್ಕಳ ಬಗ್ಗೆ ತಂದೆ ತಾಯಿಯರಲ್ಲಿ ಭರವಸೆ ಹುಟ್ಟಿಸಲು ರಾಜ್ಯ ಸರ್ಕಾರವು ೨೦೦೭ರಿಂದ ಹೆಣ್ಣುಮಗುವಿಗಾಗಿ ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಿತು.

ಈ ಯೋಜನೆಯಂತೆ ಹೆಣ್ಣುಮಗುವು ೧ರಿಂದ ೩ನೇ ತರಗತಿಯಲ್ಲಿ ವಾರ್ಷಿಕ ೩೦೦/- ರೂ. ಗಳನ್ನು, ೪ ಮತ್ತು ೫ನೇ ತರಗತಿಯಲ್ಲಿ ವಾರ್ಷಿಕ ೫೦೦/- ರೂ.ಗಳನ್ನು, ೬ ಮತ್ತು ೭ನೇ ತರಗತಿಯಲ್ಲಿ ವಾರ್ಷಿಕ ೭೫೦೦/- ರೂ.ಗಳನ್ನು, ೮ನೇ ತರಗತಿಯಲ್ಲಿ ೮೦೦/- ರೂ. ಗಳನ್ನು,

೯ ಮತ್ತು ೧೦ನೇ ತರಗತಿಯಲ್ಲಿ ವಾರ್ಷಿಕ ೧೦೦೦/- ರೂ. ಗಳನ್ನು ಮತ್ತು ೧೧ನೇ ಮತ್ತು ೧೨ನೇ ತರಗತಿಯಲ್ಲಿ ವಾರ್ಷಿಕ ೧,೨೦೦/- ರೂ. ಗಳ ವಿದ್ಯಾರ್ಥಿ ವೇತನ ಪಡೆಯಬಹುದಾಗಿದೆ. ಈ ಯೋಜನೆಯಿಂದ ಹೆಣ್ಣುಮಕ್ಕಳ ಬಗ್ಗೆ ಪೋಷಕರಿಗಿದ್ದ ಕೀಳು ಭಾವನೆ ಹೋಗಿ ಹೆಮ್ಮೆ ಉಂಟಾಗಲು ನೆರವಾಯಿತು.

ಗ್ರಾಮಾಂತರ ಪ್ರದೇಶದ ಬಾಲಕಿಯರಿಗೆ ವಸತಿ ನಿಲಯ ನಡೆಸಲು ಆರ್ಥಿಕ ನೆರವು ನೀಡಿಕೆ

ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಅನುಕೂಲವಾಗುವಂತೆ ವಸತಿ ನಿಲಯಗಳನ್ನು ಇಲಾಖಾ ವತಿಯಿಂದ ಹಾಗೂ ಸ್ವಯಂಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ೨೪ ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರದ ಅನುಮೋದನೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ಪೂರ್ವ ಹಾಗು ಮೆಟ್ರಿಕ್ ನಂತರದ ತರಗತಿಯಲ್ಲಿ ಓದುತ್ತಿರುವ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳು ಸದರಿ ವಸತಿ ನಿಲಯಗಳಲ್ಲಿ ದಾಖಲು ಪಡೆಯಲು ಅರ್ಹರಿರುತ್ತಾರೆ.

ಹಾಜರಾತಿ ಶಿಷ್ಯ ವೇತನ

ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳು ಶಾಲೆಯನ್ನು ಬಿಡುವುದನ್ನು ತಪ್ಪಿಸಲು ಹಾಗೂ ಹೆಣ್ಣುಮಕ್ಕಳ ಸಾಕ್ಷರತೆಯನ್ನು ಹೆಚ್ಚಿಸುವ ಸಲುವಾಗಿ ಆರ್ಥಿಕ ಸಹಾಯ ನೀಡಲಾಗುವುದು. ೨೦,೦೦೦ ಜನಸಂಖ್ಯೆಗಿಂತ ಕಡಿಮೆ ಇರುವ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ ಮೊದಲನೇ ಪ್ರಯತ್ನದಲ್ಲಿ ಉತ್ತೀರ್ಣರಾಗಿ, ಶೇಕಡ ೮೦ರಷ್ಟು ಹಾಜರಾತಿ ಪಡೆದಿರುವ ೫ನೇ ತರಗತಿಯಿಂದ ೭ನೇ ತರಗತಿಯವರೆಗೆ ತಿಂಗಳಿಗೆ ೨೫ ರೂ. ಗಳಂತೆ, ೮ರಿಂದ ೧೦ನೇ ತರಗತಿಯವರೆಗೆ ೫೦ ರೂ. ಗಳಂತೆ ಹತ್ತು ತಿಂಗಳಿಗೆ ಶಿಷ್ಯವೇತನ ನೀಡಲಾಗುವುದು. ಇದರಿಂದ ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ನೆರವಾಗುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪ್ರತ್ಯೇಕ ಇಲಾಖೆಯಾಗಿ ೩೦ನೇ ಅಕ್ಟೋಬರ್ ೨೦೦೬ರಂದು ಜಾರಿಗೆ ಬಂದಿತು. ಪ್ರತ್ಯೇಕತೆಯ ಪ್ರಮುಖ ಉದ್ದೇಶ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೋಸ್ಕರವೆ ಹಲವಾರು ಯೋಜನೆಗಳನ್ನು ಜಾರಿಗೆ ತರುವುದಾಗಿದೆ. ಅವುಗಳೆಂದರೆ ಬಾಲಿಕ ಸಂವೃದ್ಧಿ ಯೋಜನೆ, ದಿ ಇಂಟಿಗ್ರೇಟೆಡ್ ಚೈಲ್ಡ್ ಡೆವಲಪ್‌ಮೆಂಟ್ ಸರ್ವೀಸ್ ಅಂಡ್ ಕಿಶೋರಿ ಶಕ್ತಿ ಯೋಜನೆ, ಭಾಗ್ಯಸ್ತ್ರೀ ಬಾಲಿಕಾ ಕಲ್ಯಾಣ ಭೀಮಾ ಯೋಜನೆ. ಈ ಯೋಜನೆಯಲ್ಲಿ ಶಾಲೆಗೆ ಸೇರಿದ ಎಲ್ಲಾ ಹೆಣ್ಣುಮಕ್ಕಳಿಗೆ ಉಚಿತ ಪಠ್ಯ

ಪುಸ್ತಕ ಮತ್ತು ಸಮವಸ್ತ್ರಗಳನ್ನು ವಿತರಿಸುವುದರ ಮೂಲಕ ಮಹಿಳಾ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಕ್ರಮಕೈಗೊಳ್ಳಲಾಯಿತು.

೨೦೦೫ರ ವೇಳೆಗೆ ಲಿಂಗ ಸಮಾನತೆಯ ಗುರಿ ಸಾಧನೆಗಾಗಿ ಯಾವ ಸಹಾಯವನ್ನಾದರೂ ನೀಡಲು ಸಿದ್ಧವಿರುವ ಯೂನಿಸೆಫ್ ಗುರ್ತಿಸಿರುವ ೨೫ ರಾಷ್ಟ್ರಗಳಲ್ಲಿ ಭಾರತವು ಒಂದಾಗಿದೆ. ತಮ್ಮ ದೇಶ ಮುಂದುವರಿಯಲು ಮಾಡುವ ಪ್ರಯತ್ನಗಳಲ್ಲಿ ಯಾವ ಸ್ತ್ರೀಯೂ ಹಿಂದೆಬೀಳದಂತೆ ಮತ್ತು ಪ್ರತಿ ಸ್ತ್ರೀಯೂ ತನ್ನ ದೇಶದ ಅಭಿವೃದ್ಧಿಯ ಮಧ್ಯವರ್ತಿಯಾಗಿ ತನ್ನ ಹಕ್ಕಿನ ಸ್ಥಾನವನ್ನು ಪಡೆಯುವಂತೆ ಮಾಡುವುದು ದೇಶದ ಬದ್ಧತೆಯಾಗಿದೆ. ಆಂದರೆ ೨೦೦೫ರ ವೇಳೆಗೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಲಿಂಗ ಸಮಾನತೆಯನ್ನು ತರುವುದಾಗಿ ಒಪ್ಪಿಕೊಂಡಿವೆ. ಭಾರತದಲ್ಲಿ ಸ್ತ್ರೀ ಶಿಕ್ಷಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೆಂದರೆ:

೧. ಸ್ವಾತಂತ್ರ್ಯನಂತರ ಪ್ರಥಮ ಬಾರಿಗೆ ಡಾ.ಎಸ್.ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ಕಾಲೇಜು ಶಿಕ್ಷಣದಲ್ಲಿ ಹೆಣ್ಣು ಮಕ್ಕಳಿಗೆ ಸಮಾನ ಶಿಕ್ಷಣ ನೀಡಬೇಕಲ್ಲದೆ ಶೈಕ್ಷಣಿಕ ಅವಕಾಶ ಹಾಗೂ ಮಾರ್ಗದರ್ಶನಗಳನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆ.

೨. ಔಪಚಾರಿಕ ಶಾಲೆಗಳಿಗೆ ಹೆಣ್ಣುಮಕ್ಕಳ ಸಾರ್ವತ್ರಿಕ ದಾಖಲಾತಿ ಮತ್ತು ಸಂಕ್ಷಿಪ್ತಗೊಳಿಸಿದ ಕೋರ್ಸ್‌ಗಳು, ಉಚಿತ ವಿದ್ಯಾರ್ಥಿವೇತನ, ಮಹಿಳೆಯರಿಗಾಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ತೆರೆಯುವಂತೆ ೧೯೫೯ರ ಮಹಿಳೆಯರ ಶಿಕ್ಷಣದ ರಾಷ್ಟ್ರೀಯ ಸಮಿತಿ ಸಲಹೆ ನೀಡಿದೆ.

೩. ೧೯೬೩ರ ಭಕ್ತವತ್ಸಲಂ ಸಮಿತಿಯು ಹೆಣ್ಣು ಮಕ್ಕಳಿಗಾಗಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆದು, ಈ ಶಾಲೆಗಳನ್ನು ಪ್ರಾಥಮಿಕ ಶಾಲೆಗೆ ಹೊಂದಿಸಿ, ಶಿಕ್ಷಕಿಯರನ್ನು ನೇಮಿಸುವುದರ ಮೂಲಕ ಮಹಿಳಾ ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ಶಿಫಾರಸ್ಸುಮಾಡಿದೆ.

೪. ಶ್ರೀಮತಿ ಹನ್ಸಾ ಮೆಹತಾ ಸಮಿತಿಯು ಪ್ರಾಥಮಿಕ ಶಿಕ್ಷಣದಲ್ಲಿ ಸಹಶಿಕ್ಷಣವನ್ನು ಜಾರಿಗೆ ತರಬೇಕಲ್ಲದೆ, ಪಠ್ಯಕ್ರಮದಲ್ಲಿ ಭೇದಭಾವ ಹೋಗಲಾಡಿಸಿ, ಶಿಕ್ಷಕಿಯರ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ತಿಳಿಸಿದೆ.

೫. ೧೯೬೪ರ ಮಹಿಳಾ ಶಿಕ್ಷಣ ರಾಷ್ಟ್ರೀಯ ಸಮಿತಿಯು ಹೆಣ್ಣುಮಕ್ಕಳಿಗೆ ಕಲಿಯಲು ವಯಸ್ಸಿನ ನಿರ್ಬಂಧತೆಯನ್ನು ಸಡಿಲಿಸಲು ಸಲಹೆ ಮಾಡಿತು.

೬. ೧೯೬೪-೬೬ರ ಕೊಠಾರಿ ಆಯೋಗವು ಶಾಲಾ ಶಿಕ್ಷಣದಲ್ಲಿ ಹೆಣ್ಣುಮಕ್ಕಳಿಗೆ ವಿಶೇಷ ಶಾಲೆಗಳು, ವಿದ್ಯಾರ್ಥಿ ವೇತನ ಮುಂತಾದ ಪ್ರೋತ್ಸಾಹದಾಯಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆಮಾಡಿದೆ.

೭. ೧೯೮೬ರ ಹೊಸ ಶಿಕ್ಷಣ ನೀತಿಯು ಮಹಿಳೆಯರ ಅನಕ್ಷರತೆಯನ್ನು ಹೋಗಲಾಡಿಸಲು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವರ ಸ್ಥಾನಮಾನ ಹೆಚ್ಚಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಮಹಿಳಾ ಅಧ್ಯಯನವನ್ನು ಪ್ರೋತ್ಸಾಹಿಸಬೇಕಲ್ಲದೆ, ಔದ್ಯೋಗಿಕ ಶಿಕ್ಷಣದಲ್ಲಿ ಪ್ರಾಶಸ್ತ್ಯ ನೀಡಬೇಕೆಂದು ತಿಳಿಸಿದೆ. ಅದರಂತೆ ಸರ್ಕಾರವು ಸಹ ಕ್ರಮಕೈಗೊಂಡಿದೆ.

ಕರ್ನಾಟಕ ಸರ್ಕಾರದ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು

ಕರ್ನಾಟಕದಲ್ಲಿ ಬಹಳಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಸಾಕ್ಷರತೆಯಲ್ಲಿ ಗ್ರಾಮೀಣ ಮಕ್ಕಳು ತುಂಬಾ ಹಿಂದುಳಿದಿದ್ದಾರೆ ಕಾರಣ ನಗರ ಪ್ರದೇಶದ ಮಕ್ಕಳಿಗೆ ಸಿಗುವ ಸೌಲಭ್ಯಗಳು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸಿಗುವುದಿಲ್ಲ. ಆದ್ದರಿಂದ ನಗರ ಮತ್ತು ಗ್ರಾಮಾಂತರ ಪ್ರದೇಶದ ಮಕ್ಕಳ ಶಿಕ್ಷಣದಲಿ ಬಹಳಷ್ಟು ವ್ಯತ್ಯಾಸಗಳಿವೆ.

೧. ವಿದ್ಯಾವಿಕಾಸ ಯೋಜನೆ: ಗ್ರಾಮೀಣ ಮಕ್ಕಳು ಮತ್ತು ನಗರ ಪ್ರದೇಶದ ಮಕ್ಕಳ ನಡುವೆ ಶೈಕ್ಷಣಿಕ ವ್ಯತ್ಯಾಸಗಳನ್ನು ಹೋಗಲಾಡಿಸಲು ಪಠ್ಯಪುಸ್ತಕ ಬರೆಯುವ ಸಾಧನಗಳು, ಸಮವಸ್ತ್ರಗಳಂತಹ ಅನುಕೂಲಗಳನ್ನು ಒದಗಿಸಿಕೊಡುವ ಒಂದು ವಿಶೇಷ ಯೋಜನೆಯೇ ವಿದ್ಯಾವಿಕಾಸ ಯೋಜನೆ.

ಉದ್ದೇಶಗಳು

೧. ಗ್ರಾಮೀಣ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದನ್ನು ತಪ್ಪಿಸುವುದು.

೨. ದಾಖಲಾತಿ ಮತ್ತು ಹಾಜರಾತಿ ಪ್ರಮಾಣ ಹೆಚ್ಚಿಸುವುದು.

೩. ಮಕ್ಕಳು ಶಾಲೆಯಿಂದ ಹೊರಗುಳಿಯುವುದನ್ನು ತಪ್ಪಿಸುವುದು.

೪. ಸಾಮಾಜಿಕ ಸಮಾನತೆ ಉಂಟುಮಾಡುವುದು.

೫. ಮಕ್ಕಳ ಕಲಿಕಾ ಸಾಮಗ್ರಿಗಳ ಅಲಭ್ಯತೆಯಿಂದ ಶಾಲೆ ಬಿಡುವುದನ್ನು ತಪ್ಪಿಸುವುದು.

೬. ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು.

೭. ಬಾಲಕಾರ್ಮಿಕರನ್ನು ಶಿಕ್ಷಣದ ವ್ಯಾಪ್ತಿಗೆ ತರುವುದು.

೨. ಚಿಣ್ಣರ ಅಂಗಳ: ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುವ ಹಲವು ಕಾರ್ಯಕ್ರಮಗಳಲ್ಲಿ ಚಿಣ್ಣರ ಅಂಗಳವು ಒಂದು. ೬ರಿಂದ ೧೪ ವರ್ಷ ವಯೋಮಾನದ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣವನ್ನು ನೀಡಲು ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ೧೯೯೩ರ ಉನ್ನಿಕೃಷ್ಣನ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ೦-೧೪ ವರ್ಷದೊಳಗಿನ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು

ನೀಡುವುದು ಸರ್ಕಾರದ ಕರ್ತವ್ಯವೆಂದು ತೀರ್ಪುನೀಡಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣವನ್ನು ಸಾಧಿಸಲು ಹಮ್ಮಿಕೊಳ್ಳಲಾದ ವಿನೂತನ ಕಾರ್ಯಕ್ರಮಗಳಲ್ಲಿ 'ಚಿಣ್ಣರ ಅಂಗಳ' ಒಂದಾಗಿದೆ.

ಉದ್ದೇಶಗಳು

೧. ಶಾಲೆಗೆ ದಾಖಲಾಗಿ ನಡುವೆ ಬಿಟ್ಟು, ದಾಖಲಾಗದೇ ಉಳಿದ ೬ರಿಂದ ೧೪ ವರ್ಷದ ಮಕ್ಕಳನ್ನು ಸಿದ್ಧಗೊಳಿಸಿ ರೆಗ್ಯುಲರ್ ಶಾಲೆಗಳಿಗೆ ದಾಖಲಾಗುವಂತೆ ಮಾಡುವುದು.

೨. ಸಮೀಕ್ಷೆಯಿಂದ ಮಕ್ಕಳ ಆಸಕ್ತಿಯನ್ನು ಗುರುತಿಸಿ ಅದಕ್ಕೆ ಸರಿಹೊಂದುವಂತಹ ಶಿಕ್ಷಣ ನೀಡುವುದು.

೩. ಮಕ್ಕಳಿಗೆ ಇಷ್ಟವಾಗುವ ಆಟ, ಹಾಡು, ಕಥೆ ಮುಂತಾದ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಸಂಪ್ರದಾಯಿಕವಲ್ಲದ ಬೋಧನೆಯ ವಿಧಾನಗಳ ಮೂಲಕ ಅವರಿಗೆ ಕಲಿಸುವುದು.

೪. ವಯಸ್ಸಿಗನುಗುಣವಾದ ಸಾಮರ್ಥ್ಯ ಬೆಳೆಸುವುದು.

೫. ಶಿಕ್ಷಣ ಕ್ಷೇತ್ರದಲ್ಲಿ ಸಮುದಾಯವನ್ನು ಪಾಲ್ಗೊಳ್ಳುವಂತೆ ಮಾಡುವುದು.

೬. ಶಾಲೆಯಿಂದ ಹೊರಗುಳಿದು ನಂತರ ಚಿಣ್ಣರ ಅಂಗಳ ಕಾರ್ಯಕ್ರಮದ ನಂತರ ಶಾಲೆಗೆ ಸೇರಿದ ಮಕ್ಕಳನ್ನು ಶಾಲೆಯಲ್ಲಿ ಮುಂದುವರೆಯುವಂತೆ ನೋಡಿಕೊಳ್ಳುವುದು.

೩. ಜನಶಾಲಾ ಶಿಕ್ಷಣ: ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದು ಸರ್ಕಾರದ ಹೊಣೆಯಾಗಿದ್ದು, ಇದಕ್ಕಾಗಿ ಸರ್ಕಾರವು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ ಜನಶಾಲಾ ಶಿಕ್ಷಣ ಕಾರ್ಯಕ್ರಮವು ಒಂದಾಗಿದೆ. ಕರ್ನಾಟಕ ಸರ್ಕಾರದ ಸಾರ್ವಜನಿಕ ಇಲಾಖೆಯು ಈ ಕಾರ್ಯಕ್ರಮವನ್ನು ಯೋಜಿಸಿತು. ಇದರ ಮೂಲ ಉದ್ದೇಶ ಶಾಲೆಯಿಂದ ವಂಚಿತರಾದ ಮಕ್ಕಳಿಗೆ ಹಾಗೂ ಶಾಲೆ ಬಿಟ್ಟ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆಯಲ್ಲಿ ಅವಕಾಶ ಕಲ್ಪಿಸಿಕೊಡುವುದು, ಶಾಲೆಯಿಂದ ಹೊರಗುಳಿದವರನ್ನು ಶಾಲೆಗೆ ಕರೆತರುವ ಉದ್ದೇಶವಾಗಿದೆ. ಇದರಡಿಯಲ್ಲಿ ಅಕ್ಷರ ದಾಸೋಹ, ಕೂಲಿಯಿಂದ ಶಾಲೆಗೆ, ಬಾ ಮರಳಿ ಶಾಲೆಗೆ, ನಿರಂತರ ಶಿಕ್ಷಣ ಹೀಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

೪. ಬಾ ಮರಳಿ ಶಾಲೆಗೆ: ಮಾನವನಿಗೆ ಸರಿಯಾದ ಶಿಕ್ಷಣ ಕೊಟ್ಟು ಅವನನ್ನು ನೈಜ ಮಾನವನನ್ನಾಗಿ ರೂಪಿಸುವ ಕೆಲಸಕ್ಕಿಂತ ಜಗತ್ತಿನಲ್ಲಿ ಮತ್ತೊಂದು ಕಾರ್ಯವಿಲ್ಲವೆಂದು ಡಾ. ಎಸ್. ರಾಧಾಕೃಷ್ಣನ್ ಹೇಳಿದ್ದಾರೆ. ಸಾರ್ವತ್ರಿಕ ಶಿಕ್ಷಣದ ಯಶಸ್ಸಿಗೆ ಪೂರಕವಾದ ಆ ಕಾರ್ಯಕ್ರಮವು ಕರ್ನಾಟಕದಲ್ಲಿ ಶಿಕ್ಷಣ ಇಲಾಖೆಯು ೨೦೦೨ರ ಕನ್ನಡ ರಾಜ್ಯೋತ್ಸವವನ್ನು 'ಬಾ ಮರಳಿ ಶಾಲೆಗೆ' ಎಂಬ

ಅಂದೋಲನದ ಮೂಲಕ ಅರ್ಥಪೂರ್ಣವಾಗಿ ಆಚರಿಸಿತು. ಇದರ ಉದ್ದೇಶ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಾಲೆಬಿಟ್ಟು ಹಾಗೂ ದೀರ್ಘಕಾಲ ಗೈರು ಹಾಜರಾದ ಮಕ್ಕಳನ್ನು ಮರಳಿ ಶಾಲೆಗೆ ತರುವುದಾಗಿತ್ತು. ೨೦೦೨ರ ನವೆಂಬರ ೪, ೧೧, ೧೮ ಮತ್ತು ೨೫ರಂದು ಬಂದ ಸೋಮವಾರಗಳಂದು ಶಾಲೆಯಿಂದ ಹೊರಗುಳಿದ ಮತ್ತು ಗೈರುಹಾಜರಾಗಿರುವ ಸುಮಾರು ೫.೬೨ ಲಕ್ಷ ಮಕ್ಕಳನ್ನು ಶಾಲೆಗೆ ಮರಳುವಂತೆ ಮಾಡಿ ಅವರಿಗೆ ಸೇತು ಬಂದ ಶಿಕ್ಷಣ ನೀಡಿ ಶಾಲೆಗೆ ಹೊಂದಿಕೊಳ್ಳುವಂತೆ ಪರಿಹಾರ ಬೋಧನಾ ಕಾರ್ಯ ಕೈಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು. ಈ ಅಂದೋಲನದಲ್ಲಿ ಶಿಕ್ಷಣ ಇಲಾಖೆಯ ಎಲ್ಲಾ ನೌಕರರು, ಅಧಿಕಾರಿಗಳು, ಶಿಕ್ಷಕರು, S.D.M.C. ಸಮಿತಿ, ಪೋಷಕರು, ಮಕ್ಕಳು, ಸಮುದಾಯ, ಸಂಘ-ಸಂಸ್ಥೆಗಳು, ಮೊದಲಾದವರು ಪಾಲ್ಗೊಂಡಿದ್ದರು.

೫. ಬಾ ಬಾಲೆ ಶಾಲೆಗೆ: ಈ ಕಾರ್ಯಕ್ರಮವು ವಿಶೇಷವಾಗಿ ಹೆಣ್ಣು ಮಕ್ಕಳಿಗಾಗಿ ಮಾಡಲಾಗಿತ್ತು. ಸರ್ವಶಿಕ್ಷಣ ಅಭಿಯಾನದಡಿ ಶಾಲೆಯಿಂದ ಹೊರಗುಳಿದ ೬ ರಿಂದ ೧೪ ವರ್ಷದವರೆಗಿನ ಎಲ್ಲಾ ಮಕ್ಕಳನ್ನು ೨೦೦೩ರ ಅಂತ್ಯದೊಳಗೆ ಶಾಲೆಗೆ ಕರೆತರುವ ಗುರಿಯನ್ನು ಹೊಂದಲಾಗಿದೆ. ಇದರ ಉದ್ದೇಶ ಶಾಲೆಗೆ ಬಾರದ ೧೪ ವರ್ಷದವರಿಗಿನ ಎಲ್ಲಾ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆತರುವುದು, ೮ನೇ ತರಗತಿ ಮುಗಿಸುವವರೆಗೆ ಶಾಲೆ ಬಿಡದಂತೆ ನೋಡಿಕೊಳ್ಳುವುದು, ಅವರ ಕಲಿಕಾ ಮಟ್ಟವನ್ನು ತಲುಪುವಂತೆ ಮಾಡುವುದು ಹಾಗೂ ಲಿಂಗ ತಾರತಮ್ಯವನ್ನು ಹೋಗಲಾಡಿಸುವುದಾಗಿದೆ. ಏಕೆಂದರೆ ಸರ್ಕಾರವು ಎಷ್ಟೇ ಕಾರ್ಯಕ್ರಮಗಳನ್ನು ಯೋಜಿಸಿದಾಗ್ಯೂ ಸುಮಾರು ೩ ಲಕ್ಷ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಆ ಪೈಕಿ ಬಾಲಕಿಯರ ಸಂಖ್ಯೆ ಹೆಚ್ಚು. ಸಾಕ್ಷರತಾ ಪ್ರಮಾಣದಲ್ಲಿ ಪುರುಷರು ಮತ್ತು ಮಹಿಳೆಯರ ಮಧ್ಯೆ ಸುಮಾರು ಶೇಕಡಾ ೧೯ ವ್ಯತ್ಯಾಸವಿದೆ. ಅಂದರೆ ನಮ್ಮ ಸಮಾಜದಲ್ಲಿ ಲಿಂಗತಾರತಮ್ಯ ಇನ್ನೂ ಅಳಿದಿಲ್ಲ. ಈ ಕಾರ್ಯಕ್ರಮಕ್ಕಾಗಿ ಬಾ ಬಾಲೆ ಶಾಲೆಗೆ ಎಂಬ ಕಾರ್ಯಕ್ರಮ ರೂಪಿಸಿಕೊಂಡು ಶಿಕ್ಷಕಿಯರು ತಮ್ಮ ಶಾಲಾ ವ್ಯಾಪ್ತಿಯಲ್ಲಿ ಶಾಲೆಗೆ ಬಾರದ ಬಾಲಕಿಯರನ್ನು ಗುರುತಿಸಿ ಅವರನ್ನು ತಮ್ಮೊಳಗೆ ಹಂಚಿಕೊಂಡು ದತ್ತು ತೆಗೆದುಕೊಳ್ಳುವುದು. ಶಾಲೆಗೆ ಬಾರದ ಹೆಣ್ಣು ಮಕ್ಕಳ ಪೋಷಕರನ್ನು ಮನವೊಲಿಸಿ, ಜನ್ಮದಿನಾಂಕವನ್ನು ಗಣನೆಗೆ ತೆಗೆದುಕೊಳ್ಳದೆ, ಶಾಲೆಗೆ ದಾಖಲಿಸಿಕೊಳ್ಳುವುದು. ಇವರಿಗೆ ಕಲಿಕಾ ಸಾಧನಾ ವರ್ಷದ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡುವುದು.

೬. ಸಮನ್ವಯ-ಶಿಕ್ಷಣ: ಊನಶಕ್ತ ಮತ್ತು ಕಲಿಕಾ ನ್ಯೂನತೆಯ ಮಕ್ಕಳು ಸಹ ಇತರೆ ಮಕ್ಕಳಂತೆ ಬೆಳೆಯಲು ಹಾಗೂ ವಿಕಾಸ ಹೊಂದಲು ಸಹಾಯಕವಾಗಲು "ಕನಿಷ್ಠ ನಿಬಂಧನೆಗಳುಳ್ಳ ಪರಿಸರವನ್ನು" ಒದಗಿಸುವುದೇ ಸಮನ್ವಯ ಶಿಕ್ಷಣ.

೭. **ಕೂಲಿಯಿಂದ ಶಾಲೆಗೆ:** ೧೪ ವರ್ಷ ವಯಸ್ಸಿನೊಳಗಿನ ಮಕ್ಕಳನ್ನು ಕೂಲಿಗೆ ಇಟ್ಟುಕೊಳ್ಳುವುದು ಕಾನೂನು ಬಾಹಿರ. ಮಕ್ಕಳನ್ನು ಕೂಲಿಗೆ ಇಟ್ಟುಕೊಳ್ಳುವುದರಿಂದ ಅವರ ವಿದ್ಯಾಭ್ಯಾಸಕ್ಕೆ ತೊಂದರೆ ಯಾಗುತ್ತದೆ. ಬಾಲ ಕಾರ್ಮಿಕ ನಿಷೇಧ ಕಾಯ್ದೆ ಪ್ರಕಾರ ೧೪ ವರ್ಷ ವಯಸ್ಸಿನೊಳಗಿನ ಮಕ್ಕಳನ್ನು ಕೂಲಿಗೆ ಇಟ್ಟುಕೊಂಡರೆ, ಅಂತಹ ಮಾಲೀಕರನ್ನು ಶಿಕ್ಷೆಗೆ ಒಳಪಡಿಸುವುದಲ್ಲದೆ ದಂಡವನ್ನು ವಿಧಿಸಲಾಗುತ್ತದೆ. ಸರ್ವಶಿಕ್ಷಣ ಅಭಿಯಾನದಡಿ ಶ್ರಮಿಕ ಮಕ್ಕಳು ಅಥವಾ ಬಾಲಕಾರ್ಮಿಕರನ್ನು ದಾಸ್ಯದಿಂದ ಬಿಡುಗಡೆಮಾಡಿ, ಶಾಲೆಯತ್ತ ಕರೆದುಕೊಂಡು ಹೋಗುವುದೇ ಕೋಲಿಯಿಂದ ಶಾಲೆಗೆ ಆಂದೋಲನದ ಗುರಿ.

೮. **ಅಕ್ಷರ:** ೨೦೦೩ರ ವೇಳೆಗೆ ಬೆಂಗಳೂರು ನಗರದಲ್ಲಿ ಸಾರ್ವತ್ರಿಕ ಪೂರ್ವ ಪಾಥಮಿಕ ಹಾಗೂ ಪ್ರಾಥಮಿಕ ಶಿಕ್ಷಣ ಸಾಧಿಸುವುದಕ್ಕಾಗಿ 'ಅಕ್ಷರ' ಎಂಬ ಹೊಸ ಕಾರ್ಯಕ್ರಮ ಪ್ರಾರಂಭವಾಗಿದೆ. ಸರ್ಕಾರ, ಕಾರ್ಪೊರೇಟ್ ವಲಯ ಹಾಗೂ ಸ್ವಯಂ ಸೇವಾ ಕ್ಷೇತ್ರಗಳ ತ್ರಿಕೋಣ ಬಾಗೀದಾರಿಕೆಯು ನಗರದಾದ್ಯಂತ ಬೃಹತ್ ಪ್ರಮಾಣದ ಸಂಘಟನೆಗಾಗಿ ತೆರೆದ ವೇದಿಕೆಯಂತೆ ಕಾರ್ಯ ನಿರ್ವಹಿಸುತ್ತಿದೆ. ಬೆಂಗಳೂರು ನಗರದ ಗಣ್ಯವ್ಯಕ್ತಿಗಳಿಂದ ನಿರ್ವಹಿಸಲ್ಪಡುವ ಈ ಕಾರ್ಯಕ್ರಮವು ೨ ಗುಂಪಿನ ವಯೋಮಾನದವರನ್ನು ಕುರಿತಾಗಿರುತ್ತದೆ.

೩ರಿಂದ ೫ ವರ್ಷದ ಮಕ್ಕಳಿಗಾಗಿ ಬಾಲವಾಡಿ (ಶಾಲಾ-ಪೂರ್ವ) ಕಾರ್ಯಕ್ರಮ. ೬ ರಿಂದ ೧೦ ವರ್ಷ ವಯೋಮಿತಿಯ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಸೇತು ಬಂಧ ಕಾರ್ಯಕ್ರಮದ ಮೂಲಕ ಔಪಚಾರಿಕ ಶಿಕ್ಷಣದ ಮುಖ್ಯವಾಹಿನಿಗೆ ತರುವುದು. ಈ ಕಾರ್ಯಕ್ರಮಗಳ ಜೊತೆಗೆ ರಾಜ್ಯ ಸರ್ಕಾರವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶೇಷ ಆಸಕ್ತಿವಹಿಸಿ, ಮುಖ್ಯ ಕ್ರಮಗಳನ್ನು ಕೈಗೊಂಡಿದೆ. ಅವುಗಳೆಂದರೆ

- ಹೆಣ್ಣುಮಕ್ಕಳಿಗೆ ೧ರಿಂದ ೧೦ನೇ ತರಗತಿಯವರೆಗೆ ಉಚಿತ ಪಠ್ಯಪುಸ್ತಕಗಳು, ಸಮವಸ್ತ್ರ ನೀಡುತ್ತಿದೆ.
- ವಿಧ್ಯಾರ್ಥಿನಿ ಹಾಜರಾತಿ ವೇತನವನ್ನು ನೀಡುತ್ತಿದೆ. ಅಲ್ಲದೆ ಹೆಣ್ಣುಮಕ್ಕಳಿಗೆ ಶಾಲಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ.
- ರಾಜ್ಯ ಶಿಕ್ಷಣ ನಿರ್ದೇಶನಾಲಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಪ್ರತ್ಯೇಕ ವಿಭಾಗಗಳನ್ನು ತೆರೆಯಲಾಗಿದೆ.
- ಹೆಣ್ಣುಮಕ್ಕಳಿಗಾಗಿ ವಿಶೇಷ ಪಾಲಿಟೆಕ್ನಿಕ್‌ಗಳನ್ನು ತೆರೆದು ಸಂಕ್ಷಿಪ್ತಗೊಳಿಸಿ ಕೋರ್ಸ್‌ಗಳನ್ನು ಅಳವಡಿಸಲಾಗಿದೆ.

• ಹೆಣ್ಣುಮಕ್ಕಳಿಗಾಗಿ ಉಚಿತ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗಿದೆ.
• ಹೆಣ್ಣುಮಕ್ಕಳಿಗಾಗಿ ಉನ್ನತ ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಈ ಎಲ್ಲಾ ಕಾರ್ಯಕ್ರಮಗಳು ಮಹಿಳೆಯ ಔಪಚಾರಿಕ ಶಿಕ್ಷಣದ ಅಭಿವೃದ್ಧಿಗೆ ಪೂರಕವಾಗಿವೆ.

ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಪ್ರೋತ್ಸಾಹಕ ಕ್ರಮಗಳ ಫಲವಾಗಿ ಮಹಿಳೆಯರು ಪುರುಷರಂತೆ ಸಮಾನ ಔಪಚಾರಿಕ ಶಿಕ್ಷಣ ಪಡೆಯಲು ಸಾಧ್ಯವಾಗಿದೆ. ಉಚಿತ ವಿದ್ಯಾರ್ಥಿ ವೇತನವು ಬಡಕುಟುಂಬಗಳಲ್ಲಿನ ಹೆಣ್ಣುಮಕ್ಕಳು ಶಿಕ್ಷಣ ಪಡೆಯಲು ಅನುಕೂಲವಾಗಿದೆ. ಪ್ರಾಥಮಿಕ ಹಂತದಲ್ಲಿ ಸಹಶಿಕ್ಷಣದಿಂದಾಗಿ ಹೆಣ್ಣುಮಕ್ಕಳಲ್ಲಿ ಲಿಂಗಸಮಾನತೆ ಮನೋಭಾವನೆ ಮೂಡಿಬರಲು ಸಾಧ್ಯವಾಗುತ್ತದೆ. ಪಠ್ಯಕ್ರಮದಲ್ಲಿ ಲಿಂಗತಾರತಮ್ಯ ಭಾವನೆಯನ್ನು ಹೋಗಲಾಡಿಸುವುದರಿಂದ ಕೀಳರಿಮೆ ಮನೋಭಾವಗಳು ಕಡಿಮೆಯಾಗಿ ಸಮಾನ ಮನೋಭಾವನೆ ಯುಂಟಾಗುತ್ತದೆ. ಮಹಿಳಾ ಶಿಕ್ಷಕರನ್ನು ನೇಮಿಸುವುದರಿಂದ ಹೆಣ್ಣುಮಕ್ಕಳು ತಮ್ಮ ತೊಂದರೆಗಳನ್ನು ಸಂಕೋಚವಿಲ್ಲದೆ ಹೇಳಿಕೊಳ್ಳಲು ಮತ್ತು ಶಿಕ್ಷಕಿಯರು ಹೆಣ್ಣುಮಕ್ಕಳಿಗೆ ಶಿಕ್ಷಣದ ಬಗ್ಗೆ ಉತ್ತಮ ಮಾರ್ಗದರ್ಶನ ಮತ್ತು ಸಲಹೆಸೂಚನೆಗಳನ್ನು ನೀಡಲು ಅನುಕೂಲವಾಗುತ್ತದೆ. ಹೆಣ್ಣುಮಕ್ಕಳಿಗೆ ಕಲಿಯಲು ವಯಸ್ಸಿನ ನಿರ್ಬಂಧತೆಯನ್ನು ಸಡಿಲಿಸಿದ್ದರಿಂದ ಹೆಣ್ಣುಮಕ್ಕಳು ಕಾರಣಾಂತರಗಳಿಂದ ಶಾಲೆಯನ್ನು ಬಿಟ್ಟಿದ್ದರೆ ಅವರು ಮತ್ತೆ ಶಾಲೆಗೆ ಹೋಗಲು ಅನುಕೂಲವಾಯಿತು.

ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದ ಈ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಿಂದಾಗಿ ಮಹಿಳೆಯರು ಔಪಚಾರಿಕ ಶಿಕ್ಷಣ ಪಡೆದು ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಾನಮಾನವನ್ನು ಉತ್ತಮ ಪಡಿಸಿಕೊಳ್ಳಲು ಅನುಕೂಲವಾಯಿತು. ಸಮಾಜದಲ್ಲಿ ಲಿಂಗತಾರತಮ್ಯವನ್ನು ಹೋಗಲಾಡಿ ಸಲು ಸಮಾನತೆಯನ್ನು ಸಾಧಿಸಲು ಅನುಕೂಲವಾಯಿತು.

ಇತ್ತೀಚೆಗೆ ಹೆಣ್ಣುಮಕ್ಕಳು ಪುರುಷರಷ್ಟೇ ಸರಿಸಮಾನವಾದ ಕೌಶಲ್ಯಗಳನ್ನು ಹೊಂದಿ ಸಾಕ್ಷರಸ್ಥರಾಗಿದ್ದಾರೆ. ಇಂದು ಶಾಲಾ ಕಾಲೇಜು ಶಿಕ್ಷಣದ ಫಲಿತಾಂಶಗಳನ್ನು ನೋಡಿದಾಗ ಬಹಳಷ್ಟು ಸಂದರ್ಭದಲ್ಲಿ ಮಹಿಳೆಯರು ಮೇಲುಗೈ ಸಾಧಿಸುತ್ತಿರುವುದು ಗಮನಾರ್ಹ ಅಂಶವಾಗಿದೆ. ಉನ್ನತ ವ್ಯಾಸಂಗದಲ್ಲಿ ಮಹಿಳೆಯರು ಮುಂದೆ ಬರುತ್ತಿರುವುದನ್ನು ನೋಡಿದರೆ, ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಉತ್ತಮ ಮಟ್ಟದ ಕಡೆ ಸಾಗುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಮಹಿಳೆ ಇಂದು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಳಾಗಿದ್ದಾಳೆ. ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾಳೆ. ಸಾಮಾಜಿಕವಾಗಿ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಮನೋಭಾವ ಹೊಂದಿದ್ದಾಳೆ.

ಶಿಕ್ಷಣ ಪಡೆದ ಮಹಿಳೆಯು ರಾಜಕೀಯದಲ್ಲಿಯೂ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಆದರೆ ಗ್ರಾಮೀಣ ಸಮಾಜದ ಮಹಿಳೆಯರ ಸ್ಥಾನಮಾನ, ಶಿಕ್ಷಣ, ಸಾಮಾಜಿಕ, ಆರ್ಥಿಕ ಸಬಲೀಕರಣ ನಗರ ಮಹಿಳೆಯರಷ್ಟು ಮುನ್ನಡೆಯನ್ನು ಸಾಧಿಸಿಲ್ಲ. ಅದಕ್ಕೆ ಕಾರಣಗಳೇನು ಎಂಬುದನ್ನು ಅಧ್ಯಯನದ ಮುಖಾಂತರ ತಿಳಿಯುವುದಾಗಿದೆ.

ಒಬ್ಬ ವ್ಯಕ್ತಿಯ ಪರಿಪೂರ್ಣ ವ್ಯಕ್ತಿತ್ವವು ರೂಪುಗೊಳ್ಳಬೇಕಾದರೆ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣಗಳೆರಡು ಪ್ರಮುಖವಾದವುಗಳಾಗಿವೆ.

ಭಾರತದ ಗ್ರಾಮೀಣ ಪೋಷಕರಲ್ಲಿರುವ ಅನಕ್ಷರತೆಯಿಂದಾಗಿ ಮಹಿಳಾ ಶಿಕ್ಷಣದ ಲಾಭಗಳು ಅವರಿಗೆ ತಿಳಿದಿಲ್ಲ. ಅವರು ಇನ್ನೂ ಸಂಪ್ರದಾಯಿಕ ಹಿನ್ನೆಲೆಯಲ್ಲಿಯೇ ಯೋಚಿಸುತ್ತ ಶಿಕ್ಷಣದಲ್ಲಿ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ. ಗ್ರಾಮೀಣ ಪೋಷಕರ ಅಜ್ಞಾನ, ಹೆಣ್ಣುಮಕ್ಕಳು ಎಷ್ಟೇ ಕಲಿತರೂ ಪಾತ್ರೆ ತಿಕ್ಕುವುದು ತಪ್ಪುವುದಿಲ್ಲ. ಮಗಳು ಓದುವುದರಿಂದ ನಮಗೇನು ಲಾಭ ಎಂಬ ಅಜ್ಞಾನದ ತಿಳುವಳಿಕೆ ಬಹುಪಾಲು ಗ್ರಾಮೀಣದಲ್ಲಿದೆ. ಅದಕ್ಕೆ ಅವರು ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದೆ ಮನೆಕೆಲಸಗಳಿಗೆ ಇಟ್ಟುಕೊಳ್ಳುವುದು ಅಥವ ಚಿಕ್ಕವಯಸ್ಸಿನಲ್ಲಿ ವಿವಾಹ ಮಾಡುವುದು ಸರ್ವೇ ಸಾಮಾನ್ಯ ಸಂಗತಿಯಾಗಿದೆ.

ಭಾರತದ ಸಾಕ್ಷರತೆಯಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ತುಂಬ ಕಡಿಮೆ ಇದೆ. ಕೇರಳ ರಾಜ್ಯ (ಮಹಿಳೆಯರ ಸಾಕ್ಷರತೆ ಶೇಕಡ ೧೦೦ ಮತ್ತು ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಪ್ರಮಾಣ ಶೇಕಡ ೫೨). ಎರಡನೆಯದಾಗಿ ಪಂಜಾಬ್ ಈ ಎರಡು ರಾಜ್ಯಗಳಲ್ಲಿ ಮಹಿಳೆಯರ ಸಾಕ್ಷರತೆ ದೇಶದ ಸರಾಸರಿ ಸಾಕ್ಷರತೆಯಷ್ಟಿದೆ. ಆದರೆ ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ಪುರುಷರಿಗಿಂತ ಕಡಿಮೆ ಇದೆ.

ಕೊನೆ ಟಿಪ್ಪಣಿಗಳು

೧. "ಉದಯೋನ್ಮುಖ ಭಾರತದಲ್ಲಿ ಶಿಕ್ಷಣ", ಡಾ. ಎಸ್. ಶಿವಯ್ಯ, ಪೂಜಾ ಪ್ರಕಾಶನ, ದಾವಣಗೆರೆ, ಸೆಪ್ಟಂಬರ್, ೨೦೦೨, ಪು.೨೩೩.

೨. "ಕರ್ನಾಟಕ ಪ್ರಗತಿ ಪಥ" ಎಂ.ಬಿ. ನಂಜಪ್ಪ, ಗೊ.ರು. ಚನ್ನಬಸಪ್ಪ, ಸಿ.ಕೆ. ಪರಶುರಾಮಯ್ಯ, "ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೭೪, ಪು.೧೨೪-೧೪೨.

೩. *ಸಾಕ್ಷರತೆಯ ಲಿಂಗ ಸಂಬಂಧಿ ಆಯಾಮಗಳು: ಕರ್ನಾಟಕದಲ್ಲಿ ಮಹಿಳಾ ಸಾಕ್ಷರತೆ ಸ್ವರೂಪ,* ಟಿ.ಆರ್. ಚಂದ್ರಶೇಖರ, "ಮಹಿಳಾ ಅಧ್ಯಯನ", ಸಂಪುಟ ೯, ಸಂಚಿಕೆ ೨, ಜುಲೈ-ಡಿಸೆಂಬರ್ ೨೦೦೭, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೮೮-೮೯.

೪ *ಕರ್ನಾಟಕದಲ್ಲಿ ಮಹಿಳಾ ಶಿಕ್ಷಣದ ಪ್ರಗತಿ: ಒಂದು ಅವಲೋಕನ*, ಲೇ. ಗೋವಿಂದರಾಜು, "ಮಹಿಳಾ ಅಧ್ಯಯನ", ಸಂಪುಟ ೬, ಸಂಯುಕ್ತ ಸಂಚಿಕೆ ೧–೨, ಜನವರಿ–ಡಿಸೆಂಬರ್ ೨೦೦೪, ಪು.೧೮೦.

೫ ಎಜುಕೇಷನ್ ಫಾರ್ ವುಮೆನ್ ಎಂಪವರ್‌ಮೆಂಟ್ ಇಫಾ): ಎನ್ ಎವ್ಯಾಲ್ಯೈಷನ್ ಆಫ್ ದಿ ಗೌರ್ವನಮೆಂಟ್ ರನ್ ಸ್ಕೀಮ್ಸ್, ಪು.೮೦–೧೦೦.

೬. ಫೈವ್‌ಇಯರ್ ಪ್ಲಾನ್ಸ್ ಇನ್ ಇಂಡಿಯಾ–ವಿಕಿಪಿಡಿ, ದಿ ಫ್ರೀ ಎನ್‌ಸೈಕ್ಲೋಪೀಡಿಯ, ಪು.೧೫–೧೮.

ಅಧ್ಯಾಯ ನಾಲ್ಕು

ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು: ಕೌಟುಂಬಿಕ ನೆಲೆಗಳಲ್ಲಿ

ಅಧ್ಯಾಯ ನಾಲ್ಕು

ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು: ಕೌಟುಂಬಿಕ ನೆಲೆಗಳಲ್ಲಿ

ಕುಟುಂಬವು ಮಗುವಿನ ಶಿಕ್ಷಣದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಕುಟುಂಬದ ಬಗೆಗೆ ತಿಳಿದುಕೊಳ್ಳುವುದು ಅವಶ್ಯ. ಕುಟುಂಬವು ಅತಿ ಮಹತ್ವವಾದ ಶಿಕ್ಷಣ ಸಂಸ್ಥೆ. ಅದು ಮಕ್ಕಳ ಮೇಲೆ ಪ್ರಭಾವ ಬೀರುವ ಹಾಗು ಅನೌಪಚಾರಿಕ ಶಿಕ್ಷಣ ನೀಡುವ ಸಕ್ರಿಯ ಸಂಸ್ಥೆ. ಮಗುವಿನ ಶಿಕ್ಷಣವು ತಾಯಿಯ ಗರ್ಭದಲ್ಲಿಯೇ ಪ್ರಾರಂಭವಾಗುವುದು ಎಂಬುದಕ್ಕೆ ಉದಾಹರಣೆಯನ್ನು ಮಹಾಭಾರತದಲ್ಲಿ ಕಾಣಬಹುದು. ಆದರೆ ಮಗು ಹುಟ್ಟಿದ ನಂತರ ಅದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದಲೇ "ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು" ಎಂಬ ಗಾದೆ ಮಾತನ್ನು ನೋಡಬಹುದು.

ಹೀಗೆ ಕುಟುಂಬವು ಮಗುವಿನ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ಅವಿರತ ವಾಗಿ ಶ್ರಮಿಸುತ್ತದೆ. ಮಗುವನ್ನು ಯಾವ ಜಾತಿ ಮತ್ತು ಅನಿಷ್ಟ ಧರ್ಮಗಳಿಗೆ ಒಳಗಾಗದಂತೆ, ವಿಕೃತ ಸಂಪ್ರದಾಯಗಳಿಗೆ ಬಲಿಯಾಗದಂತೆ ರಕ್ಷಿಸಿ ಮಗುವಿನ ಭವಿಷ್ಯ ಉತ್ತಮವಾಗಿ, ನಿರ್ಮಾಣಗೊಳ್ಳುವಂತೆ; ಹೆತ್ತವರಿಗೂ ಗೌರವ ಬರುವಂತೆ, ಅದು ತನ್ನ ವ್ಯಕ್ತಿತ್ವ ಉತ್ತಮ ದಿಕ್ಕಿನತ್ತ ರೂಢಿಸಿಕೊಂಡು ಜೀವನ ಸಾರ್ಥಕಪಡಿಸಿಕೊಳ್ಳುವಂತೆ ಕುಟುಂಬ ಸದಾ ಜವಾಬ್ದಾರಿಯಿಂದ ಉತ್ತಮ ಮಾಹಿತಿ ಮತ್ತು ಮಾರ್ಗದರ್ಶನ ನೀಡುವಂತಿರಬೇಕು.

ಒಟ್ಟಿನಲ್ಲಿ ಕುಟುಂಬವು ಸಕ್ರಿಯ ಮತ್ತು ಪರೋಕ್ಷ ಶಿಕ್ಷಣ ನೀಡುವ ಒಂದು ಪ್ರಾತಿನಿಧಿಕ ಸಂಸ್ಥೆ ಯಾಗಿದ್ದು, ಮಗುವಿನ ಜೀವನಕ್ಕೆ ಸುಭದ್ರವಾದ ತಳಹದಿಯನ್ನು ಹಾಕಲು ಸಾಧ್ಯತೆ ಇದೆ. ಆದ್ದರಿಂದ ಕುಟುಂಬದಲ್ಲಿ ಮಗುವಿನ ಬೆಳೆವಣಿಗೆಗೆ ಸರಿಯಾದ ಅವಕಾಶ ದೊರೆಯದೆ ಹೋದ ಪಕ್ಷದಲ್ಲಿ ಅದು ಕುಂಠಿತಗೊಳ್ಳುತ್ತದೆ. ಆದ್ದರಿಂದ ಕುಟುಂಬವು ಮಗುವಿನ ಭವಿಷ್ಯ ಜೀವನದ ಅಡಿಗಲ್ಲು ಮತ್ತು ಅತ್ಯಂತ ಪ್ರಭಾವವುಳ್ಳ ಪ್ರಾತಿನಿಧಿಕ ಸಂಸ್ಥೆಯಾಗಲು ಸಾಧ್ಯವಾಗುವುದು.

ಕುಟುಂಬವು ಸಮಾಜದಲ್ಲಿನ ಪ್ರಮುಖ ಸಾಮಾಜಿಕ ಸಂಸ್ಥೆಯಾಗಿದೆ. ಒಬ್ಬ ವ್ಯಕ್ತಿಯ ಹುಟ್ಟು ಬೆಳವಣಿಗೆ ಕುಟುಂಬದಲ್ಲಿಯೇ ಆಗುತ್ತದೆ. ಆದುದರಿಂದಲೇ ಕುಟುಂಬವೇ(ಮನೆಯೇ) ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂದು ಹೇಳುವುದು. ಒಬ್ಬ ವ್ಯಕ್ತಿಯ ವೈಯಕ್ತಿಕ ಮತ್ತು ಸಾಮಾಜಿಕ ಜೀವನವನ್ನು ನಿರ್ಧರಿಸುವಲ್ಲಿ ಕುಟುಂಬವು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಕುಟುಂಬವು ಒಂದು ಪ್ರಮುಖ ಸಾಮಾಜಿಕ ನಿಯೋಗಿಯಾಗಿದೆ. ಶಿಕ್ಷಣದ ಪ್ರಮುಖ ಭಾಗವಾದ ಅನೌಪಚಾರಿಕ ಶಿಕ್ಷಣ ಪ್ರಾರಂಭವಾಗುವುದು ಕುಟುಂಬದಲ್ಲಿಯೇ. ಮುಂದೆ ಔಪಚಾರಿಕ ಶಿಕ್ಷಣವನ್ನು ವ್ಯವಸ್ಥಿತವಾಗಿ ಪಡೆಯಲು ಕುಟುಂಬದಲ್ಲಿ ವ್ಯಕ್ತಿಗೆ ದೊರೆಯುವ ಅನೌಪಚಾರಿಕ ಶಿಕ್ಷಣವು ಬುನಾದಿಯಂತೆ ಕೆಲಸ ನಿರ್ವಹಿಸುತ್ತದೆ.

ಔಪಚಾರಿಕ ಶಿಕ್ಷಣವನ್ನು ಪಡೆಯಬೇಕಾದರೆ ಮೊದಲು ಪ್ರತಿಯೊಂದು ಮಗುವಿಗೂ ಕುಟುಂಬದ ಅನೌಪಚಾರಿಕ ಶಿಕ್ಷಣ ಅತ್ಯವಶ್ಯಕವಾಗಬೇಕಾಗುತ್ತದೆ. ಕುಟುಂಬದ ಅನೌಪಚಾರಿಕ ಶಿಕ್ಷಣವಿಲ್ಲದೆ ಔಪಚಾರಿಕ ಶಿಕ್ಷಣ ಪಡೆಯಲು ಸಾಧ್ಯವಿಲ್ಲ. ಕುಟುಂಬದ ಸಾಮಾಜಿಕ-ಆರ್ಥಿಕ ಹಿನ್ನೆಲೆಯೂ ಸಹ ವ್ಯಕ್ತಿ ಪಡೆಯುವ ಔಪಚರಿಕ ಶಿಕ್ಷಣವನ್ನು ನಿರ್ದರಿಸುವ ಅಂಶವಾಗಿದೆ. ಒಬ್ಬ ವ್ಯಕ್ತಿಯ ಪರಿಪೂರ್ಣ ವ್ಯಕ್ತಿತ್ವವು ರೂಪುಗೊಳ್ಳಬೇಕಾದರೆ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣಗಳೆರಡು ಪ್ರಮುಖವಾದವುಗಳಾಗಿವೆ.

ಮಹಿಳೆಯರ ಸ್ಥಾನಮಾನವನ್ನು ಉತ್ತಮ ಪಡಿಸಲು ಇರುವ ಪ್ರಮುಖ ಅಂಶವೆ ಔಪಚಾರಿಕ ಶಿಕ್ಷಣ, ಕುಟುಂಬ ವ್ಯವಸ್ಥೆಯಲ್ಲಿಯೇ ಮಹಿಳೆ ಔಪಚಾರಿಕ ಶಿಕ್ಷಣ ಪಡೆಯಲು ಸಾಕಷ್ಟು ಸಮಸ್ಯೆಗಳಿವೆ. ನಮ್ಮ ಕುಟುಂಬ ವ್ಯವಸ್ಥೆಯೇ ಅಸಮಾನತೆಯ ಆಧಾರದಲ್ಲಿ ನಿಂತಿರುವಂತದ್ದಾಗಿದೆ. ಇಲ್ಲಿ ಹುಟ್ಟನಿಂದಲೇ ಗಂಡು-ಹೆಣ್ಣು ಮಕ್ಕಳನ್ನು ಬೆಳೆಸುವ ವಿಧಾನದಲ್ಲೆ ಭಿನ್ನತೆಯಿದೆ. ಹಿಂದಿನಿಂದಲೂ ಬಲವಾಗಿ ರೂಢಿಗತವಾಗಿ ಬಂದಿರುವ ಪುರುಷ ಯಜಮಾನಿಕೆ.

ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪ್ರಮಾಣ ಕಡಿಮೆ ಇರುವುದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ಅವರಿಗೆ ಓದುವ ಅವಕಾಶಗಳೇ ಮಿತವಾಗಿವೆ. ಗಂಡು ಮಗನಾದರೆ ಓದಿ ವಿದ್ಯಾಭ್ಯಾಸ ಪಡೆದು, ಕೆಲಸಕ್ಕೆ ಸೇರಿ ತಮ್ಮನ್ನು ಸಾಕುತ್ತಾನೆ. ಹೆಣ್ಣು ಮಗಳಾದರೆ ಮದುವೆಯಾಗಿ ಗಂಡನ ಮನೆಗೆ ಹೋಗುವವಳು. ಅವಳಿಗಾಗಿ ಮಾಡುವ ಖರ್ಚು ವ್ಯರ್ಥ ಎಂಬ ಭಾವನೆ ಹಲವರಲ್ಲಿದೆ. ಸಂವಿಧಾನಾತ್ಮಕವಾಗಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿದ್ದರೂ, ಈಗ ಪ್ರೌಢ ಶಿಕ್ಷಣದವರೆಗೆ ಶಿಕ್ಷಣ ಉಚಿತವಾಗಿದ್ದರೂ ಕಲಿಯಲು ಶಾಲೆಗೆ ಹೋಗುವ ಸಮಯದಲ್ಲಿ ಮನೆಕೆಲಸ, ಹೊರಗಿನ ಕೆಲಸಕ್ಕೆ ಮಗಳು ಜೊತೆ ನೀಡಿದರೆ ಕೆಲಸವೂ ಹಗುರ, ಹಣವನ್ನು ಸಂಪಾದಿಸಬಹುದೆಂಬ ಯೋಜನೆ ಹಲವರದು. ಕುಟುಂಬದಲ್ಲಿ ಆರ್ಥಿಕವಾಗಿ

ಹೆಚ್ಚಿನ ಹೊರೆ ಬೀಳುತಿದ್ದರೆ ಅದಕ್ಕೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಕತ್ತರಿಹಾಕಿ ಗಂಡುಮಕ್ಕಳನ್ನು ಓದಲು ಕಳುಹಿಸುವ ಸಂಪ್ರದಾಯ ನಮ್ಮ ಗ್ರಾಮೀಣ ಪ್ರದೇಶದಲ್ಲಿದೆ. ಶಿಕ್ಷಣದಿಂದ ವಂಚಿತರಾದ ಅತಿಹೆಚ್ಚು ಕೂಲಿಕಾರ್ಮಿಕ ಹೆಣ್ಣು ಮಕ್ಕಳು ವಿಶ್ವದಲ್ಲೆ ಅತಿಹೆಚ್ಚಾಗಿ ಇರುವುದು ಭಾರತದ ಗ್ರಾಮೀಣ ಪ್ರದೇಶಗಳಲ್ಲಿ.

ಜೊತೆಗೆ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ಓದಿನೊಂದಿಗೆ ನಿತ್ಯದ ಬಿಡುವಿಲ್ಲದ ಕೆಲಸಗಳಲ್ಲಿಯೂ ತೊಡಗಿಸಿಕೊಳ್ಳಬೇಕು. ಪೌಷ್ಟಿಕ ಆಹಾರದ ಕೊರತೆಯೊಂದಿಗೆ ಹೊಲಗದ್ದೆ, ಕಸ-ಮುಸುರೆ, ಕೊಟ್ಟಿಗೆ ಕೆಲಸಗಳಲ್ಲಿ ಭಾಗಿಯಾಗುತ್ತಲೆ ಶಾಲೆಯ ಚಟುವಟಿಕೆಗಳಲ್ಲಿ ತೊಡಗಿ ಕೊಳ್ಳುವಾಗ ಆಯಾಸ, ಒತ್ತಡಗಳಾಗುವುದು ಸಹಜ. ಇದನ್ನು ಮೀರಿ ವಿದ್ಯಾಭ್ಯಾಸವನ್ನು ಮುಂದುವರಿಸಿದರೂ ಶಾಲೆಗಳು ಹತ್ತಿರವಿದ್ದಾಗ ನಿರಾತಂಕದಿಂದ ಕಳುಹಿಸುವ ಪೋಷಕರು, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಕ್ಕದ ಹಳ್ಳಿಗೆ ಕಳುಹಿಸಬೇಕಾದಾಗ ಸುರಕ್ಷತೆ ದೃಷ್ಟಿಯಿಂದ ಹೆದರುತ್ತಾರೆ. ಹೆಣ್ಣುಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಗ್ರಾಮೀಣ ಪ್ರದೇಶದ ಜನರಿಗೆ 'ರಿಸ್ಕ್' ಎನಿಸಿದೆ. ಈಗಲೂ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಋತುಮತಿಯಾದ ನಂತರ ಶಾಲೆಗೆ ಕಳುಹಿಸದೆ ಇರುವ ಪೋಷಕರು ಹೆಚ್ಚಾಗಿ ಇದ್ದಾರೆ. ಹಬ್ಬ-ಹರಿದಿನಗಳಲ್ಲಿ, ಮಾಸಿಕ ಶ್ರಾವದ ದಿನಗಳಲ್ಲಿ ಮನೆಯಲ್ಲಿ ಹೆಚ್ಚಾಗಿ ಕೆಲಸಗಳಿದ್ದಾಗ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವ ಪೋಷಕರಿದ್ದಾರೆ. ಕುಟುಂಬದಲ್ಲಿ ಹೆಚ್ಚು ಮಕ್ಕಳಿದ್ದಾಗ ಅವುಗಳನ್ನು ನೋಡಿಕೊಳ್ಳುವ ಹೊಣೆಗಾರಿಕೆ ಹೆಣ್ಣುಮಕ್ಕಳಿಗಿರುವುದರಿಂದ ಶಾಲೆಗೆ ಹೋಗದಿರುವುದೆ ಹೆಚ್ಚು.

ಸ್ತ್ರೀ ಶಿಕ್ಷಣದ ವಿಚಾರವಾಗಿ ರಾಷ್ಟ್ರೀಯ ಆಯೋಗವು ನೀಡಿರುವ ಕಾರಣಗಳೆಂದರೆ ಪಾಲಕರ ಅಜ್ಞಾನ, ಬಡತನ, ಕುಟುಂಬದಲ್ಲಿ ಸ್ತ್ರೀಯರಿಗಿರುವ ಗೌಣಸ್ಥಾನ, ಸ್ತ್ರೀ ಶಿಕ್ಷಣದ ಬಗ್ಗೆ ಪಾಲಕರಿಗೆ ಇರುವ ಸಂಪ್ರದಾಯಿಕ ಮನೋಭಾವನೆ, ಬಾಲ್ಯವಿವಾಹ, ಸ್ತ್ರೀ ಶಿಕ್ಷಣದ ಬಗೆಗಿನ ತಪ್ಪು ತಿಳುವಳಿಕೆ, ಹೆಣ್ಣುಮಕ್ಕಳು ಕುಟುಂಬದಲ್ಲೇ ಮಾಡಲೇಬೇಕಾದ ಕೆಲಸಗಳು, ಶಾಲೆಯಲ್ಲಿರುವ ಶೈಕ್ಷಣಿಕ ತೊಂದರೆಗಳು ಇತ್ಯಾದಿ.

ಈ ಅಧ್ಯಾಯದಲ್ಲಿ ಮಹಿಳೆಯರು ಶಿಕ್ಷಣ ಪಡೆಯಲು ಅವರ ಕೌಟುಂಬಿಕ ನೆಲೆಗಟ್ಟು ಯಾವ ರೀತಿ ಕಾರಣವಾಗಿದೆ ಎಂಬುದನ್ನು ಅರಿಯುವುದಾಗಿದೆ. ಮಹಿಳೆಯರ ಶಿಕ್ಷಣದ ಮಟ್ಟವನ್ನು ನಿರ್ಧರಿಸುವಲ್ಲಿ ಮಹಿಳೆಯು ಹುಟ್ಟಿ ಬೆಳೆದ ಕುಟುಂಬವು ಬಹಳ ಪ್ರಮುಖವಾದ ಪಾತ್ರವಹಿಸುತ್ತದೆ. ಕುಟುಂಬದಲ್ಲಿ ಮಹಿಳೆಯರಿಗೆ ಅಥವಾ ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ ಪೋಷಕರ ಮನೋಭಾವನೆ ಏನು ಎಂಬುದನ್ನು ಅರಿಯುವ ಪ್ರಯತ್ನವನ್ನು ಮಾಡಲಾಗಿದೆ. ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ ಹಾಗೂ ಗಂಡುಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ

ಲಿಂಗ ತಾರತಮ್ಯ ಮಾಡುತ್ತಾರೆಯೆ? ಈ ತಾರತಮ್ಯ ಮಾಡಲು ಪೋಷಕರು ಯಾವ ಮನೋಭಾವನೆಯನ್ನು ಹೊಂದಿದ್ದಾರೆ. ಈ ಮನೋಭಾವನೆಗಳಿಗೆ ಇರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳೇನು ಎಂದು ಅರಿಯುವ ಮೂಲಕ ಗ್ರಾಮೀಣ ಮಹಿಳೆಯರ ಶಿಕ್ಷಣಕ್ಕೆ ಇರುವ ಪ್ರಮುಖ ಸಮಸ್ಯೆಗಳೇನು ಎಂದು ಅರಿಯುವುದಾಗಿದೆ.

ಈ ಅಧ್ಯಾಯದಲ್ಲಿ ಕುಟುಂಬದ ಗಾತ್ರ, ಪೋಷಕರ ಶಿಕ್ಷಣಮಟ್ಟ, ಜಾತಿ, ಹಳ್ಳಿಗಳ ಮತ್ತು ನಗರದ ಅಂತರವು ಪೋಷಕರ ಮನೋಭಾವನೆಯ ಮೇಲೆ ಪ್ರಭಾವ ಬೀರುತ್ತದೆಯೇ ಎಂಬುದನ್ನು ತಿಳಿದುಕೊಳ್ಳುವುದಾಗಿದೆ.

ಈ ಅಧ್ಯಾಯದಲ್ಲಿ ಗ್ರಾಮ–ನಗರಗಳ ಅಂತರವು ಪ್ರಮುಖ ಅಂಶವಾಗಿದೆ. ಹೆಬ್ಬಗೋಡಿ ಗ್ರಾಮ ಪಂಚಾಯಿತಿ ಮತ್ತು ಸಮಂದೂರು ಗ್ರಾಮ ಪಂಚಾಯಿತಿಯ ತಲಾ ೪ ಗ್ರಾಮಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ಗ್ರಾಮಗಳು ಬೆಂಗಳೂರು ನಗರಕ್ಕೆ ೨೨ ಕಿ.ಮಿ. ದೂರದಲ್ಲಿದ್ದು ಆನೇಕಲ್ ತಾಲ್ಲೂಕಿಗೆ ಸೇರಿವೆ. ಈ ಗ್ರಾಮಗಳೆಂದರೆ, ವೀರಸಂದ್ರ, ಗೊಲ್ಲಹಳ್ಳಿ, ಹೆಬ್ಬಗೋಡಿ ಜನತಾ ಕಾಲೋನಿ ಮತ್ತು ಹೆಬ್ಬಗೋಡಿ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರತಿ ಪಂಚಾಯಿತಿಯಲ್ಲಿ ೧೦೦ ವಕ್ಕಲಿಗ ಜಾತಿ ಮಹಿಳಾ ಸಂದರ್ಶಿತರು ಹಾಗೂ ೧೦೦ ಪರಿಶಿಷ್ಟ ಜಾತಿ ಮಹಿಳಾ ಸಂದರ್ಶಿತರನ್ನು ಅಂದರೆ ಒಟ್ಟು ೨೦೦ ಮಹಿಳಾ ಸಂದರ್ಶಿತರನ್ನು ಸಂದರ್ಶನಕ್ಕೆ ತೆಗೆದುಕೊಳ್ಳಲಾಗಿದೆ.

ಬೆಂಗಳೂರು ನಗರದಿಂದ ೪೦ ಕಿ.ಮಿ. ದೂರದಲ್ಲಿರುವ ಸಮಂದೂರು ಗ್ರಾಮ ಪಂಚಾಯಿತಿಯ ಸಮಂದೂರು, ಎಸ್. ತಿಮ್ಮಸಂದ್ರ, ಎಸ್. ಮಡಿವಾಳ ಮತ್ತು ಮಾರನಾಯಕನಹಳ್ಳಿ, ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿಯೂ ಕೂಡ ಪ್ರತಿ ಪಂಚಾಯಿತಿಯಲ್ಲಿ ೧೦೦ ವಕ್ಕಲಿಗ ಜಾತಿ ಮಹಿಳಾ ಸಂದರ್ಶಿತರು ಹಾಗೂ ೧೦೦ ಪರಿಶಿಷ್ಟ ಜಾತಿ ಮಹಿಳಾ ಸಂದರ್ಶಿತರನ್ನು ಅಂದರೆ ಒಟ್ಟು ೨೦೦ ಮಹಿಳಾ ಸಂದರ್ಶಿತರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಕುಟುಂಬದ ಹಿರಿಯ ಮಹಿಳೆಯರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿ ಕೊಳ್ಳಲಾಗಿದೆ.

ಮಹಿಳೆಯರ ಶಿಕ್ಷಣಮಟ್ಟವು ಅವರ ಮನೋಭಾವನೆಯ ಮೇಲೆ ಪ್ರಭಾವ ಬೀರುವುದರಿಂದ ಮೊದಲು ಸಂದರ್ಶಿತರ ಶಿಕ್ಷಣಮಟ್ಟದ ಪಟ್ಟಿಯನ್ನು ತಯಾರಿಸಿ ಪಟ್ಟಿ ೪.೧ರಲ್ಲಿ ಕೊಡಲಾಗಿದೆ.

ಪಟ್ಟಿ ೪.೧ರನ್ನು ಗಮನಿಸಿದಾಗ ನಗರಕ್ಕೆ ಹತ್ತಿರವಾಗಿರುವ ಹಳ್ಳಿಗಳ ಮಹಿಳೆಯರ ಶಿಕ್ಷಣಮಟ್ಟವು ನಗರದಿಂದ ದೂರವಾಗಿರುವ ಗ್ರಾಮಗಳ ಮಹಿಳೆಯರ ಶಿಕ್ಷಣಮಟ್ಟಕ್ಕಿಂತ

ಉತ್ತಮವಾಗಿದೆ. ಅದೇ ರೀತಿ, ಪರಿಶಿಷ್ಟಜಾತಿ ಮಹಿಳೆಯರ ಶಿಕ್ಷಣಮಟ್ಟಕ್ಕಿಂತ ಒಕ್ಕಲಿಗ ಜಾತಿಯ ಮಹಿಳೆಯರ ಶಿಕ್ಷಣಮಟ್ಟವು ಉತ್ತಮವಾಗಿರುವುದು ಕಂಡುಬರುತ್ತದೆ.

ನಗರಕ್ಕೆ ಹತ್ತಿರವಾಗಿರುವ ಹೆಬ್ಬಗೋಡಿ ಗ್ರಾಮ ಪಂಚಾಯಿತಿ ಹಳ್ಳಿಗಳ ಮಹಿಳೆಯರಲ್ಲಿ ಶೇ.೧೦ರಷ್ಟು ಅವಿದ್ಯಾವಂತರು ಕಂಡುಬರುತ್ತಾರೆ. ಶೇ.೯೦ ರಷ್ಟು ಮಹಿಳೆಯರು ಕಾಲೇಜು ಶಿಕ್ಷಣವನ್ನು ಪಡೆದಿದ್ದಾರೆ.

ನಗರಕ್ಕೆ ದೂರವಾಗಿರುವ ಸಮಂದೂರು ಗ್ರಾಮ ಪಂಚಾಯಿತಿ ಹಳ್ಳಿಗಳ ಮಹಿಳೆಯರಲ್ಲಿ ಶೇ.೬೪ ರಷ್ಟು ಮಹಿಳೆಯರು ಅವಿದ್ಯಾವಂತರು ಕಂಡು ಬರುತ್ತಾರೆ. ಶೇ.೩೬ ರಷ್ಟು ಮಹಿಳೆಯರು ಶಿಕ್ಷಣವನ್ನು ಪಡೆದಿದ್ದಾರೆ.

ಈ ಪಟ್ಟಿಯಿಂದ ತಿಳಿದುಬರುವುದೇನೆಂದರೆ, ನಗರಕ್ಕೆ ಹತ್ತಿರವಿರುವ ಹಳ್ಳಿಗಳ ಜನರು ನಗರೀಕರಣದ ಪ್ರಭಾವಕ್ಕೆ ಒಳಗಾಗಿದ್ದು ಹೆಚ್ಚಿನ ಸಂಖ್ಯೆಯ ಮಹಿಳೆಯರು ಶಿಕ್ಷಣ ಪಡೆಯಲು ಪೂರಕವಾದ ಸನ್ನಿವೇಶಗಳಿವೆ. ಉತ್ತಮ ಸಾರಿಗೆ ಸಂಪರ್ಕ, ಶಾಲಾ ಕಾಲೇಜು, ಹಾಸ್ಪೆಲ್‌ಗಳು ಕಂಡುಬರುತ್ತವೆ. ನಗರದಿಂದ ದೂರವಿರುವ ಹಳ್ಳಿಗಳ ಜನರ ಮೇಲೆ ನಗರೀಕರಣದ ಪ್ರಭಾವ ಹೆಚ್ಚಾಗಿ ಆಗಿಲ್ಲ. ಉತ್ತಮ ಸಾರಿಗೆ-ಸಂಪರ್ಕ, ಹಳ್ಳಿಗಳಿಗೆ ಹತ್ತಿರವಾಗಿ ಶಾಲಾ ಕಾಲೇಜು, ಹಾಸ್ಪೆಲ್‌ಗಳು ಇಲ್ಲದೆ ಶಿಕ್ಷಣ ಪಡೆಯಲು ಮಹಿಳೆಯರಿಗೆ ಕಷ್ಟವಾಗಿದೆ.

ಪಟ್ಟಿ ೪.೧ ಸಂದರ್ಶಿತರ ಶಿಕ್ಷಣ ಮಟ್ಟ

ಸಂದರ್ಶಕರ ಶಿಕ್ಷಣಮಟ್ಟ ಹಳ್ಳಿಗಳು		ಅನಕ್ಷರಸ್ಥರು	ಶಾಲಾ ಶಿಕ್ಷಣ (ಪ್ರಾಥಮಿಕ)	ಪ್ರೌಢ ಶಿಕ್ಷಣ	ಪದವಿಪೂರ್ವ ಶಿಕ್ಷಣ	ಕಾಲೇಜು	ಇತರೆ	ಒಟ್ಟು
ಮೊದಲನೇ ಗುಂಪಿನ ಹಳ್ಳಿಗಳು (ನಗರಕ್ಕೆ ಹತ್ತಿರವಾಗಿರುವ)	ವಕ್ಕಲಿಗ	೪	೧೨	೨೮	೦೮	೩೬	೧೨	೧೦೦
	ಪ.ಜಾ	೧೨	೦೮	೪೦	೧೨	೨೦	೦೮	೧೦೦
ಎರಡನೇ ಗುಂಪಿನ ಹಳ್ಳಿಗಳು	ವಕ್ಕಲಿಗ	೬೦	೨೪	೧೨	೦೪	೦	೦	೧೦೦
(ನಗರಕ್ಕೆ ದೂರವಾಗಿರುವ)	ಪ.ಜಾ.	೬೮	೨೪	೮	೦	೦	೦	೧೦೦
ಒಟ್ಟು		೧೪೪	೬೮	೮೮	೨೪	೫೬	೨೦	೪೦೦

ಆದುದರಿಂದ ನಮಗೆ ತಿಳಿದುಬರುವುದೇನೆಂದರೆ ಮಹಿಳೆಯರ ಶಿಕ್ಷಣದ ಮೇಲೆ ಮಹಿಳೆಯರು ವಾಸಿಸುವ ಗ್ರಾಮ-ನಗರ ಅಂತರವೂ ಪ್ರಭಾವ ಬೀರುತ್ತದೆ. ಗ್ರಾಮ-ನಗರ ಅಂತರವನ್ನು ಹೊರತುಪಡಿಸಿ ಜಾತಿ ಆಧಾರದ ಮೇಲೆ ವಿಶ್ಲೇಷಿಸಿದಾಗ ಒಕ್ಕಲಿಗ ಜಾತಿಯಲ್ಲಿ ಶೇ.೩೨ ರಷ್ಟು ಮಹಿಳೆಯರು ಅವಿದ್ಯಾವಂತರಾಗಿದ್ದಾರೆ. ಶೇ.೬೮ರಷ್ಟು ಮಹಿಳೆಯರು ವಿದ್ಯಾವಂತರಾಗಿದ್ದಾರೆ. ಅದೇ ರೀತಿ ಪರಿಶಿಷ್ಟ ಜಾತಿಯಲ್ಲಿ ಶೇ.೪೦ರಷ್ಟು ಮಹಿಳೆ ಯರು ಅವಿದ್ಯಾವಂತರಾಗಿದ್ದಾರೆ ಹಾಗೂ ಶೇ.೬೦ರಷ್ಟು ಮಹಿಳೆಯರು ವಿದ್ಯಾವಂತ ರಾಗಿದ್ದಾರೆ.

ಈ ಅಧ್ಯಯನದಿಂದ ತಿಳಿದುಬರುವುದೇನೆಂದರೆ, ಜಾತಿ ಆಧಾರದಮೇಲೆ ವೀಕ್ಷಿಸಿದಾಗ, ಪರಿಶಿಷ್ಟ ಜಾತಿಯ ಮಹಿಳೆಯರಿಗಿಂತ ಒಕ್ಕಲಿಗ ಜಾತಿಯಲ್ಲಿ ಹೆಚ್ಚು ಮಹಿಳೆಯರು ವಿದ್ಯಾವಂತರಾಗಿದ್ದಾರೆ.

ಸಾಮಾಜಿಕ ಅಂಶವಾದ ಜಾತಿಯು ಸಹ ಮಹಿಳಾ ಶಿಕ್ಷಣಮಟ್ಟವನ್ನು ನಿರ್ಧರಿಸುವಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಒಕ್ಕಲಿಗ ಜಾತಿಯ ಕುಟುಂಬಗಳು ಉತ್ತಮ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಹೊಂದಿದ್ದು ಅವರ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುತ್ತಾರೆ. ಆದರೆ ಅದೇ ಗ್ರಾಮಗಳ ಪರಿಶಿಷ್ಟ ಜಾತಿಯ ಕುಟುಂಬಗಳು ಉತ್ತಮ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಹೊಂದಿಲ್ಲದ ಕಾರಣ ಜೊತೆಗೆ ಸರ್ಕಾರವು ಪರಿಶಿಷ್ಟ ಜಾತಿಯವರಿಗೆ ಉಚಿತ ಶಿಕ್ಷಣ ಮತ್ತು ಇತರೆ ಸವಲತ್ತುಗಳನ್ನು ನೀಡಿದ್ದರೂ ಹೆಚ್ಚು ಅವಿದ್ಯಾವಂತ ಪರಿಶಿಷ್ಟ ಜಾತಿಯ ಪೋಷಕರಿಗೆ ಸರ್ಕಾರ ನೀಡಿರುವ ಸವಲತ್ತುಗಳ ಬಗ್ಗೆ ಅರಿವಿಲ್ಲದಿರುವುದರಿಂದ ಅವುಗಳನ್ನು ಬಳಸಿಕೊಳ್ಳುತ್ತಿಲ್ಲ. ಅವರು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಲಾಗದೆ, ಚಿಕ್ಕ ವಯಸ್ಸಿನಲ್ಲಿ ಶಾಲೆ ಬಿಡುವ ಅಥವ ಶಾಲೆಗೆ ಕಳುಹಿಸದಿರುವ ಪ್ರಕರಣಗಳು ಹೆಚ್ಚು ಕಂಡುಬರುತ್ತವೆ.

ಈ ಪಟ್ಟಿಯಿಂದ ತಿಳಿದುಬರುವುದೇನೆಂದರೆ ಜಾತಿಗಿಂತ ಹೆಚ್ಚು ಗ್ರಾಮ-ನಗರ ಅಂತರವು ಮಹಿಳೆಯರ ಶಿಕ್ಷಣಮಟ್ಟವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಈ ಅಧ್ಯಾಯದಲ್ಲಿ ಮನೆಯ ಹಿರಿಯ ಮಹಿಳೆಯು ತನ್ನ ಮಗಳಿಗೆ ಮತ್ತು ಮಗನಿಗೆ ಶಿಕ್ಷಣ ಕೊಡಿಸುವ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಿದ್ದಾರೆ, ಮಗಳಿಗೆ ಮತ್ತು ಮಗನಿಗೆ ಶಿಕ್ಷಣ ಕೊಡಿಸುವಲ್ಲಿ ಲಿಂಗ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆಯೇ ಇಲ್ಲವೆ ಎಂಬುದನ್ನು ತಿಳಿಯುವುದಾಗಿದೆ. ಸಂದರ್ಶಿತರ ಶಿಕ್ಷಣಮಟ್ಟ, ನಗರ-ಗ್ರಾಮ ಅಂತರ ಮತ್ತು ಜಾತಿಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಂದರ್ಶಿತರ ಮನೋಭಾವನದ ಮೇಲೆ ಪ್ರಭಾವ ಬೀರುತ್ತದೆಯೇ ಎಂಬುದನ್ನು ಅರಿಯುವುದಾಗಿದೆ.

ಪಟ್ಟಿ ೪.೨ ರಲ್ಲಿ ಮಗನಿಗೆ ಶಿಕ್ಷಣ ಕೊಡಿಸುವ ಬಗೆಗಿನ (ಗಂಡು ಮಕ್ಕಳಿಗೆ) ಅಭಿಪ್ರಾಯಗಳನ್ನು ಸಂಗ್ರಹಿಸಿ ಕೊಡಲಾಗಿದೆ.

ಪಟ್ಟಿ ೪.೨: ಮಗನಿಗೆ ಶಿಕ್ಷಣ ಕೊಡಿಸುವ ಬಗೆಗಿನ ಅಭಿಪ್ರಾಯಗಳು (ಗಂಡು ಮಕ್ಕಳಿಗೆ)

ಸಂದರ್ಶಿತರ ಶಿಕ್ಷಣಮಟ್ಟ	ಶಿಕ್ಷಣಮಟ್ಟಮೊದಲನೆ ಗುಂಪಿನ ಹಳ್ಳಿಗಳು [ನಗರಕ್ಕೆ ಹತ್ತಿರವಾಗಿರುವ]										ಎರಡನೇ ಗುಂಪಿನ ಹಳ್ಳಿಗಳು [ನಗರಕ್ಕೆ ದೂರವಾಗಿರುವ]										ಒಟ್ಟು
	ಶಾಲೆ		ಪಿಯುಸಿ		ಕಾಲೇಜು		ಇತರೆ		ಆಸಕ್ತಿ ಇಲ್ಲ		ಶಾಲೆ		ಪಿಯುಸಿ		ಕಾಲೇಜು		ಇತರೆ		ಆಸಕ್ತಿಇಲ್ಲ		
	ತಂದೆ	ತಾಯಿ	ತಂದೆ	ತಾಯಿ	ತಂದೆ	ತಾಯಿ	ತಂದೆ	ತಾಯಿ	ತಂದೆ	ತಾಯಿ	ತಂದೆ	ತಾಯಿ	ತಂದೆ	ತಾಯಿ	ತಂದೆ	ತಾಯಿ	ತಂದೆ	ತಾಯಿ	ತಂದೆ	ತಾಯಿ	
ಅನಕ್ಷರಸ್ಥರು	–	–	–	–	೦೪	೧೨	–	–	–	–	೦೮	೨೪	೦೪	–	೩೩	೨೩	೨೧	೧೫	–	–	೧೪೪
ಶಾಲೆ	–	–	–	–	೧೨	೦೮	–	–	–	–	೦೪	೦೮	–	–	೧೨	೧೨	೦೮	೦೪	–	–	೬೮
ಪ್ರೌಢಶಾಲೆ/ ಪ.ಪೂ.ಶಿಕ್ಷಣ	–	–	–	–	೩೨	೪೮	೦೪	೦೪	–	–	೦೨	೦೬	–	–	೦೮	೦೮	–	–	–	–	೧೧೨
ಕಾಲೇಜು	–	–	–	–	೩೬	೨೦	–	–	–	–	–	–	–	–	–	–	–	–	–	–	೫೬
ಇತರೆ	–	–	–	–	೧೨	೦೮	–	–	–	–	–	–	–	–	–	–	–	–	–	–	೨೦
ಒಟ್ಟು	–	–	–	–	೯೬	೯೬	೦೪	೦೪	–	–	೧೪	೩೮	೦೪	–	೫೩	೪೩	೨೯	೧೯			೪೦೦

ಪಟ್ಟಿ ೪.೨ ರನ್ನು ಗಮನಿಸಿದಾಗ ನಮಗೆ ತಿಳಿದುಬರುವುದೇನೆಂದರೆ, ನಗರಕ್ಕೆ ಹತ್ತಿರವಾಗಿರುವ ಮತ್ತು ನಗರಕ್ಕೆ ದೂರವಿರುವ ಎರಡು ಗ್ರಾಮಗಳ ಮಹಿಳೆಯರು ತಮ್ಮ ಗಂಡು ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಹಾಗೂ ನಗರಕ್ಕೆ ದೂರವಿರುವ ಎರಡು ಗ್ರಾಮ ಪಂಚಾಯಿತಿಯ ವಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರು ಸಹ ತಮ್ಮ ಮಗನಿಗೆ ಶಿಕ್ಷಣ ನೀಡಬೇಕೆಂದು, ಅದರಲ್ಲಿಯೂ ಕಾಲೇಜು ಶಿಕ್ಷಣ ನೀಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ದೂರ ಇರುವ ಗ್ರಾಮಗಳ ಮಹಿಳೆಯರು ತಮ್ಮ ಮಗನಿಗೂ ಶಿಕ್ಷಣ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಈ ಗ್ರಾಮಗಳಲ್ಲಿ ಶೇ.೨ ರಷ್ಟು ವಕ್ಕಲಿಗ ಜಾತಿ ಮಹಿಳೆಯರು ಶೇ.೧೯ ರಷ್ಟು ಪರಿಶಿಷ್ಟ ಜಾತಿ ಮಹಿಳೆಯರು ತಮ್ಮ ಗಂಡು ಮಕ್ಕಳಿಗೆ ಶಾಲಾ ಶಿಕ್ಷಣವನ್ನು ಕೊಡಿಸುವುದಾಗಿ ಹೇಳಿದ್ದಾರೆ. ಶೇ.೨ ರಷ್ಟು ವಕ್ಕಲಿಗ ಜಾತಿಯ ಮಹಿಳೆಯರು ಪಿ.ಯು.ಸಿ. ಶಿಕ್ಷಣ ಕೊಡಿಸುವುದಾಗಿ ಹೇಳಿದ್ದಾರೆ. ಶೇ.೨೬.೫೦ ರಷ್ಟು ವಕ್ಕಲಿಗ ಜಾತಿ ಮಹಿಳೆಯರು, ಶೇ.೨೧.೫ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಕಾಲೇಜು ಶಿಕ್ಷಣ ಕೊಡಿಸುವುದಾಗಿ ಹೇಳಿದ್ದಾರೆ. ಶೇ.೧೪.೫ ರಷ್ಟು ವಕ್ಕಲಿಗ ಜಾತಿ ಮಹಿಳೆಯರು, ಶೇ.೯.೫ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗನಿಗೆ ಇತರೆ ವೃತ್ತಿ ಶಿಕ್ಷಣವನ್ನು ನೀಡುವುದಾಗಿ ಹೇಳಿದ್ದಾರೆ. ಆದರೆ ಯಾವ ಮಹಿಳೆಯೂ ಸಹ ತಮ್ಮ ಮಗನಿಗೆ ಶಿಕ್ಷಣ ಬೇಡವೆಂದು ಹೇಳಿಲ್ಲ. ಮಗನು ಶಿಕ್ಷಣವನ್ನು ಹೊಂದಿ ಉದ್ಯೋಗ ಪಡೆದು ಕುಟುಂಬಕ್ಕೆ ಆಸರೆಯಾಗುತ್ತಾನೆ ಹಾಗೂ ಆದಾಯ ತರುತ್ತಾನೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ಮಗನ ಶಿಕ್ಷಣವು ಬಹಳ ಪ್ರಾಮುಖ್ಯವಾದುದು ಎಂದು ಪರಿಗಣಿಸಲಾಗಿದೆ.

"ಗಂಡು ಮಗುವಿಗೆ ಶಿಕ್ಷಣ ನೀಡಲು ಬಹುತೇಕ ಪೋಷಕರು ಒಲವು ತೋರಿದ್ದಾರೆ. ಇದಕ್ಕೆ ನೀಡಿರುವ ಕಾರಣ ಆರ್ಥಿಕವಾದುದ್ದು. ಗಂಡು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ನೀಡಿದರೆ ನೌಕರಿಗಳು ಹೆಚ್ಚಾಗುತ್ತವೆ, ವ್ಯಾಪಾರ ಮಾಡಬಹುದು ಅಥವಾ ಅಂಗಡಿ ನಡೆಸಬಹುದು, ಹೈನುಗಾರಿಕೆ ಹಾಗೂ ಕೃಷಿ ಸಂಬಂಧಿತ ಕಸುಬುಗಳನ್ನು ವೈಜ್ಞಾನಿಕವಾಗಿ ಕೈಗೊಳ್ಳಬಹುದು. ಹೀಗೆ ಯಾವುದೋ ಒಂದು ವೃತ್ತಿಯ ಮೂಲಕ ಉತ್ತಮ ಜೀವನ ನಡೆಸಬಹುದೆಂದು ಹೇಳುತ್ತಾರೆ."[೧]

ಈ ಅಧ್ಯಯನದಲ್ಲಿ ನಗರಕ್ಕೆ ಹತ್ತಿರವಾಗಿರುವ ಮತ್ತು ನಗರಕ್ಕೆ ದೂರವಾಗಿರುವ ವಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಶೇ.೯೦ರಷ್ಟು ಮಹಿಳೆಯರು ಗಂಡು ಮಗುವಿಗೆ ಹೆಚ್ಚಿನ ಕಾಲೇಜು ಶಿಕ್ಷಣವನ್ನು ನೀಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಪಿತೃಪ್ರಧಾನ, ಪಿತೃವಂಶೀಯ, ಪಿತೃಸ್ಥಳೀಯ ಕುಟುಂಬಗಳಲ್ಲಿ ಗಂಡು ಮಕ್ಕಳು ಕುಟುಂಬದಲ್ಲೇ ವಾಸಿಸುವುದರಿಂದ ಗಂಡು ಮಕ್ಕಳ ಶಿಕ್ಷಣವು ಕುಟುಂಬದ ಅಭಿವೃದ್ಧಿಗೆ ಸಹಾಯವಾಗುತ್ತದೆ ಎಂಬ ಅಭಿಪ್ರಾಯವನ್ನು ಶೇ.೯೫ರಷ್ಟು ಮಹಿಳೆಯರು ವ್ಯಕ್ತಪಡಿಸಿದ್ದಾರೆ.

ಗಂಡು ಮಕ್ಕಳಿಗೆ ಶಿಕ್ಷಣ ಕೊಡಿಸುವ ಕುರಿತು ಪರಿಸ್ಥಿತಿ ಸಂಪೂರ್ಣವಾಗಿ ಭಿನ್ನವಾಗಿದೆ. ಗಂಡು ಮಕ್ಕಳು ಮದುವೆಯ ನಂತರವು ಪೋಷಕರ ಜೊತೆ ಇರುತ್ತಾರೆ. ಅಲ್ಲದೆ ತಮ್ಮ ಇಳಿವಯಸ್ಸಿನಲ್ಲಿ ತಮ್ಮನ್ನು ಸಲಹುತ್ತಾರೆ ಎಂಬ ಭಾವನೆ ಬಹುತೇಕ ಪೋಷಕರಲ್ಲಿದೆ.”[೨]

ಪಟ್ಟಿ ೪.೩ರಲ್ಲಿ ಮಗಳಿಗೆ ಕೊಡಿಸುವ ಶಿಕ್ಷಣಮಟ್ಟದ ಬಗೆಗಿನ (ಹೆಣ್ಣುಮಕ್ಕಳಿಗೆ) ಅಭಿಪ್ರಾಯಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಪಟ್ಟಿ ೪.೩ರನ್ನು ವೀಕ್ಷಿಸಿದಾಗ ತಿಳಿದುಬರುವುದೇನೆಂದರೆ ಸಂದರ್ಶಕರ ಶಿಕ್ಷಣಮಟ್ಟವು ಅವರ ಮಗಳಿಗೆ ಶಿಕ್ಷಣ ಕೊಡಿಸುವುದರ ಮೇಲೆ ನೇರ ಪ್ರಭಾವವನ್ನು ಬೀರುತ್ತದೆ. ಸಂದರ್ಶಿತರ ಶಿಕ್ಷಣಮಟ್ಟ ಹೆಚ್ಚಾದಂತೆ ಅವರು ತಮ್ಮ ಮಗಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

“ಅಕ್ಷರಸ್ಥ ಸ್ತ್ರೀಯರು ತಮ್ಮ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ನಿಶ್ಚಿತವಾಗಿ ಪ್ರೋತ್ಸಾಹಿಸಿ, ಅದರ ಅವಶ್ಯಕತೆಯನ್ನು ಪ್ರತಿಪಾದಿಸಿದ್ದಾರೆ. ಆದರೆ ಅನಕ್ಷರಸ್ಥ ಸ್ತ್ರೀಯರಿಗೆ ಅದರ ಮಹತ್ವವೇನೆಂಬುದು ಅರಿವಾಗಿದ್ದರೂ ಸಹ ಅದು ಅತ್ಯಂತ ಅವಶ್ಯಕವಾದುದು ಎಂದು ತಿಳಿದಿಲ್ಲ.[೩]

ನಗರಕ್ಕೆ ಹತ್ತಿರವಾಗಿರುವ ಹಳ್ಳಿಗಳ ಶೇ.೯೮ ರಷ್ಟು ಸಂದರ್ಶಿತ ಮಹಿಳೆಯರು ತಮ್ಮ ಮಗಳಿಗೆ ಕಾಲೇಜು ಶಿಕ್ಷಣವನ್ನು ಕೊಡುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ದೂರವಾಗಿರುವ ಹಳ್ಳಿಗಳ ಸಂದರ್ಶಿತ ಮಹಿಳೆಯರಲ್ಲಿ ಶೇ.೮ ರಷ್ಟು ಮಹಿಳೆಯರು ಹೆಣ್ಣುಮಗಳಿಗೆ ಶಿಕ್ಷಣ ಕೊಡಿಸಲು ಆಸಕ್ತಿಯಿಲ್ಲ ಎಂದು ಹೇಳಿದ್ದಾರೆ. ಶೇ.೩೪ರಷ್ಟು ಮಹಿಳೆಯರು ಶಾಲಾ ಶಿಕ್ಷಣವನ್ನು ಮಾತ್ರ ನೀಡಲು ಒಲವು ತೋರಿದ್ದಾರೆ. ಶೇ.೬ರಷ್ಟು ಮಹಿಳೆಯರು ಪಿ.ಯು.ಸಿ. ಶಿಕ್ಷಣವನ್ನು ನೀಡಲು ಆಸಕ್ತರಾಗಿದ್ದಾರೆ. ಶೇ.೧೨ ರಷ್ಟು ಮಹಿಳೆಯರು ಮಾತ್ರ ತಮ್ಮ ಮಗಳಿಗೆ ಕಾಲೇಜು ಶಿಕ್ಷಣವನ್ನು ಕೊಡಿಸುವುದಾಗಿ ಹೇಳಿದ್ದಾರೆ.

ಅಧ್ಯಯನದ ಒಟ್ಟು ಎರಡು ಗುಂಪಿನ ಹಳ್ಳಿಗಳಲ್ಲಿ ಜಾತಿ ಆಧಾರದ ಮೇಲೆ ವಿಶ್ಲೇಷಿಸಿದಾಗ ಶೇ.೨ ರಷ್ಟು ವಕ್ಕಲಿಗ ಜಾತಿ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ಕೊಡಿಸುವಲ್ಲಿ ಆಸಕ್ತಿಯನ್ನು ತೋರಿಸಿಲ್ಲ. ಶೇ.೬ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ಕೊಡಿಸುವಲ್ಲಿ ಆಸಕ್ತಿಯನ್ನು ತೋರಿಸಿಲ್ಲ. ಶೇ.೩೦ರಷ್ಟು ವಕ್ಕಲಿಗ ಜಾತಿ ಮಹಿಳೆಯರು ತಮ್ಮ ಮಗಳಿಗೆ ಶಾಲಾ

ಪಟ್ಟಿ ೪.೩: ಮಗಳಿಗೆ ಶಿಕ್ಷಣ ಕೊಡಿಸುವ ಬಗೆಗಿನ ಅಭಿಪ್ರಾಯಗಳು(ಹೆಣ್ಣುಮಕ್ಕಳಿಗೆ)

ಸಂದರ್ಶಿತರ ಶಿಕ್ಷಣಮಟ್ಟ	ಮೊದಲನೆ ಗುಂಪಿನ ಹಳ್ಳಿಗಳು [ನಗರಕ್ಕೆ ಹತ್ತಿರವಾಗಿರುವ]										ಎರಡನೇ ಗುಂಪಿನ ಹಳ್ಳಿಗಳು [ನಗರಕ್ಕೆ ದೂರವಾಗಿರುವ]										ಒಟ್ಟು
	ಶಾಲೆ		ಪಿಯುಸಿ		ಕಾಲೇಜು		ಇತರೆ		ಆಸಕ್ತಿ ಇಲ್ಲ		ಶಾಲೆ		ಪಿಯುಸಿ		ಕಾಲೇಜು		ಇತರೆ		ಆಸಕ್ತಿಇಲ್ಲ		
	ತಾಯಿ	ತಂ.	ತಾಯಿ	ತಂ.	ತಾಯಿ	ತಂ.	ತಾಯಿ	ತಂ.	ತಾಯಿ	ತಂ.	ತಾಯಿ	ತಂ.	ತಾಯಿ	ತಂ.	ತಾಯಿ	ತಂ.	ತಾಯಿ	ತಂ.	ತಾಯಿ	ತಂ.	
ಅನಕ್ಷರಸ್ಥರು	–	–	–	–	೦೪	೦೪	–	–	–	–	೫೨	೫೨	೦೪	–	೦೪	–	–	–	೦೪	೧೨	೧೪೪
ಶಾಲೆ	–	–	–	–	೧೨	೦೮	–	–	–	–	೧೬	೨೪	೦೮	–	–	–	–	–	–	–	೬೮
ಪ್ರೌಢಶಾಲೆ/ ಪ.ಪೂ.ಶಿಕ್ಷಣ	–	–	–	–	೩೨	೪೮	೦೪	೦೪	–	–	೦೪	–	–	–	೧೨	೦೮	–	–	–	–	೧೧೨
ಕಾಲೇಜು	–	–	–	–	೩೬	೨೦	–	–	–	–	–	–	–	–	–	–	–	–	–	–	೫೬
ಇತರೆ	–	–	–	–	೧೨	೦೮	–	–	–	–	–	–	–	–	–	–	–	–	–	–	೨೦
ಒಟ್ಟು	೦೨	೦೬	–	–	೯೬	೮೮	೦೪	೦೪	–	–	೭೨	೭೬	೧೨	–	೧೬	೦೮	–	–	೦೪	೧೨	೪೦೦

ಶಿಕ್ಷಣ ನೀಡುವುದಾಗಿ ಹೇಳಿದ್ದಾರೆ. ಶೇ.೪೧ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ತಮ್ಮ ಮಗಳಿಗೆ ಶಾಲಾ ಶಿಕ್ಷಣ ನೀಡುವುದಾಗಿ ಹೇಳಿದ್ದಾರೆ. ಶೇ.೬ರಷ್ಟು ವಕ್ಕಲಿಗ ಜಾತಿ ಮಹಿಳೆಯರು ಪಿ.ಯು.ಸಿ. ಶಿಕ್ಷಣವನ್ನು ನೀಡುವುದಾಗಿ ಹೇಳಿದ್ದಾರೆ. ಶೇ.೫೬ರಷ್ಟು ವಕ್ಕಲಿಗ ಜಾತಿ ಮಹಿಳೆಯರು, ಶೇ.೪೮ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಕಾಲೇಜು ಶಿಕ್ಷಣ ನೀಡುವುದಾಗಿ ಹೇಳಿದ್ದಾರೆ. ಶೇ.೨ರಷ್ಟು ವಕ್ಕಲಿಗ ಜಾತಿ ಮತ್ತು ಶೇ.೨ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಇತರೆ ಶಿಕ್ಷಣ ನೀಡುವುದಾಗಿ ಹೇಳಿದ್ದಾರೆ.

ಜಾತಿ ಆಧಾರದ ಮೇಲೆ ಗಮನಿಸಿದಾಗ ಪರಿಶಿಷ್ಟ ಜಾತಿಯ ಮಹಿಳೆಯರಿಗಿಂತ ವಕ್ಕಲಿಗ ಜಾತಿ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವಲ್ಲಿ ಹೆಚ್ಚು ಆಸಕ್ತರಾಗಿದ್ದಾರೆ. ಆದರೆ ಜಾತಿಗಿಂತ ನಗರ-ಗ್ರಾಮ ಅಂತರವು ಮಹಿಳೆಯ ಶಿಕ್ಷಣದ ಅಭಿಪ್ರಾಯಗಳ ಮೇಲೆ ನೇರ ಪ್ರಭಾವ ಬೀರುತ್ತದೆ.

ನಗರಕ್ಕೆ ಹತ್ತಿರವಾಗಿರುವ ಯಾವ ಜಾತಿಯವರು ಸಹ ತಮ್ಮ ಮಗಳ ಶಿಕ್ಷಣದ ಬಗ್ಗೆ ಆಸಕ್ತಿಯಿಲ್ಲ ಎಂದು ಹೇಳಿಲ್ಲ. ಪರಿಶಿಷ್ಟ ಜಾತಿಯ ಮತ್ತು ವಕ್ಕಲಿಗ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳಿಗೆ ಶಾಲೆ ಮತ್ತು ಕಾಲೇಜು ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ನಗರೀಕರಣದ ಪ್ರಭಾವ, ಉತ್ತಮ ಸಾರಿಗೆ ಸಂಪರ್ಕ, ಹತ್ತಿರದಲ್ಲಿರುವ ಶಾಲಾ ಕಾಲೇಜುಗಳ ಲಭ್ಯತೆ ಕಾರಣದಿಂದಾಗಿ, ಎಲ್ಲಾ ಜಾತಿಯ ಅಕ್ಷರಸ್ಥ ಮತ್ತು ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳಿಗೆ ಉತ್ತಮ ಶಿಕ್ಷಣ ನೀಡುವುದಾಗಿ ತಿಳಿಸಿದ್ದಾರೆ. ನಗರೀಕರಣ ಮತ್ತು ಕೈಗಾರಿಕೀಕರಣವು ನಗರಕ್ಕೆ ಹತ್ತಿರವಾಗಿರುವ ಗ್ರಾಮಗಳ ಮೇಲೆ ಪ್ರಭಾವವನ್ನು ಬೀರಿ, ಜನರು ಆಧುನಿಕತೆಗೆ ಒಳಗಾಗಿದ್ದು ಶಿಕ್ಷಣ ನೀಡುವಲ್ಲಿ ಯಾವುದೇ ಲಿಂಗ ತಾರತಮ್ಯವನ್ನು ಮಾಡಿಲ್ಲ.

"ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ. ಹೆಣ್ಣುಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋಗುವುದರಿಂದ ಅವರಿಗೆ ಶಿಕ್ಷಣ ನೀಡಿದರೂ ಅದರ ಉಪಯೋಗವಿಲ್ಲವೆಂದು ಬಹುಪಾಲು ಗ್ರಾಮೀಣ ಜನರು ತಿಳಿದಿದ್ದಾರೆ."

ಆದರೆ ನಗರದಿಂದ ದೂರವಿರುವ ಗ್ರಾಮಗಳು ಹೆಚ್ಚು ನಗರೀಕರಣಕ್ಕೆ ಒಳಗಾಗದ ಕಾರಣ ಮಗಳಿಗೆ ಶಿಕ್ಷಣ ನೀಡುವಲ್ಲಿ ಹೆಚ್ಚು ಧಾರಾಳತನವನ್ನು ತೋರಿಲ್ಲ. ಅವರಿನ್ನೂ ಸಂಪ್ರದಾಯಬದ್ಧರಾಗಿದ್ದು ಮಗಳಿಗೆ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯವನ್ನು ಮಾಡಿರುವುದು ಕಂಡು ಬರುತ್ತದೆ.

ಪಟ್ಟಿ ೪.೪ರಲ್ಲಿ ಸಂದರ್ಶಕರು ಮಗಳಿಗೆ ಶಿಕ್ಷಣ ಕೊಡಿಸುವ ಉದ್ದೇಶದ ಬಗೆಗಿನ ಅಭಿಪ್ರಾಯಗಳನ್ನು (ಭಾವನೆ) ಸಂಗ್ರಹಿಸಿ ಕೊಡಲಾಗಿದೆ.

ಪಟ್ಟಿ ೪.೪: ಮಗಳಿಗೆ ಶಿಕ್ಷಣ ಕೊಡಿಸುವ ಬಗೆಗಿನ ಅಭಿಪ್ರಾಯಗಳು(ಹೆಣ್ಣುಮಕ್ಕಳಿಗೆ)

ಸಂದರ್ಶಿತರ ಶಿಕ್ಷಣಮಟ್ಟ	ಮೊದಲನೆ ಗುಂಪಿನ ಹಳ್ಳಿಗಳು(ನಗರಕ್ಕೆ ಹತ್ತಿರವಾಗಿರುವ)														ಒಟ್ಟು
	ಸ್ಥಾನಮಾನ ಗೌರವ ಹೆಚ್ಚುತ್ತದೆ		ಉದ್ಯೋಗಾವಕಾಶ		ಮದುವೆಗೆ ಅನುಕೂಲ		ಮದುವೆಗೆ ತೊಂದರೆ		ನಮಗೆ ಲಾಭವಿಲ್ಲ		ವ್ಯವಹರಿಸಲು ಅನುಕೂಲ		ಮನೆ ಕೆಲಸಕ್ಕೆ ತೊಂದರೆ		
	ವ	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	
ಅನಕ್ಷರಸ್ಥರು	೨	೨	-	೮	೨	೨	-	-	-	-		-	-	-	೧೬
ಶಾಲೆ ಶಿಕ್ಷಣ	೫	೩	೫	೫	೨	-	-	-	-	-	-	-	-	-	೨೦
ಪ್ರೌಢಶಿಕ್ಷಣ/ಪ.ಪೂ.ಶಿಕ್ಷಣ	೧೦	೨	೧೫	೮	೬	೨	-	-	-	-	-	೫	-	-	೪೮
ಕಾಲೇಜು	೧೨	೧೫	೧೪	೪೦	೧೦	೫	-	-	-	-	-	-	-	-	೯೬
ಇತರೆ	೪	೨	೬	೬	೨	-	-	-	-	-	-	-	-	-	೨೦
ಒಟ್ಟು	೩೩	೨೪	೪೦	೬೭	೨೨	೯	-	-	-	-	-	೫	-	-	೨೦೦

ಪಟ್ಟಿ ೪.೪: ಮಗಳಿಗೆ ಶಿಕ್ಷಣ ಕೊಡಿಸುವ ಬಗೆಗಿನ ಅಭಿಪ್ರಾಯಗಳು(ಹೆಣ್ಣುಮಕ್ಕಳಿಗೆ)

ಎರಡನೇ ಗುಂಪಿನ ಹಳ್ಳಿಗಳು(ನಗರಕ್ಕೆ ಹತ್ತಿರವಾಗಿರುವ)															
ಸಂದರ್ಶಿತರ ಶಿಕ್ಷಣಮಟ್ಟ	ಸ್ಥಾನಮಾನ ಗೌರವ ಹೆಚ್ಚುತ್ತದೆ		ಉದ್ಯೋಗಾವಕಾಶ		ಮದುವೆಗೆ ಅನುಕೂಲ		ಮದುವೆಗೆ ತೊಂದರೆ		ನಮಗೆ ಲಾಭವಿಲ್ಲ		ವ್ಯವಹರಿಸಲು ಅನುಕೂಲ		ಮನೆ ಕೆಲಸಕ್ಕೆ ತೊಂದರೆ		ಒಟ್ಟು
	ವ	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	
ಅನಕ್ಷರಸ್ಥರು	೫	–	–	೧೦	೨೦	೧೦	೧೫	೨೦	೧೦	೧೦	೫	೮	೫	೧೦	೧೨೮
ಶಾಲೆ ಶಿಕ್ಷಣ	೪	–	–	೫	೧೦	೫	೫	೩	–	೩	–	–	೫	೮	೪೮
ಪ್ರೌಢಶಿಕ್ಷಣ/ಪ.ಪೂ.ಶಿಕ್ಷಣ	೫	೨	೩	೬	೮	–	–	–	–	–	–	–	–	–	೨೪
ಕಾಲೇಜು	–	–	–	–	–	–	–	–	–	–	–	–	–	–	–
ಇತರೆ	–	–	–	–	–	–	–	–	–	–	–	–	–	–	–
ಒಟ್ಟು	೧೪	೨	೩	೨೧	೩೮	೧೫	೨೦	೨೩	೧೦	೧೩	೫	೮	೧೦	೧೮	೨೦೦

ಈ ಪಟ್ಟಿ ೪.೪ರನ್ನು ಗಮನಿಸಿದಾಗ ತಿಳಿದು ಬರುವುದೇನೆಂದರೆ ಸಂದರ್ಶಿತರ ಶಿಕ್ಷಣ ಮಟ್ಟವು ಅವರ ಮಗಳಿಗೆ ಶಿಕ್ಷಣ ಕೊಡಿಸುವುದರ ಮೇಲೆ ಪ್ರಭಾವ ಬೀರಿ ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ವಕ್ಕಲಿಗ ಜಾತಿಯ ಶೇ.೧ ರಷ್ಟು ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ಕೊಡುವುದರಿಂದ ಅವಳ ಸ್ಥಾನಮಾನ ಮತ್ತು ಗೌರವ ಹೆಚ್ಚುತ್ತದೆ ಎಂದು ಹೇಳಿದ್ದಾರೆ. ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳಿಗೆ ಉದ್ಯೋಗಾವಕಾಶ ಜಾಸ್ತಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೧ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳ ಮದುವೆಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಅನಕ್ಷರಸ್ಥ ವಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಎಲ್ಲಾ ಮಹಿಳೆಯರು ಸಹ ತಮ್ಮ ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಇರುವ ಉಪಯೋಗವನ್ನು ಮನಗಂಡಿದ್ದಾರೆ. ಆದುದರಿಂದ ಅವರು ತಮ್ಮ ಮಗಳ ಶಿಕ್ಷಣದ ಬಗ್ಗೆ ಸಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ.

ಅದೇ ರೀತಿ ಶಾಲಾ ಶಿಕ್ಷಣ ಪಡೆದಿರುವ ಶೇ.೨.೫ ವಕ್ಕಲಿಗ ಜಾತಿಯ ಮತ್ತು ಶೇ.೧.೫ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ಕೊಡುವುದರಿಂದ ಅವಳ ಸ್ಥಾನಮಾನ ಮತ್ತು ಗೌರವ ಹೆಚ್ಚುತ್ತದೆ ಎಂದು ಹೇಳಿದ್ದಾರೆ. ಶೇ.೨.೫ ರಷ್ಟು ವಕ್ಕಲಿಗ ಜಾತಿ ಮತ್ತು ಶೇ.೨.೫ ರಷ್ಟು ಪರಿಶಿಷ್ಟ ಜಾತಿಯ ಶಾಲಾ ಶಿಕ್ಷಣ ಪಡೆದ ಮಹಿಳೆಯರು ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತದೆ ಎಂದು ಹೇಳಿದ್ದಾರೆ. ಶಾಲಾ ಶಿಕ್ಷಣ ಪಡೆದ ಶೇ.೧ರಷ್ಟು ವಕ್ಕಲಿಗ ಜಾತಿಯ ಮಹಿಳೆಯರು ಅವಳ ಮದುವೆಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೫ರಷ್ಟು ವಕ್ಕಲಿಗ ಜಾತಿ ಮತ್ತು ಶೇ.೧ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳ ಸ್ಥಾನಮಾನ ಹೆಚ್ಚುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೭.೫ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತದೆ ಎಂದು ಹೇಳಿದ್ದಾರೆ. ಶೇ.೩ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ

ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳ ಮದುವೆಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ. ಶೇ.೨.೫ ರಷ್ಟು ವಕ್ಕಲಿಗ ಜಾತಿಯ ಮಹಿಳೆಯರು ವ್ಯವಹರಿಸಲು ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಕಾಲೇಜು ಶಿಕ್ಷಣ ಪಡೆದ ಶೇ.೬ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೭.೫ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳ ಸ್ಥಾನಮಾನ ಮತ್ತು ಗೌರವಗಳು ಹೆಚ್ಚುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೭ ರಷ್ಟು ವಕ್ಕಲಿಗ ಜಾತಿ ಮತ್ತು ಶೇ.೪೦ ರಷ್ಟು ಪರಿಶಿಷ್ಟ ಜಾತಿಯ ಕಾಲೇಜು ಶಿಕ್ಷಣ ಪಡೆದ ಮಹಿಳೆಯರು ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೫ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೨.೫ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳ ಮದುವೆಗೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ.

ನಗರಕ್ಕೆ ಹತ್ತಿರವಿರುವ ಇತರೆ ಶಿಕ್ಷಣ ಪಡೆದ ಶೇ.೨ ರಷ್ಟು ವಕ್ಕಲಿಗ ಜಾತಿ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳ ಸ್ಥಾನಮಾನ ಮತ್ತು ಗೌರವಗಳು ಹೆಚ್ಚುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೩ ರಷ್ಟು ವಕ್ಕಲಿಗ ಜಾತಿ ಮತ್ತು ಶೇ.೩ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೧ ರಷ್ಟು ವಕ್ಕಲಿಗ ಜಾತಿಯ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳ ಮದುವೆಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳಲ್ಲಿ ಶೇ.೧ ರಷ್ಟು ವಕ್ಕಲಿಗ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಸಂದರ್ಶಿತರು, ಶಾಲಾ ಶಿಕ್ಷಣ ಪಡೆದ ಶೇ.೨.೫ ರಷ್ಟು ವಕ್ಕಲಿಗರು ಮತ್ತು ಶೇ.೧.೫ ರಷ್ಟು ಪರಿಶಿಷ್ಟ ಜಾತಿ ಸಂದರ್ಶಿತರು, ಪ್ರೌಢ ಶಿಕ್ಷಣ ಪಡೆದ ಶೇ.೫ ರಷ್ಟು ವಕ್ಕಲಿಗ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತರು, ಕಾಲೇಜು ಶಿಕ್ಷಣ ಪಡೆದ ಶೇ.೬ ರಷ್ಟು ವಕ್ಕಲಿಗ ಮತ್ತು ಶೇ.೭.೫ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತರು, ಇತರೆ ಶಿಕ್ಷಣ ಪಡೆದ ಶೇ.೨ ರಷ್ಟು ವಕ್ಕಲಿಗ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು ಅಂದರೆ ಒಟ್ಟು ೨೦೦ ಸಂದರ್ಶಿತ ಮಹಿಳೆಯರಲ್ಲಿ ಶೇ.೩೩ ರಷ್ಟು ವಕ್ಕಲಿಗ

ಮತ್ತು ಶೇ.೨೪ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರ ಸ್ಥಾನಮಾನ ಹೆಚ್ಚುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಸಂದರ್ಶಿತ ಮಹಿಳೆಯರು, ಶಾಲಾ ಶಿಕ್ಷಣ ಪಡೆದ ಶೇ.೨.೫ ರಷ್ಟು ವಕ್ಕಲಿಗ ಮತ್ತು ಶೇ.೨.೫ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೩.೫ ರಷ್ಟು ವಕ್ಕಲಿಗ ಮತ್ತು ೪ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು, ಕಾಲೇಜು ಶಿಕ್ಷಣ ಪಡೆದ ಶೇ.೩ ರಷ್ಟು ವಕ್ಕಲಿಗ ಮತ್ತು ಶೇ.೨೦ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು, ಇತರೆ ಶಿಕ್ಷಣ ಪಡೆದ ಶೇ.೩ ರಷ್ಟು ವಕ್ಕಲಿಗ ಮತ್ತು ಶೇ.೩ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು ಆಂದರೆ ಒಟ್ಟು ೨೦೦ ಸಂದರ್ಶಿತ ಮಹಿಳೆಯರಲ್ಲಿ ೪೦ ವಕ್ಕಲಿಗ ಜಾತಿ ಮಹಿಳೆಯರು ಮತ್ತು ೬೩ ಪರಿಶಿಷ್ಟ ಜಾತಿ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಶೇ.೧೦ ರಷ್ಟು ವಕ್ಕಲಿಗ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಸಂದರ್ಶಿತ ಮಹಿಳೆಯರು, ಶಾಲಾ ಶಿಕ್ಷಣ ಪಡೆದ ಶೇ.೧ ರಷ್ಟು ವಕ್ಕಲಿಗ ಸಂದರ್ಶಿತ ಮಹಿಳೆಯರು, ಪ್ರೌಢ ಮತ್ತುಪದವಿಪೂರ್ವ ಶಿಕ್ಷಣ ಪಡೆದ ಶೇ.೩ ರಷ್ಟು ವಕ್ಕಲಿಗ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು, ಕಾಲೇಜು ಶಿಕ್ಷಣ ಪಡೆದ ಶೇ.೫ ರಷ್ಟು ವಕ್ಕಲಿಗ ಮತ್ತು ಶೇ.೨.೫ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು, ಇತರೆ ಶಿಕ್ಷಣ ಪಡೆದ ಶೇ.೧ ರಷ್ಟು ವಕ್ಕಲಿಗ ಮಹಿಳೆಯರು ಅಂದರೆ ಒಟ್ಟು ೨೦೦ ಸಂದರ್ಶಿತ ರಲ್ಲಿ ೨೨ ರಷ್ಟು ವಕ್ಕಲಿಗ, ೯ ಪರಿಶಿಷ್ಟ ಜಾತಿಯ ಸಂದರ್ಶಿತ ಮಹಿಳೆಯರು ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದರಿಂದ ಅವರಿಗೆ ಉತ್ತಮ ವೈವಾಹಿಕ ಸಂಬಂಧಗಳು ಕೂಡಿ ಬಂದು ಅವರ ಮದುವೆಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಪ್ರೌಢ ಶಿಕ್ಷಣ ಪಡೆದ ಶೇ.೨.೫ ರಷ್ಟು ವಕ್ಕಲಿಗ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ಅವರು ವ್ಯವಹಾರ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ.

ನಗರಕ್ಕೆ ಹತ್ತಿರವಿರುವ ೨೦೦ ಸಂದರ್ಶಿತ ಮಹಿಳೆಯರಲ್ಲಿ ಯಾವ ಮಹಿಳೆಯೂ ಸಹ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ಅವರ ಮದುವೆಗೆ ತೊಂದರೆಯಾಗುತ್ತದೆ, ಶಿಕ್ಷಣ

ಕೊಡಿಸುವುದರಿಂದ ನಮಗೇನು ಲಾಭವಿಲ್ಲ, ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ನಮ್ಮ ಮನೆಕೆಲಸಗಳಿಗೆ ತೊಂದರೆಯಾಗುತ್ತದೆ ಎಂಬ ನಕಾರಾತ್ಮಕ ಭಾವನೆಗಳನ್ನು ವ್ಯಕ್ತಪಡಿಸಿಲ್ಲ.

ನಗರಕ್ಕೆ ಹತ್ತಿರವಾಗಿರುವ ಅನಕ್ಷರಸ್ಥ ಮತ್ತು ಶಿಕ್ಷಣ ಪಡೆದ ವಕ್ಕಲಿಗ ಜಾತಿ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರೆಲ್ಲರೂ ತಮ್ಮ ಮಗಳು ಶಿಕ್ಷಣ ಪಡೆಯುವುದರಿಂದ ಆಗುವ ಲಾಭವನ್ನು ತಿಳಿದಿದ್ದಾರೆ. ಜಾತಿ ಮತ್ತು ಮಹಿಳಾ ಶಿಕ್ಷಣಮಟ್ಟಕ್ಕಿಂತ ನಗರ-ಗ್ರಾಮ ಅಂತರವು ಮಹಿಳೆಯರ ಮನೋಭಾವನೆಯ ಮೇಲೆ ಹೆಚ್ಚು ಪ್ರಭಾವ ಬೀರುವ ಅಂಶವಾಗಿದೆ. ನಗರಕ್ಕೆ ಹತ್ತಿರವಾಗಿರುವ ಗ್ರಾಮಗಳ ಯಾವ ಒಬ್ಬ ಮಹಿಳೆಯು ಸಹ ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಲಾಭವಿಲ್ಲ ಎಂದು ಹೇಳಿಲ್ಲ. ಹಳ್ಳಿಗಳು ನಗರಕ್ಕೆ ಹತ್ತಿರವಾದಷ್ಟು ಹೆಚ್ಚು ಮಹಿಳೆಯರು ಮಹಿಳಾ ಶಿಕ್ಷಣದ ಬಗ್ಗೆ ಧನಾತ್ಮಕ ಮತ್ತು ವೈಜ್ಞಾನಿಕ ಭಾವನೆಯನ್ನು ಹೊಂದಿದ್ದಾರೆ. ಅವರು ಲಿಂಗ ತಾರತಮ್ಯ ಭಾವನೆಯನ್ನು ಹೊಂದಿಲ್ಲ. ಮಗನ ಶಿಕ್ಷಣದಷ್ಟೇ ಮಗಳ ಶಿಕ್ಷಣ ಮುಖ್ಯವೆಂದು ಭಾವಿಸಿದ್ದಾರೆ.

ನಗರದಿಂದ ದೂರವಾಗಿರುವ ಹಳ್ಳಿಗಳ ಶೇ.೨.೫ ರಷ್ಟು ವಕ್ಕಲಿಗ ಜಾತಿಯ ಅನಕ್ಷರಸ್ಥ ಮಹಿಳೆಯರು ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅವಳ ಸ್ಥಾನಮಾನ ಗೌರವ ಹೆಚ್ಚುತ್ತದೆ ಎಂದು ಹೇಳಿದ್ದಾರೆ. ಶೇ.೫ರಷ್ಟು ಅನಕ್ಷರಸ್ಥ ಪರಿಶಿಷ್ಟ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅವಳಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಶೇ.೧೦ ರಷ್ಟು ವಕ್ಕಲಿಗ ಜಾತಿಯ ಅನಕ್ಷರಸ್ಥ ಮತ್ತು ಶೇ.೫ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ಮಗಳಿಗೆ ಶಿಕ್ಷಣ ಕೊಡುವುದರಿಂದ ಅವಳ ಮದುವೆಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಗರದಿಂದ ದೂರವಿರುವ ಹಳ್ಳಿಗಳ ಶೇ.೭.೫ ರಷ್ಟು ಅನಕ್ಷರಸ್ಥ ವಕ್ಕಲಿಗ ಜಾತಿಯ ಮತ್ತು ಶೇ.೧೦ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅವಳ ಮದುವೆಗೆ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ. ಒಮ್ಮೆ ವಿದ್ಯಾವಂತಳಾದ ಮಗಳಿಗೆ ಅವಳಷ್ಟೆ ಅಥವಾ ಅವಳಿಗಿಂತ ಹೆಚ್ಚು ಶಿಕ್ಷಣ ಪಡೆದ ವರನನ್ನು ಹುಡುಕಬೇಕಾಗುತ್ತದೆ. ಇದರಿಂದಾಗಿ ಹೆಚ್ಚು ವರದಕ್ಷಿಣೆ, ವಿವಾಹದ ಖರ್ಚುಗಳ ಹೊರೆ ತಮ್ಮ ಮೇಲೆ ಬೀಳುತ್ತದೆ. ತಮಗೆ ಈ ಹೊರೆ ಹೊರುವ ಶಕ್ತಿಯಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಶೇ.೫ರಷ್ಟು ಅನಕ್ಷರಸ್ಥ ವಕ್ಕಲಿಗ ಜಾತಿಯ ಮಹಿಳೆಯರು ಮತ್ತು ಶೇ.೫ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ಕೊಡುವುದರಿಂದ ತಮಗೆ ಯಾವ ಲಾಭವೂ ಇಲ್ಲವೆಂದು ಹೇಳಿದ್ದಾರೆ. ಮಗಳಿಗೆ

ಶಿಕ್ಷಣ ಕೊಡಿಸಿದರೆ ಅವಳು ಮದುವೆಯಾಗಿ ಗಂಡನ ಮನೆಗೆ ಹೋಗುವುದರಿಂದ ಅದರ ಲಾಭ ಗಂಡ ಮತ್ತು ಗಂಡನ ಮನೆಗೆ ತಲುಪುತ್ತದೆ ಎಂದು ಹೇಳಿದ್ದಾರೆ.

ಉತ್ತಮ ಶಿಕ್ಷಣ ಪಡೆದಿರುವ ಜಾತಿಗಳಲ್ಲಿ ಹೆಣ್ಣುಮಕ್ಕಳು ಹೆಚ್ಚು ವಿದ್ಯಾಭ್ಯಾಸ ಮಾಡುವುದರಿಂದ ಅವರ ವಿವಾಹ ಸ್ವಲ್ಪಮಟ್ಟಿಗೆ ಸರಳವಾಗುತ್ತದೆ ಎಂಬ ಪ್ರವೃತ್ತಿಇದೆ. ಅವಕಾಶ ವಂಚಿತ ಜಾತಿ-ಜನಸಮುದಾಯಕ್ಕೆ ಸೇರಿದ ಅದರಲ್ಲಿಯೂ ನಿರ್ದಿಷ್ಟವಾಗಿ ದಲಿತ ಜನಸಮುದಾಯಕ್ಕೆ ಸೇರಿದ ಪೋಷಕರ ಪ್ರಕಾರ ವಿದ್ಯಾವಂತ ಹೆಣ್ಣುಮಕ್ಕಳ ಮದುವೆಗೆ ಹೆಚ್ಚಿನ ಬೇಡಿಕೆಯಿದೆ. ಏಕೆಂದರೆ ಅವಳಿಗೆ ಹೆಚ್ಚಿನ ಉದ್ಯೋಗ ಅವಕಾಶಗಳಿವೆ. ಆದರೆ ವಿದ್ಯಾವಂತ ಹೆಣ್ಣುಮಕ್ಕಳನ್ನು ವಿವಾಹ ಮಾಡುವುದು ಕಷ್ಟವೆಂದು ಅವಕಾಶ ವಂಚಿತ ಜನಸಮುದಾಯಕ್ಕೆ ಸೇರಿದ ಬಹುತೇಕ ಪೋಷಕರ ದೃಷ್ಟಿಕೋನವಾಗಿದೆ."[೫]

ಉತ್ತರ ಭಾರತದಲ್ಲಿ ಪೋಷಕರು ಹೆಣ್ಣುಮಕ್ಕಳು ಶಾಲೆಗೆ ಸೇರುವುದು ಕೇವಲ ಅವಳ ಮದುವೆಯ ದೃಷ್ಟಿಯಿಂದ ಎಂಬುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ(ಪೋಬ್, ೧೯೯೯, ರೇಖಾವಾಜೀಲ್, ೨೦೦೧).[೬]

ವಿದ್ಯಾವಂತ ಸ್ತ್ರೀಯು ಪುರುಷರಷ್ಟೇ ಉದ್ಯೋಗಾವಕಾಶಗಳನ್ನು ಹೊಂದಿರುತ್ತಾಳೆ. ಅವಳ ಗೌರವವು ಕುಟುಂಬದೊಳಗೆ ಮತ್ತು ಹೊರಗೆ ಹೆಚ್ಚಿರುತ್ತದೆ. ವಿದ್ಯಾವಂತ ಸ್ತ್ರೀಯು ಪುರುಷನಂತೆ ಉತ್ತಮ ಗೌರವ, ಸ್ಥಾನಮಾನ ಮತ್ತು ಅಧಿಕಾರವನ್ನು ಸಮಾಜದಲ್ಲಿ ಪಡೆದಿರುತ್ತಾಳೆ."[೭]

"ಬಾಲಕಿಯರು ಸಾಮಾನ್ಯವಾಗಿ ಕೆಲವು ಸಂದರ್ಭದಲ್ಲಿ ಮನೆವಾರ್ತೆ ಮತ್ತು ಮಕ್ಕಳ ಲಾಲನೆ ಪಾಲನೆಯ ಜವಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಇದರಿಂದಾಗಿ ಹಿರಿಯರಿಗೆ ಹೆಣ್ಣುಮಕ್ಕಳ ಶಿಕ್ಷಣವು ಮಹತ್ವದ್ದಾಗಿ ಕಾಣುವುದಿಲ್ಲ. ಮಹಿಳೆಗೆ ಶಿಕ್ಷಣ ಕೊಡಿಸುವುದೆಂದರೆ ಪಕ್ಕದ ಮನೆಯ ಗಿಡಕ್ಕೆ ನೀರೆರೆದಂತೆ ಎಂಬ ನಾಣ್ಣುಡಿ ಜನಗಳಲ್ಲಿ ಗಟ್ಟಿಯಾಗೇ ನೆಲೆಗೊಂಡುಬಿಟ್ಟಿದೆ. ಇನ್ನೂ ಕೆಲವು ಪೋಷಕರು ಮಗಳಿಗೆ ಶಿಕ್ಷಣ ಕೊಡಿಸುವ ಉದ್ದೇಶ ಒಳ್ಳೆಯ ಗಂಡು ದೊರೆಯುತ್ತದೆಂಬುದಾಗಿದೆ.[೮]

ಆದರೆ ಗಂಡು ಮಗನಿಗೆ ಶಿಕ್ಷಣ ಕೊಡಿಸುವುದರಿಂದ ಅವನು ಮದುವೆಯ ನಂತರವೂ ತಮ್ಮ ಮನೆಯಲ್ಲಿ ಇರುವುದರಿಂದ ಅವನು ಶಿಕ್ಷಣ ಪಡೆದು ಉದ್ಯೋಗಸ್ಥನಾಗಿ ಮನೆಗೆ ದುಡಿದು ಸಂಪಾದನೆಯನ್ನು ಮಾಡುತ್ತಾನೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಅನಕ್ಷರಸ್ಥ ಒಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರೆಲ್ಲರೂ ಸಹ ಲಿಂಗ ತಾರತಮ್ಯ ಭಾವನೆಯನ್ನು ಹೊಂದಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಅನಕ್ಷರಸ್ಥ ವಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರೆಲ್ಲರೂ ಸಹ ಲಿಂಗತಾರತಮ್ಯ ಭಾವನೆ ಹೊಂದಲು ಇರುವ ಪ್ರಮುಖ ಕಾರಣಗಳೆಂದರೆ ಅವರ ಸಾಂಪ್ರದಾಯಿಕ ಮನೋಭಾವನೆ. ಅವರು ಅವಿದ್ಯಾವಂತರಾಗಿರುವುದರಿಂದ ಹೆಚ್ಚಿನ ಮಹಿಳೆಯರಿಗೆ ಹೆಣ್ಣುಮಕ್ಕಳ ಶಿಕ್ಷಣದ ಪ್ರಾಮುಖ್ಯತೆ ತಿಳಿದಿಲ್ಲ. ನಗರದಿಂದ ದೂರವಿರುವ ಗ್ರಾಮಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ನಗರಕ್ಕೆ ಹತ್ತಿರವಿರುವ ಗ್ರಾಮಗಳಿಗಿಂತ ಹಿಂದುಳಿದಿರುವುದೇ ಪ್ರಮುಖ ಕಾರಣವಾಗಿದೆ. ಮಹಿಳೆಯರ ಶಿಕ್ಷಣಮಟ್ಟ, ಅವರು ವಾಸಿಸುವ ಆರ್ಥಿಕ ಮತ್ತು ಸಾಮಾಜಿಕ ಪರಿಸರಗಳು, ಅವರ ಮನೋಭಾವನೆಯ ಮೇಲೆ ನೇರ ಪ್ರಭಾವ ಬೀರುತ್ತವೆ. ಈ ಗ್ರಾಮಗಳ ಮೇಲೆ ಆಧುನಿಕತೆಯ ಪ್ರಭಾವಗಳು ಅಷ್ಟಾಗಿ ಆಗಿಲ್ಲದ ಕಾರಣ ಅವರು ಇನ್ನೂ ಸಾಂಪ್ರದಾಯಿಕ ಮನೋಭಾವನೆಯನ್ನು ಹೊಂದಿದ್ದಾರೆ. ಈ ಮನೋಭಾವನೆಯೇ ಅವರ ಲಿಂಗ ತಾರತಮ್ಯ ಭಾವನೆಗೆ ಮೂಲ ಕಾರಣವಾಗಿದೆ.

ಗಂಡು ಮಕ್ಕಳಿಗೆ ಶಿಕ್ಷಣ ನೀಡಿದರೆ ಅವರು ದುಡಿದು ಕುಟುಂಬಕ್ಕೆ ಆದಾಯ ತರುತ್ತಾರೆ ಮತ್ತು ಮದುವೆಯ ನಂತರವೂ ಪೋಷಕರ ಜೊತೆ ಇದ್ದು ವಯಸ್ಸಾದ ಮೇಲೆ ಸಾಕಿ ಸಲಹುತ್ತಾರೆ ಎಂಬ ಭಾವನೆ ಪೋಷಕರಲ್ಲಿ ಇದೆ".[೯]

ನಗರದಿಂದ ದೂರವಿರುವ ಹಳ್ಳಿಗಳ ಶೇ.೨.೫ ರಷ್ಟು ವಕ್ಕಲಿಗ ಜಾತಿಯ ಅನಕ್ಷರಸ್ಥ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರ ಸ್ಥಾನಮಾನ ಗೌರವ ಹೆಚ್ಚುತ್ತದೆ ಎಂದು ಹೇಳಿದ್ದಾರೆ. ಶೇ.೫ ರಷ್ಟು ಅನಕ್ಷರಸ್ಥ ಪರಿಶಿಷ್ಟ ಜಾತಿಯ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಉದ್ಯೋಗಾವಕಾಶಗಳು ಹೆಚ್ಚುತ್ತವೆಂದು ಹೇಳಿದ್ದಾರೆ. ಶೇ.೧೦ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೫ ರಷ್ಟು ಪರಿಶಿಷ್ಟಜಾತಿಯ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರ ಮದುವೆಗೆ ಅನುಕೂಲವಾಗುತ್ತದೆ. ಹೆಚ್ಚು ಓದಿದ ವಿದ್ಯಾವಂತ ಗಂಡು ಮಕ್ಕಳು ಮದುವೆಯಾಗುತ್ತಾರೆ. ಅವರ ಜೀವನ ಉತ್ತಮವಾಗಿರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೭.೫ ರಷ್ಟು ಅನಕ್ಷರಸ್ಥ ವಕ್ಕಲಿಗ ಜಾತಿಯ ಮತ್ತು ಶೇ.೧೦ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರಿಗೆ ಹೆಚ್ಚು ಓದಿದ ಗಂಡನ್ನು ಹುಡುಕಬೇಕಾಗುತ್ತದೆ, ಹೆಚ್ಚು ವರದಕ್ಷಿಣೆ ಕೊಡಬೇಕಾಗುತ್ತದೆ. ಆದುದರಿಂದ ಅವರ ಮದುವೆಗೆ ತೊಂದರೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಶೇ.೫ ರಷ್ಟು ವಕ್ಕಲಿಗ ಮತ್ತು ಶೇ.೫ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅದರ ಲಾಭ ಅವಳ ಗಂಡನ ಮನೆಗೆ ಆಗುತ್ತದೆಯೇ ವಿನಃ ನಮಗೇನು ಲಾಭವಿಲ್ಲ. ಇಷ್ಟಕ್ಕೂ ಹೆಣ್ಣುಮಕ್ಕಳು ಎಷ್ಟು ಓದಿದರೂ ಮಡಿಕೆ ಗೀಚುವುದು ತಪ್ಪುವುದಿಲ್ಲ ಎಂಬ ಭಾವನೆಯನ್ನು

ವ್ಯಕ್ತಪಡಿಸಿದ್ದಾರೆ. ಶೇ.೨.೫ ರಷ್ಟು ವಕ್ಕಲಿಗ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರು ಮನೆಯ ಹೊರಗೆ ಮತ್ತು ಒಳಗೆ ವ್ಯವಹರಿಸಲು ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ. ಶೇ.೨.೫ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೫ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ಹೆಣ್ಣುಮಕ್ಕಳನ್ನು ಶಾಲೆಗೆ ಶಿಕ್ಷಣಕ್ಕೆ ಕಳುಹಿಸಿದರೆ ಮನೆಕೆಲಸಗಳಿಗೆ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಹಳ್ಳಿಗಳ ಶಾಲಾ ಶಿಕ್ಷಣ ಪಡೆದ ಶೇ.೨ ರಷ್ಟು ವಕ್ಕಲಿಗ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳ ಸ್ಥಾನಮಾನ ಗೌರವಗಳು ಹೆಚ್ಚುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶಾಲಾ ಶಿಕ್ಷಣ ಪಡೆದ ಶೇ.೨.೫ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ನೀಡುವುದರಿಂದ ಅವಳಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶಾಲಾ ಶಿಕ್ಷಣ ಪಡೆದ ಶೇ.೫ ರಷ್ಟು ವಕ್ಕಲಿಗ ಜಾತಿಯ ಮಹಿಳೆಯರು ಮತ್ತು ಶೇ.೨.೫ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅವಳ ಮದುವೆಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶಾಲಾ ಶಿಕ್ಷಣ ಪಡೆದ ಶೇ.೨.೫ರಷ್ಟು ವಕ್ಕಲಿಗ ಜಾತಿಯ ಮಹಿಳೆಯರು ಮತ್ತು ಶೇ.೧.೫ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅವಳ ಮದುವೆಗೆ ತೊಂದರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ ಹೆಚ್ಚು ವಿದ್ಯಾವಂತ ಹೆಣ್ಣುಮಕ್ಕಳನ್ನು ಕಡಿಮೆ ಶಿಕ್ಷಣ ಪಡೆದ ಗಂಡುಗಳು ವಿವಾಹವಾಗುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಾಮಾಜಿಕವಾಗಿ ಹಿಂದುಳಿದ ಗ್ರಾಮಗಳಲ್ಲಿ ಪಿತೃಪ್ರಧಾನ್ಯತೆ ಜೀವಂತವಾಗಿರುವುದು ಕಂಡುಬರುತ್ತದೆ. ಜನರು ಸಹ ಸಾಂಪ್ರದಾಯಿಕ ಮನೋಭಾವನೆಯನ್ನು ಹೊಂದಿರುತ್ತಾರೆ. ಅವರು ಹೆಣ್ಣುಮಕ್ಕಳು ಗಂಡಿನ ನಿಯಂತ್ರಣದಲ್ಲಿರಬೇಕೆಂದು ಬಯಸುತ್ತಾರೆ. ಗಂಡು ಮಕ್ಕಳು ತಮಗಿಂತ ಹೆಚ್ಚು ಶಿಕ್ಷಣ ಪಡೆದ ಹೆಣ್ಣುಮಕ್ಕಳನ್ನು ಮದುವೆಯಾದರೆ ಅವರು ನಮ್ಮ ಮಾತನ್ನು ಕೇಳುವುದಿಲ್ಲ, ಬದಲಾಗಿ ಅವರ ನಿಯಂತ್ರಣದಲ್ಲಿರಬೇಕೆಂಬ ಭಯ ಅವರನ್ನು ಕಾಡುತ್ತಿರುತ್ತದೆ. ಹೆಚ್ಚು ಓದಿದ ಹೆಣ್ಣುಮಕ್ಕಳು ತಮಗಿಂತ ಕಡಿಮೆ ಓದಿದ ಗಂಡುಗಳನ್ನು ಮದುವೆಯಾಗಲು ಒಪ್ಪಿದರೂ, ಗಂಡು ಮಕ್ಕಳು ಹೆಚ್ಚು ಓದಿದ ಹೆಣ್ಣುಮಕ್ಕಳನ್ನು ಮದುವೆಯಾಗಲು ವಿಶೇಷವಾಗಿ ಗ್ರಾಮ ಸಮಾಜದಲ್ಲಿ ಹಿಂಜರಿಯುತ್ತಾರೆ.

ಸಮಾಜವು ಎಷ್ಟೇ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಯನ್ನು ಹೊಂದಿ, ಆಧುನಿಕತೆಯ ಪ್ರಭಾವ ಬೀರಿದ್ದರೂ ಸಹ, ಈ ಪ್ರಭಾವವು ನಗರಗಳ ಮೇಲೆ ಮತ್ತು ನಗರಕ್ಕೆ ಹತ್ತಿರವಿರುವ ಗ್ರಾಮಗಳ ಮೇಲಾಗಿದೆಯೇ ವಿನಃ ನಗರದಿಂದ ದೂರವಿರುವ ನಗರೀಕರಣದ ಪ್ರಕ್ರಿಯಗೆ ಒಳಗಾಗದ ಹಿಂದುಳಿದ ಗ್ರಾಮಗಳಲ್ಲಿ ಮಾತ್ರ ಲಿಂಗ ತಾರತಮ್ಯ ಧೋರಣೆಗಳು ಜೀವಂತವಾಗಿರುವುದು ಕಂಡು ಬರುತ್ತದೆ. ಈ ಗ್ರಾಮಗಳ ಜನರಲ್ಲಿ ಸರಿಯಾಗಿ ಜಾಗೃತಿಯನ್ನು ಮೂಡಿಸಬೇಕಾದ ಅಗತ್ಯತೆ ತುಂಬಾ ಇದೆ.

ಶಾಲಾ ಶಿಕ್ಷಣ ಪಡೆದ ಶೇ.೧.೫ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ತಮಗೆ ಲಾಭವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೨.೫ ರಷ್ಟು ಒಕ್ಕಲಿಗ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿಯ ಶಾಲಾ ಶಿಕ್ಷಣ ಪಡೆದ ಮಹಿಳೆಯರು ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಮನೆಕೆಲಸಗಳಿಗೆ ತೊಂದರೆ ಎಂದು ಹೇಳಿದ್ದಾರೆ.

ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೨.೫ ರಷ್ಟು ಒಕ್ಕಲಿಗ ಜಾತಿಯ ಮಹಿಳೆಯರು ಮತ್ತು ಶೇ.೧ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ಕೊಡು ವುದರಿಂದ ಅವಳ ಸ್ಥಾನಮಾನ ಗೌರವ ಹೆಚ್ಚುತ್ತದೆಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಮಹಿಳೆಯರ ಶಿಕ್ಷಣಮಟ್ಟಕ್ಕೂ ಅವರು ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದಕ್ಕೂ ನೇರ ಸಂಬಂಧವಿದೆ. ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡಿದರೆ ಅವಳಿಗೆ ಉತ್ತಮ ಉದ್ಯೋಗ ಸಿಗುತ್ತದೆ, ಆರ್ಥಿಕವಾಗಿ ಸ್ವಾವಲಂಬಿಯಾಗುತ್ತಾಳೆ. ಆಗ ಸಮಾಜದಲ್ಲಿ ಜನರು ಶಿಕ್ಷಣ ಪಡೆದು ದುಡಿಯುವ ಹೆಣ್ಣನ್ನು ಗೌರವಿಸುತ್ತಾರೆ. ಶಿಕ್ಷಣ ಪಡೆಯದ ಹೆಣ್ಣಿಗಿಂತ ಶಿಕ್ಷಣ ಪಡೆದ ಹೆಣ್ಣಿಗೆ ಸಮಾಜದಲ್ಲಿ ಗೌರವ ಹೆಚ್ಚು ಎಂಬ ಅರಿವು ಹೆಚ್ಚು ಶಿಕ್ಷಣ ಪಡೆದ ಮಹಿಳೆಯರಲ್ಲಿದೆ. ಶಿಕ್ಷಣ ಪಡೆದ ಹೆಣ್ಣನ್ನು ಕುಟುಂಬ ಮತ್ತು ಸಮಾಜ ಗೌರವಿಸುತ್ತದೆ. ಆದುದರಿಂದ ಶಿಕ್ಷಣ ಪಡೆದ ಹೆಣ್ಣು ಸಮಾಜದ ಉತ್ತಮ ಜೀವನ ಬದುಕನ್ನು ಪಡೆಯಲು ಸಾಧ್ಯವಾಗುತ್ತದೆ. ವಿಷಯವನ್ನು ವಿಶ್ಲೇಷಿಸುವ ಮತ್ತು ವಿವರಿಸುವ ಸಾಮರ್ಥ್ಯ ಶಿಕ್ಷಣ ಪಡೆದ ವರಲ್ಲಿರುತ್ತದೆ. ಮಹಿಳೆಯರು ಸಹ ಲಿಂಗ ತಾರತಮ್ಯ ತೊರೆದು ಸ್ತ್ರೀವಾದಿ ದೃಷ್ಟಿಕೋನವನ್ನು ಪಡೆಯಲು ಅವಳು ಪಡೆದ ಶಿಕ್ಷಣ ಬಹಳ ಹಿರಿದಾದ ಪಾತ್ರವಹಿಸುತ್ತದೆ.

ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೧.೫ ರಷ್ಟು ಒಕ್ಕಲಿಗ ಜಾತಿಯ ಮತ್ತು ಶೇ.೩ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅವಳಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತವೆಂದು ಹೇಳಿದ್ದಾರೆ. ಶೇ.೪ ರಷ್ಟು ಒಕ್ಕಲಿಗ ಜಾತಿಯ

ಮಹಿಳೆಯರು ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅವಳ ಮದುವೆಗೆ ಅನುಕೂಲವಾಗುತ್ತದೆಂದು ಹೇಳಿರುತ್ತಾರೆ. ಹೆಣ್ಣುಮಕ್ಕಳು ವಿದ್ಯಾವಂತರಾದರೆ ವಿದ್ಯಾವಂತ ಗಂಡುಗಳು ವಿವಾಹವಾಗುತ್ತಾರೆ ಮತ್ತು ಉತ್ತಮ ವೈವಾಹಿಕ ಸಂಬಂಧಗಳು ಕೂಡಿಬರುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳಲ್ಲಿ ೨೦೦ ಮಹಿಳಾ ಸಂದರ್ಶಿತರನ್ನು ಸಂದರ್ಶಿಸಲಾಗಿ ಅವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಶೇ.೨.೫ ರಷ್ಟು ವಕ್ಕಲಿಗ ಅನಕ್ಷರಸ್ಥ ಸಂದರ್ಶಿತರು, ಶಾಲಾ ಶಿಕ್ಷಣ ಪಡೆದ ಶೇ.೯ ರಷ್ಟು ವಕ್ಕಲಿಗ ಸಂದರ್ಶಿತರು, ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೨.೫ ರಷ್ಟು ವಕ್ಕಲಿಗ ಮತ್ತು ಶೇ.೧ ರಷ್ಟು ಪರಿಶಿಷ್ಟ ಜಾತಿ ಸಂದರ್ಶಿತರು ಅಂದರೆ ಒಟ್ಟು ೨೦೦ ಮಹಿಳಾ ಸಂದರ್ಶಿತರಲ್ಲಿ ೧೪ ವಕ್ಕಲಿಗ ಮತ್ತು ೯ ಪರಿಶಿಷ್ಟ ಜಾತಿ ಮಹಿಳಾ ಸಂದರ್ಶಿತರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಹೆಣ್ಣುಮಕ್ಕಳ ಗೌರವ ಸ್ಥಾನಮಾನಗಳು ಹೆಚ್ಚುತ್ತವೆ ಎಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಶೇ.೫ ರಷ್ಟು ಅನಕ್ಷರಸ್ಥ ಪರಿಶಿಷ್ಟ ಜಾತಿ ಸಂದರ್ಶಿತರು, ಶಾಲಾ ಶಿಕ್ಷಣ ಪಡೆದ ಶೇ.೨.೫ ರಷ್ಟು ಪರಿಶಿಷ್ಟ ಜಾತಿ ಸಂದರ್ಶಿತರು, ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೧.೫ ರಷ್ಟು ವಕ್ಕಲಿಗ, ಶೇ.೩ ರಷ್ಟು ಪರಿಶಿಷ್ಟ ಜಾತಿ ಮಹಿಳಾ ಸಂದರ್ಶಿತರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರಿಗೆ ಉದ್ಯೋಗಾವಕಾಶಗಳು ಹೆಚ್ಚಿ ಅವರ ಜೀವನ ಮಟ್ಟ ಸುಧಾರಿಸುತ್ತದೆ ಎಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಶೇ.೭.೫ ರಷ್ಟು ಅನಕ್ಷರಸ್ಥ ವಕ್ಕಲಿಗ ಮತ್ತು ಶೇ.೧೦ ರಷ್ಟು ಪರಿಶಿಷ್ಟ ಜಾತಿ ಅನಕ್ಷರಸ್ಥ ಸಂದರ್ಶಿತರು, ಶಾಲಾ ಶಿಕ್ಷಣ ಪಡೆದ ೨.೫ ರಷ್ಟು ವಕ್ಕಲಿಗ, ಶೇ.೧.೫ ಪರಿಶಿಷ್ಟ ಜಾತಿ ಸಂದರ್ಶಿತರು ಅಂದರೆ ೨೦೦ ಸಂದರ್ಶಿತರಲ್ಲಿ ೨೦ ವಕ್ಕಲಿಗ ಮತ್ತು ೨೩ರಷ್ಟು ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರ ಶಿಕ್ಷಣಕ್ಕೆ ಅನುಗುಣವಾದ ಗಂಡನನ್ನು ಹುಡುಕಬೇಕಾಗುತ್ತದೆ, ಕಡಿಮೆ ಓದಿದ ಗಂಡುಗಳನ್ನು ವಿವಾಹವಾಗುವುದಿಲ್ಲ. ಆದುದರಿಂದ ಅವರ ಮದುವೆಗೆ ತೊಂದರೆ ಎಂಬ ನಕಾರಾತ್ಮಕ ಅಭಿಪ್ರಾಯವನ್ನು ತಿಳಿಸಿದ್ದಾರೆ.

ನಗರದಿಂದ ದೂರವಿರುವ ಶೇ.೫ ರಷ್ಟು ವಕ್ಕಲಿಗ ಮತ್ತು ಶೇ.೫ ರಷ್ಟು ಪರಿಶಿಷ್ಟ ಜಾತಿ ಅನಕ್ಷರಸ್ತ ಮಹಿಳಾ ಸಂದರ್ಶಿತರು, ಶಾಲಾ ಶಿಕ್ಷಣ ಪಡೆದ ಶೇ.೧.೫ ರಷ್ಟು ಪರಿಶಿಷ್ಟ ಜಾತಿ

ಮಹಿಳಾ ಸಂದರ್ಶಿತರು ಅಂದರೆ ೨೦೦ ಮಹಿಳಾ ಸಂದರ್ಶಿತರಲ್ಲಿ ೧೦ ವಕ್ಕಲಿಗ ಮತ್ತು ೧೩ ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಇದರ ಲಾಭ ಅವಳಿಗೆ ಮತ್ತು ಅವಳ ಗಂಡನ ಮನೆಗಾಗುತ್ತದೆಯೇ ವಿನ: ನಮಗೇನೂ ಲಾಭವಿಲ್ಲವೆಂಬ ನಕಾರಾತ್ಮಕ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಶೇ.೨.೫ ರಷ್ಟು ವಕ್ಕಲಿಗ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ಅಂದರೆ ೨೦೦ ಮಹಿಳಾ ಸಂದರ್ಶಿತರಲ್ಲಿ ೫ ವಕ್ಕಲಿಗ ಮತ್ತು ೮ ಪರಿಶಿಷ್ಟ ಜಾತಿಯ ಮಹಿಳೆಯರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ವ್ಯವಹರಿಸಲು ಅನುಕೂಲವಾಗುತ್ತದೆ ಎಂಬ ಸಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ.

ನಗರದಿಂದ ದೂರವಿರುವ ಶೇ.೨.೫ ರಷ್ಟು ವಕ್ಕಲಿಗ ಮತ್ತು ಶೇ.೫ ರಷ್ಟು ಅನಕ್ಷರಸ್ಥ ಮಹಿಳೆಯರು, ಶಾಲಾ ಶಿಕ್ಷಣ ಪಡೆದ ಶೇ.೨.೫ ರಷ್ಟು ವಕ್ಕಲಿಗ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ಅಂದರೆ ೨೦೦ ಸಂದರ್ಶಿತರಲ್ಲಿ ೧೦ ವಕ್ಕಲಿಗ ಮತ್ತು ೧೮ ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ನಮ್ಮ ಮನೆಕೆಲಸಗಳನ್ನು ಮಾಡಲು ತೊಂದರೆಯಾಗುತ್ತದೆ ಎಂಬ ನಕಾರಾತ್ಮಕ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ೨೦೦ ಮಹಿಳಾ ಸಂದರ್ಶಿತರಲ್ಲಿ ೬೦ ವಕ್ಕಲಿಗ ಮತ್ತು ೬೪ ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ಮಹಿಳಾ ಶಿಕ್ಷಣದ ಬಗ್ಗೆ ಸಕಾರಾತ್ಮಕ ಭಾವನೆ ಹೊಂದಿದ್ದಾರೆ. ೪೦ ವಕ್ಕಲಿಗ ಮಹಿಳಾ ಸಂದರ್ಶಿತರು ಮತ್ತು ೪೬ ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ನಕಾರಾತ್ಮಕ ಭಾವನೆ ಹೊಂದಿದ್ದಾರೆ.

ಮಗಳಿಗೆ ಶಿಕ್ಷಣ ಕೊಡಿಸುವ ಮತ್ತು ಮಗನಿಗೆ ಶಿಕ್ಷಣ ಕೊಡಿಸುವ ಬಗೆಗಿನ ಅಭಿಪ್ರಾಯವನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದಾಗ ತಿಳಿದು ಬರುವುದೇನೆಂದರೆ, ಮಗನಿಗೆ ಶಿಕ್ಷಣ ಕೊಡಿಸುವಲ್ಲಿ ತೋರಿಸುವ ಧಾರಾಳತನವು ಮಗಳಿಗೆ ಶಿಕ್ಷಣ ಕೊಡಿಸುವಲ್ಲಿ ತೋರುವುದಿಲ್ಲ. ಹಲವಾರು ಸಾಮಾಜಿಕ ಮತ್ತು ವೈಯಕ್ತಿಕ ಕಾರಣಗಳನ್ನು ನೀಡುವುದರ ಮೂಲಕ ಲಿಂಗ ತಾರತಮ್ಯವನ್ನು ಮಾಡುತ್ತಾರೆ ಎಂಬುದನ್ನು ಗಮನಿಸಬಹುದು. ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ನಮ್ಮ ಕುಟುಂಬಕ್ಕೆ ಲಾಭವೇನು ಇಲ್ಲ, ಆ ಲಾಭವು ಅವಳ ಗಂಡನ ಕುಟುಂಬಕ್ಕೆ ಮಾತ್ರ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ. ಇಲ್ಲಿಯೂ ಹೆಚ್ಚು ಲಿಂಗ ತಾರತಮ್ಯ ಧೋರಣೆ ಬಹಳ ವಾಗಿ ಕಂಡುಬರುತ್ತದೆ.

ನಗರಕ್ಕೆ ಹತ್ತಿರವಾಗಿರುವ ಗ್ರಾಮಗಳ ಹೆಚ್ಚು ಸಂದರ್ಶಿತರು ತಮ್ಮ ಮಗಳ ಮತ್ತು ಮಗನ ಶಿಕ್ಷಣದ ಬಗ್ಗೆ ಹೆಚ್ಚು ಲಿಂಗ ತಾರತಮ್ಯವನ್ನು ಮಾಡುವುದಿಲ್ಲ ಆದರೆ ನಗರದಿಂದ ದೂರವಿರುವ ಗ್ರಾಮಗಳ ಹೆಚ್ಚು ಸಂದರ್ಶಿತರು ಮಗಳ ಮತ್ತು ಮಗನ ಶಿಕ್ಷಣದ ಬಗ್ಗೆ ಹೆಚ್ಚು ಲಿಂಗ ತಾರತಮ್ಯ ಮಾಡುತ್ತಾರೆ.

ಸಂದರ್ಶಿತರ ಶಿಕ್ಷಣಮಟ್ಟ, ಸ್ವಲ್ಪಮಟ್ಟಿಗೆ ಜಾತಿ, ಗ್ರಾಮ-ನಗರ ಅಂತರ, ನಗರೀಕರಣದ ಪ್ರಭಾವ, ಉತ್ತಮ ಸಾರಿಗೆ ಸಂಪರ್ಕಗಳು, ವೈಯಕ್ತಿಕ ಮನೋಭಾವನೆಯನ್ನು ಪ್ರೇರೇಪಿಸುವ ಪ್ರಮುಖ ಅಂಶಗಳಾಗಿವೆ. ಹೆಣ್ಣು ಮತ್ತು ಗಂಡು ಮಕ್ಕಳಿಗೆ ಸಂಬಂಧಿಸಿದಂತೆ ಸಮಾಜದಲ್ಲಿ ಇರುವ ದ್ವಿಮುಖ ನೀತಿ, ನಿಯಮ ಮತ್ತು ನಿರ್ಬಂಧಗಳು ಸಹ ಲಿಂಗ ತಾರತಮ್ಯವನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಗಂಡುಮಕ್ಕಳಿಗೆ ಸಮಾಜದಲ್ಲಿ ಸಿಗುವ ಸೌಲಭ್ಯಗಳು ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಸುಲಭವಾಗಿ ಸಿಗುವುದಿಲ್ಲ.

ಪಿತೃಪ್ರಧಾನ ಕುಟುಂಬಗಳಲ್ಲಿ ಹೆಚ್ಚು ಸ್ವಾತಂತ್ರ್ಯ ಸವಲತ್ತುಗಳು ಮೊದಲು ಗಂಡಿಗೆ ದೊರೆಯುತ್ತವೆ. ಗಂಡುಮಕ್ಕಳು ಹುಟ್ಟಿ ಬೆಳೆದು ಶಿಕ್ಷಣ ಪಡೆದು ಕುಟುಂಬಕ್ಕೆ ಆದಾಯ ತರುತ್ತಾರೆ ಎಂಬ ಮನೋಭಾವನೆ ಹೆಚ್ಚು ಅನಕ್ಷರಸ್ಥ ಗ್ರಾಮೀಣರಲ್ಲಿ ಇರುವುದರಿಂದ ಗಂಡುಮಕ್ಕಳಿಗೆ ಎಲ್ಲಾ ಅವಕಾಶಗಳನ್ನು ಸವಲತ್ತುಗಳನ್ನು ಮನೆಯ ಮಗನಿಗೆ ನೀಡುತ್ತಾರೆ. ಹೆಣ್ಣುಮಕ್ಕಳು ಮದುವೆಯ ನಂತರ ಗಂಡನ ಮನೆಗೆ ಹೋಗುವುದರಿಂದ ಅವಳಿಗೆ ಶಿಕ್ಷಣ ಕೊಡಿಸುವುದು ಪಕ್ಕದ ಮನೆಯ ಗಿಡಕ್ಕೆ ನೀರೆರೆದಂತೆ ಎಂಬ ಭಾವನೆಯಿದೆ. ಹೆಣ್ಣಿನ ಶಿಕ್ಷಣದ ಲಾಭ ಅವಳ ಗಂಡನ ಮನೆಗೆ ದೊರೆಯುತ್ತದೆಯೇ ವಿನಃ ಹುಟ್ಟಿದ ಮನೆಗಲ್ಲವೆಂಬ ಭಾವನೆ ಹೆಚ್ಚು ಅನಕ್ಷರಸ್ಥ ಗ್ರಾಮೀಣರಲ್ಲಿ ಇದೆ. ಅನಕ್ಷರಸ್ಥ ಗ್ರಾಮೀಣರು ಮಗನಿಗೆ ಶಿಕ್ಷಣ ಕೊಡಿಸಲು ತೋರುವ ಧಾರಳ ತನವನ್ನು ಮಗಳಿಗೆ ಶಿಕ್ಷಣ ಕೊಡಿಸುವುದರಲ್ಲಿ ತೋರುವುದಿಲ್ಲ. ಮಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಜಾರಿಕೆಯ ಉತ್ತರಗಳನ್ನು ನೀಡುತ್ತಾರೆ. ಅವುಗಳೆಂದರೆ ಶಿಕ್ಷಣದಿಂದ ಮಗಳಿಗೆ ಉಪಯೋಗವಿಲ್ಲ, ಮಗಳು ಮನೆಕೆಲಸಗಳನ್ನು ಮಾಡಬೇಕಾಗುತ್ತದೆ, ದೂರದ ಊರಿಗೆ ಹೋಗಲು ತೊಂದರೆ, ಆರ್ಥಿಕ ತೊಂದರೆಗಳು, ದುಬಾರಿವೆಚ್ಚ ಎಂಬ ಉತ್ತರಗಳನ್ನು ನೀಡುವುದರ ಮೂಲಕ, ಮಗಳ ಮತ್ತು ಮಗನ ಶಿಕ್ಷಣದ ನಡುವೆ ಲಿಂಗ ತಾರತಮ್ಯವನ್ನು ಮಾಡುತ್ತಾರೆ.

ಭಾರತೀಯ ಸಾಂಪ್ರದಾಯಿಕ ಸಮಾಜದಲ್ಲಿ ಹೆಣ್ಣುಮಕ್ಕಳನ್ನು ಪರರ ಸ್ವತ್ತು ಎಂಬ ಭಾವನೆಯನ್ನು ಜನರು ಹೊಂದಿದ್ದರು. ಆದರೆ ಆಧುನಿಕ ಸಮಾಜದಲ್ಲಿ ಹೆಣ್ಣು ಗಂಡಿನಷ್ಟೇ ಸರಿಸಮಾನತೆಯನ್ನು ಸಂವಿಧಾನಾತ್ಮಕವಾಗಿ ಪಡೆದಿದ್ದಾರೆ. ಅವಳ ಬೌದ್ಧಿಕ ಶಕ್ತಿಯಲ್ಲೂ ಪುರುಷನಷ್ಟೆ ಸರಿಸಮಾನತೆಯನ್ನು ಹೊಂದಿರುವುದರಿಂದ ಇಂದು ಹೆಣ್ಣುಮಕ್ಕಳು ಪುರುಷನಷ್ಟೇ ಹಕ್ಕು

ಭಾಧ್ಯತೆಗಳನ್ನು ಪಡೆಯುವುದರಿಂದ ಯಾವುದೇ ಲಿಂಗ ತಾರತಮ್ಯ ಭಾವನೆ ಹೊಂದದೆ ಸಮಾನ ದೃಷ್ಟಿಕೋನವನ್ನು ಹೊಂದಿರಬೇಕು. ಆದರೆ ಹಿಂದುಳಿದ ಭಾರತೀಯ ಗ್ರಾಮಗಳ ಜನರಲ್ಲಿ ಇನ್ನೂ ಸಾಂಪ್ರದಾಯಿಕ ಮನೋಭಾವನೆಗಳು ಬದಲಾಗಿಲ್ಲದಿರುವುದರಿಂದ ಹೆಣ್ಣುಮಕ್ಕಳಿಗೆ ಸಮಾನತೆಯನ್ನು ನೀಡದೆ ಹೆಚ್ಚಿನ ಪ್ರಾಮುಖ್ಯತೆಯನ್ನು ಗಂಡಿಗೆ ನೀಡಿ ಹೆಣ್ಣುಮಕ್ಕಳನ್ನು ದ್ವಿತೀಯ ಸ್ಥಾನದಲ್ಲಿ ನೋಡುವುದು ಕಂಡು ಬರುತ್ತದೆ. ಇದು ಸಹ ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಇರುವ ಪ್ರಮುಖ ಸಮಸ್ಯೆಯಾಗಿದೆ.

ಪಟ್ಟಿ ೪.೫ರಲ್ಲಿ ಮಗಳನ್ನು ದೂರದ ಶಾಲಾ ಕಾಲೇಜಿಗೆ ಶಿಕ್ಷಣಕ್ಕೆ ಕಳುಹಿಸುವ ಬಗ್ಗೆ ಸಂದರ್ಶಕರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.

ಪಟ್ಟಿ ೪.೫ರಿಂದ ತಿಳಿದು ಬರುವುದೇನೆಂದರೆ ನಗರಕ್ಕೆ ಹತ್ತಿರವಾಗಿರುವ ಗ್ರಾಮಗಳ ಅನಕ್ಷರಸ್ಥ ಮತ್ತು ಅಕ್ಷರಸ್ಥ ವಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಎಲ್ಲಾ ಮಹಿಳೆಯರು ತಮ್ಮ ಹೆಣ್ಣುಮಕ್ಕಳನ್ನು ದೂರದಲ್ಲಿರುವ ಶಾಲಾ ಕಾಲೇಜುಗಳಿಗೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ. ನಗರಕ್ಕೆ ಹತ್ತಿರವಿರುವ ಯಾವ ಮಹಿಳೆಯರು ಸಹ ದೂರದ ಶಾಲಾ ಕಾಲೇಜುಗಳಿಗೆ ತಮ್ಮ ಮಗಳನ್ನು ಕಳುಹಿಸುವುದಿಲ್ಲ ಎಂದು ಹೇಳಿಲ್ಲ. ನಗರಕ್ಕೆ ಹತ್ತಿರವಿರುವ ಗ್ರಾಮಗಳ ಮಹಿಳೆಯರು ಹೆಚ್ಚು ಶಿಕ್ಷಣ ಪಡೆದವರಾಗಿದ್ದು ನಗರೀಕರಣದ ಪ್ರಭಾವಕ್ಕೆ ಒಳಗಾಗಿರುವವರಾಗಿದ್ದಾರೆ. ಆದುದರಿಂದ ಅವರೆಲ್ಲ ಮಹಿಳಾ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದ್ದಾರೆ.

ಪಟ್ಟಿ: ೪.೫: ಮಗಳನ್ನು ದೂರದ ಶಾಲಾ ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸುವ ಬಗ್ಗೆ

ಪಟ್ಟಿ ೪.೫: ಮಗಳನ್ನು ದೂರದ ಶಾಲಾ-ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸುವ ಬಗ್ಗೆ

ಮೊದಲನೇ ಗುಂಪಿನ ಹಳ್ಳಿಗಳು(ನಗರಕ್ಕೆ ಹತ್ತಿರವಾಗಿರುವ)													
ಸಂದರ್ಶಿತರ ಶಿಕ್ಷಣಮಟ್ಟ	ಕಳುಹಿಸುತ್ತೇವೆ		ಉಪಯೋಗವಿಲ್ಲ		ಮನೆ ಕೆಲಸಕ್ಕೆ ಸಹಾಯ ಮಾಡಬೇಕು		ದೂರದ ಊರಿಗೆ ಹೋಗಲು ತೊಂದರೆ		ಕೆಲಸಕ್ಕೆ ಆರ್ಥಿಕ ತೊಂದರೆ		ದುಬಾರಿ ವೆಚ್ಚ		ಒಟ್ಟು
	ವ	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	
ಅನಕ್ಷರಸ್ಥರು	೪	೧೨	-	-	-	-	-	-	-	-	-	-	೧೬
ಶಾಲೆ ಶಿಕ್ಷಣ	೧೨	೮	-	-	-	-	-	-	-	-	-	-	೨೦
ಪ್ರೌಢಶಿಕ್ಷಣ/ಪ.ಪೂ.ಶಿಕ್ಷಣ	೩೬	೧೨	-	-	-	-	-	-	-	-	-	-	೪೮
ಕಾಲೇಜು	೩೬	೬೦	-	-	-	-	-	-	-	-	-	-	೯೬
ಇತರೆ	೧೨	೮	-	-	-	-	-	-	-	-	-	-	೨೦
ಒಟ್ಟು	೧೦೦	೧೦೦	-	-	-	-	-	-	-	-	-	-	೨೦೦

ಪಟ್ಟಿ ೪.೫: ಮಗಳನ್ನು ದೂರದ ಶಾಲಾ-ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸುವ ಬಗ್ಗೆ

ಮೊದಲನೇ ಗುಂಪಿನ ಹಳ್ಳಿಗಳು(ನಗರಕ್ಕೆ ದೂರವಾಗಿರುವ)													
ಸಂದರ್ಶಿತರ ಶಿಕ್ಷಣಮಟ್ಟ	ಕಳುಹಿಸುತ್ತೇವೆ		ಉಪಯೋಗವಿಲ್ಲ		ಮನೆ ಕೆಲಸಕ್ಕೆ ಸಹಾಯ ಮಾಡಬೇಕು		ದೂರದ ಊರಿಗೆ ಹೋಗಲು ತೊಂದರೆ		ಕೆಲಸಕ್ಕೆ ಆರ್ಥಿಕ ತೊಂದರೆ		ದುಬಾರಿ ವೆಚ್ಚ		ಒಟ್ಟು
	ವ	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	
ಅನಕ್ಷರಸ್ಥರು	೪೦	೨೪	೪	೪	೮	೮	೮	೮	-	೧೬	-	೮	೧೨೮
ಶಾಲೆ ಶಿಕ್ಷಣ	೨೪	೨೦	-	-	-	-	-	-	-	-	-	-	೪೮
ಪ್ರೌಢಶಿಕ್ಷಣ/ಪ.ಪೂ.ಶಿಕ್ಷಣ	೧೬	೮	-	-	-	-	-	-	-	-	-	-	೨೪
ಕಾಲೇಜು	-	-	-	-	-	-	-	-	-	-	-	-	-
ಇತರೆ	-	-	-	-	-	-	-	-	-	-	-	-	-
ಒಟ್ಟು	೮೦	೫೨	೪	೪	೮	೮	೮	೧೨	-	೧೬	-	೮	೨೦೦

ನಗರದಿಂದ ದೂರ ಇರುವ ಗ್ರಾಮಗಳ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರಾಗಿದ್ದಾರೆ. ಅವರಲ್ಲಿ ಶೇ.೨೦ ರಷ್ಟು ವಕ್ಕಲಿಗ ಜಾತಿಯ, ಶೇ.೧೨ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಹೆಣ್ಣುಮಕ್ಕಳನ್ನು ದೂರದ ಶಾಲಾ ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸಲು ಒಪ್ಪಿದ್ದಾರೆ. ಶೇ.೨ ರಷ್ಟು ವಕ್ಕಲಿಗ ಜಾತಿಯ, ಶೇ.೨ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳನ್ನು ದೂರದ ಊರಿಗೆ ಶಾಲಾ ಕಾಲೇಜುಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸಿದರೂ ಉಪಯೋಗವಿಲ್ಲವೆಂದು ಹೇಳಿದ್ದಾರೆ. ಶೇ.೪ ರಷ್ಟು ವಕ್ಕಲಿಗ ಜಾತಿಯ, ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳನ್ನು ದೂರದ ಊರಿಗೆ ಶಾಲಾ ಕಾಲೇಜುಗಳಿಗೆ ಕಳುಹಿಸಲು ಸಾಧ್ಯವಿಲ್ಲ, ಅವಳು ನಮಗೆ ಮನೆಕೆಲಸಗಳಲ್ಲಿ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಶೇ.೪ ರಷ್ಟು ವಕ್ಕಲಿಗ ಜಾತಿಯ, ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳು ದೂರದ ಊರಿನ ಶಾಲಾ ಕಾಲೇಜುಗಳಿಗೆ ಹೋಗಲು ತೊಂದರೆ, ಸರಿಯಾದ ಸಾರಿಗೆ ಸಂಪರ್ಕವಿಲ್ಲ, ಹೆಣ್ಣುಮಕ್ಕಳಿಗೆ ರಕ್ಷಣೆಯಿಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಸ್ತ್ರೀ ಪುರುಷರಿಗೆ ಸಂಬಂಧಿಸಿದಂತೆ ದ್ವಿಮುಖ ನೀತಿಗಳಿದ್ದು ಪುರುಷರಿಗೆ ಮುಕ್ತ ಸ್ವಾತಂತ್ರ್ಯ ಎಲ್ಲಾ ರಂಗಗಳಲ್ಲೂ ಲಭ್ಯವಿದ್ದು, ಸ್ತ್ರೀಯರಿಗೆ ಹೆಚ್ಚಿನ ನಿರ್ಬಂಧಗಳಿದ್ದು ಸ್ತ್ರೀಯರ ಶೀಲಕ್ಕೆ ಸಂಬಂಧಿಸಿದಂತೆ ಹೆಚ್ಚು ನಿರ್ಬಂಧಗಳಿದ್ದವು. ಹೆಣ್ಣುಮಕ್ಕಳು ತಮ್ಮ ಶೀಲವನ್ನು ಕಾಪಾಡಿಕೊಳ್ಳಬೇಕು ಎಂಬ ನಿರ್ಬಂಧವನ್ನು ಪ್ರಾಚೀನ ಸಮಾಜದಲ್ಲಿ ಹೇರಲಾಗಿತ್ತು. ತಮ್ಮ ಹೆಣ್ಣುಮಕ್ಕಳ ಶೀಲವನ್ನು ಕಾಪಾಡಬೇಕಾದ ಹೊಣೆಗಾರಿಗೆ ತಂದೆ ತಾಯಿಗಳಿಗಿತ್ತು. ಆಧುನಿಕ ಭಾರತೀಯ ಸಮಾಜದಲ್ಲಿ ನಿರ್ಬಂಧಗಳಿಲ್ಲದಿದ್ದರೂ ಹಿಂದುಳಿದ ಗ್ರಾಮಗಳ ಅನಕ್ಷರಸ್ಥ ಜನರು ಇನ್ನೂ ಸಾಂಪ್ರದಾಯಿಕ ಭಾವನೆಯಿಂದ ಹೊರ ಬಂದಿಲ್ಲ. ಹೆಣ್ಣುಮಕ್ಕಳನ್ನು ದೂರದ ಊರಿಗೆ ಶಿಕ್ಷಣಕ್ಕೆ ಕಳುಹಿಸಿದರೆ ಎಲ್ಲಿ ಅವರು ಶೀಲಕ್ಕೆ ಭಂಗ ತರುತ್ತಾರೋ ಎಂಬ ಹೆದರಿಕೆಯ ಭಾವನೆಯಿಂದ ತಮ್ಮ ಹೆಣ್ಣುಮಕ್ಕಳನ್ನು ದೂರದ ಊರಿಗೆ ಶಿಕ್ಷಣಕ್ಕೆ ಕಳುಹಿಸದೆ ಅವರ ಶಿಕ್ಷಣವನ್ನು ಮೊಟಕುಗೊಳಿಸುತ್ತಾರೆ. ಅವರಲ್ಲಿ ಆಧುನಿಕ ಮೌಲ್ಯಗಳ ಬಗ್ಗೆ ಮಹಿಳಾ ಶಿಕ್ಷಣದ ಜಾಗೃತಿ ಮೂಡಿಸುವುದರ ಮೂಲಕ ಮಹಿಳಾ ಶಿಕ್ಷಣಕ್ಕೆ ಅನುವುಮಾಡಬೇಕಾದ ಅವಶ್ಯಕತೆ ತುಂಬಾ ಇದೆ.

ಶೇ.೮ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಸಾಧ್ಯವಿಲ್ಲ ತಮಗೆ ಆರ್ಥಿಕ ತೊಂದರೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು

ಮಗಳನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸಿದರೆ ತಮಗೆ ದುಬಾರಿ ವೆಚ್ಚವುಂಟಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕಪಡಿಸಿದ್ದಾರೆ.

ನಗರದಿಂದ ದೂರವಿರುವ ಶಾಲಾ ಶಿಕ್ಷಣ ಪಡೆದ ಶೇ.೧೨ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೧೦ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳನ್ನು ದೂರದ ಶಾಲಾ ಕಾಲೇಜಿಗೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಶೇ.೨ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗಳನ್ನು ದೂರದ ಶಾಲಾ ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸಲು ಸರಿಯಾದ ಸಾರಿಗೆ ಸಂಪರ್ಕವಿಲ್ಲ, ತೊಂದರೆಯಾಗುತ್ತದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೮ ರಷ್ಟು ವಕ್ಕಲಿಗ ಮತ್ತು ಶೇ.೪ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸಲು ಒಪ್ಪಿಗೆ ಸೂಚಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳಲ್ಲಿ ಶೇ.೨೦ ರಷ್ಟು ವಕ್ಕಲಿಗ, ಶೇ.೧೨ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಸಂದರ್ಶಿತರು ತಮ್ಮ ಹೆಣ್ಣುಮಕ್ಕಳನ್ನು ದೂರದ ಊರಿಗೆ ಶಿಕ್ಷಣಕ್ಕೆ ಕಳುಹಿಸುತ್ತೇವೆ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ. ಶಾಲಾ ಶಿಕ್ಷಣ ಪಡೆದ ಶೇ.೧೨ ರಷ್ಟು ವಕ್ಕಲಿಗ ಮತ್ತು ಶೇ.೧೦ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತರು, ಪ್ರೌಢಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೮ ರಷ್ಟು ವಕ್ಕಲಿಗ, ಶೇ.೪ ರಷ್ಟು ಪರಿಶಿಷ್ಟ ಜಾತಿ ಸಂದರ್ಶಿತರು ಅಂದರೆ ಒಟ್ಟು ೨೦೦ ಸಂದರ್ಶಿತರಲ್ಲಿ ೮೦ ವಕ್ಕಲಿಗ ಮತ್ತು ೫೨ ಪರಿಶಿಷ್ಟ ಜಾತಿ ಮಹಿಳಾ ಸಂದರ್ಶಿತರು ತಮ್ಮ ಹೆಣ್ಣುಮಕ್ಕಳನ್ನು ದೂರದ ಶಾಲಾ ಕಾಲೇಜಿಗೆ ಶಿಕ್ಷಣಕ್ಕೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ.

ನಗರದಿಂದ ದೂರವಿರುವ ಶೇ.೨ರಷ್ಟು ವಕ್ಕಲಿಗ, ಶೇ.೨ ರಷ್ಟು ಪರಿಶಿಷ್ಟ ಜಾತಿ ಅನಕ್ಷರಸ್ಥ ಮಹಿಳಾ ಸಂದರ್ಶಿತರು, ತಮ್ಮ ಮಗಳನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸುವುದರಿಂದ ನಮಗೇನು ಉಪಯೋಗವಿಲ್ಲ. ತೊಂದರೆಯೇ ಹೆಚ್ಚು ಎಂಬ ನಿರುತ್ಸಾಹಕ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಶೇ.೪ರಷ್ಟು ವಕ್ಕಲಿಗ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿ ಅನಕ್ಷರಸ್ಥ ಮಹಿಳಾ ಸಂದರ್ಶಿತರು ದೂರದ ಶಾಲಾ ಕಾಲೇಜುಗಳಿಗೆ ತಮ್ಮ ಹೆಣ್ಣುಮಕ್ಕಳನ್ನು ಕಳುಹಿಸಿದರೆ ನಮ್ಮ ಮನೆ ಕೆಲಸಗಳನ್ನು ಮಾಡುವವರು ಯಾರು? ನಮಗೆ ಮನೆ ಕೆಲಸಗಳನ್ನು ಮಾಡಲು ತೊಂದರೆಯಾಗುತ್ತದೆ. ಅವರು ನಮ್ಮ ಮನೆಗೆಲಸಕ್ಕೆ ಸಹಾಯ ಮಾಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಶೇ.೪ ರಷ್ಟು ವಕ್ಕಲಿಗ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿ ಅನಕ್ಷರಸ್ಥ ಮಹಿಳಾ ಸಂದರ್ಶಿತರು, ಶಾಲಾ ಶಿಕ್ಷಣ ಪಡೆದ ಶೇ.೨ ರಷ್ಟು ಪರಿಶಿಷ್ಟ ಜಾತಿ ಮಹಿಳಾ ಸಂದರ್ಶಿತರು ಅಂದರೆ ೨೦೦ ಮಹಿಳಾ ಸಂದರ್ಶಿತರಲ್ಲಿ ೮ ವಕ್ಕಲಿಗ ಮತ್ತು ೧೨ ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ತಮ್ಮ ಮಗಳು ದೂರದ ಊರಿಗೆ ಹೋಗಿ ಶಿಕ್ಷಣ ಪಡೆಯಲು ಉತ್ತಮ ಸಾರಿಗೆ ಸಂಪರ್ಕ ವ್ಯವಸ್ಥೆಯಿಲ್ಲ. ಹೋಗಿ ಬರಲು ಸರಿಯಾದ ರಕ್ಷಣೆಯಿಲ್ಲ. ಹೆಣ್ಣುಮಕ್ಕಳ ಶೀಲಕ್ಕೆ ತೊಂದರೆಯಾಗುತ್ತದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಶೇ.೮ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳಾ ಸಂದರ್ಶಿತರು ತಮ್ಮ ಹೆಣ್ಣುಮಕ್ಕಳನ್ನು ದೂರದ ಊರಿಗೆ ಶಿಕ್ಷಣಕ್ಕೆ ಕಳುಹಿಸಲು ಕುಟುಂಬದಲ್ಲಿರುವ ಬಡತನ ಮತ್ತು ಆರ್ಥಿಕ ತೊಂದರೆಯಿಂದ ಬರುವ ಖರ್ಚನ್ನು ಬರಿಸಲು ಸಾಧ್ಯವಿಲ್ಲ. ಆದುದರಿಂದ ದೂರದ ಊರಿಗೆ ಶಾಲಾ ಕಾಲೇಜುಗಳಿಗೆ ಕಳುಹಿಸುವುದಿಲ್ಲವೆಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳಾ ಸಂದರ್ಶಿತರು, ದೂರದ ಊರಿನಲ್ಲಿ ಮಗಳಿಗೆ ಶಿಕ್ಷಣ ನೀಡುವುದರಿಂದ ತಮಗೆ ದುಬಾರಿ ವೆಚ್ಚವಾಗುವುದರಿಂದ ತಮ್ಮ ಮಗಳನ್ನು ದೂರದ ಊರಿಗೆ ಶಿಕ್ಷಣಕ್ಕೆ ಕಳುಹಿಸುವುದಿಲ್ಲವೆಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಊರಿನ ೨೦೦ ಮಹಿಳಾ ಸಂದರ್ಶಿತರಲ್ಲಿ ೮೦ ವಕ್ಕಲಿಗ ಮತ್ತು ೫೨ ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ಮಾತ್ರ ತಮ್ಮ ಮಗಳಿಗೆ ದೂರದ ಊರಿನಲ್ಲಿ ಶಿಕ್ಷಣ ನೀಡಲು ಒಪ್ಪಿಗೆ ಸೂಚಿಸಿದ್ದಾರೆ.

೨೦ ವಕ್ಕಲಿಗ, ೪೮ ಪರಿಶಿಷ್ಟ ಜಾತಿ ಮಹಿಳಾ ಸಂದರ್ಶಿತರು ತಮ್ಮ ಹೆಣ್ಣುಮಕ್ಕಳನ್ನು ಶಿಕ್ಷಣಕ್ಕೆ ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಒಪ್ಪಿಗೆ ಸೂಚಿಸಿಲ್ಲ.

ಅಕ್ಷರಸ್ಥ ಮಹಿಳೆಯರು ಮಹಿಳೆಗೆ ಶಿಕ್ಷಣದ ಅವಶ್ಯಕತೆಯಿದೆ ಎಂಬುದನ್ನು ಅರಿತಿದ್ದಾರೆ. ಆದುದರಿಂದ ತಮ್ಮ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣವನ್ನು ಕೊಡಿಸುತ್ತಾರೆ. ಆವರು ಮಗನಿಗೆ ಮತ್ತು ಮಗಳಿಗೆ ಶಿಕ್ಷಣವನ್ನು ಕೊಡಿಸುವಲ್ಲಿ ತಾರತಮ್ಯ ಮಾಡುವುದಿಲ್ಲ.[೧೦]

ಪಟ್ಟಿ ೪.೬ರಲ್ಲಿ ಮಗನನ್ನು ದೂರದ ಶಾಲಾ ಕಾಲೇಜಿಗೆ ಶಿಕ್ಷಣಕ್ಕೆ ಕಳಿಹಿಸುವ ಬಗ್ಗೆ ಸಂದರ್ಶಕರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.

ಪಟ್ಟಿ ೪.೬ ರನ್ನು ಗಮನಿಸಿದಾಗ ನಗರಕ್ಕೆ ಹತ್ತಿರವಿರುವ ಎಲ್ಲಾ ವಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಮತ್ತು ಎಲ್ಲಾ ಅನಕ್ಷರಸ್ಥ ಮತ್ತು ಅಕ್ಷರಸ್ಥ ಮಹಿಳೆಯರು ಮಗನನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ.

ಪಟ್ಟಿ ೪.೬ರಿಂದ ತಿಳಿದು ಬರುವುದೇನೆಂದರೆ ನಗರದಿಂದ ದೂರವಿರುವ ಗ್ರಾಮಗಳ ಶೇ.೨೪ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೨೮ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗನನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಶೇ.೪ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೪ ರಷ್ಟು ಅನಕ್ಷರಸ್ಥ ಮಹಿಳೆಯರು ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಕಳುಹಿಸಲು ಕೆಲಸದ ಒತ್ತಡ ಮತ್ತು ಆರ್ಥಿಕ ತೊಂದರೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪಟ್ಟಿ ೪.೬: ಮಗನನ್ನು ದೂರದ ಶಾಲಾ-ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸುವ ಬಗ್ಗೆ

ಮೊದಲನೇ ಗುಂಪಿನ ಹಳ್ಳಿಗಳು(ನಗರಕ್ಕೆ ಹತ್ತಿರವಾಗಿರುವ)														
ಸಂದರ್ಶಿತರ ಶಿಕ್ಷಣಮಟ್ಟ	ಕಳುಹಿಸುತ್ತೇವೆ		ಉಪಯೋಗವಿಲ್ಲ		ಮನೆ ಕೆಲಸಕ್ಕೆ ಸಹಾಯ ಮಾಡಬೇಕು		ದೂರದ ಊರಿಗೆ ಹೋಗಲು ತೊಂದರೆ		ಕೆಲಸಕ್ಕೆ ಆರ್ಥಿಕ ತೊಂದರೆ		ದುಬಾರಿ ವೆಚ್ಚ		ಒಟ್ಟು
	ವ	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	
ಅನಕ್ಷರಸ್ಥರು	೪	೧೨	-	-	-	-	-	-	-	-	-	-	೧೬
ಶಾಲೆ ಶಿಕ್ಷಣ	೧೨	೮	-	-	-	-	-	-	-	-	-	-	೨೦
ಪ್ರೌಢಶಿಕ್ಷಣ/ಪ.ಪೂ.ಶಿಕ್ಷಣ	೩೬	೧೨	-	-	-	-	-	-	-	-	-	-	-
ಕಾಲೇಜು	೩೬	೬೦	-	-	-	-	-	-	-	-	-	-	-
ಇತರೆ	೧೨	೮	-	-	-	-	-	-	-	-	-	-	೨೦
ಒಟ್ಟು	೧೦೦	೧೦೦	-	-	-	-	-	-	-	-	-	-	೨೦೦

ಪಟ್ಟಿ ೪.೬: ಮಗನನ್ನು ದೂರದ ಶಾಲಾ-ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸುವ ಬಗ್ಗೆ

ಮೊದಲನೇ ಗುಂಪಿನ ಹಳ್ಳಿಗಳು(ನಗರಕ್ಕೆ ದೂರವಾಗಿರುವ)													
ಸಂದರ್ಶಿತರ ಶಿಕ್ಷಣಮಟ್ಟ	ಕಳುಹಿಸುತ್ತೇವೆ		ಉಪಯೋಗವಿಲ್ಲ		ಮನೆ ಕೆಲಸಕ್ಕೆ ಸಹಾಯ ಮಾಡಬೇಕು		ದೂರದ ಊರಿಗೆ ಹೋಗಲು ತೊಂದರೆ		ಕೆಲಸಕ್ಕೆ ಆರ್ಥಿಕ ತೊಂದರೆ		ದುಬಾರಿ ವೆಚ್ಚ		ಒಟ್ಟು
	ವ	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	ವ.	ಪ.ಜಾ	
ಅನಕ್ಷರಸ್ಥರು	೪೮	೫೬	-	-	-	-	-	-	೮	೮	೪	೪	೧೨೮
ಶಾಲೆ ಶಿಕ್ಷಣ	೨೪	೨೦	-	-	-	-	-	-	-	-	-	-	೪೪
ಪ್ರೌಢಶಿಕ್ಷಣ/ಪ.ಪೂ.ಶಿಕ್ಷಣ	೧೬	೮	-	-	-	-	-	-	-	-	-	-	೨೪
ಕಾಲೇಜು	-	-	-	-	-	-	-	-	-	-	-	-	-
ಇತರೆ	-	-	-	-	-	-	-	-	-	-	-	-	-
ಒಟ್ಟು	೮೮	೮೪	-	-	-	-	-	-	೮	೧೨	೪	೪	೨೦೦

ಶೇ.೨ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೨ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಕಳುಹಿಸಲು ದುಬಾರಿ ವೆಚ್ಚವಾಗುತ್ತದೆ. ಆ ವೆಚ್ಚವನ್ನು ಭರಿಸುವ ಶಕ್ತಿ ತಮಗಿಲ್ಲವೆಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಶಾಲಾ ಶಿಕ್ಷಣ ಪಡೆದ ಶೇ.೧೨ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೧೦ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಕಳುಹಿಸಲು ಒಪ್ಪಿಗೆ ಸೂಚಿಸಿದ್ದಾರೆ. ಶೇ.೨ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಗನನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ತಮಗೆ ಆರ್ಥಿಕ ತೊಂದರೆಯಿದೆ ಎಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೮ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗನನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ.

ಮಹಿಳೆಯರ ಶಿಕ್ಷಣಮಟ್ಟ ಹೆಚ್ಚಾದಂತೆ ಅವರು ತಮ್ಮ ಮಗನಿಗೆ ಮತ್ತು ಮಗಳಿಗೆ ಹೆಚ್ಚು ಶಿಕ್ಷಣವನ್ನು ನೀಡುತ್ತಾರೆ. ಅವರ ಲಿಂಗ ತಾರತಮ್ಯ ಭಾವನೆ ಕಡಿಮೆಯಾಗುತ್ತದೆ. ಮಹಿಳೆಯರ ಶಿಕ್ಷಣಮಟ್ಟ ಕಡಿಮೆಯಾದಂತೆ ಅವರು ತಮ್ಮ ಮಗಳಿಗೆ ಕಡಿಮೆ ಶಿಕ್ಷಣವನ್ನು ನೀಡುತ್ತಾರೆ. ಹೆಚ್ಚು ಲಿಂಗ ತಾರತಮ್ಯ ಭಾವನೆಯನ್ನು ಹೊಂದಿರುತ್ತಾರೆ.

ಮಹಿಳೆಯರ ಶಿಕ್ಷಣಕ್ಕೆ ಮತ್ತು ಅವರು ತಮ್ಮ ಮಗಳಿಗೆ ಶಿಕ್ಷಣಕ್ಕೂ ನೇರ ಸಂಬಂಧವಿದೆ. ಮಹಿಳೆಯು ಹೆಚ್ಚು ಶಿಕ್ಷಣ ಪಡೆದಂತೆ ಅವಳ ವೈಚಾರಿಕ ಪ್ರಜ್ಞೆ ಹೆಚ್ಚುತ್ತದೆ. ವಿಮರ್ಶಾತ್ಮಕ ಶಕ್ತಿ ಹೆಚ್ಚುತ್ತದೆ. ಮಹಿಳೆಯರು ಹೆಚ್ಚು ಶಿಕ್ಷಣ ಪಡೆದಂತೆ ಅವರಿಗೆ ಮಹಿಳಾ ಶಿಕ್ಷಣದ ಉಪಯೋಗ ಹೆಚ್ಚು ತಿಳಿಯುತ್ತದೆ. ಆದುದರಿಂದ ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ತಮ್ಮ ಮಗಳಿಗೂ ಹೆಚ್ಚು ಶಿಕ್ಷಣ ನೀಡಲು ಮುಂದಾಗುತ್ತಾರೆ. ಕಡಿಮೆ ಶಿಕ್ಷಣ ಪಡೆದ ಮಹಿಳೆಯರಿಗೆ ಮಗಳಿಗೆ ಶಿಕ್ಷಣ ನೀಡುವುದರಿಂದಾಗುವ ಲಾಭ ಹೆಚ್ಚಾಗಿ ತಿಳಿಯುವುದಿಲ್ಲ. ಆದುದರಿಂದ ಅವರು ಮಗಳಿಗೆ ಕಡಿಮೆ ಶಿಕ್ಷಣ ಸಾಕೆಂಬ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಸಮೀಕ್ಷೆಗಳಿಂದ ತಿಳಿದು ಬರುವುದೇನೆಂದರೆ ಕಡಿಮೆ ಶಿಕ್ಷಣ ಪಡೆದ ಮಹಿಳೆಯರು ತಮ್ಮ ಗಂಡು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡಿ ತಮ್ಮ ಹೆಣ್ಣುಮಕ್ಕಳಿಗೆ ಕಡಿಮೆ ಶಿಕ್ಷಣ ನೀಡುತ್ತಾರೆ. ಅವರಿಗೆ ಗಂಡು ಮಕ್ಕಳ ಶಿಕ್ಷಣದಷ್ಟು ಹೆಣ್ಣುಮಕ್ಕಳ ಶಿಕ್ಷಣ ಮಹತ್ವದ್ದಾಗಿ ಕಂಡು ಬರುವುದಿಲ್ಲ. ಆದುದರಿಂದ ಅವರು ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ.

ನಗರದಿಂದ ದೂರವಿರುವ ಗ್ರಾಮಗಳಲ್ಲಿ ಶೇ.೨೪ ರಷ್ಟು ವಕ್ಕಲಿಗ ಮತ್ತು ಶೇ.೨೮ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳಾ ಸಂದರ್ಶಿತರು, ಶೇ.೧೨ ರಷ್ಟು ವಕ್ಕಲಿಗ ಮತ್ತು ಶೇ.೧೦ ರಷ್ಟು ಪರಿಶಿಷ್ಟ ಜಾತಿಯ ಶಾಲಾ ಶಿಕ್ಷಣ ಪಡೆದ ಮಹಿಳಾ ಸಂದರ್ಶಿತರು, ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದ ಶೇ.೮ ರಷ್ಟು ವಕ್ಕಲಿಗ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿಯ ಸಂದರ್ಶಿತರು ಅಂದರೆ ೨೦೦ ಸಂದರ್ಶಿತರಲ್ಲಿ ೮೮ ವಕ್ಕಲಿಗ ಮತ್ತು ೮೪ ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಶಿಕ್ಷಣ ಪಡೆಯಲು ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳಲ್ಲಿ ಶೇ.೪ ರಷ್ಟು ವಕ್ಕಲಿಗ ಮತ್ತು ಶೇ.೪ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳಾ ಸಂದರ್ಶಿತರು, ಶಾಲಾ ಶಿಕ್ಷಣ ಪಡೆದ ಶೇ೨ ರಷ್ಟು ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು, ೨೦೦ ಮಹಿಳಾ ಸಂದರ್ಶಿತರಲ್ಲಿ ೮ ವಕ್ಕಲಿಗ ಮತ್ತು ೧೨ ಪರಿಶಿಷ್ಟ ಜಾತಿಯ ಮಹಿಳಾ ಸಂದರ್ಶಿತರು ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಕಳುಹಿಸಲು ತಮ್ಮ ಮನೆ ಕೃಷಿ ಕೆಲಸಗಳನ್ನು ಮಾಡಲು ತೊಂದರೆ ಮತ್ತು ಮನೆಯಲ್ಲಿರುವ ಬಡತನದ ಕಾರಣದಿಂದ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಕಳುಹಿಸಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳಲ್ಲಿ ಶೇ.೨ ರಷ್ಟು ವಕ್ಕಲಿಗ ಮತ್ತು ಶೇ.೨ ರಷ್ಟು ಪರಿಶಿಷ್ಟ ಜಾತಿಯ ಅನಕ್ಷರಸ್ಥ ಮಹಿಳೆಯರು ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸಲು ಹೆಚ್ಚು ಹಣ ಬೇಕಾಗುತ್ತದೆ. ನಮಗೆ ದುಬಾರಿ ವೆಚ್ಚ ಬರಿಸಲು ಸಾಧ್ಯವಿಲ್ಲವೆಂದು ಉತ್ತರಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಒಟ್ಟು ೨೦೦ ಮಹಿಳಾ ಸಂದರ್ಶಿತರಲ್ಲಿ ಯಾವ ಮಹಿಳಾ ಸಂದರ್ಶಿತರೂ ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಕೊಡಿಸುವುದು ಉಪಯೋಗವಿಲ್ಲವೆಂಬ ನಕಾರಾತ್ಮಕ ಭಾವನೆಯನ್ನು ವ್ಯಕ್ತಪಡಿಸಿಲ್ಲ. ಗಂಡು ಮಕ್ಕಳು ಗ್ರಾಮಗಳಲ್ಲಿ ಮನೆಯ ಒಳಗಿನ ಕೆಲಸಗಳನ್ನು ಸಾಮಾನ್ಯವಾಗಿ ನಿರ್ವಸುವುದಿಲ್ಲವಾದುದರಿಂದ ಯಾವ ಸಂದರ್ಶಿತರೂ ಮನೆ ಕೆಲಸಗಳಿಗೆ ತೊಂದರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಗಂಡು ಮಕ್ಕಳಿಗೆ ಸಿಕ್ಕಿರುವ ಹೆಚ್ಚಿನ ಸ್ವಾತಂತ್ರ್ಯ ಮತ್ತು ಅವರ ಚಾರಿತ್ರ್ಯದ ಮೇಲೆ ನಿರ್ಬಂಧಗಳಿಲ್ಲದ ಕಾರಣ ಅವರನ್ನು ದೂರದ ಊರಿಗೆ ಹೋಗಿ ಶಿಕ್ಷಣ ಪಡೆಯಲು ತೊಂದರೆ ಎಂಬ ಭಾವನೆಯನ್ನು ಯಾರೂ ವ್ಯಕ್ತಪಡಿಸಿಲ್ಲ. ೨೦೦ ಸಂದರ್ಶಿತರಲ್ಲಿ ೧೭೨ ಮಹಿಳಾ ಸಂದರ್ಶಿತರು

ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಶಿಕ್ಷಣ ಕೊಡಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ.

ನಗರೀಕರಣದ ಪ್ರಭಾವವಿಲ್ಲದ ಗ್ರಾಮಗಳಲ್ಲಿಯೂ ಸಹ ಹೆಣ್ಣುಮಕ್ಕಳ ಶಿಕ್ಷಣಕ್ಕಿಂತ ಗಂಡು ಮಕ್ಕಳ ಶಿಕ್ಷಣ ಬಹಳ ಮುಖ್ಯ ಎಂದು ಭಾವಿಸಿರುವುದರಿಂದ ಹೆಚ್ಚಿನ ಸಂದರ್ಶಿತರು ತಮ್ಮ ಮಗನನ್ನು ದೂರದ ಊರಿನ ಶಾಲಾ ಕಾಲೇಜುಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸಲು ಸಿದ್ದರಿದ್ದಾರೆ.

ಪಟ್ಟಿ ೩.೫ ಮತ್ತು ಪಟ್ಟಿ ೩.೬ರನ್ನು ಗಮನಿಸಿದಾಗ ತಿಳಿದು ಬರುವುದೇನೆಂದರೆ, ನಗರದಿಂದ ದೂರವಿರುವ ಗ್ರಾಮಗಳ ವಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಎಲ್ಲಾ ಮಹಿಳೆಯರು ಮತ್ತು ನಗರಕ್ಕೆ ಹತ್ತಿರವಿರುವ ಗ್ರಾಮಗಳ ವಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಎಲ್ಲಾ ಮಹಿಳೆಯರು ತಮ್ಮ ಮಗನನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಸಮ್ಮತಿಸಿದ್ದಾರೆ. ಆದರೆ ಮಗಳನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಮಗನಷ್ಟು ಮಗಳಿಗೆ ಸಮ್ಮತಿಯನ್ನು ಸೂಚಿಸಿಲ್ಲ.

ನಗರಕ್ಕೆ ಹತ್ತಿರವಾಗಿರುವ ಶೇ.೧೦೦ ರಷ್ಟು ವಕ್ಕಲಿಗ ಮತ್ತು ಶೇ.೧೦೦ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಮಗಳನ್ನು ದೂರದ ಶಾಲಾ ಕಾಲೇಜಿಗೆ ಕಳುಹಿಸಲು ಸಮ್ಮತಿಸಿದ್ದು ಲಿಂಗತಾರತಮ್ಯ ಮಾಡಿಲ್ಲ.

ನಗರದಿಂದ ದೂರವಿರುವ ಶೇ.೯೦ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೨೬ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಮಾತ್ರ ತಮ್ಮ ಮಗಳನ್ನು ದೂರದ ಶಾಲಾ ಕಾಲೇಜಿಗೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಉಳಿದ ಶೇ.೧೦ ರಷ್ಟು ವಕ್ಕಲಿಗ ಜಾತಿಯ ಮತ್ತು ಶೇ.೭೪ ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರು ಒಪ್ಪಿಗೆಯನ್ನು ಸೂಚಿಸದೆ ಲಿಂಗ ತಾರತಮ್ಯವನ್ನು ಮಾಡಿದ್ದಾರೆ.

ನಗರಕ್ಕೆ ಹತ್ತಿರವಾಗಿರುವ ಗ್ರಾಮಗಳಿಗಿಂತ ನಗರದಿಂದ ದೂರ ಇರುವ ಗ್ರಾಮಗಳಲ್ಲಿ ಲಿಂಗ ತಾರತಮ್ಯ ಹೆಚ್ಚಾಗಿ ಕಂಡುಬರುತ್ತದೆ. ಮಹಿಳೆಯರ ಮನೋಭಾವನೆಯ ಮೇಲೆ ನಗರ–ಗ್ರಾಮ ಅಂತರವು ಪ್ರಭಾವ ಬೀರುವ ಪ್ರಮುಖ ಅಂಶವಾಗಿದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಜನರ ಮೇಲೆ ನಗರೀಕರಣ, ಆಧುನೀಕರಣ ಮತ್ತು ಕೈಗಾರಿಕೀಕರಂಗಗಳ ನೇರ ಪ್ರಭಾವ ಬೀರುತ್ತವೆ. ಆಧುನೀಕರಣದ ಪ್ರಭಾವವು ಸ್ತ್ರೀ ಪುರುಷ ಸಮಾನತೆಗೆ ಕಾರಣವಾಗುತ್ತದೆ. ಸ್ತ್ರೀ ಪುರುಷರಿಬ್ಬರು ಶಿಕ್ಷಣ ಪಡೆದು ಕುಟುಂಬದ ಹೊರಗಡೆ

ಲಾಭದಾಯಕ ಹುದ್ದೆಗಳನ್ನು ನಿರ್ವಹಿಸುವುದು ಕಂಡು ಬರುತ್ತದೆ. ಆದುದರಿಂದ ನಗರಕ್ಕೆ ಹತ್ತಿರವಿರುವ ಮಹಿಳೆಯರು ಹೆಚ್ಚು ಶಿಕ್ಷಿತರಾಗಿದ್ದು ಆಧುನೀಕರಣದ ಪ್ರಭಾವಕ್ಕೆ ಒಳಗಾದವರಾಗಿದ್ದು ಅವರು ತಮ್ಮ ಗಂಡು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯಮಾಡದೆ ಇಬ್ಬರಿಗೂ ಸಮಾನ ಶಿಕ್ಷಣ ನೀಡುತ್ತಾರೆ.

ನಗರದಿಂದ ದೂರವಿರುವ ಗ್ರಾಮಗಳಲ್ಲಿ ಮಹಿಳೆಯರು ಕುಟುಂಬ ಮತ್ತು ತಮ್ಮ ಕೃಷಿ ಭೂಮಿಗಳಲ್ಲಿ ಕೆಲಸಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಬೇರೆಯವರ ಕೃಷಿ ಭೂಮಿಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ಮಹಿಳೆಯರು ಹೆಚ್ಚು ಶಿಕ್ಷಣ ಪಡೆದಿಲ್ಲ ಮತ್ತು ಆಧುನೀಕರಣ ಮತ್ತು ನಗರೀಕರಣದ ಪ್ರಭಾವಕ್ಕೆ ಒಳಗಾಗಿಲ್ಲ. ಆದುದರಿಂದ ಅವರು ಮಹಿಳೆಗೆ ಶಿಕ್ಷಣ ನೀಡುವುದರಿಂದಾಗುವ ಲಾಭದ ಅರಿವು ಸಂಪೂರ್ಣವಾಗಿ ಗೊತ್ತಿಲ್ಲ. ಅವರು ಮಗನು ಶಿಕ್ಷಣ ಪಡೆದು ದುಡಿದು ಕುಟುಂಬಕ್ಕೆ ಆಧಾಯ ತರಬೇಕು. ಹೆಣ್ಣುಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋಗುವುದರಿಂದ ಅವಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ ಎಂದು ಭಾವಿಸುತ್ತಾರೆ. ಗ್ರಾಮ ನಗರ ಅಂತರವು ಮಹಿಳೆಯರ ಮೇಲೆ ಪ್ರಭಾವ ಬೀರುತ್ತದೆ.

ನಗರೀಕರಣ ಸಂಸ್ಕೃತಿ, ಸಾಮಾಜಿಕ ಹಾಗೂ ಮಾನಸಿಕ ಅಂಶಗಳ ಮೇಲೆ ಪರಿಣಾಮ ಬೀರುವುದರಿಂದ ಅದೊಂದು ಸಂಕೀರ್ಣವಾದ ಪ್ರಕ್ರಿಯೆ ಎನ್ನಬಹುದು. ಇದು ಗ್ರಾಮೀಣರ ಮೇಲೆ ಪ್ರಭಾವ ಬೀರಿ ಅವರ ಜೀವನ ಕ್ರಮ, ನಡೆನುಡಿಗಳಲ್ಲಿ ತೀರಾ ಬದಲಾವಣೆಯುಂಟು ಮಾಡಬಲ್ಲದು. ಇದೇ ರೀತಿ ಇದರ ಪರಿಣಾಮ ಸಂಕೀರ್ಣಗೊಂಡ ನಗರ ಸಂಸ್ಕೃತಿಯನ್ನು ಗ್ರಾಮಾಂತರ ಪ್ರದೇಶದವರು ಅಳವಡಿಸಿಕೊಂಡರೆ ಆ ಸಂಸ್ಕೃತಿಯ ಪ್ರಭಾವ ಎಲ್ಲೆಡೆ ಪರಿಣಾಮ ಬೀರುತ್ತದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿ ಸಾಮಾಜಿಕ ಬದಲಾವಣೆಗೆ ಅವಕಾಶ ವಾಗಬಹುದು."[೧೧]

ನಗರಕ್ಕೆ ಹತ್ತಿರವಾಗಿರುವ ಗ್ರಾಮಗಳ ಮಹಿಳೆಯರು ಹೆಚ್ಚು ಶಿಕ್ಷಿತರು ಆಧುನಿಕ ಸಮಾನ ಮೌಲ್ಯಗಳನ್ನು ಅಳವಡಿಸಿಕೊಂಡವರು. ನಗರೀಕರಣ ಮತ್ತು ಔದ್ಯೋಗಿಕರಣದ ಪ್ರಭಾವಕ್ಕೆ ಒಳಗಾದವರು ಆಧುನಿಕ ನಾಗರಿಕತೆಯನ್ನು ಅಳವಡಿಸಿಕೊಂಡವರಾಗಿದ್ದಾರೆ. ಆದುದರಿಂದ ಅವರು ಹೆಚ್ಚು ಲಿಂಗ ತಾರತಮ್ಯಗಳನ್ನು ಮಾಡದೆ, ಮಗಳ ಮತ್ತು ಮಗನ ಶಿಕ್ಷಣಕ್ಕೆ ಸಮಾನ ಆದ್ಯತೆಯನ್ನು ನೀಡಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಮಹಿಳೆಯರು ಹೆಚ್ಚು ಶಿಕ್ಷಿತರಲ್ಲ. ಆಧುನಿಕ ಮೌಲ್ಯಗಳನ್ನು ಅಳವಡಿಸಿಕೊಂಡಿಲ್ಲ. ಈ ಗ್ರಾಮಗಳ ಮಹಿಳೆಯರು ನಗರೀಕರಣ ಮತ್ತು ಔದ್ಯೋಗೀಕರಣ ಪ್ರಭಾವಕ್ಕೆ ಒಳಗಾಗಿಲ್ಲ. ಹಳೆಯ ರೂಢಿ ಸಂಪ್ರದಾಯಗಳನ್ನು ಅಳವಡಿಸಿ

ಕೊಂಡವರಾಗಿದ್ದಾರೆ. ಆದುದರಿಂದ ಅವರು ಹೆಚ್ಚು ಲಿಂಗ ತಾರತಮ್ಯ ಮಾಡುತ್ತಾರೆ. ಮಗಳ ಮತ್ತು ಮಗನ ಶಿಕ್ಷಣದ ವಿಷಯದಲ್ಲಿ ಸಮಾನ ಆಧ್ಯತೆಯನ್ನು ನೀಡಿಲ್ಲ.

ವಕ್ಕಲಿಗ ಜಾತಿಯ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಹೋಲಿಕೆ ಮಾಡಿದಾಗ, ವಕ್ಕಲಿಗ ಜಾತಿಯ ಮಹಿಳೆಯರು ಪರಿಶಿಷ್ಟ ಜಾತಿಯ ಮಹಿಳೆಯರಿಗಿಂತ ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಲು ಹೆಚ್ಚು ಆಸಕ್ತಿ ತೋರಿದ್ದಾರೆ. ಕಾರಣ ಪರಿಶಿಷ್ಟ ಜಾತಿಯ ಮಹಿಳೆಯರಿಗಿಂತ ವಕ್ಕಲಿಗ ಜಾತಿಯ ಮಹಿಳೆಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಿನ್ನೆಲೆ ಉತ್ತಮವಾಗಿರುವುದೇ ಕಾರಣವಾಗಿದೆ. ಪರಿಶಿಷ್ಟ ಜಾತಿಯ ಮಹಿಳೆಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಿನ್ನೆಲೆಗಳು ಉತ್ತಮವಾಗಿಲ್ಲದ ಕಾರಣ ಅವರು ತಮ್ಮ ಮಗನ ಮತ್ತು ಮಗಳ ಶಿಕ್ಷಣದ ವಿಷಯಕ್ಕೆ ಬಂದಾಗ ಮೊದಲು ಮಗನ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ನೀಡಿ ಮಗಳ ಶಿಕ್ಷಣವನ್ನು ಕಡೆಗಣಿಸಿರುವುದು ಹೆಚ್ಚಾಗಿ ಕಂಡುಬರುತ್ತದೆ. ಮಗನು ಮನೆಯಲ್ಲಿ ಇದ್ದು ಶಿಕ್ಷಣ ಪಡೆದು ಮನೆಗೆ ಆದಾಯವನ್ನು ತರುತ್ತಾನೆ. ಮಗಳು ಮದುವೆಯಾಗಿ ಗಂಡನ ಮನೆಗೆ ಹೋಗುತ್ತಾಳೆ. ಅವಳ ಶಿಕ್ಷಣದ ಲಾಭ ಅವಳ ಗಂಡನ ಮನೆಗೆ ದೊರಕುತ್ತದೆ ಎಂಬ ಭಾವನೆಯನ್ನು ಹೊಂದಿದ್ದು, ಲಭ್ಯವಿರುವ ಅಲ್ಪ ಸೌಲತ್ತನ್ನು ನೀಡುವಾಗ ಮಗನಿಗೆ ನೀಡುವುದರ ಮೂಲಕ ಲಿಂಗ ತಾರತಮ್ಯವನ್ನು ಮಾಡುತ್ತಾರೆ.

ಈ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ವಕ್ಕಲಿಗ ಜಾತಿಯ ಉತ್ತಮ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಗಳಿಂದಾಗಿ ಅವರು ತಮ್ಮ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡಲು ಸಾಧ್ಯವಾಗುತ್ತದೆ. ಪರಿಶಿಷ್ಟ ಜಾತಿಯ ಹಿಂದುಳಿದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಗಳು ಹೆಣ್ಣುಮಕ್ಕಳ ಶಿಕ್ಷಣದ ಹಿನ್ನಡೆಗೆ ಮತ್ತು ಶಾಲೆ ಬಿಡುವ ಪರಿಸ್ಥಿತಿಗೆ ಕಾರಣಗಳಾಗಿವೆ.

ಮಹಿಳೆಯರ ಶಿಕ್ಷಣಮಟ್ಟವು ಅವರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರ ಮೇಲೆ ನೇರ ಪ್ರಭಾವ ಬೀರುತ್ತದೆ. ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ತಮ್ಮ ಮಗಳಿಗೆ ಹೆಚ್ಚು ಶಿಕ್ಷಣ ನೀಡುತ್ತಾರೆ. ಕಡಿಮೆ ಶಿಕ್ಷಣ ಪಡೆದ, ಅನಕ್ಷರಸ್ಥ ಮಹಿಳೆಯರು ತಮ್ಮ ಮಗಳಿಗೆ ಕಡಿಮೆ ಶಿಕ್ಷಣ ನೀಡಿ ತಮ್ಮ ಮಗನ ಮತ್ತು ಮಗಳ ಶಿಕ್ಷಣದಲ್ಲಿ ಲಿಂಗ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ. ಆದುದರಿಂದ ಅನಕ್ಷರಸ್ಥ ಗ್ರಾಮೀಣ ಮಹಿಳೆಯರಲ್ಲಿ ಮಹಿಳಾ ಶಿಕ್ಷಣದ ಲಾಭದ ಬಗ್ಗೆ ಜಾಗೃತಿ ಮೂಡಿಸಬೇಕಾದ ಅವಶ್ಯಕತೆ ತುಂಬಾ ಇದೆ.

ಮಹಿಳಾ ಶಿಕ್ಷಣದ ಮೇಲೆ ಗ್ರಾಮ ನಗರ ಅಂತರವು ನೇರ ಪ್ರಭಾವವನ್ನು ಬೀರುತ್ತದೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳು ನಗರೀಕರಣ ಮತ್ತು ಆಧುನೀಕರಣ, ಕೈಗಾರಿಕೀಕರಣದ ಪ್ರಭಾವಕ್ಕೆ ಒಳಗಾಗಿವೆ. ಆದುದರಿಂದ ಅಲ್ಲಿನ ಮಹಿಳೆಯರು ಹೆಚ್ಚು ಶಿಕ್ಷಣ ಪಡೆದಿದ್ದಾರೆ.

ಮತ್ತು ಕುಟುಂಬದ ಉತ್ತಮ ಆರ್ಥಿಕ ಪರಿಸ್ಥಿತಿಗಳಿಂದಾಗಿ ಅವರು ತಮ್ಮ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡಿ ಲಾಭದಾಯಕ ಹುದ್ದೆಗಳಿಗೆ ಕಳುಹಿಸುತ್ತಾರೆ. ಅವರಲ್ಲಿ ಸ್ತ್ರೀ ಸಮಾನತಾ ದೃಷ್ಟಿಕೋನ ಕಂಡು ಬರುತ್ತದೆ. ಅವರು ಲಿಂಗ ತಾರತಮ್ಯ ಧೋರಣೆಯನ್ನು ಅನುಸರಿಸುವುದಿಲ್ಲ.

ನಗರದಿಂದ ದೂರವಿರುವ ಗ್ರಾಮಗಳು ನಗರೀಕರಣದ ಪ್ರಭಾವಕ್ಕೆ ಒಳಗಾಗಿಲ್ಲ. ಅವರು ಆಧುನೀಕರಣ, ಕೈಗಾರಿಕೀಕರಣ ಪ್ರಭಾವಕ್ಕೆ ಒಳಗಾಗಿಲ್ಲ. ಅಲ್ಲಿನ ಹೆಚ್ಚು ಮಹಿಳೆಯರು ಸಹ ಹೆಚ್ಚು ಶಿಕ್ಷಣ ಪಡೆದವರಲ್ಲ. ನಗರಕ್ಕೆ ಹತ್ತಿರವಿರುವ ಗ್ರಾಮಗಳಿಗೆ ಹೋಲಿಸಿದರೆ ಹೆಚ್ಚಿನ ಕುಟುಂಬಗಳು ಉತ್ತಮ ಆರ್ಥಿಕ ಸ್ಥಿತಿಗತಿಗಳನ್ನು ಹೊಂದಿಲ್ಲ. ಈ ಗ್ರಾಮಗಳಲ್ಲಿ ಹೆಚ್ಚಿನ ಜನರು ತಮ್ಮ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣವನ್ನು ನೀಡಲು ಒಲವನ್ನು ತೋರಿಲ್ಲ. ಈ ಗ್ರಾಮಗಳ ಮಹಿಳೆಯರು ತಮ್ಮ ಮಗನ ಮತ್ತು ಮಗಳ ಶಿಕ್ಷಣದಲ್ಲಿ ಹೆಚ್ಚು ಲಿಂಗ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ. ಗ್ರಾಮ–ನಗರ ಅಂತರವು ಗ್ರಾಮ ಜನರ ಮನೋಭಾವನೆಯ ಮೇಲೆ ನೇರ ಪ್ರಭಾವ ಬೀರುವ ಅಂಶಗಳಾಗಿದೆ.

ಈ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ಜಾತಿ, ಶಿಕ್ಷಣ ಮತ್ತು ಗ್ರಾಮ–ನಗರ ಅಂತರವು ಮಹಿಳೆಯರ ಮನೋಭಾವನೆಯ ಮೇಲೆ ನೇರ ಪ್ರಭಾವ ಬೀರುವ ಅಂಶಗಳಾಗಿವೆ. ಅದರಲ್ಲಿಯೂ ಹೆಚ್ಚಾಗಿ ಜಾತಿಗಿಂತ ಶಿಕ್ಷಣಮಟ್ಟ ಮತ್ತು ಗ್ರಾಮ–ನಗರ ಅಂತರವು ಹೆಚ್ಚು ಪ್ರಭಾವಿ ಅಂಶಗಳಾಗಿದ್ದು ಮಹಿಳೆಯರ ಮನೋಭಾವನೆಯ ಮೇಲೆ ಪ್ರಭಾವ ಬೀರುತ್ತವೆ.

ಅಧ್ಯಾಯ ನಾಲ್ಕರಲ್ಲಿ ಸಮಂದೂರು ಗ್ರಾಮ ಪಂಚಾಯಿತಿಯ ನಾಲ್ಕು ಗ್ರಾಮಗಳ ತಲಾ ೨೫ ವಕ್ಕಲಿಗ ಮತ್ತು ತಲಾ ೨೫ ಪರಿಶಿಷ್ಟ ಜಾತಿಯ ಮತ್ತು ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ನಾಲ್ಕು ಗ್ರಾಮಗಳ ತಲಾ ೨೫ ವಕ್ಕಲಿಗ ಮತ್ತು ತಲಾ ೨೫ ಪರಿಶಿಷ್ಟ ಜಾತಿಯ ಕುಟುಂಬದ ಹಿರಿಯ ಮಹಿಳೆಯರನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ವಕ್ಕಲಿಗ ಜಾತಿಯು ಪರಿಶಿಷ್ಟ ಜಾತಿಗಿಂತ ಉತ್ತಮ ಆರ್ಥಿಕ, ಸಾಮಾಜಿಕ ಹಿನ್ನೆಲೆಯನ್ನು ಹೊಂದಿದೆ. ಪರಿಶಿಷ್ಟ ಜಾತಿಯು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ವಕ್ಕಲಿಗ ಜಾತಿಗಿಂತ ಹಿಂದುಳಿದಿದೆ. ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳು ಅವರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರುತ್ತದೆಯೇ ಎಂಬುದನ್ನು ಅರಿಯಲು ಎರಡು ಜಾತಿಯ ಮಹಿಳೆಯರನ್ನು ಆಯ್ಕೆ ಮಾಡಲಾಗಿದೆ. ಅದೇ ರೀತಿ ಎರಡು ಪಂಚಾಯಿತಿಯನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವ ಉದ್ದೇಶವೆಂದರೆ, ಹೆಬ್ಬಗೋಡಿ ಪಂಚಾಯಿತಿಯು ಬೆಂಗಳೂರು ನಗರ ಜಿಲ್ಲೆಗೆ ಸೇರಿದ್ದು. ನಗರಕ್ಕೆ ಕೇವಲ ೨೦ ಕಿ.ಮಿ. ದೂರದಲ್ಲಿದೆ. ಆದರೆ ಸಮಂದೂರು ಗ್ರಾಮ ಪಂಚಾಯಿತಿಯು ಬೆಂಗಳೂರು ನಗರದಿಂದ ೪೫ ಕಿ.ಮಿ. ದೂರದಲ್ಲಿದ್ದು ತಮಿಳುನಾಡಿನ ಗಡಿ ಭಾಗದಲ್ಲಿದ್ದು ಹೆಬ್ಬಗೋಡಿ ಪಂಚಾಯಿತಿಗಿಂತ

ಹಿಂದುಳಿದ ಪಂಚಾಯಿತಿಯಾಗಿದೆ. ಈ ಅಧ್ಯಯನದ ಉದ್ದೇಶವು ನಗರ-ಗ್ರಾಮ ಅಂತರ ಮತ್ತು ಗ್ರಾಮಗಳು ನಗರೀಕರಣ ಪ್ರಕ್ರಿಯೆಗೆ ಒಳಗಾದಾಗ ಗ್ರಾಮದ ಮಹಿಳೆಯ ಅಭಿಪ್ರಾಯಗಳು ಭಿನ್ನವಾಗಿ ಮತ್ತು ಸಕಾರಾತ್ಮಕವಾಗಿರುತ್ತವೆಯೆ ಎಂಬುದನ್ನು ಅರಿಯುವುದಾಗಿದೆ.

ಈ ಅಧ್ಯಯನದಲ್ಲಿ ಸಂದರ್ಶಿತರ ಅಭಿಪ್ರಾಯವನ್ನು ಕೇಳಿದಾಗ ಕಂಡು ಬಂದಿರುವ ಅಧ್ಯಯನದ ಅಂಶಗಳೇನೆಂದರೆ, ವಕ್ಕಲಿಗ ಜಾತಿಯ ಮಹಿಳೆಯರ ಉತ್ತಮ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯು ಅವರ ಅಭಿಪ್ರಾಯಗಳ ಮೇಲೆ ಸ್ವಲ್ಪಮಟ್ಟಿನ ಪ್ರಭಾವ ಬೀರುವುದರಿಂದ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ವಿಚಾರದಲ್ಲಿ ಸಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ಆದರೆ ಪರಿಶಿಷ್ಟ ಜಾತಿಯ ಮಹಿಳೆಯರ ಹಿಂದುಳಿದ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯು ಅವರ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ವಿಚಾರದಲ್ಲಿ ಅಡಚಣೆಯಾಗಿರುವುದು ಕಂಡು ಬರುತ್ತದೆ. ಜಾತಿಯು ಸ್ವಲ್ಪ ಮಟ್ಟಿಗೆ ಸಂದರ್ಶಿತರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರಿರುವುದು ಕಂಡು ಬರುತ್ತದೆ.

ಈ ಅಧ್ಯಯನದಲ್ಲಿ ಜಾತಿಗಿಂತ ಹೆಚ್ಚಾಗಿ ಗ್ರಾಮ-ನಗರ ಅಂತರವು ಅಭಿಪ್ರಾಯಗಳ ಮೇಲೆ ಹೆಚ್ಚು ಪ್ರಭಾವ ಬೀರುವ ಅಂಶವಾಗಿದೆ. ನಗರಕ್ಕೆ ಹತ್ತಿರವಿರುವ ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ವಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರೆಲ್ಲರೂ ತಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವ ವಿಚಾರದಲ್ಲಿ ಯಾವುದೇ ಲಿಂಗ ತಾರತಮ್ಯ ಮಾಡದೆ ಶಿಕ್ಷಣ ಕೊಡಿಸಲು ಒಲವನ್ನು ತೋರಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಮಹಿಳೆಯರ ಶಿಕ್ಷಣಮಟ್ಟ ಉತ್ತಮವಾಗಿದೆ. ಆದುದರಿಂದ ಅವರು ಮಹಿಳಾ ಶಿಕ್ಷಣದ ಮಹತ್ವವನ್ನು ಎರಡು ಜಾತಿಯ ಮಹಿಳೆಯರು ಅರಿತಿರುವುದು ಕಂಡು ಬರುತ್ತದೆ. ಮತ್ತು ಅವರು ಮಗನಿಗೆ ಮತ್ತು ಮಗಳಿಗೆ ಶಿಕ್ಷಣ ಕೊಡಿಸುವ ವಿಚಾರದಲ್ಲಿ ಹೆಚ್ಚಿನ ಜನರು ಲಿಂಗ ತಾರತಮ್ಯ ಮಾಡಿಲ್ಲ. ಅವರು ಮಗನಿಗೆ ಶಿಕ್ಷಣ ಕೊಟ್ಟಂತೆಯೇ ಮಗಳಿಗೂ ಶಿಕ್ಷಣ ಕೊಡಿಸುವುದಾಗಿ ತಿಳಿಸಿದ್ದಾರೆ ಮತ್ತು ಮಗಳಿಗೆ ಶಿಕ್ಷಣ ಕೊಡಿಸುವ ಉದ್ದೇಶವನ್ನೂ ಸಹ ಅವಳ ಉತ್ತಮ ಭವಿಷ್ಯಕ್ಕಾಗಿ ಎಂದು ಹೇಳಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳಿಗೆ ಉತ್ತಮ ಸಾರಿಗೆ ಸಂಪರ್ಕಗಳಿರುವುದು ಮತ್ತು ಹತ್ತಿರದಲ್ಲೇ ಶಾಲಾ-ಕಾಲೇಜುಗಳಿರುವುದರಿಂದ ಅವರು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಲು ಅನುಕೂಲವಾಗಿದೆ. ಅವರು ನಗರೀಕರಣದ ಪ್ರಭಾವಕ್ಕೆ ಒಳಗಾಗಿರುವುದರಿಂದ ಸಾಂಪ್ರದಾಯಿಕ ಮನೋಭಾವನೆ ತೊರೆದು ಆಧುನಿಕ ಮನೋಭಾವನೆಯನ್ನು ಹೊಂದಿರುವುದರಿಂದ ಅವರ

ಹೆಣ್ಣುಮಕ್ಕಳನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸುತ್ತಿರುವುದು ಕಂಡುಬರುತ್ತದೆ.

ನಗರಕ್ಕೆ ದೂರವಿರುವ ಸಮಂದೂರು ಗ್ರಾಮ ಪಂಚಾಯಿತಿಯ ಗ್ರಾಮಗಳ ಮಹಿಳಾ ಸಂದರ್ಶಿತರ ಮಟ್ಟ ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ಮಹಿಳೆಯರಿಗಿಂತ ಕೆಳಮಟ್ಟದಲ್ಲಿದೆ. ಸಮಂದೂರು ಗ್ರಾಮ ಪಂಚಾಯಿತಿಯಲ್ಲಿ ಹೆಚ್ಚು ಅನಕ್ಷರಸ್ಥರಿದ್ದು ಅವರು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವ ವಿಚಾರದಲ್ಲಿ ಸಕಾರಾತ್ಮಕ ಭಾವನೆಯನ್ನು ಹೊಂದಿಲ್ಲ. ಈ ಪಂಚಾಯಿತಿಯ ಮಹಿಳಾ ಸಂದರ್ಶಿತರು ತಮ್ಮ ಮಗನ ಮತ್ತು ಮಗಳಿಗೆ ಶಿಕ್ಷಣ ಕೊಡಿಸುವ ವಿಚಾರದಲ್ಲಿ ಹೆಚ್ಚು ಲಿಂಗ ತಾರತಮ್ಯ ಮಾಡಿದ್ದಾರೆ. ಅವರು ಹೆಚ್ಚು ಶಿಕ್ಷಣವನ್ನು ಮಗನಿಗೆ ಕೊಡಿಸುವುದಾಗಿ ಮತ್ತು ಕಡಿಮೆ ಶಿಕ್ಷಣವನ್ನು ಮಗಳಿಗೆ ಕೊಡಿಸುವುದಾಗಿ ತಿಳಿಸಿದ್ದಾರೆ. ಮಗಳಿಗೆ ಶಿಕ್ಷಣ ಕೊಡಿಸುವ ಉದ್ದೇಶಕ್ಕೆ ಬಂದಾಗ ಇನ್ನೂ ಹೆಚ್ಚಿನ ಜನರಿಗೆ ಮಹಿಳಾ ಶಿಕ್ಷಣ ಮಹತ್ವ ಅರಿವಾಗಿಲ್ಲದ ಕಾರಣ ಶಾಲಾ ಶಿಕ್ಷಣ ಸಾಕೆಂದು ಬಹಳ ಜನರು ಅಭಿಪ್ರಾಯ ಪಟ್ಟಿದ್ದಾರೆ. ಮಗಳನ್ನು ಮತ್ತು ಮಗನನ್ನು ದೂರದ ಶಾಲಾ-ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸುವ ವಿಚಾರದಲ್ಲಿಯೂ ಲಿಂಗ ತಾರತಮ್ಯವನ್ನು ಮಾಡಿದ್ದಾರೆ. ಈ ಗ್ರಾಮಗಳಿಗೆ ಸರಿಯಾದ ಸಾರಿಗೆ ಸಂಪರ್ಕವಿಲ್ಲದಿರುವುದು ಮತ್ತು ಶಾಲಾ-ಕಾಲೇಜುಗಳು ಗ್ರಾಮಗಳಿಂದ ದೂರವಿರುವುದರಿಂದ ತಮ್ಮ ಗಂಡು ಮಕ್ಕಳನ್ನು ಮಾತ್ರ ಶಿಕ್ಷಣಕ್ಕೆ ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಎಲ್ಲರೂ ಒಪ್ಪಿಗೆಯನ್ನು ಸೂಚಿಸಿದ್ದಾರೆ. ಈ ಗ್ರಾಮಗಳ ಜನರು ಇನ್ನೂ ಸಂಪ್ರದಾಯಸ್ಥರಾಗಿರುವುದರಿಂದ ತಮ್ಮ ಹೆಣ್ಣು ಮಕ್ಕಳನ್ನು ದೂರದ ಶಾಲಾ-ಕಾಲೇಜುಗಳಿಗೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿಲ್ಲ. ದೂರದ ಊರಿನಲ್ಲಿ ಹೆಣ್ಣುಮಕ್ಕಳಿಗೆ ರಕ್ಷಣೆಯಿದೆ ಎಂಬ ಭಾವನೆ ಅವರಲಿಲ್ಲ. ಈ ರೀತಿ ಲಿಂಗ ತಾರತಮ್ಯ ಭಾವನೆ ವ್ಯಕ್ತಪಡಿಸಿರುವುದು ಕಂಡು ಬರುತ್ತದೆ. ಈ ಗ್ರಾಮಗಳ ಮಹಿಳೆಯರು ಅನಕ್ಷರತೆ ಮತ್ತು ಕಡಿಮೆ ಶಿಕ್ಷಣಮಟ್ಟ ಮತ್ತು ಸಾಂಪ್ರದಾಯಿಕ ಮನೋಭಾವನೆಯಿಂದ ಲಿಂಗತಾರತಮ್ಯ ಮಾಡುತ್ತಾರೆ. ಈ ಗ್ರಾಮಗಳು ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ಗ್ರಾಮಗಳಂತೆ ನಗರೀಕರಣ, ಕೈಗಾರಿಕೀಕರಣದ ಪ್ರಭಾವಕ್ಕೆ ಒಳಗಾಗಿಲ್ಲದಿರುವುದು ಅವರ ಸಾಂಪ್ರದಾಯಿಕ ಮನೋಭಾವನೆಗೆ ಕಾರಣವಾಗಿದೆ.

ಈ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ಮಹಿಳೆಯರ ಶಿಕ್ಷಣಮಟ್ಟ ಸ್ವಲ್ಪ ಮಟ್ಟಿಗೆ ಜಾತಿಯ ಹಿನ್ನೆಲೆ ಮತ್ತು ಹೆಚ್ಚಿನದಾಗಿ ನಗರ ಮತ್ತು ಗ್ರಾಮಗಳ ಅಂತರವು ಮಹಿಳೆಯರ ಮನೋಭಾವನೆಯ ಮೇಲೆ ನೇರ ಪ್ರಭಾವ ಬೀರುವ ಅಂಶಗಳಾಗಿವೆ. ನಗರಕ್ಕೆ ಹತ್ತಿರವಿರುವ ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ಗ್ರಾಮಗಳು ನಗರೀಕರಣ ಮತ್ತು ಕೈಗಾರಿಕೀಕರಣ ಮತ್ತು ಆಧುನೀಕರಣದ ಪ್ರಭಾವಕ್ಕೆ ಒಳಗಾಗಿವೆ. ಈ ಗ್ರಾಮಗಳ ಹೆಚ್ಚಿನ ಜನ ಅಕ್ಷರಸ್ಥೆಯರು ಆಧುನಿಕ

ಮೌಲ್ಯಗಳನ್ನು ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಈ ಗ್ರಾಮಗಳಿಗಿರುವ ಉತ್ತಮ ಸಾರಿಗೆ-ಸಂಪರ್ಕ ಮತ್ತು ಹತ್ತಿರವಿರುವ ಶಾಲಾ-ಕಾಲೇಜುಗಳೂ ಸಹ ಮಹಿಳಾ ಶಿಕ್ಷಣಕ್ಕೆ ಅನುಕೂಲವನ್ನು ಉಂಟುಮಾಡಿವೆ.

ಈ ಅಧ್ಯಯನದಲ್ಲಿ ಕಂಡುಬರುವ ವಿಶೇಷತೆಯೆಂದರೆ ಗ್ರಾಮದ ಭೌಗೋಳಿಕ ನೆಲೆಯು ಸಹ ಮಹಿಳೆಯರ ಶಿಕ್ಷಣದ ಮೇಲೆ ನೇರ ಪ್ರಭಾವ ಬೀರುತ್ತದೆ. ನಗರಗಳಿಗೆ ಹತ್ತಿರವಿರುವ ಗ್ರಾಮಗಳ ಭೌಗೋಳಿಕ ನೆಲಿಯಿಂದಾಗಿ ಆ ಗ್ರಾಮಗಳ ಹೆಣ್ಣು ಮಕ್ಕಳು ಉತ್ತಮ ಶಾಲಾ ಕಾಲೇಜು ಮತ್ತು ಸಾರಿಗೆ ಸಂಪರ್ಕಗಳನ್ನು ಹೊಂದಿದ್ದಾರೆ. ಹೆಣ್ಣು ಮಕ್ಕಳು ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ. ನಗರೀಕರಣದ ಮತ್ತು ಕೈಗಾರಿಕೀಕರಣ ಪ್ರಭಾವ ನಗರಕ್ಕೆ ಹತ್ತಿರವಿರುವ ಗ್ರಾಮಗಳ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಭೌಗೋಳಿಕ ಅಂಶಗಳು ಸಹ ಗ್ರಾಮಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳಲ್ಲಿ ಸುಧಾರಣೆಯನ್ನು ತರುತ್ತವೆ. ಭೌಗೋಳಿಕವಾಗಿ ನಗರದಿಂದ ದೂರವಿರುವ ಗ್ರಾಮಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗಳು ಹೆಚ್ಚು ಸುಧಾರಣೆಯಾಗಿರುವುದಿಲ್ಲ. ಈ ಗ್ರಾಮಗಳಲ್ಲಿ ಬಡತನ, ನಿರುದ್ಯೋಗ, ಅನಕ್ಷರತೆ, ಅಜ್ಞಾನ, ಕಡಿಮೆ ಜೀವನ ಮಟ್ಟವನ್ನು ಕಾಣುತ್ತೇವೆ. ಅವರು ಕೃಷಿ ಮತ್ತು ಕೃಷಿ ಸಂಬಂಧಿತ ವೃತ್ತಿಗಳನ್ನು ಅನುಸರಿಸುತ್ತಾರೆ. ಇವರ ಆರ್ಥಿಕ ಪರಿಸ್ಥಿತಿಗಳು ಉತ್ತಮವಾಗಿರುವುದಿಲ್ಲ.

ಭೌಗೋಳಿಕವಾಗಿ ನಗರಕ್ಕೆ ಹತ್ತಿರವಿರುವ ಗ್ರಾಮಗಳ ಜನರು ಕೃಷಿಯೇತರ ವೃತ್ತಿಗಳನ್ನು ಅನುಸರಿಸುತ್ತಾರೆ. ನಗರೀಕರಣ ಮತ್ತು ಕೈಗಾರಿಕೀಕರಣವು ಜನರಿಗೆ ಉತ್ತಮ ಉದ್ಯೋಗವನ್ನು ಸೃಷ್ಟಿಸಿಕೊಡುತ್ತವೆ. ಆದುದರಿಂದ ಅವರು ಉತ್ತಮ ಶಿಕ್ಷಣ ಪಡೆದು ಲಾಭದಾಯಕ ವ್ಯಕ್ತಿಗಳನ್ನು ಅನುಸರಿಸಲು ಅನುಕೂಲವಾಗುತ್ತದೆ. ಅವರ ಜೀವನ ಮಟ್ಟವನ್ನು ಉತ್ತಮ ಪಡಿಸಿಕೊಳ್ಳಲು, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುನ್ನಡೆಯನ್ನು ಸಾಧಿಸಲು ಸಹಕಾರಿಯಾಗಿದೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ.

ಗ್ರಾಮದ ಭೌಗೋಳಿಕ ನೆಲೆಯು ಗ್ರಾಮದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳ ಮೇಲೆ ನೇರ ಪ್ರಭಾವ ಬೀರುವ ಅಂಶವಾಗಿದ್ದು, ಕುಟುಂಬದ ಸದಸ್ಯರ ಮತ್ತು ಮಹಿಳೆಯ ಮನೋಭಾವನೆಯ ಮೇಲೆ ನೇರ ಪ್ರಭಾವ ಬೀರುತ್ತವೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳ ಮಹಿಳೆಯರು ತಮ್ಮ ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಯಾವುದೇ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಿಲ್ಲ. ಅವರು ಗಂಡು ಮಕ್ಕಳ ಶಿಕ್ಷಣದಷ್ಟೇ ಪ್ರಾಮುಖ್ಯತೆಯನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕೂ ನೀಡುತ್ತಿರುವುದು ಕಂಡುಬರುತ್ತದೆ.

ನಗರದಿಂದ ದೂರವಿರುವ ಗ್ರಾಮಗಳ ಮಹಿಳೆಯರು ತಮ್ಮ ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಶಿಕ್ಷಣದಲ್ಲಿ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ. ಗಂಡು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಹಾಗು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಕಡಿಮೆ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಈ ಅಧ್ಯಯನದಲ್ಲಿ ಕಂಡುಬರುವುದೇನೆಂದರೆ ಗ್ರಾಮಗಳ ಭೌಗೋಳಿಕ ನೆಲೆಯು ಮಹಿಳೆಯರ ಮನೋಭಾವನೆಯ ಮೇಲೆ ನೇರ ಪ್ರಭಾವ ಬೀರುವ ಅಂಶವಾಗಿದೆ.

ನಗರದಿಂದ ದೂರವಿರುವ ಸಮಂದೂರು ಗ್ರಾಮ ಪಂಚಾಯಿತಿಯ ಗ್ರಾಮಗಳು ನಗರೀಕರಣ, ಕೈಗಾರಿಕೀಕರಣ ಮತ್ತು ಆಧುನೀಕರಣದ ಪ್ರಭಾವಕ್ಕೆ ಒಳಗಾಗಿಲ್ಲ. ಈ ಗ್ರಾಮಗಳ ಹೆಚ್ಚಿನ ಜನ ಅನಕ್ಷರಸ್ಥರು ಮತ್ತು ಸಾಂಪ್ರದಾಯಿಕ ಮನೋಭಾವನೆಯನ್ನು ಹೊಂದಿದ್ದಾರೆ. ಈ ಗ್ರಾಮಗಳಿಗೆ ಉತ್ತಮ ಸಾರಿಗೆ-ಸಂಪರ್ಕಗಳಿಲ್ಲದಿರುವುದು ಸಹ ಮಹಿಳಾ ಶಿಕ್ಷಣಕ್ಕೆ ತೊಂದರೆಯನ್ನುಂಟು ಮಾಡಿರುವುದು ಈ ಅಧ್ಯಯನದಿಂದ ತಿಳಿದು ಬರುತ್ತದೆ.

ಕೊನೆ ಟಿಪ್ಪಣಿಗಳು

೧. ತಿಲಕ್, ಜೆ.ಬಿ.ಜೆ. (೨೦೦೦), "ಡಿಟರ್ಮಿನೇಷನ್ಸ್ ಆಫ್ ಹೌಸ್ ಹೋಲ್ಡ್ ಎಕ್ಸ್‌ಪೆಂಡಿಚರ್ ಆನ್ ಎಜುಕೇಶನ್ ಇನ್ ರೂರಲ್ ಇಂಡಿಯ: ಎ ಸ್ಟಡಿ ಬೇಸ್ಡ್ ಆನ್ ದಿ ಎ.ಸಿ.ಇ.ಆರ್.ಟಿ ಸರ್ವೆ ಆನ್ ಹ್ಯೂಮನ್ ಡೆವಲಪ್‌ಮೆಂಟ್ ಇನ್ ಇಂಡಿಯ", ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಷನ್, ನ್ಯೂ ಡೆಲ್ಲಿ.

೨. ಎಂ. ಸರಸ್ವತಮ್ಮ (೧೯೯೪), "ಎ ಸೋಷಿಯಲಾಜಿಕಲ್ ಸ್ಟಡಿ ಆಫ್ ಆಟಿಟ್ಯೂಡ್ ಆಫ್ ರೂರಲ್ ವುಮೆನ್ ಟು ಎಜುಕೇಷನ್ ಅಂಡ್ ಆಕ್ಯುಪೇಷನ್", ಎಂ.ಫಿಲ್. ಅಧ್ಯಯನ, ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩. ಡಾ. ವಿಠಲರಾವ್ ಟಿ. ಗಾಯಕ್ವಾಡ್(೨೦೦೯), "ಭಾರತೀಯ ಸ್ತ್ರೀ ಜೀವನ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ.೧೨೧.

೪. ಜಯರಾಮ್, ಎನ್, "ಎಜುಕೇಷನ್ ಅಂಡ್ ಸೋಷಿಯಲ್ ಸ್ಟ್ರಕ್ಚರ್", ಪಿಎಚ್.ಡಿ. ಪ್ರೌಢ ಪ್ರಬಂಧ, ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೬, ಪು.೪೫೫.

೫. ಡ್ರೀಜ್ ಜೇನ್ ಅಂಡ್ ಕಿಂಗ್‌ಡಂ, ಗೀತಾ ಗಾಂಧಿ (೨೦೦೧), *ಸ್ಕೂಲ್ ಪಾರ್ಟಿಸಿಪೇಷನ್ ಇನ್ ರೂರಲ್ ಇಂಡಿಯ*, "ರೆವ್ಯೂ ಆಫ್ ಡೆವೆಲಪ್‌ಮೆಂಟ್ ಎಕನಾಮಿಕ್ಸ್", ೫.

೬. ಪ್ರೋಬ್ (೧೯೯೯), "ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜುಕೇಷನ್", ಆಕ್ಸಫರ್ಡ್ ಯೂನಿರ್ವರ್‌ಸಿಟಿ ಪ್ರೆಸ್, ನ್ಯೂ ಡೆಲ್ಲಿ.

೭. ಪ್ರಮೀಳಾ ಕಪೂರ್, "ದಿ ಚೇಂಜಿಗ್ ಸ್ಟೇಟಸ್ ಆಫ್ ವರ್ಕಿಂಗ್ ವುಮೆನ್ ಇನ್ ಇಂಡಿಯಾ", ವಿಕಾಸ್ ಪಬ್ಲಿಷಿಂಗ್ ಹೌಸ್, ಡೆಲ್ಲಿ, ೧೯೭೦, ಪು.೩೩೧.

೮. ಟಿ.ಆರ್. ಚಂದ್ರಶೇಖರ(೨೦೦೨), *ಸಾಕ್ಷರತೆಯ ಲಿಂಗಸಂಬಂಧಿ ಆಯಾಮಗಳು: ಕರ್ನಾಟಕದಲ್ಲಿ ಮಹಿಳಾ ಸಾಕ್ಷರತೆ ಸ್ವರೂಪ,* "ಮಹಿಳಾ ಅಧ್ಯಯನ", ಸಂಪುಟ, ೯, ಸಂಚಿಕೆ ೨, ಜುಲೈ–ಡಿಸೆಂಬರ್, ೨೦೦೭, ಪು.೯೪–೯೫.

೯. ಜಯರಾಮ್, ಎನ್, (೧೯೯೦), "ಸೋಷಿಯಾಲಜಿ ಆಫ್ ಎಜುಕೇಷನ್ ಇನ್ ಇಂಡಿಯಾ", ರಾವತ್ ಪಬ್ಲಿಕೇಷನ್, ೧೯೯೦.

೧೦. ಸೇತಿ ರಾಜ್ ಮೋಹಿನಿ (೧೯೭೬), "ಮಾಡ್ರನೈಜೇಷನ್ ಆಫ್ ವರ್ಕಿಂಗ್ ವುಮೆನ್ ಇನ್ ಡೆವೆಲಪಿಂಗ್ ಸೊಸೈಟೀಸ್", ನ್ಯೂ ಡೆಲ್ಲಿ, ನ್ಯಾಷನಲ್ ಪಬ್ಲಿಕೇಷನ್ ಹೌಸ್, ಪು.೪೭

೧೧. ಎಚ್.ಡಿ. ಲಕ್ಷ್ಮೀನಾರಾಯಣ (೧೯೯೮), "ನಗರ ಸಮಾಜಶಾಸ್ತ್ರ", ಬೆಂಗಳೂರು, ಚಂದ್ರು ಪ್ರಕಾಶನ, ಪು.೧೨೦.

ಅಧ್ಯಾಯ ಐದು

ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು: ಸಾಮಾಜಿಕ ನೆಲೆಗಳಲ್ಲಿ

ಅಧ್ಯಾಯ ಐದು

ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು: ಸಾಮಾಜಿಕ ನೆಲೆಗಳಲ್ಲಿ

ಶಿಕ್ಷಣ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಮಾಜದ ಪ್ರಮುಖ ಭಾಗವಾಗಿ ಶಿಕ್ಷಣ ಕಂಡುಬರುತ್ತದೆ. ಶಿಕ್ಷಣ ಪಡೆದ ವ್ಯಕ್ತಿ ಪ್ರಬುದ್ಧವಾಗಿ ಬೆಳೆದು ಸಮಾಜದ ಅಭಿವೃದ್ಧಿಗೆ ನೆರವಾಗಬಲ್ಲನು. ಶಿಕ್ಷಣ ಮತ್ತು ಸಮಾಜದ ನಡುವೆ ಅನ್ಯೋನ್ಯ ಸಂಬಂಧವನ್ನು ಕಾಣಬಹುದು. ಬದಲಾದ ಸಮಾಜಕ್ಕೆ ತಕ್ಕಂತೆ ಶಿಕ್ಷಣ ನೀಡಿಕೆಯಲ್ಲಿಯೂ ಬದಲಾವಣೆಯಾಗುವುದು ಸಹಜ. ಸಮಾಜದಲ್ಲಿ ಬೇರೂರಿರುವ ಮೂಢನಂಬಿಕೆ ಅಂಧ ಶ್ರದ್ಧೆ, ಗೊಡ್ಡು ಸಂಪ್ರದಾಯ ಇತ್ಯಾದಿಗಳನ್ನು ಶಿಕ್ಷಣ ಹೋಗಲಾಡಿಸುವುದು, ಸಭ್ಯನಾಗರಿಕ ಸಮಾಜ ನಿರ್ಮಾಣಕ್ಕೆ ಶಿಕ್ಷಣವೇ ಬುನಾದಿ.

ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆಯ ದೃಷ್ಟಿಯಿಂದ ಶಿಕ್ಷಣದ ಪಾತ್ರ ತುಂಬ ಮಹತ್ವದ್ದಾಗಿದೆ. ಸಾಮಾಜಿಕ ಮತ್ತು ಆರ್ಥಿಕ ರಚನೆಯಲ್ಲಿ ಮೇಲ್ಮುಖಿ ಚಲನೆಯು ಶಿಕ್ಷಣದಿಂದ ಸಾಧ್ಯವೆಂದು ಹೇಳಲಾಗುತ್ತಿದೆ. ಅಭಿವೃದ್ಧಿ ಅರ್ಥಶಾಸ್ತ್ರದಲ್ಲಿ ಶಿಕ್ಷಣವನ್ನು 'ಮಾನವ ಬಂಡವಾಳ'ವೆಂದು ಪರಿಗಣಿಸಲಾಗಿದೆ. ಅದರ ಮೇಲೆ ತೊಡಗಿಸುವ ಬಂಡವಾಳವನ್ನು ಹೂಡಿಕೆಯೆಂದು ಪರಿಭಾವಿಸಿಕೊಳ್ಳಲಾಗಿದೆ."[೧]

ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ, ಲಿಂಗಭೇದವನ್ನು ನಿಷೇಧಿಸಿತಾದರೂ ವಾಸ್ತವ್ಯದಲ್ಲಿ ಮಹಿಳೆಯ ಶಿಕ್ಷಣ ನಾವೆಣಿಸಿದಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ಭಾರತೀಯ ಸಮಾಜವು ಮೂಲತ: ಪಿತೃಪ್ರಧಾನ ಸಮಾಜವಾಗಿರುವುದರಿಂದ ಹಿಂದಿನಿಂದಲೂ ರೂಢಿಗತವಾಗಿ ಬಂದಿರುವ ಪುರುಷಯಜಮಾನಿಕೆ ಮಹಿಳೆಯ ಶಿಕ್ಷಣದ ಹಿನ್ನಡೆಗೆ ಕಾರಣವಾಗಿದೆ. ಪಿತೃಪ್ರಧಾನ ಸಮಾಜದಲ್ಲಿ ಗಂಡುಮಕ್ಕಳಿಗೆ ಇರುವ ವಿಪುಲ ಶೈಕ್ಷಣಿಕ ಸೌಲಭ್ಯಗಳು ಹೆಣ್ಣುಮಕ್ಕಳಿಗೆ ಅದರಲ್ಲೂ ಗ್ರಾಮೀಣ ಹೆಣ್ಣುಮಕ್ಕಳಿಗೆ ಸಿಗುವುದಿಲ್ಲ. ಗಂಡುಮಕ್ಕಳು ಹೆಣ್ಣುಮಕ್ಕಳಿಗಿಂತ ಶ್ರೇಷ್ಠ, ವಂಶದ ಜ್ಯೋತಿ ಎಂದು ಭಾವಿಸುವ ಮೂಲಕ ವರಿಷ್ಠ ಸಾಮಾಜಿಕ ದೃಷ್ಟಿಕೋನವು ರೂಪು

ಗೊಂಡಿರುವುದನ್ನು ಕಾಣಬಹುದಾಗಿದೆ. ಹೆಣ್ಣುಮಕ್ಕಳಿಗೆ ಶಿಕ್ಷಣವಿಲ್ಲದಿದ್ದರೂ ನಡೆಯುತ್ತದೆ. ಅವಳ ಶಿಕ್ಷಣಕ್ಕೆ ಮಾಡುವ ಖರ್ಚು ವ್ಯರ್ಥ ಎಂಬ ಭಾವನೆ ಇದೆ. ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡಿದರೆ ಅವಳಿಗಿಂತ ಹೆಚ್ಚು ವಿದ್ಯಾವಂತನಾದ ವರನನ್ನು ಹುಡುಕಬೇಕು ಮತ್ತು ಹೆಚ್ಚು ವರದಕ್ಷಿಣೆ ಕೊಡಬೇಕು, ಹೆಣ್ಣು ಪರರ ಸ್ವತ್ತು ಎಂಬ ಭಾವನೆಗಳು ಹೆಣ್ಣುಮಕ್ಕಳ ಶಿಕ್ಷಣವನ್ನು ಉದಾಸೀನಮಾಡುತ್ತ ಬಂದಿವೆ. ಔಪಚಾರಿಕ ಶಿಕ್ಷಣ ಕೊಡುವ ಸಂದರ್ಭದಲ್ಲಿ ಗಂಡುಮಕ್ಕಳಿಗೆ ಕೊಡುವಷ್ಟು ಸವಲತ್ತು ಹೆಣ್ಣುಮಕ್ಕಳಿಗೆ ಸಿಗುವುದಿಲ್ಲ. ಪಿತೃಪ್ರಧಾನ ಕುಟುಂಬದಲ್ಲಿ ಹುಟ್ಟಿದ ಗಂಡು ಮಗನನ್ನು ಉತ್ತಮ ಶಾಲೆಗೆ ದಾಖಲಿಸಿದರೆ ಹೆಣ್ಣುಮಕ್ಕಳನ್ನು ಸೌಲಭ್ಯಗಳೇ ಇಲ್ಲದ ಶಾಲೆಗೆ ಸೇರಿಸುತ್ತಾರೆ. ಗಂಡು ಮಗುವಿಗೆ ತೋರಿಸಿದಷ್ಟು ಶಿಕ್ಷಣದ ಒಲವನ್ನು ಹೆಣ್ಣುಮಕ್ಕಳಿಗೆ ಅದರಲ್ಲೂ ಗ್ರಾಮೀಣ ಸಮಾಜದಲ್ಲಿ ತೋರಿಸುವುದಿಲ್ಲ. ಹೆಣ್ಣುಮಗುವಿನ ಶಿಕ್ಷಣದ ಬಗ್ಗೆ ತಾತ್ಸಾರ ಮನೋಭಾವನೆಯನ್ನು ಹೊಂದಿರುತ್ತಾರೆ.

ಸಾಮಾಜಿಕ ಸಂಪರ್ಕ ಮತ್ತು ಸಂಬಂಧಗಳು ಲಿಖಿತ ಮಾಧ್ಯಮದ ಮೂಲಕ ಸಂಭವಿಸುವುದರಿಂದ ಸಮಾಜದಲ್ಲಿ ಸಾಕ್ಷರತೆಯು ಆತ್ಮರಕ್ಷಣೆಯ ಸಾಧನವಾಗಿದೆ. ಅಕ್ಷರ ಜ್ಞಾನವಿಲ್ಲದವರು ತಮ್ಮನ್ನು ತಾವು ನ್ಯಾಯಾಲಯದ ಕಟಕಟೆಯಿಂದ ರಕ್ಷಿಸಿಕೊಳ್ಳಲಾರರು. ಬ್ಯಾಂಕಿನಿಂದ ಸಾಲ ಎತ್ತಲಾರರು, ತಮ್ಮ ವಾರಸುದಾರಿಕೆ ಪಡೆದುಕೊಳ್ಳಲಾರರು, ಉದ್ಯೋಗ ಮಾರುಕಟ್ಟೆಯಲ್ಲಿ ಪೈಪೋಟಿ ಮಾಡಲಾರರು, ಸರಿಯಾದ ಬಸ್ಸು ಏರಲಾರರು, ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲಾರರು. ಒಟ್ಟಾರೆ ಆಧುನಿಕ ಆರ್ಥಿಕತೆ ಮತ್ತು ಸಮಾಜದಲ್ಲಿ ಯಶಸ್ವಿಯಾಗಿ ಸಹ ಪಾಲುದಾರರಾಗಲಾರರು."

"ಮಹಿಳಾ ಸಾಕ್ಷರತೆಯನ್ನು ಕುರಿತಂತೆ ಜನರಲ್ಲಿರುವ ಅಭಿಪ್ರಾಯಗಳು ಭಿನ್ನವಾಗಿದೆ. ಮಹಿಳಾ ಶಿಕ್ಷಣವು ಅವಳ ಸಾಂಪ್ರದಾಯಿಕ ಮತ್ತು ಮನೆವಾರ್ತೆ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲೇಬೇಕೆಂದು ಅಭಿಪ್ರಾಯಪಡುತ್ತಾರೆ. ಅಂಕಣಕಾರ ಪ್ರತಾಪಸಿಂಹ ಎಂಬುವವರು ಬರೆದ "ಹುಚ್ಚು ಕುದುರೆಯಾಗಬೇಡ: ಹಾರುವ ಹಕ್ಕಿಯಾಗು" ಎಂಬ ಲೇಖನದಲ್ಲಿ (ದಿನಾಂಕ ೧೫ನೇ ಮಾರ್ಚ್, ೨೦೦೮, ವಿಜಯ ಕರ್ನಾಟಕ, ಪು.೬) ಈ ಮಾತು ಬರೆದಿದ್ದಾರೆ. "ಮಕ್ಕಳಿಗೆ ಮತ್ತು ಗಂಡನಿಗೆ ಒಳ್ಳೆಯ ಸಂಸ್ಕಾರ, ವಿದ್ಯೆ ಕೊಡಬೇಕಾದವಳು ಅಮ್ಮನಾದ ಹೆಣ್ಣು. ಒಂದು ವೇಳೆ ಅವಳು ಹಾಗೆ ಮಾಡದಿದ್ದರೆ ಅದು ಅವಳ ಕರ್ತವ್ಯಚ್ಯುತಿಯಾಗುತ್ತದೆ. ಮಕ್ಕಳು, ಕುಟುಂಬ, ಗಂಡ ಅವರ ಸೇವೆ ಮಾಡುವುದು ಹೆಂಡತಿಯ ಜವಾಬ್ದಾರಿಯೆಂಬ ವಿಚಾರದಲ್ಲಿ ನಂಬಿಕೆಯಿಟ್ಟುಕೊಂಡಿರುವ ಜನರು ಇಂದಿಗೂ ಇದ್ದಾರೆಂಬುದಕ್ಕೆ ಮೇಲಿನ ಅಂಕಣಕಾರರ ಲೇಖನವು ಒಂದು ಉತ್ತಮ ನಿದರ್ಶನವಾಗಿದೆ. ಸಮಾಜದಲ್ಲಿ ಮಹಿಳೆಯರು ಅನೇಕ ಬಗೆಯ

ಅಸ್ವಾತಂತ್ರ್ಯದಿಂದ ನರಳುತ್ತಿದ್ದಾರೆ. ಅವರ ಧಾರಣಾ ಸಾಮರ್ಥ್ಯವು ಅತ್ಯಂತ ಕೆಳಮಟ್ಟದಲ್ಲಿದೆ. ಮಹಿಳೆಯರು ತಾವೇನಾಗಬೇಕೆಂದಿದ್ದಾರೋ ಅದರಂತಾಗುವುದು ಮತ್ತು ತಾವು ಹೇಗೆ ಬದುಕ ಬೇಕೆಂದಿದ್ದಾರೋ ಅದರಂತೆ ಬದುಕುವುದು ನಮ್ಮ ಸಮಾಜದ ಸಂದರ್ಭದಲ್ಲಿ ಸಾಧ್ಯವಿಲ್ಲ ವಾಗಿದೆ. ಅವರ ಧಾರಣ ಸಾಮರ್ಥ್ಯವನ್ನು ನಿರ್ಧರಿಸುವ ಬಹುಮುಖ್ಯವಾದ ಸಂಗತಿಯೆಂದರೆ ಅವರ ಸಾಕ್ಷರತೆಯ ಮಟ್ಟ ಮತ್ತು ಅವರ ಶಿಕ್ಷಣವಾಗಿದೆ."

ಹೆಣ್ಣುಮಕ್ಕಳಿಗೆ ಕುಟುಂಬದಲ್ಲಿ ಯಾವಾಗಲೂ ಗೌಣ ಸ್ಥಾನವನ್ನು ಕೊಡುತ್ತಾ ಬರಲಾಗಿದೆ. ಅವಳನ್ನು ಪರರ ಧನವೆಂದು ತಿಳಿದುಕೊಂಡು ಒಲೆ ಮತ್ತು ಮಕ್ಕಳು ಇವಷ್ಟೇ ಅವಳ ಕಾರ್ಯಕ್ಷೇತ್ರವೆಂದು ಒಪ್ಪಿಸಲಾಗಿರುತ್ತದೆ. "ಹಾಗಾಗಿ ಮನೆಯ ಕೆಲಸ ಮತ್ತು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು ಇಂತಹ ಪಾರಂಪರಿಕ ಕೆಲಸಗಳನ್ನು ಅವರ ಮೇಲೆ ಪೂರ್ಣವಾಗಿ ಒಪ್ಪಿಸಿರುವ ಕಾರಣ ಅವರ ಶಿಕ್ಷಣದ ಬಗ್ಗೆ ದುರ್ಲಕ್ಷ್ಯವನ್ನು ತೋರಿಸಲಾಗಿರುತ್ತದೆ. ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳ ಬಗ್ಗೆ ಅವರ ಶಾಲೆಯ ಬಗ್ಗೆ ದುರ್ಲಕ್ಷ್ಯವನ್ನು ತೋರಿಸುತ್ತಿರುವುದು ಒಂದು ಪಾರಂಪರಿಕ ಶಾಪದ ಹಾಗೆಯೇ ಆಗಿದೆ."

ಈ ಅಧ್ಯಾಯದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಮಾಜದ ಭಾವನೆಯೇನು ಎಂಬುದನ್ನು ಅರ್ಥಮಾಡಿಕೊಳ್ಳುವುದಾಗಿದೆ.

ಕುಟುಂಬವನ್ನು ಹೊರತುಪಡಿಸಿ ಸಮಾಜದ ಜನರು ಗಂಡು ಮತ್ತು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಲಿಂಗತಾರತಮ್ಯದೋರಣೆಯನ್ನು ಹೊಂದಿದ್ದಾರೆಯೇ ಎಂಬುದನ್ನು ಅರ್ಥ ಮಾಡಿಕೊಳ್ಳುವುದು. ಸಮಾಜದ ಜನರಲ್ಲಿ ಪಿತೃಪ್ರಧಾನ ಮೌಲ್ಯಗಳ ಪ್ರಭಾವವೇನೆಂಬುದನ್ನು ತಿಳಿದುಕೊಳ್ಳಲು ಗ್ರಾಮಗಳ ಹಿರಿಯ ನಾಗರಿಕರನ್ನು ಸಂದರ್ಶನಕ್ಕ ಒಳಪಡಿಸಲಾಗಿದೆ.

ನಗರದಿಂದ ದೂರವಿರುವ ಗ್ರಾಮಪಂಚಾಯಿತಿಯ ನಾಲ್ಕು ಗ್ರಾಮಗಳಲ್ಲಿ ತಲಾ ೨೫ ಅಂದರೆ ಒಟ್ಟು ೧೦೦ ಹಿರಿಯನಾಗರಿಕರನ್ನು ಸಂದರ್ಶನ ಮಾಡಲಾಗಿದೆ.

ಅಂತೆಯೇ ನಗರಕ್ಕೆ ಹತ್ತಿರವಿರುವ ಗ್ರಾಮಪಂಚಾಯಿತಿಯ ನಾಲ್ಕು ಗ್ರಾಮಗಳಲ್ಲಿ ತಲಾ ೨೫ ಅಂದರೆ ಒಟ್ಟು ೧೦೦ ಹಿರಿಯನಾಗರಿಕರನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ.

ನಗರ-ಗ್ರಾಮ ಅಂತರವು ನಾಗರಿಕರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರುತ್ತದೆಯೇ ಎಂಬುದನ್ನು ಅರಿಯುವುದಾಗಿದೆ. ಒಟ್ಟು ಈ ಅಧ್ಯಾಯದ ಉದ್ದೇಶ ಸಮಾಜದ ಜನರು ಶಿಕ್ಷಣ ನೀಡುವಲ್ಲಿ ಲಿಂಗತಾರತಮ್ಯ ದೋರಣೆಯನ್ನು ಅನುಸರಿಸುತ್ತಾರೆಯೇ ಎಂಬುದನ್ನು ಅರಿಯುವುದಾಗಿದೆ.

ಆನೇಕಲ್ ತಾಲ್ಲೂಕು ಮೊದಲು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿತ್ತು. ಈಗ ಬೆಂಗಳೂರು ಜಿಲ್ಲೆಗೆ ಸೇರಿರುತ್ತದೆ. ಅಧ್ಯಯನದ ಕ್ಷೇತ್ರ ಆನೇಕಲ್ ತಾಲ್ಲೂಕಾಗಿದೆ.

ಆನೇಕಲ್ ತಾಲ್ಲೂಕು

ಜನಸಂಖ್ಯೆ ೨೦೧೧ ಜನಗಣತಿಯ ಪ್ರಕಾರ

ಒಟ್ಟು	ಗಂಡು	ಹೆಣ್ಣು
೫,೭೧,೫೭೫	೨,೮೦,೦೦೬	೨,೩೫,೫೬೯

ಲಿಂಗಾನುಪಾತ

ಪ್ರತಿ ೧೦೦೦ ಪುರುಷರಿಗೆ ಇರುವ ಸ್ತ್ರೀಯರ ಸಂಖ್ಯೆ	
೨೦೦೧	೨೦೧೧
೯೪೦	೮೩೫

ಆಧಾರ: ೨೦೧೧ ಜನಗಣತಿ.

ಆನೇಕಲ್ ಜನಸಂಖ್ಯೆಯಲ್ಲಿ ಹೆಚ್ಚಿನ ಸಂಖ್ಯೆ ಪುರುಷರಿದ್ದಾರೆ ಮತ್ತು ಲಿಂಗಾನುಪಾತವನ್ನು ಗಮನಿಸಿದಾಗ ೨೦೦೧ರಲ್ಲಿ ಪ್ರತಿ ೧೦೦೦ ಪುರುಷರಿಗೆ ೯೪೦ ಸ್ತ್ರೀಯರಿದ್ದರು ಹಾಗೂ ೨೦೧೧ರಲ್ಲಿ ಪ್ರತಿ ೧೦೦೦ ಪುರುಷರಿಗೆ ೮೩೫ ಸ್ತ್ರೀಯರಿರುವುದು ಕಂಡು ಬರುತ್ತದೆ. ಹತ್ತು ವರ್ಷಗಳ ಅಂತರದಲ್ಲಿ ಪ್ರತಿ ಸಾವಿರ ಪುರುಷರಿಗೆ ೧೦೫ ವ್ಯತ್ಯಾಸ ಕಂಡು ಬರುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ, ಹೆಣ್ಣು ಶಿಶು ಗರ್ಭಪಾತಗಳು ಹೆಚ್ಚಾಗಿರುವುದು ತಿಳಿದು ಬರುತ್ತದೆ. ಹೆಣ್ಣು ಮಕ್ಕಳನ್ನು ಹೊರೆಯೆಂದು ಭಾವಿಸಿರುವುದು. ಹೆಣ್ಣು ಮಕ್ಕಳು ಹೆಚ್ಚಾದ ಪಕ್ಷದಲ್ಲಿ ತಂದೆ ತಾಯಿಯರಿಗೆ ಹೆಚ್ಚು ಖರ್ಚು ಬರುತ್ತದೆಂಬ ತಪ್ಪು ಕಲ್ಪನೆಯಿರುವುದರಿಂದ ಅದರಲ್ಲೂ ಆನೇಕಲ್ ಪಟ್ಟಣದಲ್ಲಿ ಗರ್ಭದಲ್ಲಿರುವ ಮಗು ಹೆಣ್ಣು ಅಥವಾ ಗಂಡು ಎಂದು ಕಾನೂನು ಬಾಹಿರವಾಗಿ ತಿಳಿದುಕೊಂಡು, ಹೆಣ್ಣು ಗರ್ಭಪಾತ ಮಾಡಿಸಿಕೊಳ್ಳುತ್ತಿರುವುದು ಕಂಡು ಬರುತ್ತದೆ.

ಆನೇಕಲ್ ತಾಲ್ಲೂಕಿನ ಸಾಕ್ಷರತೆ ಪ್ರಮಾಣ ಮತ್ತು ಲಿಂಗ ವರ್ಗೀಕರಣ

ವರ್ಷ		೨೦೦೧	೨೦೧೧	ವ್ಯತ್ಯಾಸ
ಸಾಕ್ಷರತೆಯ ಪ್ರಮಾಣ	ಗಂಡು	೭೬.೨೯	೮೫.೯೪	೯.೬೫
	ಹೆಣ್ಣು	೫೭.೯೫	೭೩.೪೬	೧೫.೫೧
	ಒಟ್ಟು	೬೭.೧೨	೭೯.೭	೧೨.೫೮

ಆಧಾರ: ೨೦೧೧ ಜನಗಣತಿ.

೨೦೦೧ರ ಜನಗಣತಿಯಲ್ಲಿ ಪುರುಷ ಸಾಕ್ಷರತೆಯ ಪ್ರಮಾಣ ೭೬.೨೯%ರಷ್ಟಿತ್ತು. ಸ್ತ್ರೀ ಸಾಕ್ಷರತೆಯ ಪ್ರಮಾಣ ೫೭.೯೫% ರಷ್ಟಿತ್ತು. ಅಂದರೆ ಸ್ತ್ರೀ ಮತ್ತು ಪುರುಷ ಸಾಕ್ಷರತೆಯ ಪ್ರಮಾಣದ ವ್ಯತ್ಯಾಸ ಶೇ.೧೮.೩೪ ಆಗಿತ್ತು. ಅಂದರೆ ಅಗಾಧ ಅಂತರವನ್ನು ಗಮನಿಸಿದಾಗ ಸ್ತ್ರೀ ಸ್ಥಾನಮಾನದ ಮಟ್ಟ ೨೦೧೧ರ ಜನಗಣತಿಯಲ್ಲಿ ಪುರುಷ ಸಾಕ್ಷರತೆಯ ಪ್ರಮಾಣ ಶೇ.೮೫.೯೪ ಆಗಿದೆ. ಸ್ತ್ರೀ ಸಾಕ್ಷರತೆಯ ಪ್ರಮಾಣ ಶೇ.೭೩.೪೬ರಷ್ಟಿದೆ. ಅಂದರೆ ಸ್ತ್ರೀ ಪುರುಷ ಸಾಕ್ಷರತೆಯ ವ್ಯತ್ಯಾಸ ಶೇ.೧೨.೪೮ರಷ್ಟಿದೆ.

೨೦೦೧ರ ಜನಗಣತಿಗೆ ಹೋಲಿಸಿದಾಗ ಸ್ತ್ರೀ–ಪುರುಷ ಸಾಕ್ಷರತೆಯ ವ್ಯತ್ಯಾಸ ೨೦೧೧ರಲ್ಲಿ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಕೇವಲ ಶೇ.೫.೮೬ರಷ್ಟು ಮಾತ್ರ ಹತ್ತು ವರ್ಷಗಳಲ್ಲಿ ಕಂಡುಬರುತ್ತದೆ. ಪಟ್ಟಿಯನ್ನು ಗಮನಿಸಿದಾಗ ತಿಳಿದುಬರುವುದೇನೆಂದರೆ ಮಹಿಳಾ ಶಿಕ್ಷಣದ ಬಗ್ಗೆ ಜಾಗೃತಿ ಇನ್ನೂ ಹೆಚ್ಚಾಗಬೇಕಾಗಿದೆ. ಮಹಿಳಾ ಶಿಕ್ಷಣಕ್ಕಿಂತ ಪುರುಷ ಅಕ್ಷರತೆ ಪ್ರಮಾಣ ೧೨.೪೮ ರಷ್ಟು ಹೆಚ್ಚಳ ೨೦೧೧ ಜನಗಣತಿಯಲ್ಲಿ ಕಂಡುಬರುತ್ತದೆ.

೨೦೧೧ರ ಜನಗಣತಿಯಲ್ಲಿ ಅನೇಕಲ್ ತಾಲ್ಲೂಕಿನ ಸಮಂದೂರು ಮತ್ತು ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ಸಾಕ್ಷರತೆಯ ಪ್ರಮಾಣ

ಪಂಚಾಯಿತಿ	**ಪುರುಷರು**		**ಮಹಿಳೆಯರು**	
	ಅಕ್ಷರಸ್ಥರು	**ಅನಕ್ಷರಸ್ಥರು**	**ಅಕ್ಷರಸ್ಥರು**	**ಅನಕ್ಷರಸ್ಥರು**
ಸಮಂದೂರು ಗ್ರಾಮ ಪಂಚಾಯಿತಿ	೭೩.೩೦	೨೮.೭೦	೫೪.೩೮	೪೫.೬೨
ಹೆಬ್ಬಗೋಡಿ ಗ್ರಾಮ ಪಂಚಾಯಿತಿ	೮೫.೮	೧೪.೨	೭೪.೨೬	೨೫.೭೪

೨೦೧೧ರ ಜನಗಣತಿಯನ್ನು ಗಮನಿಸಿದಾಗ ಸಮಂದೂರು ಗ್ರಾಮ ಪಂಚಾಯಿತಿಯಲ್ಲಿ ಪುರುಷ ಮತ್ತು ಮಹಿಳೆಯರ ಸಾಕ್ಷರತೆಯಲ್ಲಿ ಅಗಾಧ ವ್ಯತ್ಯಾಸವನ್ನು ಕಾಣಬಹುದು. ಪುರುಷ ಮತ್ತು ಮಹಿಳಾ ಸಾಕ್ಷರತೆಯಲ್ಲಿ ವ್ಯತ್ಯಾಸದ ಪ್ರಮಾಣ ೧೬೯೨ ಆಗಿದೆ. ಪುರುಷರ ಸಾಕ್ಷರತೆ ಶೇ.೭೧.೩೦ ಆಗಿದೆ ಮತ್ತು ಸ್ತ್ರೀ ಸಾಕ್ಷರತೆ ಶೇ.೫೪.೩೮ ಆಗಿದೆ.

ಹೆಬ್ಬಗೋಡಿ ಗ್ರಾಮ ಪಂಚಾಯಿತಿಯಲ್ಲಿ ಪುರುಷ ಸಾಕ್ಷರತೆಯ ಪ್ರಮಾಣ ಶೇ.೮೫.೮ ಆಗಿದೆ. ಮಹಿಳಾ ಸಾಕ್ಷರತೆಯ ಪ್ರಮಾಣ ಶೇ.೭೪.೨೬ ಆಗಿದೆ. ಅಂದರೆ ಪುರುಷ ಮತ್ತು ಮಹಿಳಾ ಸಾಕ್ಷರತೆಯ ವ್ಯತ್ಯಾಸ ಶೇ.೧೧.೫೪ ಆಗಿದೆ. ಇಲ್ಲಿಯೂ ಸಹ ಸಾಕ್ಷರತೆಯಲ್ಲಿ ಲಿಂಗ ತಾರತಮ್ಯವನ್ನು ಕಾಣಬಹುದು. ಆದರೆ ಸಮಂದೂರು ಪಂಚಾಯಿತಿಯಲ್ಲಿ ಸಾಕ್ಷರತೆಯಲ್ಲಿ ಹೆಬ್ಬಗೋಡಿಗಿಂತ ಹೆಚ್ಚಿನ ಲಿಂಗ ತಾರತಮ್ಯ ಕಂಡುಬರುತ್ತದೆ. ಎರಡು ಪಂಚಾಯಿತಿಯಲ್ಲಿಯೂ

ಸಾಕ್ಷರತೆಯಲ್ಲಿ ಸಮಾನತೆಯಿಲ್ಲದ ಅಗಾಧ ವ್ಯತ್ಯಾಸವನ್ನು ಗಮನಿಸಬಹುದು. ಎಷ್ಟೇ ನಗರೀಕರಣ ಮತ್ತು ಕೈಗಾರಿಕೀಕರಣ ಮತ್ತು ಆಧುನೀಕರಣಕ್ಕೆ ಒಳಗಾಗಿರುವ ಹೆಬ್ಬಗೋಡಿ ಪಂಚಾಯಿತಿಯ ಜನರಲ್ಲೂ ಸಹ ಜನರ ಮನೋಭಾವನೆಯಲ್ಲಿ ಸಂಪೂರ್ಣವಾಗಿ ಪುರುಷ ಮತ್ತು ಸ್ತ್ರೀ ಸಮಾನತೆ ಇಲ್ಲವೆಂಬುದು ಸ್ಪಷ್ಟವಾಗುತ್ತದೆ.

ಸಮಂದೂರು ಗ್ರಾಮ ಪಂಚಾಯಿತಿಯಲ್ಲಿ ಹೆಬ್ಬಗೋಡಿ ಪಂಚಾಯಿತಿಗಿಂತ ಹೆಚ್ಚು ಮಹಿಳಾ ಅನಕ್ಷರತೆ ಕಂಡುಬರುತ್ತದೆ. ಇಲ್ಲಿನ ಜನರು ಹೆಬ್ಬಗೋಡಿ ಪಂಚಾಯಿತಿಗಿಂತ ಹಿಂದುಳಿದ ಸಾಂಪ್ರದಾಯಿಕ ಮನೋಭಾವನೆಯನ್ನು ಹೊಂದಿರುವವರಾಗಿದ್ದಾರೆ. ಹೆಚ್ಚಾಗಿ ಶಿಕ್ಷಿತರಲ್ಲದುದರಿಂದ ಪುರುಷ ಮತ್ತು ಮಹಿಳಾ ಸಾಕ್ಷರತೆಯಲ್ಲಿ ಹೆಬ್ಬಗೋಡಿಗಿಂತ ಹೆಚ್ಚು ವ್ಯತ್ಯಾಸ ಸಮಂದೂರು ಪಂಚಾಯಿತಿಯಲ್ಲಿ ಕಂಡುಬರುತ್ತದೆ. ಸಮಂದೂರು ಮತ್ತು ಹೆಬ್ಬಗೋಡಿ ಗ್ರಾಮ ಪಂಚಾಯಿತಿಯಲ್ಲಿ ಮಹಿಳಾ ಸಾಕ್ಷರತೆಯನ್ನು ಗಮನಿಸಿದಾಗ ಅಗಾಧ ಅಂತರ ಕಂಡುಬರುತ್ತದೆ. ಸಮಂದೂರು ಪಂಚಾಯಿತಿಯಲ್ಲಿ ಶೇ.೫೪.೩೮ ರಷ್ಟು ಮಹಿಳಾ ಅಕ್ಷರಸ್ಥರಿದ್ದರೆ, ಹೆಬ್ಬಗೋಡಿ ಪಂಚಾಯಿತಿಯಲ್ಲಿ ಶೇ.೭೪.೨೬ರಷ್ಟು ಮಹಿಳಾ ಅಕ್ಷರಸ್ಥರು ಕಂಡುಬರುತ್ತಾರೆ. ಸಮಂದೂರು ಮತ್ತು ಹೆಬ್ಬಗೋಡಿ ಪಂಚಾಯಿತಿಯಲ್ಲಿ ಮಹಿಳಾ ಸಾಕ್ಷರತೆಯ ವ್ಯತ್ಯಾಸ ಶೇ.೧೯.೮೮ ಆಗಿದೆ. ಅಂದರೆ ಹೆಬ್ಬಗೋಡಿ ಪಂಚಾಯಿತಿಯಲ್ಲಿ ಮಹಿಳಾ ಶಿಕ್ಷಣಕ್ಕೆ ಸಿಕ್ಕಿರುವ ಅವಕಾಶ, ಪ್ರೋತ್ಸಾಹ ಸಮಂದೂರು ಪಂಚಾಯಿತಿಯಲ್ಲಿ ಸಿಕ್ಕಿಲ್ಲ. ಕಾರಣ ಸಮಂದೂರು ಪಂಚಾಯಿತಿಗಿಂತ ಹೆಬ್ಬಗೋಡಿ ಪಂಚಾಯಿತಿಯಲ್ಲಿ ಜನರು ಹೆಚ್ಚು ವಿದ್ಯಾವಂತರು. ಆಧುನಿಕತೆಗೆ ಒಳಗಾದವರು ಬೆಂಗಳೂರು ನಗರ ಪ್ರಭಾವಕ್ಕೆ ಒಳಗಾಗಿರುವುದರಿಂದ ಅವರು ಮಹಿಳಾ ಶಿಕ್ಷಣದ ಮಹತ್ವವನ್ನು ತಿಳಿದಿದ್ದಾರೆ. ಆದುದರಿಂದ ತಮ್ಮ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣವನ್ನು ನೀಡುತ್ತಾರೆ.

ಸಮಂದೂರು ಪಂಚಾಯಿತಿಯ ಹೆಚ್ಚು ಜನರು ಅವಿದ್ಯಾವಂತರು, ಸಂಪ್ರದಾಯಸ್ಥರು. ಬೆಂಗಳೂರು ನಗರದ ಪ್ರಭಾವಕ್ಕೆ ಹೆಚ್ಚಾಗಿ ಒಳಗಾಗಿಲ್ಲ. ಅವರಿಗೆ ಮಹಿಳಾ ಶಿಕ್ಷಣದ ಮಹತ್ವ ಹೆಚ್ಚಾಗಿ ತಿಳಿದಿಲ್ಲ. ಆದುದರಿಂದ ಅವರು ಗಂಡು ಮಕ್ಕಳ ಶಿಕ್ಷಣಕ್ಕೆ ಹೆಚ್ಚಾಗಿ ಆದ್ಯತೆ ನೀಡುತ್ತಾರೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕಡಿಮೆ ಆದ್ಯತೆ ನೀಡಿರುವುದು ಕಂಡುಬರುತ್ತದೆ.

ಈ ಅಧ್ಯಾಯದ ಮುಖ್ಯ ಉದ್ದೇಶ ಸಮಾಜದಲ್ಲಿ ಸಾರ್ವಜನಿಕರು ಮಹಿಳೆಯರ ಶಿಕ್ಷಣದ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಅಧ್ಯಯನದಲ್ಲಿ ನಗರಕ್ಕೆ ಹತ್ತಿರವಿರುವ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಜಾತಿ ಮತ್ತು ಲಿಂಗಭೇದವಿಲ್ಲದೆ ನೂರು ಜನ ಹಿರಿಯ ನಾಗರಿಕರನ್ನು, ಅದೇ ರೀತಿ ನಗರದಿಂದ

ದೂರವಿರುವ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಜಾತಿ ಮತ್ತು ಲಿಂಗಭೇದವಿಲ್ಲದೆ ನೂರು ಜನ ಹಿರಿಯ ನಾಗರಿಕರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಸಂದರ್ಶನದ ಪ್ರಮುಖ ಉದ್ದೇಶ ಸಾರ್ವಜನಿಕರು ಗಂಡುಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಅವರು ಸಮಾನ ಅಭಿಪ್ರಾಯಗಳನ್ನು ಹೊಂದಿದ್ದಾರೆಯೇ ಅಥವ ಲಿಂಗತಾರತಮ್ಯ ಧೋರಣೆಯನ್ನು ಹೊಂದಿದ್ದಾರೆಯೇ ಎಂಬುದನ್ನು ತಿಳಿಯುವುದಾಗಿದೆ. ಆದುದರಿಂದ ಊರಿನ ಹಿರಿಯ ನಾಗರಿಕರನ್ನು ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ.

ಪಟ್ಟಿ ೫.೧ ರಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಅಭಿಪ್ರಾಯವನ್ನು ಕೇಳಲಾಗಿದೆ.

ಪಟ್ಟಿ ೫.೧

ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಅಭಿಪ್ರಾಯಗಳು

ಹಿರಿಯ ನಾಗರಿಕರು	ಗಂಡುಮಕ್ಕಳಿಗೆ		ಹೆಣ್ಣುಮಕ್ಕಳಿಗೆ	
	ಅವಶ್ಯಕತೆ ಇದೆ	ಅವಶ್ಯಕತೆ ಇಲ್ಲ	ಅವಶ್ಯಕತೆ ಇದೆ	ಅವಶ್ಯಕತೆ ಇಲ್ಲ
ಮೊದಲನೆಯ ಗುಂಪಿನ ಹಳ್ಳಿಗಳು (ನಗರಕ್ಕೆ ಹತ್ತಿರವಾಗಿರುವ)	೧೦೦		೯೬	೪
ಎರಡನೇ ಗುಂಪಿನ ಹಳ್ಳಿಗಳು (ನಗರಕ್ಕೆ ದೂರವಾಗಿರುವ)	೯೦	೧೦	೪೦	೬೦
ಒಟ್ಟು	೧೯೦	೧೦	೧೩೬	೬೪

ಪಟ್ಟಿ ೫.೧ರಿಂದ ತಿಳಿದು ಬರುವ ಅಂಶಗಳೆಂದರೆ ಜಾತಿ ಮತ್ತು ಗ್ರಾಮ/ನಗರ ಅಂತರವು ಊರಿನ ಹಿರಿಯ ನಾಗರಿಕರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರುವ ಅಂಶಗಳಾಗಿವೆ. ನಗರಕ್ಕೆ ಹತ್ತಿರವಾಗಿರುವ ಹಳ್ಳಿಗಳ ನೂರು ಜನ ಹಿರಿಯ ನಾಗರಿಕರನ್ನು ಸಂದರ್ಶನ ಮಾಡಲಾಗಿದೆ. ಶೇ.೧೦೦ ರಷ್ಟು ಜನರು ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ನೂರು ಜನ ಹಿರಿಯ ನಾಗರಿಕರಲ್ಲಿ ಶೇ.೯೬ ರಷ್ಟು ಜನ ಹೆಣ್ಣು ಮಕ್ಕಳಿಗೆ ಶಿಕ್ಷಣ ಅವಶ್ಯಕತೆ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೪ ರಷ್ಟು ಜನ ಹಿರಿಯ ನಾಗರಿಕರು ಶಿಕ್ಷಣ ಕೊಡಿಸುವ ವಿಚಾರದಲ್ಲಿ ಲಿಂಗ ತಾರತಮ್ಯ ಮಾಡಿರುವುದು ಕಂಡುಬರುತ್ತದೆ.

ನಗರಕ್ಕೆ ದೂರವಾಗಿರುವ ಎರಡನೆ ಗುಂಪಿನ ಗ್ರಾಮಗಳ ಶೇ.೯೦ ರಷ್ಟು ಹಿರಿಯ ನಾಗರಿಕರು ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಶೇ. ೧೦ ರಷ್ಟು ಹಿರಿಯ ನಾಗರಿಕರು ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ, ಅವರು ಮನೆಯ ಕೃಷಿ ಕೆಲಸಗಳಲ್ಲಿ ಭಾಗಿಯಾಗಬೇಕು ಮತ್ತು ಕುಲಕಸುಬನ್ನು ಅನುಸರಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಗರಕ್ಕೆ ದೂರವಾಗಿರುವ ಗ್ರಾಮಗಳ ಶೇ.೪೦ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಶೇ.೬೦ ರಷ್ಟು ಜನ ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ನಮಗೇನು ಲಾಭವಿಲ್ಲ, ಹೆಣ್ಣು ಮಕ್ಕಳು ಅಡುಗೆ ಮಾಡುವ, ಮನೆ ಕೆಲಸಗಳನ್ನು ಮಾಡಬೇಕು. ಹೆಣ್ಣು ಮಕ್ಕಳು ಎಷ್ಟೇ ವಿದ್ಯಾವಂತರಾದರೂ ಮಡಿಕೆ ಗೀಚುವುದು ತಪ್ಪುವುದಿಲ್ಲ ಎಂಬ ನಿರಾಶಾದಾಯಕ ಉತ್ತರಗಳನ್ನು ನೀಡುವುದರ ಮೂಲಕ ಲಿಂಗ ತಾರತಮ್ಯವನ್ನು ಮಾಡಿರುವುದು ಕಂಡುಬರುತ್ತದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಮತ್ತು ನಗರಕ್ಕೆ ದೂರವಿರುವ ಗ್ರಾಮಗಳ ೨೦೦ ಹಿರಿಯ ನಾಗರಿಕರಲ್ಲಿ ೧೯೦ ಹಿರಿಯ ನಾಗರಿಕರು ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಅವರು ನೀಡಿರುವ ಕಾರಣಗಳೆಂದರೆ ಗಂಡು ಮಕ್ಕಳು ಮನೆಯ ವಂಶೋದ್ಧಾರಕರು, ಅವರು ದುಡಿದು ಮನೆಯ ಅಭಿವೃದ್ಧಿಗೆ ಮತ್ತು ಏಳಿಗೆಗೆ ಕಾರಣರಾಗಬೇಕು. ಹೆಂಡತಿ, ಮಕ್ಕಳು ಮತ್ತು ತಂದೆತಾಯಿಯರನ್ನು ಸಾಕಿ ಸಲಹುವ ಹೊಣೆಗಾರಿಕೆ ಗಂಡು ಮಕ್ಕಳಿಗೆ ಇರುವುದರಿಂದ ಅವರಿಗೆ ಶಿಕ್ಷಣ ಬೇಕೇ ಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೨೦೦ ಹಿರಿಯ ನಾಗರಿಕರಲ್ಲಿ ಕೇವಲ ೧೦ ನಾಗರಿಕರು ಮಾತ್ರ ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲವೆಂದು ಹೇಳಿದ್ದಾರೆ. ನಗರದಿಂದ ದೂರವಿರುವ ಹಿರಿಯ ನಾಗರಿಕರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರು ನೀಡಿರುವ ಕಾರಣಗಳೆಂದರೆ ಶಿಕ್ಷಣದಿಂದಲೇ ಗ್ರಾಮದಲ್ಲಿ ಬದುಕ ಬೇಕಾಗಿಲ್ಲ. ಕೃಷಿ ಕೆಲಸಗಳನ್ನು ಮಾಡಿ ತಾವುಗಳು ಬದುಕಲಿಲ್ಲವೆ ಎಂಬ ಸಾಂಪ್ರದಾಯಿಕ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ಹತ್ತಿರವಿರುವ ೨೦೦ ಹಿರಿಯ ನಾಗರಿಕರಲ್ಲಿ, ೧೩೬ ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಹೆಣ್ಣು ಮಕ್ಕಳು ಆಧುನಿಕ ಯುಗದಲ್ಲಿ ದುಡಿಯುವ, ವ್ಯವಹರಿಸುವ ಅನಿವಾರ್ಯತೆ ಇರುವುದರಿಂದ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಅದರಲ್ಲಿಯೂ ನಗರಕ್ಕೆ ಹತ್ತಿರವಿರುವ ಗ್ರಾಮಗಳ ೧೦೦ ಹಿರಿಯ ನಾಗರಿಕರಲ್ಲಿ ೯೬ ಹಿರಿಯ ನಾಗರಿಕರು ಅವಶ್ಯಕತೆ ಇದೆ ಎಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ೧೦೦ ಹಿರಿಯ ನಾಗರಿಕರಲ್ಲಿ ಕೇವಲ ೪೦ ರಷ್ಟು ಹಿರಿಯ ನಾಗರಿಕರು ಮಾತ್ರ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ೧೦೦ ಜನ ಹಿರಿಯ ನಾಗರಿಕರಲ್ಲಿ ೪ ಹಿರಿಯ ನಾಗರಿಕರು ಮಾತ್ರ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲವೆಂದು ಹೇಳಿದ್ದಾರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಇಲ್ಲದಿದ್ದರು ಜೀವನ ಹೇಗೆ ನಡೆಯುತ್ತದೆ ಎಂಬ ನಿರುತ್ಸಾಹಕ ಉತ್ತರ ನೀಡಿದ್ದಾರೆ.

ನಗರಕ್ಕೆ ದೂರವಿರುವ ಗ್ರಾಮಗಳ ೧೦೦ ಜನ ಹಿರಿಯ ನಾಗರಿಕರಲ್ಲಿ ೬೦ ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲವೆಂದು ಹೇಳಿದ್ದಾರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಬೇಕೇಬೇಕು ಎಂಬ ಲಿಂಗ ತಾರತಮ್ಯ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಹಿರಿಯ ನಾಗರಿಕರ ಭಾವನೆಯ ಮೇಲೆ ನಗರ ಮತ್ತು ಗ್ರಾಮ ಅಂತರವು ಪ್ರಮುಖ ಪಾತ್ರವಹಿಸಿರುವುದು ಕಂಡು ಬರುತ್ತದೆ.

ಪಟ್ಟಿ ೫.೧ರಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಶಿಕ್ಷಣದಲ್ಲಿನ ಲಿಂಗತಾರತಮ್ಯ ಮಾಡಿರುವುದು ಕಂಡು ಬರುತ್ತದೆ.

ಪಟ್ಟಿ ೫.೨ ರಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಲಿಂಗ ತಾರತಮ್ಯ ಮಾಡಲು ಕಾರಣಗಳನ್ನು ಕೇಳಲಾಗಿದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ೧೦೦ ಹಿರಿಯ ನಾಗರಿಕರಲ್ಲಿ ಶೇ.೯೬ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅನುಕೂಲವಿದೆ ಎಂದು ಒಪ್ಪಿಕೊಂಡಿದ್ದಾರೆ. ಶೇ.೧ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳು ಮನೆ ಕೆಲಸಗಳನ್ನು ಮಾಡಬೇಕಾಗುತ್ತದೆ. ಆದುದರಿಂದ ಅವರನ್ನು ಶಾಲೆಗಳಿಗೆ ಕಳುಹಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೧ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವಳಿಗಿಂತ ಹೆಚ್ಚು ಓದಿದ ಗಂಡನನ್ನು ಹುಡುಕಿ ಮದುವೆ ಮಾಡಬೇಕಾಗುತ್ತದೆ. ಆದುದರಿಂದ ತಂದೆ ತಾಯಿಗಳಿಗೆ ಹೆಚ್ಚು ಆರ್ಥಿಕ ಹೊರೆಯಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೨ ರಷ್ಟು ಹಿರಿಯ ನಾಗರಿಕರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಮನೆಯಲ್ಲಿ ಹಣಕಾಸಿನ ತೊಂದರೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪಟ್ಟಿ ೫.೨: ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಹಿರಿಯ ನಾಗರಿಕರು ಲಿಂಗ ತಾರತಮ್ಯ ಮಾಡಲು ನೀಡಿರುವ ಕಾರಣಗಳು

ಕ್ರ.ಸಂ.	ಕಾರಣಗಳು	ಮೊದಲನೆ ಗುಂಪಿನ ಗ್ರಾಮಗಳ ಹಿರಿಯ ನಾಗರಿಕರು (ನಗರಕ್ಕೆ ಹತ್ತಿರವಿರುವ)	ಎರಡನೆ ಗುಂಪಿನ ಗ್ರಾಮಗಳ ಹಿರಿಯ ನಾಗರಿಕರು (ನಗರಕ್ಕೆ ದೂರವಿರುವ)	ಒಟ್ಟು
೧.	ಹೆಣ್ಣು ಮಕ್ಕಳಿಗೆ ಶಿಕ್ಷಣದಿಂದ ಅನುಕೂಲ	೯೬	೪೦	೧೩೬
೨.	ಬೇಗ ವಿವಾಹ ಮಾಡಬೇಕು	–	೧೦	೧೦
೩.	ಮನೆ ಕೆಲಸಗಳನ್ನು ಮಾಡಬೇಕು	೦೧	೧೦	೧೧
೪.	ವಿವಾಹಕ್ಕೆ ತೊಂದರೆ	೦೧	೦೮	೦೯
೫.	ಹೆಣ್ಣು ಮಕ್ಕಳ ಓದಿನಿಂದ ನಮಗೆ ಲಾಭವಿಲ್ಲ		೧೪	೧೪
೬.	ಮನೆಯಲ್ಲಿನ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಬೇಕು		೦೨	೦೨
೭.	ಹಣಕಾಸಿನ ತೊಂದರೆ	೦೨	೦೪	೦೬
೮.	ಹೊಲಗದ್ದೆಗಳಲ್ಲಿ ಕೆಲಸ ಮಾಡಬೇಕು		೧೦	೧೦
೯.	ಹೆಚ್ಚು ಓದಿದ ಹೆಣ್ಣು ಮಕ್ಕಳು ಪೋಷಕರ ಮಾತು ಕೇಳುವುದಿಲ್ಲ		೦೨	೦೨
	ಒಟ್ಟು	೧೦೦	೧೦೦	೨೦೦

ನಗರಕ್ಕೆ ದೂರವಿರುವ ಗ್ರಾಮಗಳ ೧೦೦ ರಷ್ಟು ಹಿರಿಯ ನಾಗರಿಕರಲ್ಲಿ ಶೇ.೪೦ ರಷ್ಟು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಹೆಣ್ಣು ಮಕ್ಕಳಿಗೆ ಭವಿಷ್ಯದಲ್ಲಿ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೧೦ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳು ಕಲಿತು ಮಾಡುವುದಾದರೂ ಏನು. ಮೊದಲು ಹೆಣ್ಣು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೧೦ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳು ಶಿಕ್ಷಣಕ್ಕಿಂತ ಮನೆಯ ಕೆಲಸಗಳನ್ನು ಕಲಿತುಕೊಳ್ಳಬೇಕು. ಆದುದರಿಂದ ಮನೆ ಕೆಲಸಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ಶೇ.೦.೮ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಿದರೆ ಅವರಿಗೆ ಸರಿಯಾದ ವರನನ್ನು ನೋಡಿ ಮದುವೆ ಮಾಡಲು ತೊಂದರೆಯಾಗುತ್ತದೆ. ಹೆಚ್ಚು ಶಿಕ್ಷಣ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಶೇ.೧೪ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ನಮ್ಮ ಮನೆಗೆ ಏನು ಲಾಭವಿಲ್ಲ ಅದು ಅವಳ ಗಂಡನ ಮನೆಗೆ ಆಗುತ್ತದೆ. ಆದುದರಿಂದ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಅವಶ್ಯಕತೆ ಇಲ್ಲ ಎಂದು ಹೇಳುವುದರ ಮೂಲಕ ಲಿಂಗ ತಾರತಮ್ಯವನ್ನು ಮಾಡಿದ್ದಾರೆ. ಶೇ.೨ ರಷ್ಟು ಹಿರಿಯ ನಾಗರಿಕರು ನಾವು ಮನೆಯ ಹೊರಗಡೆ ಹೊಲಗದ್ದೆಗಳಲ್ಲಿ ಕೆಲಸ ಮಾಡಲು ಹೋದಾಗ ಮನೆಯ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೪ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ನಮಗೆ ಹಣಕಾಸಿನ ತೊಂದರೆಯಿದೆ ಎಂದು ತಿಳಿಸಿದ್ದಾರೆ. ಶೇ.೧೦ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳು ನಮ್ಮ ಜೊತೆ ಹೊಲಗದ್ದೆಗಳಲ್ಲಿ ಕೆಲಸ ಮಾಡಬೇಕಾಗಿರುವುದರಿಂದ ಶಾಲೆಗಳಿಗೆ ಕಳುಹಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೨ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರು ತಂದೆತಾಯಿಯರ ಮಾತು ಕೇಳುವುದಿಲ್ಲ ಎಂಬ ನಕಾರಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಶೇ.೮೬ ರಷ್ಟು ಹಿರಿಯ ನಾಗರಿಕರು ಮತ್ತು ನಗರದಿಂದ ದೂರವಿರುವ ಶೇ.೪೦ ರಷ್ಟು ಹಿರಿಯ ನಾಗರಿಕರು, ಅಂದರೆ ೨೦೦ ಹಿರಿಯ ನಾಗರಿಕರಲ್ಲಿ ೧೨೬ ಹಿರಿಯ ನಾಗರಿಕರು ಮಹಿಳಾ ಶಿಕ್ಷಣದ ಮಹತ್ವವನ್ನು ತಿಳಿದಿದ್ದಾರೆ. ನಗರಕ್ಕೆ ಹತ್ತಿರವಿರುವ ಹಿರಿಯ ನಾಗರಿಕರಲ್ಲಿ ನಗರದಿಂದ ದೂರವಿರುವ ನಾಗರಿಕರಿಗಿಂತ ಹೆಚ್ಚು ಆಧುನಿಕ ಪ್ರಜ್ಞೆ ಇರುವುದರಿಂದ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅನುಕೂಲವಿದೆ ಎಂದು ತಿಳಿದಿದ್ದಾರೆ.

ನಗರಕ್ಕೆ ದೂರವಿರುವ ಗ್ರಾಮಗಳ ಶೇ.೧೦ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣಕ್ಕಿಂತ ಮದುವೆ ಮುಖ್ಯವಾದ ವಿಚಾರವಾದುದರಿಂದ ಹೆಣ್ಣು ಮಕ್ಕಳಿಗೆ ಆದಷ್ಟು ಬೇಗ ವಿವಾಹ ಮಾಡಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಬೇಕೆಂಬ ಭಾವನೆ ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಶೇ.೧ ರಷ್ಟು ಮತ್ತು ನಗರದಿಂದ ದೂರವಿರುವ ಶೇ.೧೦ ರಷ್ಟು ಹಿರಿಯ ನಾಗರಿಕರು ಅಂದರೆ ಒಟ್ಟು ೨೦೦ ನಾಗರಿಕರಲ್ಲಿ ೧೧ ಜನ ಹಿರಿಯ ನಾಗರಿಕರು ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದಕ್ಕಿಂತ ಮನೆ ಕೆಲಸ ಕಲಿತುಕೊಳ್ಳಬೇಕು. ಮದುವೆಯಾಗಿ ಹೋದ ಗಂಡನ ಮನೆಯಲ್ಲಿ ಮನೆ ಕೆಲಸಗಳನ್ನು ಹೆಣ್ಣುಮಕ್ಕಳು ಮಾಡ ಬೇಕಾಗಿರುವುದರಿಂದ ಅವರು ಹುಟ್ಟಿದ ಮನೆಯಲ್ಲಿಯೇ ಮನೆಕೆಲಸಗಳನ್ನು ಕಲಿತುಕೊಂಡಿರಬೇಕು ಎಂಬ ಸಾಂಪ್ರದಾಯಿಕ ಭಾವನೆಯನ್ನು ಹೆಚ್ಚಾಗಿ ನಗರದಿಂದ ದೂರವಿರುವ ಗ್ರಾಮಗಳ ಹಿರಿಯ ನಾಗರಿಕರು ತಿಳಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಶೇ.೧ರಷ್ಟು ಮತ್ತು ನಗರಕ್ಕೆ ದೂರವಿರುವ ಶೇ.೮ ರಷ್ಟು ಗ್ರಾಮಗಳ ಹಿರಿಯ ನಾಗರಿಕರು ಅಂದರೆ ೨೦೦ ಹಿರಿಯ ನಾಗರಿಕರಲ್ಲಿ ೯ ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರ ವಿವಾಹಕ್ಕೆ ತೊಂದರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೆಚ್ಚಾಗಿ ನಗರದಿಂದ ದೂರವಿರುವ ಗ್ರಾಮಗಳ ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಅವರಿಗಿಂತ ಹೆಚ್ಚು ಶಿಕ್ಷಣ ಪಡೆದ ಗಂಡನ್ನೇ ಹುಡುಕಿ, ಹೆಚ್ಚು ವರದಕ್ಷಿಣೆ ಕೊಟ್ಟು ಮದುವೆ ಮಾಡಬೇಕಾಗುತ್ತದೆ. ತಂದೆ ತಾಯಿಗಳಿಗೆ ವಿವಾಹ ಮಾಡಲು ಹೆಚ್ಚು ತೊಂದರೆಯಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಶೇ.೧೪ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ನಮ್ಮ ಮನೆಗೇನು ಲಾಭವಿಲ್ಲ. ಅವಳ ಗಂಡನ ಮನೆಗೆ ಲಾಭವಾಗುತ್ತದೆ. ಆದುದರಿಂದ ಗಂಡು ಮಕ್ಕಳ ಶಿಕ್ಷಣದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕೇ ವಿನಃ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂಬ ಲಿಂಗ ತಾರತಮ್ಯ ಧೋರಣೆಯನ್ನು ತಿಳಿಸಿದ್ದಾರೆ.

ನಗರದಿಂದ ದೂರವಿರುವ ಶೇ.೨ ರಷ್ಟು ಹಿರಿಯ ನಾಗರಿಕರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಸಾಧ್ಯವಿಲ್ಲ. ತಂದೆ ತಾಯಿಯರು ಮನೆಯ ಹೊರಗಡೆ ಕೆಲಸಗಳನ್ನು ಮಾಡಲು ಹೋದಾಗ ಮನೆಯಲ್ಲಿರುವ ಚಿಕ್ಕ ಮಕ್ಕಳನ್ನು ಹೆಣ್ಣು ಮಕ್ಕಳೇ ನೋಡಿಕೊಳ್ಳಬೇಕಾಗುತ್ತದೆ. ಆದುದರಿಂದ ಅವರಿಗೆ ಶಿಕ್ಷಣ ಕೊಡಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಶೇ.೨ ರಷ್ಟು ಹಿರಿಯ ನಾಗರಿಕರು ಮತ್ತು ಶೇ.೪ ರಷ್ಟು ನಗರದಿಂದ ದೂರವಿರುವ ಹಿರಿಯ ನಾಗರಿಕರು ಅಂದರೆ ೨೦೦ ಹಿರಿಯ ನಾಗರಿಕರಲ್ಲಿ ೬

ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಿಲ್ಲ. ತಮ್ಮ ಮನೆಯಲ್ಲಿ ಹಣಕಾಸಿನ ತೊಂದರೆಯಿರುವುದರಿಂದ ಗಂಡು ಮಕ್ಕಳಿಗೆ ಶಿಕ್ಷಣ ಕೊಡಿಸಲೂ ಕಷ್ಟವಾಗಿದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಿಲ್ಲ ಎಂಬ ಲಿಂಗ ತಾರತಮ್ಯ ಧೋರಣೆಯನ್ನು ತಿಳಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಶೇ.೧೦ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳು ತಮ್ಮ ಹೊಲ-ಗದ್ದೆಗಳಲ್ಲಿ ಕೆಲಸ ಮಾಡಬೇಕಾಗಿರುವುದರಿಂದ ಅವರನ್ನು ಶಾಲೆಗೆ ಕಳುಹಿಸುವುದಿಲ್ಲ ಎಂಬ ಭಾವನೆ ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಶೇ.೨ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡಿದರೆ ಅವರು ತಂದೆತಾಯಿಯರ ಮಾತು ಕೇಳುವುದಿಲ್ಲ ಎಂಬ ನಕಾರಾತ್ಮಕ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮ-ನಗರ ಅಂತರವು ಹಿರಿಯ ನಾಗರಿಕರ ಭಾವನೆಯ ಮೇಲೆ ನೇರ ಪ್ರಭಾವ ಬೀರಿದೆ.

ಈ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ನಗರಕ್ಕೆ ಹತ್ತಿರವಿರುವ ಹಿರಿಯ ನಾಗರಿಕರು ನಗರದಿಂದ ದೂರವಿರುವ ಹಿರಿಯ ನಾಗರಿಕರಿಗಿಂತ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಸಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ನಗರದಿಂದ ದೂರವಿರುವ ಹೆಚ್ಚು ಹಿರಿಯ ನಾಗರಿಕರು ಮಹಿಳಾ ಶಿಕ್ಷಣದ ಬಗ್ಗೆ ಹೆಚ್ಚು ಒಲವನ್ನು ತೋರಿಸಿಲ್ಲ. ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ ಎಂಬ ಜಾರಿಕೆಯ ಉತ್ತರವನ್ನು ನೀಡಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಶೇ.೯೬ ರಷ್ಟು ಹಿರಿಯ ನಾಗರಿಕರು ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಬಗ್ಗೆ ಲಿಂಗ ತಾರತಮ್ಯ ಮಾಡಿಲ್ಲ. ಶೇ.೪ ರಷ್ಟು ಹಿರಿಯ ನಾಗರಿಕರು ಮಾತ್ರ ಲಿಂಗ ತಾರತಮ್ಯ ಮಾಡಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಶೇ.೪೦ ರಷ್ಟು ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ಒಪ್ಪಿಗೆ ಸೂಚಿಸಿಲ್ಲ. ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಸಾಂಪ್ರದಾಯಿಕ ಮನೋಭಾವನೆಯನ್ನು ಹೊಂದಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಹಿರಿಯ ನಾಗರಿಕರು, ನಗರದಿಂದ ದೂರವಿರುವ ಗ್ರಾಮಗಳ ಹೆಚ್ಚು ಹಿರಿಯ ನಾಗರಿಕರಿಗಿಂತ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ಕಾರಣ ನಗರಕ್ಕೆ ಹತ್ತಿರವಿರುವ ಹಿರಿಯ ನಾಗರಿಕರು ಸಹ ಆಧುನೀಕರಣ, ನಗರೀಕರಣ ಮತ್ತು ಕೈಗಾರೀಕಿಕರಣದ ಪ್ರಭಾವಕ್ಕೆ ಒಳಗಾಗಿದ್ದಾರೆ. ಆದುದರಿಂದ ಅವರು ಮಹಿಳಾ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಹೆಚ್ಚು ಹಿರಿಯ ನಾಗರಿಕರು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ನಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ಇವರು ಮಹಿಳಾ ಶಿಕ್ಷಣದ ಮಹತ್ವವನ್ನು ತಿಳಿದಿಲ್ಲ. ಇವರು ಆಧುನೀಕರಣ, ನಗರೀಕರಣ ಮತ್ತು ಕೈಗಾರಿಕೀಕರಣದ ಪ್ರಭಾವಕ್ಕೆ ಒಳಗಾಗಿಲ್ಲ ಮತ್ತು ಹೆಚ್ಚು ಶಿಕ್ಷಣವನ್ನು ಪಡೆದಿಲ್ಲ. ಗ್ರಾಮ–ನಗರ ಅಂತರವು ಸಹ ಹಿರಿಯ ನಾಗರಿಕರ ಅಭಿಪ್ರಾಯಗಳ ಮೇಲೆ ನೇರ ಪ್ರಭಾವ ಬೀರುವ ಅಂಶಗಳಾಗಿವೆ ಎಂಬುದು ತಿಳಿದು ಬರುತ್ತದೆ.

೧೯೭೪ರಲ್ಲಿ "ಭಾರತದಲ್ಲಿ ಮಹಿಳಾ ಸ್ಥಾನಮಾನದ ಬಗ್ಗೆ ಸಮಿತಿ ವರದಿ ನೀಡಿರುವಂತೆ (ಪ್ರತಿಮಾ ಕುಮಾರಿ ಅಧ್ಯಯನದಲ್ಲಿ ತಿಳಿಸಿರುವಂತೆ), ಭಾರತದಲ್ಲಿ ಗ್ರಾಮೀಣ ಮಹಿಳಾ ಶಿಕ್ಷಣದ ಮಂದಗತಿಯ ಬೆಳವಣಿಗೆಗೆ ಕಾರಣಗಳು:

೧. ಹೆಚ್ಚಿನ ಸಂಖ್ಯೆಯ ಗ್ರಾಮೀಣ ಹೆಣ್ಣುಮಕ್ಕಳು ೮ ವರ್ಷ ತುಂಬುತ್ತಿದ್ದಂತೆ ಮನೆ ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ. ಅವುಗಳೆಂದರೆ ಸೌದೆ ಸಂಗ್ರಹಿಸುವುದು, ಸಗಣಿ ಬಾಚುವುದು, ತುಂಬಾ ದೂರದಿಂದ ನೀರು ತರುವುದು, ಬಟ್ಟೆ ಶುಚಿಗೊಳಿಸುವುದು ಮತ್ತು ತಂದೆ ತಾಯಿಗಳು ಕೆಲಸ ಮಾಡುವ ಜಾಗಕ್ಕೆ ಊಟ ಮತ್ತು ನೀರನ್ನು ತೆಗೆದುಕೊಂಡು ಹೋಗುವುದು ಮುಂತಾದವು.

೨. ತಾಯಿ ಕೆಲಸ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಹೆಣ್ಣು ಮಕ್ಕಳು ತಮ್ಮ ತಮ್ಮ ಮತ್ತು ತಂಗಿಯರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

೩. ಹೆಚ್ಚಿನ ಗ್ರಾಮೀಣ ಹೆಣ್ಣು ಮಕ್ಕಳು ತಮ್ಮ ಕೃಷಿ ಭೂಮಿಯಲ್ಲಿ ಕೆಲಸ ಮಾಡಬೇಕಾಗಿ ಬರುವುದು.

೪. ಸಮಿತಿ ನಡೆಸಿದ ಸಮೀಕ್ಷೆಯಂತೆ ಗ್ರಾಮೀಣ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಇರುವ ಪ್ರಮುಖ ಸಮಸ್ಯೆಗಳೆಂದರೆ:

   * ಶಾಲೆಗಳ ಸಂಖ್ಯೆ ಕಡಿಮೆ ಇರುವುದು.
   * ಹೆಚ್ಚಿನ ಸ್ಥಳಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಾಲೆಗಳು ಇಲ್ಲದೆ ಇರುವುದು.
   * ಹೆಚ್ಚು ಮಕ್ಕಳು ಇರುವ ಶಾಲೆಯಲ್ಲಿ ಒಬ್ಬರೆ ಶಿಕ್ಷಕರ ಭೋಧನೆ.
   * ಮನೆ ಮತ್ತು ಶಾಲೆಗೆ ತುಂಬ ಅಂತರವಿರುವುದು.
   * ಮಹಿಳಾ ಶಿಕ್ಷಕರ ಕೊರತೆ.

* ಸಾರಿಗೆ ಸಂಪರ್ಕ ಮತ್ತು ಶೌಚಾಲಯದ ಕೊರತೆ ಇರುವುದು.
* ಗ್ರಾಮೀಣ ಪೋಷಕರಿಗೆ ತಮ್ಮ ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಅಥವಾ ಉಪಯೋಗ ತಿಳಿಯದೆ ಇರುವುದು.
* ವಿದ್ಯಾವಂತ ಹೆಣ್ಣು ಮಕ್ಕಳು ಕೃಷಿ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲವೆಂಬ ಭಾವನೆಯನ್ನು ಹೊಂದಿರುವುದು.
* ಹೆಣ್ಣು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡುವುದು ಅವರ ಶಿಕ್ಷಣಕ್ಕೆ ದೊಡ್ಡ ಅಡ್ಡಿಯನ್ನುಂಟು ಮಾಡುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹಗಳ ಸಂಖ್ಯೆ ಕಡಿಮೆಯಾಗಿದೆ.

ಅವಿದ್ಯಾವಂತ ತಂದೆ ತಾಯಿಗಳು ತಮ್ಮ ಮಗಳಿಗೆ ಮದುವೆ ಮಾಡಿಸಲು ಕಷ್ಟವಾಗುತ್ತದೆ. ವಿದ್ಯಾವಂತ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಸಲು ಮತ್ತು ಅವಳಿಗೆ ಸರಿಯಾದ ಗಂಡನನ್ನು ಹುಡುಕಲು ಹೆಚ್ಚು ವರದಕ್ಷಿಣೆ ಕೊಡಬೇಕಾಗುತ್ತದೆಂಬ ನಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ಮತ್ತು ಒಮ್ಮೆ ವಿದ್ಯಾವಂತಳಾದ ಹೆಣ್ಣುಮಗಳನ್ನು ವ್ಯವಸಾಯ ಕೆಲಸಗಳಿಗೆ ತೊಡಗಿಸಲು ಸಾಧ್ಯವಿಲ್ಲ ಎಂಬ ಭಾವನೆಯನ್ನು ಹೊಂದಿದ್ದಾರೆ. ಆದುದರಿಂದ ಹೆಚ್ಚಿನ ತಂದೆ ತಾಯಿಗಳು ಮತ್ತು ನಾಗರಿಕರು ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿಲ್ಲ ಎಂಬ ಭಾವನೆಯನ್ನು ಹೊಂದಿದ್ದಾರೆ.

ಈ ಅಧ್ಯಯನದಲ್ಲಿ ನಗರಕ್ಕೆ ಹತ್ತಿರವಾಗಿರುವ ಗ್ರಾಮಗಳ ಹಿರಿಯ ನಾಗರಿಕರು ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಶಿಕ್ಷಣ ನೀಡಬೇಕಾದರೆ ಯಾವುದೇ ಲಿಂಗ ತಾರತಮ್ಯ ಮಾಡಿಲ್ಲ. ಅವರು ಮಹಿಳಾ ಶಿಕ್ಷಣದ ಮಹತ್ವವನ್ನು ಅರಿತಿದ್ದಾರೆ. ನಗರೀಕರಣ, ಕೈಗಾರಿಕೀಕರಣ ಮತ್ತು ಸಂದರ್ಶಿತ ನಾಗರಿಕರ ಶಿಕ್ಷಣ ಮಟ್ಟವು ಅವರ ಸಾಮಾಜಿಕ ಮತ್ತು ಮಾನಸಿಕ ಭಾವನೆಯ ಮೇಲೆ ಪ್ರಭಾವ ಬೀರಿವೆ. ಆದುದರಿಂದ ಅವರ ಮನೋಭಾವನೆಯಲ್ಲಿ ಸಮಾನತೆಯ ಕಲ್ಪನೆ ಕಂಡುಬರುತ್ತದೆ. ಗಂಡು ಮಕ್ಕಳ ಶಿಕ್ಷಣದಷ್ಟೇ ಹೆಣ್ಣು ಮಕ್ಕಳ ಶಿಕ್ಷಣವು ಮುಖ್ಯ ಎಂದು ತಿಳಿದಿದ್ದಾರೆ. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಬಹು ಸಂಖ್ಯಾತ ಹಿರಿಯ ನಾಗರಿಕರು ಲಿಂಗ ತಾರತಮ್ಯವನ್ನು ಮಾಡಿಲ್ಲ.

ನಗರದಿಂದ ದೂರ ಇರುವ ಗ್ರಾಮಗಳ ಹಿರಿಯ ನಾಗರಿಕರು ಗಂಡು ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಹೆಚ್ಚು ಲಿಂಗ ತಾರತಮ್ಯ ಮಾಡಿದ್ದಾರೆ. ಈ ಗ್ರಾಮಗಳ ಶೇ.೯೦ ರಷ್ಟು ಹಿರಿಯ ನಾಗರಿಕರು ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿದೆ ಎಂದು, ಶೇ.೧೦ ರಷ್ಟು ನಾಗರಿಕರು ಮಾತ್ರ ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ, ಅವರು ಕೃಷಿ

ಕೆಲಸಗಳನ್ನು ಮಾಡಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಗರದಿಂದ ದೂರವಿರುವ ಶೇ.೪೦ ರಷ್ಟು ಗ್ರಾಮಗಳ ಹಿರಿಯ ನಾಗರಿಕರು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯೆಂದು ತಿಳಿಸಿದ್ದಾರೆ. ಶೇ.೬೦ರಷ್ಟು ನಾಗರಿಕರು ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿಲ್ಲ ಎಂದು ಹೇಳಿದ್ದಾರೆ. ಅಂದರೆ, ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಅವರಿಗೆ ತಿಳಿದಿಲ್ಲ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದು ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು ಎಂಬ ಭಾವನೆ ಹೊಂದಿದ್ದಾರೆ. ದೂರದ ಊರಿನ ನಾಗರಿಕರಲ್ಲಿ ಇನ್ನೂ ಸಾಂಪ್ರದಾಯಿಕ ಮನೋಭಾವನೆ ಬದಲಾಗಿಲ್ಲವೆಂಬುದು ಕಂಡು ಬರುತ್ತದೆ.

ಹೆಣ್ಣು ಮಕ್ಕಳು ಎಷ್ಟೇ ಓದಿದರೂ ಅವರು ಮಡಿಕೆಗೀಚುವುದು ತಪ್ಪುವುದಿಲ್ಲವೆಂಬ ಭಾವನೆ ಇರುವುದರಿಂದ ಅವರು ತಮ್ಮ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯವನ್ನು ಮಾಡಿದ್ದಾರೆ.

ಈ ಅಧ್ಯಯನದಲ್ಲಿ ಜನರ ಮನೋಭಾವನೆಯನ್ನು ಪ್ರಭಾವಿಸುವಲ್ಲಿ ಜಾತಿ ಭಿನ್ನತೆಗಿಂತ ನಗರ ಮತ್ತು ಗ್ರಾಮ ಅಂತರವು ಬಹಳ ಪ್ರಭಾವಿ ಅಂಶವಾಗಿ ಕಂಡುಬರುತ್ತದೆ.

ನಗರಕ್ಕೆ ಹತ್ತಿರವಿರುವ ಮತ್ತು ನಗರಕ್ಕೆ ದೂರವಿರುವ ಗ್ರಾಮಗಳ ಹಿರಿಯ ನಾಗರಿಕರ ಮನೋಭಾವನೆಯಲ್ಲಿ ವ್ಯತ್ಯಾಸವಿದೆಯೇ ಎಂದು ನೋಡಿದಾಗ ನಗರಕ್ಕೆ ಹತ್ತಿರವಿರುವ ಗ್ರಾಮಗಳ ಹಿರಿಯ ನಾಗರಿಕರಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ಸಕಾರಾತ್ಮಕ ಭಾವನೆಯನ್ನು ಹೊಂದಿದ್ದು ಅವರಲ್ಲಿ ಹೆಚ್ಚು ಲಿಂಗತಾರತಮ್ಯ ಭಾವನೆಗಳು ಕಂಡು ಬರುತ್ತಿಲ್ಲ.

ನಗರದಿಂದ ದೂರವಿರುವ ಗ್ರಾಮಗಳ ಹಿರಿಯ ನಾಗರಿಕರಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ನಕಾರಾತ್ಮಕ ಭಾವನೆಯನ್ನು ಹೊಂದಿದ್ದು ಅವರಲ್ಲಿ ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಶಿಕ್ಷಣದಲ್ಲಿ ಹೆಚ್ಚು ಲಿಂಗ ತಾರತಮ್ಯ ಭಾವನೆ ಕಂಡು ಬರುತ್ತದೆ. ಗಂಡು ಮಕ್ಕಳ ಶಿಕ್ಷಣಕ್ಕೆ ಒಲವು ತೋರಿದಂತೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒಲವನ್ನು ತೋರಿಸಿಲ್ಲ.

ಇದನ್ನು ಗಮನಿಸಿದಾಗ ಗ್ರಾಮ ಮತ್ತು ನಗರ ಅಂತರವು ಅವರ ಅಭಿಪ್ರಾಯಗಳ ಮೇಲೆ ನೇರ ಪ್ರಭಾವ ಬೀರಿರುವುದು ಕಂಡು ಬರುತ್ತದೆ. ನಗರಕ್ಕೆ ಹತ್ತಿರವಿರುವ ಹಿರಿಯ ನಾಗರಿಕರಲ್ಲಿ ಆಧುನಿಕ ಮೌಲ್ಯಗಳು ಪ್ರಭಾವ ಬೀರಿದೆ. ಈ ಪ್ರಭಾವಕ್ಕೆ ಕಾರಣ ಅವರು ವಾಸಿಸುವ ಗ್ರಾಮ ಮತ್ತು ವಾಸಿಸುವ ಪರಿಸರವೆ ಪ್ರಮುಖ ಕಾರಣವಾಗಿದೆ.

ಜನರ ಮನೋಭಾವನೆಯನ್ನು ಪ್ರಭಾವಿಸುವಲ್ಲಿ ಗ್ರಾಮ ನಗರ ಅಂತರವು ಪ್ರಮುಖ ಅಂಶವಾಗಿದೆ.

ಜಾತಿಯು ವ್ಯಕ್ತಿಯ ಸ್ಥಿತಿಗತಿಗಳನ್ನು ಮತ್ತು ಸಾಮಾಜಿಕ ಆರ್ಥಿಕ ಅವಕಾಶಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸ್ವತಂತ್ರಪೂರ್ವ ಭಾರತೀಯ ಸಮಾಜದಲ್ಲಿ ಜಾತಿಯ ಅಸಮಾನತೆಗಳು ಹೆಚ್ಚಾಗಿ ಕಂಡುಬರುತ್ತವೆ. ಸ್ವಾತಂತ್ರ್ಯ ಭಾರತದಲ್ಲಿ ಜಾತಿ ಅಸಮಾನತೆಯನ್ನು ಸರಿಪಡಿಸಲು ಮೀಸಲಾತಿಗಳನ್ನು ನೀಡಲಾಗಿದೆ. ಆಧುನಿಕ ಸಮಾಜದಲ್ಲಿ ಜಾತಿಗಿಂತ ಕೈಗಾರಿಕೀಕರಣ, ನಗರೀಕರಣ, ಆಧುನೀಕರಣಗಳು ನಗರ ಮತ್ತು ಗ್ರಾಮಗಳ ಮೇಲೆ ಹೆಚ್ಚು ಪ್ರಭಾವ ಬೀರುವ ಅಂಶಗಳಾಗಿವೆ. ಆದುದರಿಂದ ಆಧುನಿಕ ಸಮಾಜದಲ್ಲಿ ಸಾಮಾಜಿಕ ಆರ್ಥಿಕ ಅಂಶಗಳನ್ನು ನಿರ್ಧರಿಸುವಲ್ಲಿ ಜಾತಿಗಿಂತ ಗ್ರಾಮ ನಗರ ಅಂತರವು ಬಹಳ ಪ್ರಭಾವ ಬೀರುವ ಅಂಶವೆಂದು ಅಧ್ಯಯನದಿಂದ ತಿಳಿದುಬರುತ್ತದೆ.

"ದೇಶದ ನಗರೀಕರಣ, ಕೈಗಾರಿಕೀಕರಣ ಮತ್ತು ಜಾತ್ಯಾತೀತ ಪ್ರಕ್ರಿಯೆಗಳು ಜನರ ಸಾಮಾಜಿಕ ಮಾನಸಿಕ ಅಂಶಗಳ ಮೇಲೆ ಪ್ರಭಾವ ಬೀರಿ ಅವರ ಅಭಿಪ್ರಾಯ ಮತ್ತು ಮೌಲ್ಯ ಗಳಲ್ಲಿ ಬದಲಾವಣೆಯನ್ನು ಉಂಟುಮಾಡುತ್ತವೆ.

ಯಾವುದೇ ಸಾಂಪ್ರದಾಯಿಕ ಗ್ರಾಮಗಳಲ್ಲಿ ಆಧುನೀಕರಣ, ಜಾಗತೀಕರಣ ಮೌಲ್ಯ ಮತ್ತು ನವೀನ ನಾಗರಿಕತೆಯ ಮೌಲ್ಯಗಳು ಜನ ಮನೋಭಾವನೆಯಲ್ಲಿ ಮೂಡಿಬರಲು ನೆರವಾಗುವ ಪ್ರಮುಖ ಅಂಶಗಳೆಂದರೆ ಅವರ ಶಿಕ್ಷಣಮಟ್ಟ, ನಗರೀಕರಣ, ಕೈಗಾರಿಕೀಕರಣಗಳು ಎಂಬುದು ಅಧ್ಯಯನದಿಂದ ತಿಳಿದು ಬರುತ್ತದೆ.

ಮಹಿಳೆಯರ ಶಿಕ್ಷಣದ ಸಮಸ್ಯೆಗಳನ್ನು ಅರ್ಥಹಿಸುವಲ್ಲಿ ಮಹಿಳೆಯರ ಮನೋಭಾವನೆ, ಮತ್ತು ಹಿರಿಯ ನಾಗರಿಕರ ಭಾವನೆ ಏನು ಮತ್ತು ವಿಧ್ಯಾರ್ಥಿಗಳ ಮನೋಭಾವನೆ ಏನು ಎಂಬುದನ್ನು ಅರಿಯಲು ಪ್ರಶ್ನಾವಳಿಯನ್ನು ಒಂದೇರೀತಿ ಕೇಳಿ ಮಾಹಿತಿ ಸಂಗ್ರಹಿಸಲಾಗಿದೆ.

ಈ ಅಧ್ಯಾಯದಲ್ಲಿ ಮಹಿಳಾ ಶಿಕ್ಷಣದ ಸಮಸ್ಯೆಗಳನ್ನು ಸಾಮಾಜಿಕ ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ಗ್ರಾಮಗಳ ಮತ್ತು ಸಮಂದೂರು ಗ್ರಾಮ ಪಂಚಾಯಿತಿಯ ಗ್ರಾಮಗಳ ಪ್ರತಿ ಗ್ರಾಮಗಳಿಂದ ತಲಾ ೨೫ ಹಿರಿಯ ನಾಗರಿಕರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಸಮಾಜದಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ಹಿರಿಯ ತಲೆಮಾರಿನ ಜನರ ಅಭಿಪ್ರಾಯವೇನು ಎಂಬುದನ್ನು ತಿಳಿಯಲು ಈ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ಕುಟುಂಬದ ಹಿರಿಯ ಪುರುಷರೂ ಸಹ ಮಹಿಳಾ ಶಿಕ್ಷಣವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಸಮಾಜವನ್ನು ಪ್ರತಿಸಿಧಿಸುವ ಹಿರಿಯ ವಯೋಮಾನದ ಜನರು ಮಹಿಳಾ ಶಿಕ್ಷಣದ ಬಗ್ಗೆ

ಯಾವ ಅಭಿಪ್ರಾಯವನ್ನು ಹೊಂದಿದ್ದಾರೆ. ಅವರ ಅಭಿಪ್ರಾಯದ ಮೇಲೆ ನಗರೀಕರಣ ಮತ್ತು ಆಧುನೀಕರಣ ಪ್ರಭಾವ ಬೀರಿದೆ ಎಂಬುದನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ಈ ಅಧ್ಯಯನದಿಂದ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯ ಬಗ್ಗೆ ಹೇಗೆ ತಿಳಿದಿದ್ದಾರೆ ಎಂದು ಸಂದರ್ಶಿಸಿದಾಗ ನಗರಕ್ಕೆ ಹತ್ತಿರವಿರುವ ಗ್ರಾಮಗಳ ಹೆಚ್ಚಿನ ಹಿರಿಯ ನಾಗರಿಕರು ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಶಿಕ್ಷಣದ ಅವಶ್ಯಕತೆ ಇದೆ ಎಂದು ಒಪ್ಪಿಕೊಂಡಿದ್ದಾರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವಳಿಗೆ ಒಳ್ಳೆಯ ಉದ್ಯೋಗ ದೊರೆತು ಅವಳ ಗಂಡನನ್ನು ಆರ್ಥಿಕವಾಗಿ ಅವಲಂಬಿಸಬೇಕಾಗಿಲ್ಲ. ಕುಟುಂಬದ ಹೊರಗಡೆಯೂ ಸಹ ವ್ಯವಹರಿಸಲು ಬೇಕಾದ ಜ್ಞಾನ ದೊರೆಯುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೆಲವರು ಮಾತ್ರ ಮನೆಯ ಹಣಕಾಸಿನ ತೊಂದರೆ ಮತ್ತು ಮನೆ ಕೆಲಸಗಳನ್ನು ನಿರ್ವಹಿಸಲೇ ಬೇಕಾದ ಪರಿಸ್ಥಿತಿಯಿಂದಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲವೆಂದು ತಿಳಿಸಿದ್ದಾರೆ.

ಈ ಗ್ರಾಮಗಳ ಹಿರಿಯ ನಾಗರಿಕರು ತಲೆಮಾರಿನ ಅಂತರವಿದ್ದರೂ ಸಹ ಆಧುನೀಕರಣ ಮತ್ತು ನಗರೀಕರಣ ಪ್ರಭಾವಕ್ಕೆ ಒಳಗಾಗಿರುವುದರಿಂದ ಮಹಿಳಾ ಶಿಕ್ಷಣದ ಮಹತ್ವವನ್ನು ತಿಳಿದಿದ್ದಾರೆ. ಮಹಿಳಾ ಶಿಕ್ಷಣದ ಬಗ್ಗೆ ಒಲವನ್ನು ತೋರಿದ್ದಾರೆ.

ನಗರದಿಂದ ದೂರವಿರುವ ಸಮಂದೂರು ಗ್ರಾಮ ಪಂಚಾಯಿತಿಯ ಗ್ರಾಮಗಳ ಹಿರಿಯ ನಾಗರಿಕರಲ್ಲಿ ಶೇ.೬೦ ರಷ್ಟು ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲವೆಂದು ತಿಳಿಸಿದ್ದಾರೆ. ಶೇ.೪೦ ರಷ್ಟು ಆವಶ್ಯಕತೆ ಇದೆ ಎಂದು ತಿಳಿಸಿದ್ದಾರೆ. ಅವಶ್ಯಕತೆಯಿದೆ ಎಂದು ತಿಳಿಸಿರುವ ಹಿರಿಯ ನಾಗರಿಕರು ಅಕ್ಷರಸ್ಥರಾಗಿದ್ದು ಅವರ ಕುಟುಂಬಗಳಲ್ಲಿ ಹೆಚ್ಚಿನ ಸಂಖ್ಯೆಯ ಸದಸ್ಯರು ಅಕ್ಷರಸ್ಥರಾಗಿರುವುದರಿಂದ ಅವರಿಗೆ ಮಹಿಳಾ ಶಿಕ್ಷಣದ ಮಹತ್ವದ ಅರಿವಿರುವುದು ಕಂಡು ಬರುತ್ತದೆ. ಅವಶ್ಯಕತೆ ಇಲ್ಲವೆಂದು ಹೇಳಿರುವ ಹಿರಿಯ ನಾಗರಿಕರು ಅನಕ್ಷರಸ್ಥರು. ಕುಟುಂಬದ ಸದಸ್ಯರು ಸಹ ಅನಕ್ಷರಸ್ಥರಾಗಿದ್ದಾರೆ. ಜೊತೆಗೆ ಸಂಪ್ರದಾಯಸ್ಥರಾಗಿದ್ದಾರೆ. ಆದುದರಿಂದ ಅವರಿಗೆ ಮಹಿಳಾ ಶಿಕ್ಷಣದ ಮಹತ್ವ ತಿಳಿದಿಲ್ಲ. ಮಹಿಳಾ ಶಿಕ್ಷಣ ಅವಶ್ಯಕತೆ ಇಲ್ಲವೆಂದು ಹೇಳಿದ್ದಕ್ಕೆ ಕಾರಣಗಳನ್ನು ಕೇಳಿದಾಗ ಅವರು ನೀಡಿರುವ ಕಾರಣಗಳೇನೆಂದರೆ, ಹೆಣ್ಣು ಮಕ್ಕಳಿಗೆ ಶಿಕ್ಷಣಕ್ಕಿಂತ ವಿವಾಹ ಮುಖ್ಯ. ಆದುದರಿಂದ ಬೇಗ ವಿವಾಹ ಮಾಡಬೇಕು ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಕೆಲವರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಅವರಷ್ಟೇ ಶಿಕ್ಷಣ ಪಡೆದ ವರನನ್ನು ಹುಡುಕಲು ನಮಗೆ ತೊಂದರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇನ್ನೂ ಕೆಲವರು ಅವರ ಓದು ನಮಗೆ ಅನುಕೂಲವಿಲ್ಲ. ಗಂಡು ಮಕ್ಕಳ ಓದು ನಮಗೆ ಅನುಕೂಲವಾಗುತ್ತದೆ.

ಆದುದರಿಂದ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಇನ್ನೂ ಕೆಲವರು ಮನೆ ಕೆಲಸಗಳನ್ನು ಮಾಡಬೇಕು, ಚಿಕ್ಕ ಮಕ್ಕಳನ್ನು ನೋಡಿಕೊಳ್ಳಬೇಕು, ಹೊಲಗದ್ದೆಗಳಲ್ಲಿ ಕೆಲಸ ಮಾಡಬೇಕು ಮತ್ತು ಹಣಕಾಸಿನ ತೊಂದರೆ ಎಂಬ ತೋರಿಕೆಯ ಉತ್ತರಗಳನ್ನು ನೀಡಿದ್ದಾರೆ.

ಈ ಅಧ್ಯಯನದಲ್ಲಿ ಪರಿಶೀಲಿಸಿದಾಗ ಕಂಡುಬರುವುದೇನೆಂದರೆ ಹಿರಿಯ ನಾಗರಿಕರ ಶಿಕ್ಷಣ ಮತ್ತು ಅವರ ಕುಟುಂಬದ ಶಿಕ್ಷಣವು ಅವರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರುವುದು ಕಂಡು ಬರುತ್ತದೆ. ಜೊತೆಗೆ ಗ್ರಾಮ-ನಗರ ಅಂತರವೂ ಸಹ ನಗರದಿಂದ ದೂರವಿರುವ ಹಳ್ಳಿಯ ಹಿರಿಯ ನಾಗರಿಕರು ಸಾಂಪ್ರದಾಯಿಕ ಮನೋಭಾವನೆಗೆ ಕಾರಣವಾಗಿರುವುದು ತಿಳಿದು ಬರುತ್ತದೆ. ತಲೆಮಾರಿನ ಅಂತರವು ಎಷ್ಟೇ ಇದ್ದರೂ ಸಹ ಅವರ ಮನೋಭಾವನೆಯನ್ನು ಪ್ರೇರೇಪಿಸುವಲ್ಲಿ ಅವರ ಶಿಕ್ಷಣ ಮಟ್ಟ, ಕುಟುಂಬದ ಶಿಕ್ಷಣ ಮಟ್ಟ, ಗ್ರಾಮ ಮತ್ತು ನಗರಕ್ಕೆ ಇರುವ ಅಂತರಗಳೂ ಸಹ ಪ್ರಮುಖ ಪಾತ್ರವಹಿಸುವುದು ಈ ಅಧ್ಯಯನದಿಂದ ತಿಳಿದು ಬರುತ್ತದೆ.

ಈ ಅಧ್ಯಾಯದಲ್ಲಿ ಹಿರಿಯ ನಾಗರಿಕರನ್ನು ಮಹಿಳಾ ಶಿಕ್ಷಣದ ಬಗ್ಗೆ ಸಂದರ್ಶಿಸಿದಾಗ ಅವರು ನೀಡಿದ ಉತ್ತರಗಳ ಆಧಾರದ ಮೇಲೆ ಸಾಮಾಜಿಕ ನೆಲೆಗಳನ್ನು ಅರ್ಥೈಸಿಕೊಳ್ಳಲಾಗಿದೆ. ಹಿರಿಯ ನಾಗರಿಕರು ತಲೆಮಾರುಗಳಲ್ಲಿ ಹಿರಿಯರಾಗಿದ್ದು ಅವರು ಉಳಿದ ತಲೆಮಾರಿನವರಿಗೆ ಹೋಲಿಸಿದಾಗ ಸಾಂಪ್ರದಾಯಿಕ ಮನೋಭಾವನೆಯನ್ನು ಹೊಂದಿರುತ್ತಾರೆ. ಈ ಅಧ್ಯಯನದಲ್ಲಿ ಎರಡು ಗುಂಪಿನ ಹಿರಿಯ ನಾಗರಿಕರ ಮನೋಭಾವನೆಯು ಹೆಚ್ಚಾಗಿದ್ದು ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದರಿಂದ ಅವರಿಗೆ ಉತ್ತಮ ಭವಿಷ್ಯವಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ನಾಗರಿಕರು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಒಲವನ್ನು ತೋರದೆ ಗಂಡುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ನೀಡಿದ್ದಾರೆ. ಈ ಗ್ರಾಮಗಳ ನಾಗರಿಕರಲ್ಲಿ ಲಿಂಗತಾರತಮ್ಯ ಧೋರಣೆಯು ಹೆಚ್ಚಾಗಿ ಕಂಡು ಬರುತ್ತದೆ.

ಈ ಎರಡು ಗ್ರಾಮಗಳ ನಾಗರಿಕರ ಮನೋಭಾವನೆಯ ಮೇಲೆ ನಗರದ ಅಂತರವು ಬಹಳ ಪರಿಣಾಮ ಬೀರುವ ಅಂಶವಾಗಿ ಕಂಡು ಬರುತ್ತದೆ.

ಗ್ರಾಮಗಳ ಭೌಗೋಳಿಕ ನೆಲೆಯು ಸಹ ಗ್ರಾಮಗಳ ಜನರ ಮನಸ್ಥಿತಿಯನ್ನು ಬದಲಾಯಿಸುವಲ್ಲಿ ಪ್ರಮುಖ ಅಂಶವಾಗಿ ಕಂಡುಬರುತ್ತದೆ. ನಗರಗಳಿಗೆ ಹತ್ತಿರವಿರುವ ಗ್ರಾಮಗಳ ನಾಗರಿಕರು ಅನಕ್ಷರಸ್ಥರಾಗಿದ್ದರೂ ಸಹ, ನಗರೀಕರಣ, ಆಧುನೀಕರಣ ಮತ್ತು ಕೈಗಾರಿಕೀಕರಣ ಅವರ

ಮನಸ್ಥಿತಿಯ ಮೇಲೆ ನೇರ ಪ್ರಭಾವ ಬೀರಿವೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳ ಪುರುಷ ಮತ್ತು ಸ್ತ್ರೀಯರು ಹೆಚ್ಚು ವಿದ್ಯಾವಂತರಾಗಿದ್ದು ಕುಟುಂಬದ ಹೊರಗಡೆ ದುಡಿಯುತ್ತಿದ್ದಾರೆ ಮತ್ತು ಹೆಚ್ಚಿನ ಸಂಖ್ಯೆಯ ಮಹಿಳೆಯರು ಲಾಭದಾಯಕ ಹುದ್ದೆಗಳಲ್ಲಿದ್ದಾರೆ. ಅನಕ್ಷರಸ್ಥ ನಾಗರಿಕರು ಸಹ ಮಹಿಳಾ ಶಿಕ್ಷಣದ ಲಾಭಗಳನ್ನು ಅರಿತು ಕೊಂಡಿದಾರೆ. ಆದುದರಿಂದ ಅವರು ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳಂತೆ ಶಿಕ್ಷಣ ಅವಶ್ಯವೆಂದು ಅವರು ತಿಳಿದಿದ್ದಾರೆ. ಈ ಗ್ರಾಮಗಳ ಉತ್ತಮ ಆರ್ಥಿಕ ಸ್ಥಿತಿಗತಿಗಳು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದಕ್ಕೆ ಹೆಚ್ಚು ಉತ್ತೇಜನಕಾರಿಯಾಗಿದೆ.

ನಗರದಿಂದ ದೂರವಿರುವ ಗ್ರಾಮಗಳ ನಾಗರಿಕರಲ್ಲಿ ಹೆಚ್ಚು ಲಿಂಗತಾರತಮ್ಯ ಕಂಡುಬರುತ್ತದೆ. ಈ ಗ್ರಾಮಗಳ ಜನರು ಕೃಷಿ ಹಾಗೂ ಕೃಷಿ ಸಂಬಂಧಿತ ಉದ್ಯೋಗಗಳನ್ನು ಮಾಡುತ್ತಿದ್ದು ಅವರ ಆರ್ಥಿಕ ಸ್ಥಿತಿಗಳು ಉತ್ತಮವಾಗಿಲ್ಲ. ಆಧುನಿಕತೆಯ ಪ್ರಭಾವ ಅಷ್ಟಾಗಿ ಕಂಡು ಬರುವುದಿಲ್ಲ. ಅವರು ಗಂಡು ಮಕ್ಕಳ ಶಿಕ್ಷಣಕ್ಕೆ ನೀಡುವ ಪ್ರಾಮುಖ್ಯತೆಯನ್ನು ಹೆಣ್ಣು ಮಕ್ಕಳಿಗೆ ನೀಡುವುದಿಲ್ಲ. ಅವರಿಗೆ ಮಹಿಳಾ ಶಿಕ್ಷಣದ ಪ್ರಾಮುಖ್ಯತೆ ತಿಳಿದಿಲ್ಲ. ಇದರಿಂದ ತಿಳಿದುಬರುವುದೇನೆಂದರೆ ಗ್ರಾಮದ ಭೌಗೋಳಿಕ ನೆಲೆಯು ಸಹ ಮಹಿಳಾ ಶಿಕ್ಷಣದ ಮೇಲೆ ಮತ್ತು ನಾಗರಿಕರ ಮನಸ್ಥಿತಿಯ ಮೇಲೆ ನೇರ ಪ್ರಭಾವ ಬೀರುವ ಅಂಶವಾಗಿ ಕಂಡುಬರುತ್ತದೆ.

ತಲೆಮಾರಿನ ಅಂತರವು ಎಷ್ಟೇ ಇದ್ದರೂ ಸಹ ಅವರ ಮನೋಭಾವನೆಯನ್ನು ಪ್ರೇರೇಪಿಸು ವಲ್ಲಿ ಅವರ ಶಿಕ್ಷಣಮಟ್ಟ, ಕುಟುಂಬದ ಶಿಕ್ಷಣಮಟ್ಟ, ಗ್ರಾಮ ಮತ್ತು ನಗರಕ್ಕೆ ಇರುವ ಅಂತರಗಳು ಸಹ ಪ್ರಮುಖ ಪಾತ್ರವಹಿಸಿರುವುದು ಈ ಅಧ್ಯಯನದಿಂದ ತಿಳಿದು ಬರುತ್ತದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಹೆಚ್ಚಿನ ಹಿರಿಯ ನಾಗರಿಕರು ಮಹಿಳಾ ಶಿಕ್ಷಣದ ಬಗ್ಗೆ ಸಕಾರಾತ್ಮಕ ಭಾವನೆ ಹೊಂದಿರಲು ಕಾರಣ ಬೆಂಗಳೂರು ನಗರಕ್ಕೆ ಹತ್ತಿರವಿರುವುದರಿಂದ ಅವರು ಆಧುನಿಕತೆಗೆ ಒಳಗಾಗಿದ್ದಾರೆ. ಜೊತೆಗೆ ಅವರು ಅಕ್ಷರಸ್ಥರಾಗಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಹೆಚ್ಚಿನ ಹಿರಿಯ ನಾಗರಿಕರು ಶಿಕ್ಷಣದ ಬಗ್ಗೆ ನಕಾರಾತ್ಮಕ ಭಾವನೆ ಹೊಂದಿರಲು ಕಾರಣ ಅವರ ಅನಕ್ಷರತೆ, ಕುಟುಂಬದ ಅನಕ್ಷರತೆ ಮತ್ತು ಅವರು ನಗರೀಕರಣದ ಪ್ರಕ್ರಿಯೆಗೆ ಒಳಗಾಗದೆ ಇನ್ನೂ ಸಾಂಪ್ರದಾಯಿಕ ಭಾವನೆಯನ್ನು ಹೊಂದಿರುವುದು ಕಂಡುಬರುತ್ತದೆ.

ಕೊನೆಟಿಪ್ಪಣಿಗಳು

೧. *ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ*, ಟಿ.ಆರ್. ಚಂದ್ರಶೇಖರ, "ಅಭಿವೃದ್ಧಿ ಅಧ್ಯಯನ ಸಮಾಜ" ವಿಜ್ಞಾನ ಪತ್ರಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು.೫.

೨. "ಇಂಡಿಯ: ಡೆವಲಪ್‌ಮೆಂಟ್ ಅಂಡ್ ಪಾರ್ಟಿಸಿಪೇಷನ್", ಜೀನ್ ಡ್ರೀಜ್‌ಫ್ ಮತ್ತು ಅಮರ್ತ್ಯಸೇನ್, ಆಕ್ಸ್‌ವರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ೨೦೦೨, ಪು.೧೫೩.

೩. *ಸಾಕ್ಷರತೆಯ ಲಿಂಗಸಂಬಂಧಿ ಆಯಾಮಗಳು: ಕರ್ನಾಟಕದಲ್ಲಿ ಮಹಿಳಾ ಸಾಕ್ಷರತೆ ಸ್ವರೂಪ,* ಟಿ.ಆರ್. ಚಂದ್ರಶೇಖರ, "ಮಹಿಳಾ ಅಧ್ಯಯನ", ಸಂಪುಟ ೯, ಜುಲೈ-ಡಿಸೆಂಬರ್ ೨೦೦೨, ಪು.೮೭.

೪. ವಿಠಲರಾವ್ ಟಿ. ಗಾಯಕ್ವಾಡ್(ಅನು), "ಭಾರತೀಯ ಸ್ತ್ರೀ ಜೀವನ", ಮರಾಠಿಯಲ್ಲಿ ಡಾ. ಲೀಲಾಪಾಟಿಲ, ಕನ್ನಡಕ್ಕೆ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯, ಪು.೧೩೯.

೫. ಪ್ರತಿಮಾ ಕುಮಾರಿ, "ಚೇಂಜಿಂಗ್ ವ್ಯಾಲೂಸ್ ಅಮಾಂಗ್ ಯಂಗ್ ವುಮೆನ್", ಮರ್ ಪ್ರಕಾಶನ, ದೆಹಲಿ, ೧೯೮೮.

೬. ಪ್ರಮೀಳಾ ಕಪೂರ್, "ಮ್ಯಾರೇಜ್ ಅಂಡ್ ವರ್ಕಿಂಗ್ ವುಮೆನ್ ಇನ್ ಇಂಡಿಯ", ವಿಕಾಸ್ ಪ್ರಕಾಶನ, ನವದೆಹಲಿ, ಪು.೧೦.

ಅಧ್ಯಾಯ ಆರು

ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು ಶೈಕ್ಷಣಿಕ ಸಂಸ್ಥೆಗಳ ನೆಲೆಯಲ್ಲಿ

ಅಧ್ಯಾಯ ಆರು

ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು: ಶೈಕ್ಷಣಿಕ ಸಂಸ್ಥೆಗಳ ನೆಲೆಯಲ್ಲಿ

ಶಾಲೆಯು ಔಪಚಾರಿಕ ಶಿಕ್ಷಣದ ನಿಯೋಗಿಯಾಗಿದೆ. ಮಗುವಿನ ಸಾಮಾಜೀಕರಣದಲ್ಲಿ ಮನೆಯಷ್ಟೇ ಶಾಲೆಯೂ ಪ್ರಮುಖ ಪಾತ್ರವಹಿಸುತ್ತದೆ. ಉತ್ತಮ ನಾಗರಿಕನನ್ನಾಗಿ ಮಾಡುವ ಹಾಗೂ ಸಾಮಾಜಿಕ ಪ್ರಜ್ಞೆಯುಳ್ಳವನನ್ನಾಗಿ ಮಾಡುವ ಪ್ರತ್ಯಕ್ಷ ಶಿಕ್ಷಣ ನೀಡುವ ಸಾಧನವೆ ಶಾಲೆಯಾಗಿದೆ. ಇದು ಒಂದು ಸಕ್ರಿಯ ಸಂಸ್ಥೆಯಾಗಿದೆ. ಒಂದು ಔಪಚಾರಿಕ ಶಿಕ್ಷಣದ ಮಧ್ಯವರ್ತಿಯಾಗಿದೆ.[೧]

ಮಹಿಳಾ ಶಿಕ್ಷಣವು ಸಮಾಜದ ಅಭಿವೃದ್ಧಿಗೆ ಪೂರಕವಾದುದು. ಮಹಿಳೆಯರಿಗೆ ಶಿಕ್ಷಣ ನೀಡುವುದರಿಂದ ಕುಟುಂಬ, ಸಮಾಜಕ್ಕೆ ಬಹಳ ಪ್ರಯೋಜನವಿದೆ. ಮಹಿಳಾ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತ ಭಾರತ ಸರ್ಕಾರ ಸ್ವಾತಂತ್ರ್ಯದ ನಂತರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹತ್ತು ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಮಹಿಳಾ ಶಿಕ್ಷಣದ ಅಭಿವೃದ್ಧಿಯ ಕಡೆ ವಿಶೇಷ ಗಮನಹರಿಸಿದವು. ಮಹಿಳೆಯರಿಗೆ ಶಿಕ್ಷಣ ನೀಡುವುದರಿಂದ ದೇಶದ ಪ್ರಗತಿ ಸಾಧ್ಯವೆಂಬುದನ್ನು ಅರಿತು ಆ ನಿಟ್ಟಿನಲ್ಲಿ ಕಾರ್ಯೋನ್ಮುಖವಾದವು. ಮಹಿಳೆಯರಿಗೆ ಪ್ರಾಥಮಿಕ ಹಂತದಿಂದ ಉನ್ನತ ಹಂತದವರೆವಿಗೂ ಉಚಿತ ಶಿಕ್ಷಣ ನೀಡುವುದು, ವಸತಿ ನಿಲಯಗಳ ಸ್ಥಾಪನೆ, ವಿದ್ಯಾರ್ಥಿ ವೇತನಗಳನ್ನು ನೀಡುವುದು, ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ, ರಾಜಕೀಯ ಕ್ಷೇತ್ರ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಹಾಗೂ ಇನ್ನೂ ಮಹಿಳಾ ಪರ ಕಾರ್ಯಕ್ರಮಗಳನ್ನು ಕೈಗೊಂಡು ಮಹಿಳೆಯರ ಸ್ಥಿತಿಗತಿಗಳನ್ನು ಹೆಚ್ಚಿಸಲು ಸರ್ಕಾರ ಪ್ರಯತ್ನಿಸಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ವಿವಿಧ ವರ್ಷಗಳಲ್ಲಿ ಹಂತಹಂತವಾಗಿ ಏರಿಕೆಯಾಗುತ್ತ ಬರುತ್ತಿದೆ. ಆದರೆ ಪುರುಷರ ಶಿಕ್ಷಣಕ್ಕೆ ಹೋಲಿಸಿದರೆ ಮಹಿಳಾ ಶಿಕ್ಷಣಮಟ್ಟ ತುಂಬಾ ಕಡಿಮೆಯಿದೆ. ಗ್ರಾಮೀಣ ಮಹಿಳಾ ಶಿಕ್ಷಣವಂತೂ ಬಹಳ ಕೆಳಮಟ್ಟದಲ್ಲಿರುವುದು ಸಮೀಕ್ಷೆಗಳಿಂದ ತಿಳಿದುಬರುತ್ತದೆ.

ಅಧ್ಯಾಯ ಆರು

ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು: ಶೈಕ್ಷಣಿಕ ಸಂಸ್ಥೆಗಳ ನೆಲೆಯಲ್ಲಿ

ಶಾಲೆಯು ಔಪಚಾರಿಕ ಶಿಕ್ಷಣದ ನಿಯೋಗಿಯಾಗಿದೆ. ಮಗುವಿನ ಸಾಮಾಜೀಕರಣದಲ್ಲಿ ಮನೆಯಷ್ಟೇ ಶಾಲೆಯೂ ಪ್ರಮುಖ ಪಾತ್ರವಹಿಸುತ್ತದೆ. ಉತ್ತಮ ನಾಗರಿಕನನ್ನಾಗಿ ಮಾಡುವ ಹಾಗೂ ಸಾಮಾಜಿಕ ಪ್ರಜ್ಞೆಯುಳ್ಳವನನ್ನಾಗಿ ಮಾಡುವ ಪ್ರತ್ಯಕ್ಷ ಶಿಕ್ಷಣ ನೀಡುವ ಸಾಧನವೆ ಶಾಲೆಯಾಗಿದೆ. ಇದು ಒಂದು ಸಕ್ರಿಯ ಸಂಸ್ಥೆಯಾಗಿದೆ. ಒಂದು ಔಪಚಾರಿಕ ಶಿಕ್ಷಣದ ಮಧ್ಯವರ್ತಿಯಾಗಿದೆ.[೧]

ಮಹಿಳಾ ಶಿಕ್ಷಣವು ಸಮಾಜದ ಅಭಿವೃದ್ಧಿಗೆ ಪೂರಕವಾದುದು. ಮಹಿಳೆಯರಿಗೆ ಶಿಕ್ಷಣ ನೀಡುವುದರಿಂದ ಕುಟುಂಬ, ಸಮಾಜಕ್ಕೆ ಬಹಳ ಪ್ರಯೋಜನವಿದೆ. ಮಹಿಳಾ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತ ಭಾರತ ಸರ್ಕಾರ ಸ್ವಾತಂತ್ರ್ಯದ ನಂತರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹತ್ತು ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಮಹಿಳಾ ಶಿಕ್ಷಣದ ಅಭಿವೃದ್ಧಿಯ ಕಡೆ ವಿಶೇಷ ಗಮನಹರಿಸಿದವು. ಮಹಿಳೆಯರಿಗೆ ಶಿಕ್ಷಣ ನೀಡುವುದರಿಂದ ದೇಶದ ಪ್ರಗತಿ ಸಾಧ್ಯವೆಂಬುದನ್ನು ಅರಿತು ಆ ನಿಟ್ಟಿನಲ್ಲಿ ಕಾರ್ಯೋನ್ಮುಖವಾದವು. ಮಹಿಳೆಯರಿಗೆ ಪ್ರಾಥಮಿಕ ಹಂತದಿಂದ ಉನ್ನತ ಹಂತದವರೆವಿಗೂ ಉಚಿತ ಶಿಕ್ಷಣ ನೀಡುವುದು, ವಸತಿ ನಿಲಯಗಳ ಸ್ಥಾಪನೆ, ವಿದ್ಯಾರ್ಥಿ ವೇತನಗಳನ್ನು ನೀಡುವುದು, ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ, ರಾಜಕೀಯ ಕ್ಷೇತ್ರ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಹಾಗೂ ಇನ್ನೂ ಮಹಿಳಾ ಪರ ಕಾರ್ಯಕ್ರಮಗಳನ್ನು ಕೈಗೊಂಡು ಮಹಿಳೆಯರ ಸ್ಥಿತಿಗತಿಗಳನ್ನು ಹೆಚ್ಚಿಸಲು ಸರ್ಕಾರ ಪ್ರಯತ್ನಿಸಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ವಿವಿಧ ವರ್ಷಗಳಲ್ಲಿ ಹಂತಹಂತವಾಗಿ ಏರಿಕೆಯಾಗುತ್ತ ಬರುತ್ತಿದೆ. ಆದರೆ ಪುರುಷರ ಶಿಕ್ಷಣಕ್ಕೆ ಹೋಲಿಸಿದರೆ ಮಹಿಳಾ ಶಿಕ್ಷಣಮಟ್ಟ ತುಂಬಾ ಕಡಿಮೆಯಿದೆ. ಗ್ರಾಮೀಣ ಮಹಿಳಾ ಶಿಕ್ಷಣವಂತೂ ಬಹಳ ಕೆಳಮಟ್ಟದಲ್ಲಿರುವುದು ಸಮೀಕ್ಷೆಗಳಿಂದ ತಿಳಿದುಬರುತ್ತದೆ.

ಶಾಲೆಯು ಔಪಚಾರಿಕೆ ಶಿಕ್ಷಣದ ನಿಯೋಗಿಯಾಗಿದೆ. ಮಗುವಿನ ಸಾಮಾಜೀಕರಣದಲ್ಲಿ ಮನೆ (ಕುಟುಂಬ)ಯಷ್ಟೇ ಶಾಲೆಯು ಪ್ರಮುಖ ಪಾತ್ರವಹಿಸುತ್ತದೆ. "ಮನೆಯೇ ಮಗುವಿನ ಮೊದಲ ಪಾಠಶಾಲೆ", ಎರಡನೆ ಪಾಠಶಾಲೆಯೇ 'ಶಾಲೆ". ಮನೆ ಮತ್ತು ಶಾಲೆ ಇವು ಪ್ರಭಾವ ಶಾಲಿಯಾದ ನಿಯೋಗಿಗಳಾಗಿವೆ.

ಅಪೇಕ್ಷಿತ ಅನುಭವಗಳನ್ನು ಒದಗಿಸಿ ಇಚ್ಚಿತ ರೀತಿಯಲ್ಲಿ ಮಗುವಿನ ವರ್ತನೆಯನ್ನು ಬದಲಿಸುವ, ಅಂತಃಶಕ್ತಿಗಳನ್ನು ವಿಕಾಸಗೊಳಿಸುವ, ಉತ್ತಮ ನಾಗರಿಕನನ್ನಾಗಿ ಮಾಡುವ ಹಾಗೂ ಸಮಾಜಪ್ರಜ್ಞೆಯುಳ್ಳವನಾಗಿ ಮಾಡುವ ಪ್ರತ್ಯಕ್ಷ ಶಿಕ್ಷಣ ನೀಡುವ ಸಾಧನವೇ ಶಾಲೆಯಾಗಿದೆ. ಇದು ಒಂದು ಸಕ್ರಿಯ ಸಂಸ್ಥೆಯಾಗಿದೆ. ಅದು ಒಂದು ಔಪಚಾರಿಕ ಶಿಕ್ಷಣ ಮಧ್ಯವರ್ತಿಯಾಗಿದೆ. ಇಂದು ಅದು ಪ್ರಾಚೀನ ಶಿಕ್ಷಣದಂತೆ ಸಾಂಸ್ಕೃತಿಕ ಪರಂಪರೆಯನ್ನು ಕೊಂಡೊಯ್ಯುವ ಸಾಧನವಾಗಿದೆ ಹಾಗೂ ಮಾನವನ ಮೂಲಭೂತ ಜ್ಞಾನವನ್ನು ದೊರಕಿಸಿಕೊಡುವ ಕೇಂದ್ರವಾಗಿದೆ.

ಮಹಿಳಾ ಶಿಕ್ಷಣ ಪ್ರಗತಿಯತ್ತ ಸಾಗುವಲ್ಲಿ ಹಲವಾರು ಸಮಸ್ಯೆಗಳಿರುತ್ತವೆ. ಸಂಪ್ರದಾಯ, ಪೋಷಕರ ಅಜ್ಞಾನ, ಬಡತನ, ಮಹಿಳೆಯರಿಗೆ ಪ್ರತ್ಯೇಕವಾಗಿ ಶಿಕ್ಷಣ ನೀಡುವ ಶಾಲೆಗಳ ಸಂಖ್ಯೆ ಸಾಕಷ್ಟಿಲ್ಲ, ಮಹಿಳಾ ಶಿಕ್ಷಕಿಯರ ಕೊರತೆ, ಮಹಿಳಾ ವಸತಿ ನಿಲಯಗಳ ಕೊರತೆ, ಮಹಿಳಾ ಶಿಕ್ಷಣ ಪಡೆಯುವಲ್ಲಿ ಸಮಸ್ಯೆಯನ್ನುಂಟು ಮಾಡುತ್ತವೆ.

ಈ ಅಧ್ಯಾಯದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಶೈಕ್ಷಣಿಕ ಸಂಸ್ಥೆಗಳಲ್ಲಿರುವ ಸಮಸ್ಯೆಗಳಾವುವು ಎಂಬುದನ್ನು ತಿಳಿಯುವುದು. ಜೊತೆಗೆ ಶಿಕ್ಷಕರು ಮತ್ತು ಮಹಿಳಾ ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಯ ಭಾಗವಾದುದರಿಂದ ಅವರನ್ನು ಸಂದರ್ಶನ ಮಾಡಿ ಮಹಿಳೆಯರ ಶಿಕ್ಷಣಕ್ಕೆ ಇರುವ ಸಮಸ್ಯೆಗಳೇನೆಂಬ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಂತೆಯೆ ಮಹೆಳೆಯರಿಗೆ ಶಿಕ್ಷಣದಲ್ಲಿ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಪಾತ್ರವೇನು ಎಂಬುದನ್ನು ಅರಿಯುವುದಾಗಿದೆ. ಮಹಿಳಾ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ತಮ್ಮ ಕುಟುಂಬದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುತ್ತಾರೆ ಎಂದು ಪ್ರಶ್ನಿಸಿ ಮಾಹಿತಿ ಪಡೆದುಕೊಳ್ಳಲಾಗಿದೆ.

ಗ್ರಾಮೀಣ ಸಮಾಜದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪ್ರಮಾಣ ಕಡಿಮೆ ಇರುವುದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ಅವರಿಗೆ ಓದುವ ಅವಕಾಶಗಳೇ ಮಿತವಾಗಿವೆ. ಹೆಣ್ಣುಮಕ್ಕಳು ಶಿಕ್ಷಣ ಪಡೆಯಲು ಶಾಲೆಯೇ ತಮ್ಮ ಗ್ರಾಮದಲ್ಲಿ ಇಲ್ಲದ ಸಂದರ್ಭದಲ್ಲಿ ಪಕ್ಕದ ಗ್ರಾಮಕ್ಕೆ ಹೋಗಬೇಕಾದಾಗ ಆಗುವ ಆಯಾಸದಿಂದ ಕೂಡ ಹೆಣ್ಣುಮಕ್ಕಳ ವಿದ್ಯಾಭ್ಯಾಸ ನಿರೀಕ್ಷಿತ ಪ್ರಮಾಣದಲ್ಲಿ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಹೆಣ್ಣುಮಕ್ಕಳಿಗೆ ನೀಡುತ್ತಿರುವ ಉಚಿತ ಸೈಕಲ್ ಯೋಜನೆ ಒಂದಿಷ್ಟು ಬದಲಾವಣೆಯನ್ನು ತಂದಿದ್ದರೂ ಅದು ಇನ್ನೂ

ಲಕ್ಷಾಂತರ ಹೆಣ್ಣುಮಕ್ಕಳನ್ನು ತಲುಪಬೇಕಿದೆ. ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲದಿರುವುದು ಕೆಲವು ಶಾಲೆಗಳಲ್ಲಿ ಶೌಚಾಲಯವೇ ಇಲ್ಲದಿರುವುದು ಕೂಡ ಹೆಣ್ಣುಮಕ್ಕಳು ಮತ್ತು ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟುಹಾಕುತ್ತಾರೆ. ಗ್ರಾಮೀಣ ಸಮಾಜದಲ್ಲಿ ಹೆಣ್ಣುಮಕ್ಕಳು ಪುರುಷ ಶಿಕ್ಷಕರೊಂದಿಗೆ ಮುಕ್ತಮಾತುಕತೆಗೆ ಮುಜುಗರವಿರುವುದರಿಂದ ಶಾಲೆಯಲ್ಲಿ ಮಹಿಳಾ ಶಿಕ್ಷಕರಿಲ್ಲದಿದ್ದರೆ ಸಂಪ್ರದಾಯಸ್ಥ ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿತೋರುವುದಿಲ್ಲ. ಇಂದಿಗೂ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಕೇವಲ ೨೯% ಮಹಿಳಾ ಶಿಕ್ಷಕರು, ಪ್ರೌಢ ಶಿಕ್ಷಣದಲ್ಲಿ ಕೇವಲ ೨೨% ಮಹಿಳಾ ಶಿಕ್ಷಕರಿರುವುದು ಪರೋಕ್ಷವಾಗಿ ಹೆಣ್ಣುಮಕ್ಕಳ ಶಿಕ್ಷಣದಮೇಲೆ ಪ್ರಭಾವ ಬೀರುತ್ತದೆ. ಶಿಕ್ಷಕರು ಪಾಲಕರಿಗೆ ಸೂಕ್ತ ತಿಳುವಳಿಕೆ ನೀಡುವುದು ಬಹಳ ಅಗತ್ಯವಾದುದು. ಗ್ರಾಮೀಣ ಸಮಾಜದಲ್ಲಿ ಹೆಚ್ಚಿನ ಸಂಖ್ಯೆಯ ಪಾಲಕರು ಅನಕ್ಷರಸ್ಥರಾಗಿದ್ದಾರೆ. ಅವರಿಗೆ ಶಿಕ್ಷಕರು ಮಹಿಳಾ ಶಿಕ್ಷಣದ ಬಗ್ಗೆ ಸೂಕ್ತ ಶಿಕ್ಷಣ ನೀಡಬೇಕಾದ ಅಗತ್ಯವಿದೆ. ಆದರೆ ಎಷ್ಟೋ ಗ್ರಾಮೀಣ ಶಾಲೆಗಳಲ್ಲಿ ಶಿಕ್ಷಕರು ಪಾಲಕರಿಗೆ ಸೂಕ್ತ ತಿಳುವಳಿಕೆ ನೀಡುತ್ತಿಲ್ಲ.

ಈ ಅಧ್ಯಾಯದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಶಾಲೆಗಳಲ್ಲಿ ಇರುವ ಪ್ರಮುಖ ಸಮಸ್ಯೆಗಳೇನು ಮತ್ತು ಶಾಲೆಗಳ ಮುಖ್ಯೋಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಮನೋಭಾವನೆಯೇನು ಎಂಬುದನ್ನು ಅರಿಯುವುದಾಗಿದೆ. ಆದುದರಿಂದ ಶಾಲೆಗಳ ಮುಖ್ಯೋಪಾಧ್ಯಾಯರನ್ನು ಮತ್ತು ವಿದ್ಯಾರ್ಥಿಗಳನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಅವರು ನೀಡಿದ ಮಾಹಿತಿಯ ಆದಾರದ ಮೇಲೆ ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳೆಯರ ಶಿಕ್ಷಣಕ್ಕೆ ಇರುವ ಪ್ರಮುಖ ಸಮಸ್ಯೆಗಳೇನು ಎಂಬುದನ್ನು ತಿಳಿದುಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ನಗರಕ್ಕೆ ಹತ್ತಿರವಿರುವ ಗ್ರಾಮಗಳ ೧೦ ಸರ್ಕಾರಿ ಶಾಲಾ ಮತ್ತು ೧೦ ಖಾಸಗಿ ಶಾಲಾ ಮುಖ್ಯೋಪಾಧ್ಯಾಯರನ್ನು ಮತ್ತು ೨೫ ಖಾಸಗಿ ಶಾಲಾ ಮಹಿಳಾ ವಿದ್ಯಾರ್ಥಿಗಳನ್ನು, ಹಾಗೂ ೨೫ ಸರ್ಕಾರಿ ಶಾಲಾ ಮಹಿಳಾ ವಿದ್ಯಾರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆಮಾಡಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅದೇ ರೀತಿ ನಗರದಿಂದ ದೂರವಿರುವ ಗ್ರಾಮಗಳ ೧೦ ಸರ್ಕಾರಿ ಶಾಲಾ ಮತ್ತು ೧೦ ಖಾಸಗಿ ಶಾಲಾ ಮುಖ್ಯೋಪಾಧ್ಯಾಯರನ್ನು ಮತ್ತು ೨೫ ಖಾಸಗಿ ಶಾಲಾ ಮಹಿಳಾ ವಿದ್ಯಾರ್ಥಿಗಳನ್ನು ಮತ್ತು ೨೫ ಸರ್ಕಾರಿ ಶಾಲಾ ಮಹಿಳಾ ವಿದ್ಯಾರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆಮಾಡಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಮತ್ತು ಬಿಡಲು ಇರುವ ಪ್ರಮುಖ ಕಾರಣಗಳೇನು ಎಂಬುದನ್ನು ಶಾಲಾ ಮುಖ್ಯೋಪಾಧ್ಯಾಯರನ್ನು ಸಂದರ್ಶನ ಮಾಡಿ ಅವರಿಂದ ಮಾಹಿತಿ ಪಡೆಯಲಾಗಿದೆ.

ಪಟ್ಟಿ ೬.೧ ರಲ್ಲಿ ಗ್ರಾಮೀಣ ಹೆಣ್ಣುಮಕ್ಕಳು ಶಾಲೆಯನ್ನು ಬಿಟ್ಟು ಬಿಡುವವರ ಸಂಖ್ಯೆ ಮತ್ತು ಕಾರಣಗಳನ್ನು ತಿಳಿಯಲು ನಗರಕ್ಕೆ ಹತ್ತಿರವಾಗಿರುವ ಸರ್ಕಾರಿ ಮತ್ತು ಖಾಸಗಿ ಶಾಲಾ ಮುಖ್ಯೋಪಾಧ್ಯಾಯರನ್ನು ಸಂದರ್ಶನ ಮಾಡಲಾಗಿದೆ.

ಪಟ್ಟಿ ೬.೧

ಶಾಲಾ ಮುಖ್ಯೋಪಾಧ್ಯಾಯರ ಸಂದರ್ಶನ: ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ

ಶಾಲಾ ಮುಖ್ಯೋಪಾಧ್ಯಾಯರು		ಹೆಚ್ಚು	ಸಾಧಾರಣ	ಕಡಿಮೆ	ಇಲ್ಲವೇ ಇಲ್ಲ	ಒಟ್ಟು
ನಗರಕ್ಕೆ ಹತ್ತಿರವಾಗಿರುವ ಶಾಲಾ ಮುಖ್ಯೋಪಾಧ್ಯಾಯರು	ಸರ್ಕಾರಿ		೦೧	೦೯	–	೧೦
	ಖಾಸಗಿ			೦೧	೦೯	೧೦
ನಗರಕ್ಕೆ ದೂರವಾಗಿರುವ ಶಾಲಾ ಮುಖ್ಯೋಪಾಧ್ಯಾಯರು	ಸರ್ಕಾರಿ	೦೮	೦೨			೧೦
	ಖಾಸಗಿ		೦೨	೦೬	೦೨	೧೦
ಒಟ್ಟು		೦೮	೦೫	೧೬	೧೧	೪೦

ನಗರಕ್ಕೆ ಹತ್ತಿರವಾಗಿರುವ ೧೦ ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರಲ್ಲಿ ಶೇ.೯೦ ರಷ್ಟು ಮುಖ್ಯೋಪಾಧ್ಯಾಯರು ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಕಡಿಮೆ ಎಂದು ಹೇಳಿದ್ದಾರೆ. ಶೇ.೧೦ ರಷ್ಟು ಮುಖ್ಯೋಪಾಧ್ಯಾಯರು ಸಾಧಾರಣ ಎಂಬ ಉತ್ತರ ನೀಡಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ಹೆಣ್ಣುಮಕ್ಕಳು ಶಾಲೆ ಬಿಡುವುದಕ್ಕೆ ಕಾರಣಗಳಾಗಿ, ಕುಟುಂಬದ ಬಡತನ, ಮನೆ ಕೆಲಸಗಳನ್ನು ಮಾಡಬೇಕಾದ ಜವಾಬ್ದಾರಿಗಳನ್ನು ನೀಡಿದ್ದಾರೆ.

ನಗರಕ್ಕೆ ಹತ್ತಿರವಿರುವ ಖಾಸಗಿ ಶಾಲಾ ಮುಖ್ಯೋಪಾಧ್ಯಾಯರಲ್ಲಿ ಶೇ.೯೦ ರಷ್ಟು ಮುಖ್ಯೋಪಾಧ್ಯಾಯರು ಶಾಲೆಯನ್ನು ಬಿಡುವುದೇಯಿಲ್ಲ ಎಂದು ಉತ್ತರಿಸಿದ್ದಾರೆ. ಶೇ.೧೦ ರಷ್ಟು ಮುಖ್ಯೋಪಾಧ್ಯಾಯರು ಕಡಿಮೆ ಎಂದು ಹೇಳಿದ್ದಾರೆ.

ನಮ್ಮ ಶಾಲೆಗಳಲ್ಲಿ ಬರುವ ಹೆಣ್ಣುಮಕ್ಕಳ ಕುಟುಂಬದ ಆರ್ಥಿಕ ಸ್ಥಿತಿಗತಿಗಳು ಉತ್ತಮವಾಗಿವೆ ಮತ್ತು ತಂದೆ ತಾಯಿಯರು ವಿದ್ಯಾವಂತರಾಗಿದ್ದಾರೆ. ಅವರಿಗೆ ಹೆಣ್ಣುಮಕ್ಕಳ ಶಿಕ್ಷಣದ ಮಹತ್ವ ತಿಳಿದಿದೆ. ಆದುದರಿಂದ ನಮ್ಮ ಖಾಸಗಿ ಶಾಲೆಗಳಲ್ಲಿ ಶಾಲೆ ಬಿಟ್ಟುಬಿಡುವವರ ಸಂಖ್ಯೆ ಗಣನೀಯವಾಗಿ ಕಡಿಮೆ ಇದೆ ಎಂದು ಹೇಳಿದ್ದಾರೆ.

ಅದೇ ರೀತಿ ನಗರಕ್ಕೆ ದೂರವಿರುವ ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರಲ್ಲಿ ಶೇ.೮೦ ರಷ್ಟು ಮುಖ್ಯೋಪಾಧ್ಯಾಯರು ಹೆಚ್ಚು ಹೆಣ್ಣುಮಕ್ಕಳು ಶಾಲೆಯನ್ನು ಬಿಟ್ಟು ಬಿಡುತ್ತಾರೆ ಎಂದು ಉತ್ತರಿಸಿದ್ದಾರೆ. ಶೇ.೨೦ ರಷ್ಟು ಮುಖ್ಯೋಪಾಧ್ಯಾಯರು ಸಾಧಾರಣ ಎಂಬ ಉತ್ತರ ನೀಡಿದ್ದಾರೆ.

ಶಾಲೆ ಬಿಡುವುದಕ್ಕೆ ಕಾರಣಗಳನ್ನಾಗಿ, ಪಾಲಕರ ಬಡತನ, ಬಾಲ್ಯ ವಿವಾಹ, ಮನೆ ಕೆಲಸಗಳನ್ನು ನಿರ್ವಹಿಸುವುದು, ಸ್ತ್ರೀ ಶಿಕ್ಷಣದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಕಾರಣವಾಗಿ ತಿಳಿಸಿದ್ದಾರೆ.

ನಗರಕ್ಕೆ ದೂರವಿರುವ ಖಾಸಗಿ ಶಾಲಾ ಮುಖ್ಯೋಪಾಧ್ಯಾಯರಲ್ಲಿ ಶೇ.೨೦ ರಷ್ಟು ಸಾಧಾರಣ ಎಂದು, ಶೇ.೬೦ ರಷ್ಟು ಮುಖ್ಯೋಪಾಧ್ಯಾಯರು ಬಿಡುವ ಸಂಖ್ಯೆ ಕಡಿಮೆ ಎಂದು, ಶೇ.೨೦ ರಷ್ಟು ಮುಖ್ಯೋಪಾಧ್ಯಾಯರು ಇಲ್ಲವೇ ಇಲ್ಲ ಎಂದು ಹೇಳಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಸರ್ಕಾರಿ ಮತ್ತು ಖಾಸಗಿ ಶಾಲಾ ಮುಖ್ಯೋಪಾಧ್ಯಾಯರು ಮತ್ತು ನಗರಕ್ಕೆ ದೂರವಿರುವ ಗ್ರಾಮಗಳ ಸರ್ಕಾರಿ ಮತ್ತು ಖಾಸಗಿ ಶಾಲಾ ಮುಖ್ಯೋಪಾಧ್ಯಾಯರಲ್ಲಿ ಶೇ.೨೦ ರಷ್ಟು ಮುಖ್ಯೋಪಾಧ್ಯಾಯರು ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಹೆಚ್ಚು ಎಂದು ಹೇಳಿದ್ದಾರೆ. ಅದರಲ್ಲಿಯೂ ನಗರದಿಂದ ದೂರವಿರುವ ಗ್ರಾಮಗಳ ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶಾಲೆ ಬಿಡುವುದಕ್ಕೆ ಪ್ರಮುಖ ಕಾರಣಗಳಾಗಿ ಪೋಷಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು ಕೆಳ ಮಟ್ಟದಲ್ಲಿರುವುದಾಗಿದೆ. ಅಂದರೆ ಪೋಷಕರಲ್ಲಿರುವ ಬಡತನ, ಮನೆಯಲ್ಲಿರುವ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಬೇಕಾಗಿರುವುದು. ಮನೆ ಕೆಲಸಗಳನ್ನು ಮಾಡಬೇಕಾಗಿರುವುದಾಗಿ ತಿಳಿಸಿದ್ದಾರೆ. ಶಾಲಾ ಮುಖ್ಯೋಪಾಧ್ಯಾಯರ ಅಭಿಪ್ರಾಯದಂತೆ ಶಾಲೆ ಬಿಡುವವರಲ್ಲಿ ಬಡವರು ಮತ್ತು ಪರಿಶಿಷ್ಟ ಜಾತಿಯರೇ ಹೆಚ್ಚು ಎಂದು ತಿಳಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಶೇ.೨.೫ ರಷ್ಟು ಸರ್ಕಾರಿ ಮತ್ತು ಖಾಸಗಿ ಶಾಲಾ ಮುಖ್ಯೋಪಾಧ್ಯಾಯರು ಮತ್ತು ನಗರದಿಂದ ದೂರವಿರುವ ಗ್ರಾಮಗಳ ಶೇ.೫ ರಷ್ಟು ಸರ್ಕಾರಿ

ಮತ್ತು ಶೇ.೫ ರಷ್ಟು ಖಾಸಗಿ ಶಾಲಾ ಮುಖ್ಯೋಪಾಧ್ಯಾಯರು ಅಂದರೆ ಒಟ್ಟು ಶೇ.೧೨.೫ ರಷ್ಟು ಮುಖ್ಯೋಪಾಧ್ಯಾಯರು ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಸಾಧಾರಣ ಎಂದು ಉತ್ತರಿಸಿದ್ದಾರೆ. ನಗರದಿಂದ ದೂರವಿರುವ ಹೆಚ್ಚಿನ ಖಾಸಗಿ ಮತ್ತು ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಶೇ.೨೨.೫ ರಷ್ಟು ಸರ್ಕಾರಿ ಶಾಲೆ ಮತ್ತು ಶೇ.೨.೫ ರಷ್ಟು ಖಾಸಗಿ ಶಾಲೆ ಮುಖ್ಯೋಪಾಧ್ಯಾಯರು ಮತ್ತು ನಗರದಿಂದ ದೂರವಿರುವ ಶೇ.೧೫ ರಷ್ಟು ಖಾಸಗಿ ಶಾಲಾ ಮುಖ್ಯೋಪಾಧ್ಯಯರು ಅಂದರೆ ಒಟ್ಟು ಮುಖ್ಯೋಪಾಧ್ಯಾಯರಲ್ಲಿ ಶೇ.೪೦ ರಷ್ಟು ಮುಖ್ಯೋಪಾಧ್ಯಾಯರು ಶಾಲೆ ಬಿಡುವವರ ಸಂಖ್ಯೆ ಕಡಿಮೆ ಎಂದು ಹೇಳಿದ್ದಾರೆ. ನಗರಕ್ಕೆ ಹತ್ತಿರವಿರುವ ಪೋಷಕರ ಉತ್ತಮ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳಿಂದಾಗಿ ಅವರು ತಮ್ಮ ಹೆಣ್ಣುಮಕ್ಕಳನ್ನು ಶಾಲೆ ಬಿಡಿಸದೆ ಶಿಕ್ಷಣ ಕೊಡಿಸುತ್ತಾರೆ ಎಂದು ಉತ್ತರಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಶೇ.೨೨.೫ ರಷ್ಟು ಖಾಸಗಿ ಶಾಲಾ ಮುಖ್ಯೋಪಾಧ್ಯಾಯರು ಮತ್ತು ನಗರದಿಂದ ದೂರವಿರುವ ಶೇ.೫ ರಷ್ಟು ಖಾಸಗಿ ಶಾಲಾ ಮುಖ್ಯೋಪಾಧ್ಯಾಯರು ಅಂದರೆ ಒಟ್ಟು ಶೇ.೨೭.೫ ರಷ್ಟು ಮುಖ್ಯೋಪಾಧ್ಯಾಯರು ಶಾಲೆ ಬಿಡುವ ಮಕ್ಕಳ ಸಂಖ್ಯೆ ಇಲ್ಲವೇ ಇಲ್ಲ ಎಂದು ಹೇಳಿದ್ದಾರೆ. ಅಂದರೆ ನಗರದಿಂದ ದೂರವಿರುವ ಹಾಗೂ ನಗರಕ್ಕೆ ಹತ್ತಿರವಿರುವ ಖಾಸಗಿ ಶಾಲಾ ಪೋಷಕರ ಉತ್ತಮ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳಿಂದಾಗಿ ಅವರು ಮಹಿಳಾ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತಿದ್ದಾರೆ. ಆದುದರಿಂದ ಅವರು ತಮ್ಮ ಹೆಣ್ಣುಮಕ್ಕಳನ್ನು ಶಾಲೆ ಬಿಡಿಸದೆ ಶಿಕ್ಷಣವನ್ನು ಮುಂದುವರಿಸುತ್ತಾರೆ ಎಂಬ ಉತ್ತರವನ್ನು ಮುಖ್ಯೋಪಾಧ್ಯಾಯರು ನೀಡಿದ್ದಾರೆ.

ಮಹಿಳೆಯರಿಗೆ ಶಿಕ್ಷಣ ಕೊಡಿಸುವಲ್ಲಿ ಪೋಷಕರ, ಕುಟುಂಬದ ಮತ್ತು ಗ್ರಾಮ ಪರಿಸರವು ನೇರ ಪ್ರಭಾವ ಬೀರುವ ಅಂಶಗಳಾಗಿವೆ. ಅದರಲ್ಲಿಯೂ ಗ್ರಾಮ ಮತ್ತು ನಗರ ಅಂತರವು ಪೋಷಕರ ಮನೋಭಾವನೆಯ ಮೇಲೆ ಹೆಚ್ಚು ನೇರ ಪ್ರಭಾವ ಬೀರುವ ಅಂಶವಾಗಿದೆ ಎಂಬುದು ಅಧ್ಯಯನದಿಂದ ತಿಳಿದು ಬರುತ್ತದೆ.

ತಮ್ಮ ಶಾಲೆಗಳಲ್ಲಿ ಬರುವ ಹೆಣ್ಣುಮಕ್ಕಳ ಕುಟುಂಬಗಳು ಉತ್ತಮ ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಹೊಂದಿರುವುದರಿಂದ ಶಾಲೆ ಬಿಡುವ ಸಂಖ್ಯೆ ಕಡಿಮೆ ಎಂದು ಉತ್ತರಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳಲ್ಲಿ ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಗಣನೀಯವಾಗಿ ಕಡಿಮೆ ಇದೆ. ನಗರದಿಂದ ದೂರ ಇರುವ ಗ್ರಾಮಗಳ ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಹೆಣ್ಣುಮಕ್ಕಳು ಶಾಲೆ ಬಿಡಲು ಆರ್ಥಿಕ ಸಂಕಷ್ಟ ಮತ್ತು ಮನೆ ಕೆಲಸಗಳನ್ನು ಮಾಡಬೇಕಾಗಿರುವುದಾಗಿದೆ. ಅವರ ತಂದೆ ತಾಯಿಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಉತ್ತಮ ಭಾವನೆ ಇದ್ದು ಅವರು ಶಾಲೆಗೆ ಕಳುಹಿಸಲು ಅವರಲ್ಲಿರುವ ಬಡತನ ಮತ್ತು ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸಲೇ ಬೇಕಾದ ಪರಿಸ್ಥಿತಿಯಾಗಿದೆ.

ನಗರದಿಂದ ದೂರ ಇರುವ ಗ್ರಾಮಗಳಲ್ಲಿ ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಹೆಚ್ಚಾಗಿದೆ. ಅವರು ಶಾಲೆ ಬಿಡಲು ಸಾಂಪ್ರದಾಯಿಕ ಮನೋಭಾವನೆ, ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಇರುವ ತಪ್ಪು ಕಲ್ಪನೆಗಳು, ಆರ್ಥಿಕ, ಕೌಟುಂಬಿಕ ಕಾರಣ ಮತ್ತು ಲಿಂಗ ತಾರತಮ್ಯ ಭಾವನೆಗಳಾಗಿವೆ.

ನಗರದಿಂದ ದೂರ ಇರುವ ಗ್ರಾಮಗಳ ಖಾಸಗಿ ಶಾಲೆಗಳಲ್ಲಿ ಮತ್ತು ನಗರಕ್ಕೆ ಹತ್ತಿರವಿರುವ ಗ್ರಾಮಗಳ ಖಾಸಗಿ ಶಾಲೆಗಳಲ್ಲಿ ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಗಣನೀಯ ವಾಗಿ ಕಡಿಮೆ ಇದೆ. ಇದಕ್ಕೆ ಕಾರಣ ಪೋಷಕರ ಉತ್ತಮ ಶಿಕ್ಷಣಮಟ್ಟ, ಆರ್ಥಿಕ ಸುಸ್ಥಿತಿಗಳು ಮತ್ತು ಆಧುನಿಕ ಮನೋಭಾವನೆಗಳೇ ಕಾರಣವಾಗಿವೆ.

"ಶಾಲಾ ಮುಖ್ಯೋಪಾಧ್ಯಾಯರು ಹೆಣ್ಣುಮಕ್ಕಳು ಶಾಲೆ ಬಿಡುವುದಕ್ಕೆ ನೀಡಿರುವ ಕಾರಣಗಳನ್ನೇ ರಾಷ್ಟ್ರೀಯ ಆಯೋಗವು ನಡೆಸಿರುವ ಸಮೀಕ್ಷೆಯು ಪುಷ್ಟೀಕರಿಸುತ್ತದೆ. ರಾಷ್ಟ್ರೀಯ ಆಯೋಗವು ಹೆಣ್ಣುಮಕ್ಕಳು ಶಾಲೆ ಬಿಡುವುದಕ್ಕೆ ನೀಡಿರುವ ಕಾರಣಗಳಲ್ಲಿ ಪಾಲಕರಿಗಿರುವ ಬಡತನ, ಕುಟುಂಬದಲ್ಲಿ ಸ್ತ್ರೀಗೆ ಇರುವ ಗೌಣ ಸ್ಥಾನ, ಸ್ತ್ರೀ ಶಿಕ್ಷಣದ ಬಗ್ಗೆ ಪಾಲಕರಿಗೆ ಇರುವ ಪರಂಪರಾಗತವಾದ ದೃಷ್ಟಿಕೋನ, ಬಾಲ್ಯವಿವಾಹ, ಸ್ತ್ರೀ-ಶಿಕ್ಷಣದ ಬಗೆಗಿನ ತಪ್ಪು ತಿಳುವಳಿಕೆ, ಹೆಣ್ಣುಮಕ್ಕಳು ಮನೆಯಲ್ಲಿ ಮಾಡಲೇ ಬೇಕಾದಂತಹ ಕೆಲಸಗಳು, ಶಾಲೆಗಳಲ್ಲಿ ಇರುವ ಶಿಕ್ಷಣತೆಯ ತೊಂದರೆಗಳು ಇತ್ಯಾದಿ" ಗಳನ್ನು ತಿಳಿಸಿದೆ.

ಬಡತನದ ಕಾರಣದಿಂದಾಗಿ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಲು ಪೋಷಕರಿಗೆ ತೊಂದರೆಯಾಗುತ್ತದೆ. ಒಂದು ವೇಳೆ ಶಿಕ್ಷಣವನ್ನು ನೀಡುವುದಾದರೆ ಮೊದಲ ಆದ್ಯತೆಯನ್ನು ಗಂಡು ಮಕ್ಕಳ ಶಿಕ್ಷಣಕ್ಕೆ ನೀಡಿ ಹೆಣ್ಣುಮಕ್ಕಳನ್ನು ಶಾಲೆ ಬಿಡಿಸುವ ಹೆಚ್ಚಿನ ಪ್ರಸಂಗಗಳನ್ನು ಕಾಣಬಹುದು. ಹಿಂದುಳಿದ ಗ್ರಾಮಗಳಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ಆಧುನಿಕ ದೃಷ್ಟಿಕೋನವಿಲ್ಲ. ಅವರಲ್ಲಿ ಇನ್ನೂ ಪರಂಪರಾಗತ ದೃಷ್ಟಿಕೋನ ಇರುವುದರಿಂದ ಹೆಣ್ಣುಮಕ್ಕಳು ಕಲಿತು ಮಾಡುವುದಾದರೂ ಏನು? ಮನೆಕೆಲಸಗಳನ್ನು ಸರಿಯಾಗಿ ನಿರ್ವಹಿಸಲಿ ಎಂಬ ಭಾವನೆಯಿಂದ ಶಾಲೆ ಬಿಡಿಸುವ ಪೋಷಕರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ. ಶಾಲೆ ಬಿಡುವುದಕ್ಕೆ ರಾಷ್ಟ್ರೀಯ

ಆಯೋಗವು ಬಾಲ್ಯ ವಿವಾಹವನ್ನು ಕಾರಣವನ್ನಾಗಿ ನೀಡಿದೆ. ಸಾಂಪ್ರದಾಯಿಕ ಹಿಂದೂ ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ತಂದೆ ತಾಯಿಗಳು ಮದುವೆ ಮಾಡಿ ಕನ್ಯಾಸೆರೆಯನ್ನು ಬಿಡಿಸಿಕೊಂಡರೆ ಮೋಕ್ಷಕ್ಕೆ ದಾರಿ ಎಂಬ ಭಾವನೆ ಇರುವುದರಿಂದ ಹಿಂದುಳಿದ ಗ್ರಾಮೀಣ ಅನಕ್ಷರಸ್ಥ ತಂದೆತಾಯಿಗಳು ತಮ್ಮ ಹೆಣ್ಣುಮಕ್ಕಳಿಗೆ ಬಹಳ ಚಿಕ್ಕ ವಯಸ್ಸಿನಲ್ಲಿ ಶಾಲೆ ಬಿಡಿಸಿ ಮದುವೆ ಮಾಡುತ್ತಾರೆ. ಹೆಣ್ಣುಮಕ್ಕಳು ಶಾಲೆ ಬಿಡಿಸಲು ರಾಷ್ಟ್ರೀಯ ಆಯೋಗವು ಸ್ತ್ರೀ ಶಿಕ್ಷಣದ ಬಗೆಗೆ ಪೋಷಕರಿಗೆ ಇರುವ ತಪ್ಪು ತಿಳುವಳಿಕೆಯನ್ನು ಕಾರಣವನ್ನಾಗಿ ನೀಡಿದೆ. ಅಧ್ಯಯನವು ಸಹ ಈ ಕಾರಣವನ್ನು ಸಮರ್ಥಿಸುತ್ತದೆ. ಹಿಂದುಳಿದ ಗ್ರಾಮಗಳ ಅನಕ್ಷರಸ್ಥ ಪೋಷಕರಲ್ಲಿ ಈಗಲೂ ಸಹ ಮಹಿಳಾ ಶಿಕ್ಷಣದ ಬಗ್ಗೆ ಒಳ್ಳೆಯ ಭಾವನೆಯಿಲ್ಲ. ಹೆಚ್ಚು ವಿದ್ಯಾವಂತ ಹೆಣ್ಣುಮಕ್ಕಳು ತಂದೆ ತಾಯಿಯರ ಮಾತು ಕೇಳುವುದಿಲ್ಲ, ಶಿಕ್ಷಣ ಪಡೆದ ಹೆಣ್ಣುಮಕ್ಕಳು ಕೆಡುತ್ತಾರೆ ಎಂಬ ತಪ್ಪು ಕಲ್ಪನೆ ಇರುವುದರಿಂದ ಅವರು ತಮ್ಮ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುವುದಿಲ್ಲ. ರಾಷ್ಟ್ರೀಯ ಆಯೋಗದ ವರದಿ ಮತ್ತು ಅಧ್ಯಯನಗಳೆರಡು ಶಾಲೆ ಬಿಡುವುದಕ್ಕೆ ಕಾರಣವಾಗಿ ಹೆಣ್ಣುಮಕ್ಕಳು ಮನೆಯಲ್ಲಿ ಮಾಡಲೇಬೇಕಾದಂತಹ ಕೆಲಸಗಳನ್ನು ಕಾರಣವಾಗಿ ನೀಡಿದೆ. ಮನೆ ಕೆಲಸಗಳನ್ನು ಹೆಣ್ಣುಮಕ್ಕಳು ಚೆನ್ನಾಗಿ ಕಲಿತಾಗ ಮಾತ್ರ ತನ್ನ ಗಂಡನ ಮನೆಯಲ್ಲಿ ಹೆಣ್ಣಿಗೆ ಗೌರವ ಸಿಗುತ್ತದೆ. ಇಲ್ಲದೆ ಹೋದರೆ ಗಂಡನ ಮನೆಯಲ್ಲಿ ನಿಂದನೆಗೆ ಒಳಗಾಗುತ್ತಾರೆ ಎಂಬ ಭಾವನೆ ಇರುವುದರಿಂದ ಹಿಂದುಳಿದ ಗ್ರಾಮೀಣರು ಮದುವೆಗೆ ಮುನ್ನ ಶಾಲೆ ಬಿಡಿಸಿ ಮನೆಕೆಲಸಗಳಲ್ಲಿ ತರಬೇತಿ ನೀಡುವುದನ್ನು ಕಾಣಬಹುದು. ಶಾಲೆ ಬಿಡುವುದಕ್ಕೆ ಶಾಲೆಯಲ್ಲಿ ಇರುವ ಶೈಕ್ಷಣಿಕ ತೊಂದರೆಗಳನ್ನು ನೀಡಿದ್ದಾರೆ. ಅವುಗಳೆಂದರೆ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ, ಮಹಿಳಾ ಅಧ್ಯಾಪಕರ ಕೊರತೆ, ಶಿಕ್ಷಕರ ಕೊರತೆ, ಮತ್ತು ಪಠ್ಯಕ್ರಮ ಅರ್ಥವಾಗದೆ ಅನುತ್ತೀರ್ಣರಾದಾಗ ಅದನ್ನೇ ನೆಪವಾಗಿಸಿ ಪೋಷಕರು ಶಾಲೆ ಬಿಡಿಸುವ ಪ್ರಸಂಗಗಳು ಕಂಡು ಬರುತ್ತದೆ.

"ಶಾಲೆಗಳಲ್ಲಿ ಹೆಣ್ಣುಮಕ್ಕಳ ಪ್ರಮಾಣವು ಕಡಿಮೆಯಾಗಿರುವುದಕ್ಕೆ ರಾಷ್ಟ್ರೀಯ ಆಯೋಗವು ನೀಡಿರುವ ಕಾರಣಗಳೆಂದರೆ, ಪಾಲಕರ ದಾರಿದ್ರ್ಯವು, ಬಡತನ, ಕುಟುಂಬದಲ್ಲಿ ಸ್ತ್ರೀಗೆ ಇರುವ ಗೌಣ ಸ್ಥಾನ, ಸ್ತ್ರೀ ಶಿಕ್ಷಣದ ಬಗ್ಗೆ ಪಾಲಕರಿಗೆ ಇರುವ ಪರಂಪರಾಗತವಾದ ದೃಷ್ಟಿಕೋನ, ಬಾಲ್ಯವಿವಾಹ, ಸ್ತ್ರೀ-ಶಿಕ್ಷಣದ ಬಗೆಗಿನ ತಪ್ಪು ತಿಳುವಳಿಕೆ, ಹೆಣ್ಣುಮಕ್ಕಳು ಮನೆಯಲ್ಲಿ ಮಾಡಲೇ ಬೇಕಾದಂಥ ಕೆಲಸಗಳು, ಶಾಲೆಯಲ್ಲಿ ಇರುವ ಶೈಕ್ಷಣಿಕ ತೊಂದರೆಗಳು ಇತ್ಯಾದಿ.[೨]

"ಭಾರತದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಆದ್ಯತೆಯು ದೊರೆಯುದುದಕ್ಕೆ ಡ್ರೀಜ್ ಮತ್ತು ಸೆನ್ ನೀಡುವ ಮೂರು ಕಾರಣಗಳು ಹೀಗಿವೆ.

೧. ಲಿಂಗಸಂಬಂಧಿ ಶ್ರಮ ವಿಭಜನೆಯಿಂದಾಗಿ ಶಿಕ್ಷಣದಿಂದ ದೊರೆಯಬಹುದಾದ ನಿರೀಕ್ಷಿತ ಲಾಭಗಳು ಜನರಿಗೆ ಅತ್ಯಂತ ಕಡಿಮೆಯೆಂದು ಕಾಣುತ್ತದೆ. ಏಕೆಂದರೆ ಬಾಲಕಿಯರು ಸಾಮಾನ್ಯವಾಗಿ ನಮ್ಮ ಸಂದರ್ಭದಲ್ಲಿ ಮನೆವಾರ್ತೆ ಮತ್ತು ಮಕ್ಕಳ ಲಾಲನೆಯ ಪಾಲನೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಇದರಿಂದ ಹಿರಿಯರಿಗೆ ಮಹಿಳೆಯರ ಶಿಕ್ಷಣವು ಮಹತ್ವದ್ದಾಗಿ ಕಾಣುವುದಿಲ್ಲ.

೨. ಭಾರತದಲ್ಲಿರುವ ಪಿತೃಪ್ರಧಾನ ವಾರಸುದಾರಿಕೆಯಿಂದಾಗಿ ಪಾಲಕರು ಮಹಿಳೆಯ ಶಿಕ್ಷಣಕ್ಕೆ ಎಷ್ಟು ಮಹತ್ವ ನೀಡಬೇಕೋ ಅಷ್ಟು ಮಹತ್ವ ನೀಡುತ್ತಿಲ್ಲ. ಏಕೆಂದರೆ "ಮಹಿಳೆಗೆ ಶಿಕ್ಷಣ ಕೊಡಿಸುವುದೆಂದರೆ ಪಕ್ಕದ ಮನೆಯ ಗಿಡಕ್ಕೆ ನೀರೆರದಂತೆ" ಎಂಬ ನಾಣ್ನುಡಿ ಜನರಲ್ಲಿ ಗಟ್ಟಿಯಾಗಿ ನೆಲೆಗೊಂಡು ಬಿಟ್ಟಿದೆ.

೩. ಸಮಾಜದಲ್ಲಿ ಕಂಡು ಬರುತ್ತಿರುವ ವರದಕ್ಷಿಣೆ, ಉನ್ನತ ವರ್ಗದ ಗಂಡಿನೊಂದಿಗೆ ವಿವಾಹ ಮುಂತಾದವು ಮಹಿಳೆಯರ ಶಿಕ್ಷಣಕ್ಕೆ ವಿರುದ್ಧವಾಗಿ ಕೆಲಸ ಮಾಡಬಲ್ಲವಾಗಿದೆ. ಇಂದು ಮಹಿಳೆಯರಿಗೆ ಶಿಕ್ಷಣ ಕೊಡಿಸಲು ಜನರು ಯಾಕೆ ಮುಂದೆ ಬರುತ್ತಿದ್ದಾರೆಂದರೆ, ಅದರಿಂದ ಅವಳಿಗೆ ಒಳ್ಳೆಯ ಗಂಡು ದೊರೆಯುತ್ತಾನೆ ಎಂಬುದಾಗಿದೆ."[೩]

ಭಾರತದಲ್ಲಿ ಮಹಿಳಾ ಶಿಕ್ಷಣಕ್ಕೆ ಆದ್ಯತೆ ದೊರೆಯದುದಕ್ಕೆ ಡ್ರೀಜ್ ಮತ್ತು ಸೆನ್‌ರವರು ಕಾರಣಗಳನ್ನು ನೀಡಿದ್ದಾರೆ. ಅವರ ಅಭಿಪ್ರಾಯದಲ್ಲೂ ಸಹ ರಾಷ್ಟ್ರೀಯ ಆಯೋಗದ ವರದಿ ಮತ್ತು ಅಧ್ಯಯನದ ಅಂಶಗಳನ್ನು ಒಳಗೊಂಡಿದೆ. ಜೊತೆಗೆ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದೆಂದರೆ ಪಕ್ಕದ ಮನೆಯ ಗಿಡಕ್ಕೆ ನೀರೆರೆದಂತೆ ಎಂಬ ಭಾವನೆಯನ್ನು ಗ್ರಾಮೀಣ ಜನರು ಇಂದಿಗೂ ಹೊಂದಿದ್ದಾರೆ. ಅದರಲ್ಲಿಯೂ ಹಿಂದುಳಿದ ಗ್ರಾಮಗಳ ಅನಕ್ಷರಸ್ಥ ಪೋಷಕರಲ್ಲಿ ಈ ಭಾವನೆ ಹೆಚ್ಚಾಗಿದೆ.

ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿದರೆ ಅದರ ಲಾಭ ಶಿಕ್ಷಣ ನೀಡಿದ ನಮಗೆ ತಲುಪುವುದಿಲ್ಲ. ಶಿಕ್ಷಣ ನೀಡುವುದು ನಾವಾದರೂ ಅದರ ಲಾಭ ಮಾತ್ರ ಅವಳ ಗಂಡನ ಮನೆಗೆ ಆಗುವುದರಿಂದ ಅವಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ ಎಂಬ ಭಾವನೆ ಹೊಂದಿದ್ದಾರೆ. ಆದರೆ ಗಂಡು ಮಕ್ಕಳಿಗೆ ಶಿಕ್ಷಣ ನೀಡಿದರೆ ಅವರು ದುಡಿದು ಕುಟುಂಬಕ್ಕೆ ಲಾಭ ತರುತ್ತಾರೆ ಎಂಬ ಭಾವನೆಯಿದೆ. ಗ್ರಾಮೀಣ ಜನರಲ್ಲಿರುವ ಲಿಂಗ ತಾರತಮ್ಯ ಭಾವನೆಯು ಸಹ ಮಹಿಳಾ ಶಿಕ್ಷಣಕ್ಕೆ ಅಡ್ಡಿಯನ್ನು ಉಂಟುಮಾಡುತ್ತದೆ.

ಹಿಂದುಳಿದ ಅನಕ್ಷರಸ್ಥ ಗ್ರಾಮಗಳಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡಿದರೆ ಅವಳಿಗಿಂತ ಹೆಚ್ಚು ಶಿಕ್ಷಣ ಪಡೆದ ಮತ್ತು ಉನ್ನತ ವರ್ಗದ ಗಂಡಿನೊಂದಿಗೆ ಮದುವೆ ಮಾಡಿಕೊಡಬೇಕಾಗುತ್ತದೆ.

ಅಂತಹ ಗಂಡನ್ನು ಹುಡುಕಬೇಕಾದರೆ ಹೆಚ್ಚು ವರದಕ್ಷಿಣ ಕೊಡಬೇಕಾಗುತ್ತದೆ. ಅಷ್ಟು ವರದಕ್ಷಿಣೆ ಕೊಡುವ ಶಕ್ತಿ ನಮ್ಮಲ್ಲಿಲ್ಲ ಎಂಬ ಭಾವನೆ ಗ್ರಾಮೀಣರಲ್ಲಿರುವುದರಿಂದ ಅವರು ತಮ್ಮ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡದೆ ಶಾಲೆಯನ್ನು ಬಿಡಿಸುತ್ತಾರೆ. ಅವರ ವಿವಾಹವು ಶಿಕ್ಷಣಕ್ಕೆ ವಿರುದ್ಧ ವಾಗಿ ಕೆಲಸಮಾಡಬಲ್ಲದಾಗಿದೆ.

ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಗ್ರಾಮೀಣ ಜನರು ಇಂದು ಮಹಿಳೆಯರಿಗೆ ಶಿಕ್ಷಣ ಕೊಡಿಸಲು ಕಾರಣವೆಂದರೆ ಅವಳಿಗೆ ವಿದ್ಯಾವಂತ ಆರ್ಥಿಕ ಸುಸ್ಥಿತಿಯಲ್ಲಿರುವ ಉದ್ಯೋಗಸ್ಥ ಗಂಡು ಸಿಗುತ್ತಾನೆಂಬ ಕಾರಣದಿಂದಾಗಿ ಎಂಬುದನ್ನು ತಿಳಿಸಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಮಹಿಳೆಯರಿಗೆ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಭಾವನೆಯನ್ನು ಪೋಷಕರು ಹೊಂದಿದ್ದಾರೆ. ಇಂದಿಗೂ ಗ್ರಾಮೀಣ ಜನರಿಗೆ ಮಹಿಳಾ ಶಿಕ್ಷಣದ ಲಾಭಗಳು ಸರಿಯಾಗಿ ಗೊತ್ತಿಲ್ಲ.

ಪಟ್ಟಿ ೬.೨ರಲ್ಲಿ ಹೆಣ್ಣುಮಕ್ಕಳು ಶಾಲಾ ಶಿಕ್ಷಣದ ನಂತರ ಶಿಕ್ಷಣವನ್ನು ಮುಂದುವರಿಸುತ್ತಾರೆಯೆ? ಎಂಬ ಪ್ರಶ್ನೆಯನ್ನು ಶಾಲಾ ಮುಖ್ಯೋಪಾಧ್ಯಾಯರಿಗೆ ಕೇಳಲಾಗಿದೆ.

ಪಟ್ಟಿ ೬.೨

ಶಾಲಾ ಮುಖ್ಯೋಪಾಧ್ಯಾಯರ ಸಂದರ್ಶನ– ಹೆಣ್ಣುಮಕ್ಕಳು ಶಾಲಾ ಶಿಕ್ಷಣದ ನಂತರ ಶಿಕ್ಷಣ ಮುಂದುವರೆಸುತ್ತಾರೆಯೆ?

ಶಾಲಾ ಮುಖ್ಯೋಪಾಧ್ಯಾಯರು		ಇಲ್ಲ	ಹೌದು	ಒಟ್ಟು
ನಗರಕ್ಕೆ ಹತ್ತಿರವಾಗಿರುವ ಶಾಲಾ ಮುಖ್ಯೋಪಾಧ್ಯಾಯರು	ಸರ್ಕಾರಿ	೦೨	೦೮	೧೦
	ಖಾಸಗಿ	೦೦	೧೦	೧೦
ನಗರಕ್ಕೆ ದೂರವಾಗಿರುವ ಶಾಲಾ ಮುಖ್ಯೋಪಾಧ್ಯಾಯರು	ಸರ್ಕಾರಿ	೦೬	೦೪	೧೦
	ಖಾಸಗಿ	೦೨	೦೮	೧೦
ಒಟ್ಟು		೧೦	೩೦	೪೦

ಹೆಣ್ಣುಮಕ್ಕಳು ಶಾಲಾ ಶಿಕ್ಷಣದ ನಂತರ ಶಿಕ್ಷಣವನ್ನು ಮುಂದುವರಿಸುತ್ತಾರೆಯೆ? ಎಂಬ ಪ್ರಶ್ನೆಯನ್ನು ಶಾಲಾ ಮುಖ್ಯೋಪಾಧ್ಯಾಯರಿಗೆ ಕೇಳಲಾಗಿದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರಲ್ಲಿ ಶೇ.೮೦ ರಷ್ಟು ಮುಖ್ಯೋಪಾಧ್ಯಾಯರು ಶಾಲಾ ಶಿಕ್ಷಣದ ನಂತರ ಶಿಕ್ಷಣವನ್ನು ಮುಂದುವರೆಸುತ್ತಾರೆಂದು ಉತ್ತರಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಖಾಸಗಿ ಶಾಲಾ ಮುಖ್ಯೋಪಾಧ್ಯಾಯರಲ್ಲಿ ಶೇ.೧೦೦ ರಷ್ಟು ಮುಖ್ಯೋಪಾಧ್ಯಾಯರು ಶಾಲಾ ಶಿಕ್ಷಣದ ನಂತರ ಪ್ರತಿಯೊಬ್ಬರು ಕಾಲೇಜು ಶಿಕ್ಷಣವನ್ನು ಪಡೆಯುತ್ತಾರೆಂದು ತಿಳಿಸಿದ್ದಾರೆ.

ಪೋಷಕರ ಉತ್ತಮ ಆರ್ಥಿಕ ಸ್ಥಿತಿಗತಿಗಳು, ಉತ್ತಮ ಶಿಕ್ಷಣಮಟ್ಟ ಮತ್ತು ಮಹಿಳಾ ಶಿಕ್ಷಣದ ಲಾಭವು ಅವರಿಗೆ ತಿಳಿದಿರುವುದರಿಂದ ಪ್ರತಿಯೊಬ್ಬ ಪೋಷಕರು ಶಾಲಾ ಶಿಕ್ಷಣದ ನಂತರ ಕಾಲೇಜು ಶಿಕ್ಷಣಕ್ಕೆ ತಮ್ಮ ಹೆಣ್ಣುಮಕ್ಕಳನ್ನು ಕಳುಹಿಸುತ್ತಾರೆಂದು ಮುಖ್ಯೋಪಾಧ್ಯಾಯರು ಹೇಳಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರುಗಳಲ್ಲಿ ಶೇ.೬೦ರಷ್ಟು ಮುಖ್ಯೋಪಾಧ್ಯಾಯರು ಶಾಲಾ ಶಿಕ್ಷಣದ ನಂತರ ಶಿಕ್ಷಣವನ್ನು ಮುಂದುವರೆಸುವುದಿಲ್ಲವೆಂದು ತಿಳಿಸಿದ್ದಾರೆ. ಅದಕ್ಕೆ ಅವರು ನೀಡುವ ಕಾರಣಗಳೆಂದರೆ, ಪೋಷಕರ ಬಡತನ, ಹೆಣ್ಣುಮಕ್ಕಳ ಶಿಕ್ಷಣದ ಮಹತ್ವ ತಿಳಿಯದೇ ಇರುವುದು, ಪೋಷಕರ ಅಜ್ಞಾನ ಮತ್ತು ಕಾಲೇಜು ಶಿಕ್ಷಣಕ್ಕೆ ಹೆಣ್ಣುಮಕ್ಕಳನ್ನು ಕಳುಹಿಸಿದರೆ ಅಲ್ಲಿನ ವಾತಾವರಣ ಅವರನ್ನು ಕೆಡಿಸುತ್ತದೆ, ಮತ್ತು ಹೆಚ್ಚು ಶಿಕ್ಷಣ ನೀಡಿದರೆ ಹೆಚ್ಚು ವರದಕ್ಷಿಣೆ ನೀಡಬೇಕೆಂಬ ಭಾವನೆ ಎಂಬ ತಪ್ಪು ಕಲ್ಪನೆಗಳು ಹೆಣ್ಣುಮಕ್ಕಳು ಶಾಲಾ ಶಿಕ್ಷಣದ ನಂತರ ಶಿಕ್ಷಣ ಮುಂದುವರೆಸಲು ಅಡ್ಡಿಯಾಗಿರುವ ಅಂಶಗಳಾಗಿವೆ ಎಂದು ತಿಳಿಸಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಖಾಸಗಿ ಶಾಲಾ ಮುಖ್ಯೋಪಾಧ್ಯಾಯರಲ್ಲಿ ಶೇ.೨೦ರಷ್ಟು ಮುಖ್ಯೋಪಾಧ್ಯಾಯರು ಶಾಲಾ ಶಿಕ್ಷಣದ ನಂತರ ಶಿಕ್ಷಣ ಮುಂದುವರೆಸುವುದಿಲ್ಲವೆಂದು ತಿಳಿಸಿದ್ದಾರೆ. ಶೇ.೮೦ ರಷ್ಟು ಮುಖ್ಯೋಪಾಧ್ಯಾಯರು ಶಿಕ್ಷಣ ಮುಂದುವರೆಸುತ್ತಾರೆಂದು ಹೇಳಿದ್ದಾರೆ. ಶಿಕ್ಷಣ ಮೊಟಕುಗೊಳಿಸಲು ಕಾರಣಗಳಾಗಿ ವಿವಾಹ, ವರದಕ್ಷಿಣೆ, ಕಾಲೇಜು ಶಿಕ್ಷಣದ ಬಗ್ಗೆ ಇರುವ ತಪ್ಪು ಕಲ್ಪನೆಗಳು ಮತ್ತು ಹೆಚ್ಚು ಶಿಕ್ಷಣ ನೀಡಿದರೆ ಹೆಚ್ಚು ವರದಕ್ಷಿಣೆ ನೀಡಿ ಉತ್ತಮ ವರವನ್ನು ಹುಡುಕಬೇಕಾಗುತ್ತದೆ. ಇದು ಕುಟುಂಬಕ್ಕೆ ಹೊರೆ ಎಂಬ ಭಾವನೆಗಳು ಎಂಬುದಾಗಿ ತಿಳಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಹೆಣ್ಣುಮಕ್ಕಳಿಗೆ ಶಾಲಾ ಶಿಕ್ಷಣದ ನಂತರ ಶಿಕ್ಷಣ ಮುಂದುವರೆಸಲು ಸಮ್ಮತಿಸುತ್ತಾರೆ. ಕಾರಣ ಆಧುನಿಕ ಮೌಲ್ಯಗಳು, ನಗರೀಕರಣ ಮತ್ತು ಕೈಗಾರಿಕೀಕರಣಗಳು ಅವರ ಮನೋಭಾವನೆಯ ಮೇಲೆ ಪ್ರಭಾವ ಬೀರುವುದರಿಂದ, ಆಧುನಿಕ ಸಮಾಜದಲ್ಲಿ ಮಹಿಳಾ ಶಿಕ್ಷಣದ ಮಹತ್ವ ತುಂಬ ಇದೆ ಎಂದು ತಿಳಿದಿದ್ದಾರೆ. ಜೊತೆಗೆ ನಗರಕ್ಕೆ ಈ ಗ್ರಾಮಗಳು ಬಹಳ ಸಮೀಪವಿರುವುದರಿಂದ. ಉತ್ತಮ ಶಾಲಾ, ಕಾಲೇಜುಗಳ ಲಭ್ಯತೆ ಮತ್ತು ಉತ್ತಮ ಸಾರಿಗೆ ಸಂಪರ್ಕಗಳು ತಮ್ಮ ಹೆಣ್ಣುಮಕ್ಕಳನ್ನು ಶಾಲಾ ಶಿಕ್ಷಣದ ನಂತರ ಕಾಲೇಜು ಶಿಕ್ಷಣಕ್ಕೆ ಕಳುಹಿಸಲು ಪ್ರೇರೇಪಿಸುತ್ತದೆ.

"ನಗರೀಕರಣದ ಪ್ರಭಾವದಿಂದ ಹಳೆ ಸಂಪ್ರದಾಯ, ಪದ್ಧತಿ, ವಿಧಿ-ವಿಧಾನ, ಆಚಾರ-ವಿಚಾರಗಳಿಗೆ ಗಮನ ಕೊಡುವುದು ಕಮ್ಮಿಯಾಗಿ ನೂತನ ಪ್ರಯೋಗಗಳ ಬಗ್ಗೆ ಜನರು ಹೆಚ್ಚು ಒಲವು ತೋರುವುದುಂಟು. ಒಟ್ಟಾರೆ ನಗರೀಕರಣವು ಮೂಲ ಸಂಸ್ಕೃತಿಯ ರೂಪಾಂತರಕ್ಕೆಡೆ ಮಾಡಿ ವ್ಯಕ್ತಿ ಹಾಗೂ ಸಮಾಜ ಆಧುನೀಕರಣದತ್ತ ಸಾಗಲು ನೆರವಾಗುವುದು."[೬]

ಪಟ್ಟಿ ೬.೩

ಮಹಿಳಾ ವಿದ್ಯಾರ್ಥಿಗಳ ಸಂದರ್ಶನ ನಿಮಗೆ ಮತ್ತು ನಿಮ್ಮ ಮನೆಯ ಗಂಡು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಮಾಡುತ್ತಾರೆಯೇ?

ಗಂಡು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ ತಾರತಮ್ಯ		ಹೌದು	ಇಲ್ಲ	ಒಟ್ಟು
ನಗರಕ್ಕೆ ಹತ್ತಿರವಾಗಿರುವ ಶಾಲಾ ವಿದ್ಯಾರ್ಥಿಗಳು	ಸರ್ಕಾರಿ	೦೫	೨೦	೨೫
	ಖಾಸಗಿ	೦೩	೨೨	೨೫
ನಗರಕ್ಕೆ ದೂರವಾಗಿರುವ ಶಾಲಾ ವಿದ್ಯಾರ್ಥಿಗಳು	ಸರ್ಕಾರಿ	೨೩	೦೨	೨೫
	ಖಾಸಗಿ	೨೨	೦೩	೨೫
ಒಟ್ಟು	೫೩	೪೭	೧೦೦	

ಈ ಅಧ್ಯಯನದಲ್ಲಿ ನಗರಕ್ಕೆ ಹತ್ತಿರವಿರುವ ಗ್ರಾಮಗಳಲ್ಲಿ, ೨೫ ಖಾಸಗಿ ಶಾಲಾ ಹೆಣ್ಣುಮಕ್ಕಳನ್ನು ಮತ್ತು ೨೫ ಸರ್ಕಾರಿ ಶಾಲಾ ಹೆಣ್ಣುಮಕ್ಕಳನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಅದೇ ರೀತಿ ನಗರಕ್ಕೆ ದೂರವಿರುವ ಗ್ರಾಮಗಳ ೨೫ ಖಾಸಗಿ ಶಾಲಾ ಹೆಣ್ಣುಮಕ್ಕಳನ್ನು ಮತ್ತು

೨೫ ಸರ್ಕಾರಿ ಶಾಲಾ ಹೆಣ್ಣುಮಕ್ಕಳನ್ನು ಸಂದರ್ಶನ ಮಾಡಲಾಗಿದೆ. ಸಂದರ್ಶನದಲ್ಲಿ ನಿಮಗೆ ಮತ್ತು ನಿಮ್ಮ ಮನೆಯ ಗಂಡು ಮಕ್ಕಳಿಗೆ ಶಿಕ್ಷಣವನ್ನು ನೀಡುವಲ್ಲಿ ತಾರತಮ್ಯ ಮಾಡುತ್ತಾರೆಯೇ? ಎಂಬ ಪ್ರಶ್ನೆಯನ್ನು ಕೇಳಲಾಗಿದೆ.

ನಗರಕ್ಕೆ ಹತ್ತಿರವಿರುವ ಸರ್ಕಾರಿ ಶಾಲಾ ಹೆಣ್ಣುಮಕ್ಕಳಲ್ಲಿ ಶೇ.೨೦ ರಷ್ಟು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುತ್ತಾರೆ ಎಂದು ಹೇಳಿದ್ದಾರೆ. ಶೇ.೮೦ ರಷ್ಟು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುವುದಿಲ್ಲವೆಂದು ಹೇಳಿದ್ದಾರೆ.

ನಗರಕ್ಕೆ ಹತ್ತಿರವಿರುವ ಖಾಸಗಿ ಶಾಲಾ ಹೆಣ್ಣುಮಕ್ಕಳಲ್ಲಿ ಶೇ.೧೨ ರಷ್ಟು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುತ್ತಾರೆಂದು ಹೇಳಿದ್ದಾರೆ. ಶೇ.೮೮ ರಷ್ಟು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುವುದಿಲ್ಲವೆಂದು ಹೇಳಿದ್ದಾರೆ.

ನಗರದಿಂದ ಹತ್ತಿರವಿರುವ ಗ್ರಾಮಗಳಲ್ಲಿ ಹೆಚ್ಚು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುವುದಿಲ್ಲ ಎಂದು ಹೇಳಿದ್ದಾರೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳ ಹೆಚ್ಚು ಪೋಷಕರು ವಿದ್ಯಾವಂತರು, ಆಧುನಿಕ ಮೌಲ್ಯಗಳನ್ನು ಅಳವಡಿಸಿಕೊಂಡಿರುವವರು, ನಗರೀಕರಣ ಮತ್ತು ಔದ್ಯೋಗೀಕರಣ ಪ್ರಕ್ರಿಯೆಗೆ ಒಳಗಾದವರು, ಆದುದರಿಂದ ಸಮಾಜದಲ್ಲಿ ಮಗನ ಶಿಕ್ಷಣದಷ್ಟೇ ಮಗಳ ಶಿಕ್ಷಣವು ಮುಖ್ಯವಾದುದು ಎಂದು ತಿಳಿಸಿದ್ದಾರೆ. ಅವರು ಮಗನ ಮತ್ತು ಮಗಳಿಗೆ ಶಿಕ್ಷಣ ನೀಡುವಲ್ಲಿ ಲಿಂಗತಾರತಮ್ಯ ಮಾಡುವುದಿಲ್ಲ.

ನಗರದಿಂದ ದೂರವಿರುವ ಗ್ರಾಮಗಳ ಸರ್ಕಾರಿ ಶಾಲಾ ಹೆಣ್ಣುಮಕ್ಕಳಲ್ಲಿ ಶೇ.೯೨ ರಷ್ಟು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುತ್ತಾರೆಂದು ಹೇಳಿದ್ದಾರೆ. ಶೇ.೮ರಷ್ಟು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುವುದಿಲ್ಲವೆಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳ ಖಾಸಗಿ ಶಾಲಾ ಹೆಣ್ಣುಮಕ್ಕಳಲ್ಲಿ ಶೇ.೮೮ರಷ್ಟು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುತ್ತಾರೆಂದು ಹೇಳಿದ್ದಾರೆ. ಶೇ.೧೨ರಷ್ಟು ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುವುದಿಲ್ಲವೆಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಸರ್ಕಾರಿ ಮತ್ತು ಖಾಸಗಿ ಶಾಲಾ ಹೆಣ್ಣುಮಕ್ಕಳಲ್ಲಿ ಹೆಚ್ಚಿನ ಹೆಣ್ಣುಮಕ್ಕಳು ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಮಾಡುತ್ತಾರೆಂದು ಅಭಿಪ್ರಾಯ ಪಟ್ಟಿದ್ದಾರೆ.

ನಗರದಿಂದ ದೂರವಿರುವ ಹೆಚ್ಚು ಪೋಷಕರ ಸಂಪ್ರದಾಯಸ್ಥರು, ಹೆಚ್ಚು ವಿದ್ಯಾವಂತರಲ್ಲಿ ನಗರೀಕರಣ ಮತ್ತು ಔದ್ಯೋಗಿಕ ಪ್ರಕ್ರಿಯೆಗಳಿಗೆ ಒಳಗಾದವರಲ್ಲ. ಇವರ ಜೀವನ ಶೈಲಿಯಲ್ಲಿ ಆಧುನಿಕ ಮೌಲ್ಯಗಳಿಲ್ಲ ಯಾವುದೇ ಸೌಲಭ್ಯಗಳನ್ನು ಕೊಡುವಾಗ ಮೊದಲು ಗಂಡು ಮಗುವಿಗೆ

ನೀಡುತ್ತಾರೆ. ಶಿಕ್ಷಣ ನೀಡುವಲ್ಲಿಯೂ ಸಹ ಮೊದಲ ಆಧ್ಯತೆ ಗಂಡುಮಗುವಾಗಿರುತ್ತದೆ. ಈ ರೀತಿ ಮಗನ ಮತ್ತು ಮಗಳಿಗೆ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಮಾಡುವುದು ಕಂಡು ಬರುತ್ತದೆ.

ನಗರದಿಂದ ದೂರವಿರುವ ಗ್ರಾಮಗಳ ಸರ್ಕಾರಿ ಮತ್ತು ಖಾಸಗಿ ಶಾಲಾ ಮಹಿಳಾ ವಿದ್ಯಾರ್ಥಿಗಳು ಮತ್ತು ನಗರಕ್ಕೆ ಹತ್ತಿರವಿರುವ ಗ್ರಾಮಗಳ ಸರ್ಕಾರಿ ಮತ್ತು ಖಾಸಗಿ ಶಾಲಾ ಮಹಿಳಾ ವಿದ್ಯಾರ್ಥಿಗಳಲ್ಲಿ, ಶೇ.೫೩ರಷ್ಟು ಮಹಿಳಾ ವಿದ್ಯಾರ್ಥಿಗಳು ತಮಗೆ ಮತ್ತು ತಮ್ಮ ಮನೆಯ ಗಂಡು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ತಾರತಮ್ಯಮಾಡುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸಂದರ್ಶಿತ ಮಹಿಳಾ ವಿದ್ಯಾರ್ಥಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳಾ ವಿದ್ಯಾರ್ಥಿಗಳು ಲಿಂಗ ತಾರತಮ್ಯ ಮಾಡುತ್ತಾರೆ ಎಂದು ಹೇಳಿರುವುದನ್ನು ಗಮನಿಸಿದಾಗ, ಪಿತೃಪ್ರಧಾನ ಮೌಲ್ಯಗಳ ಪ್ರಭಾವವು ಪೋಷಕರ ಮನೋಭಾವನೆಯಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿರುವುದರಿಂದ, ಗಂಡು ಮತ್ತು ಹೆಣ್ಣುಮಕ್ಕಳ ಬಗ್ಗೆ ಸಮಾನ ಮನೋಭಾವನೆ ಹೊಂದಿಲ್ಲದಿರು ವುದರಿಂದ ಅವರು ಶಿಕ್ಷಣ ಕೊಡಿಸುವ ವಿಚಾರಕ್ಕೆ ಬಂದಾಗ ಮೊದಲು ಗಂಡು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಕಂಡುಬರುತ್ತದೆ. ಹೆಣ್ಣುಮಕ್ಕಳಿಗೆ ಎರಡನೆ ಸ್ಥಾನವನ್ನು ನೀಡುವುದು. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಬೇರೆಯ ಮನೆಗೆ ಲಾಭ ಮತ್ತು ಗಂಡು ಮಗನಿಗೆ ಶಿಕ್ಷಣ ನೀಡುವುದು ನಮಗೆ ಲಾಭ ಎಂಬ ಮನೋಭಾವನೆಗಳೇ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಮಾಡಲು ಕಾರಣವಾಗಿದೆ.

ನಗರದಿಂದ ದೂರವಿರುವ ಗ್ರಾಮಗಳ ಸರ್ಕಾರಿ ಮತ್ತು ಖಾಸಗಿ ಶಾಲಾ ಮಹಿಳಾ ವಿದ್ಯಾರ್ಥಿಗಳು ಮತ್ತು ನಗರಕ್ಕೆ ಹತ್ತಿರವಿರುವ ಗ್ರಾಮಗಳ ಸರ್ಕಾರಿ ಮತ್ತು ಖಾಸಗಿ ಶಾಲಾ ಮಹಿಳಾ ವಿದ್ಯಾರ್ಥಿಗಳಲ್ಲಿ ಶೇ.೪೭ ರಷ್ಟು ವಿದ್ಯಾರ್ಥಿಗಳು ಲಿಂಗ ತಾರತಮ್ಯ ಮಾಡುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯಪೂರ್ವ ಭಾರತೀಯ ಸಮಾಜಕ್ಕೆ ಹೋಲಿಸಿದಾಗ ಸ್ವಾತಂತ್ರ್ಯ ಭಾರತದಲ್ಲಿ ಲಿಂಗ ತಾರತಮ್ಯದ ಅಂತರ ಕಡಿಮೆಯಿರುವುದು ಕಂಡು ಬರುತ್ತದೆ. ಕೈಗಾರಿಕೀಕರಣ, ನಗರೀಕರಣ, ಆಧುನಿಕ ಮೌಲ್ಯಗಳು ಸ್ತ್ರೀ ಸಮಾನತೆ ಕಲ್ಪನೆಗಳು ಪೋಷಕರ ಮನೋಭಾವನೆಯ ಮೇಲೆ ತಕ್ಕ ಮಟ್ಟಿಗೆ ಪ್ರಭಾವ ಬೀರುವುದರಿಂದ ಹೆಚ್ಚು ಕಡಿಮೆ ಅರ್ಧದಷ್ಟು ಪೋಷಕರು ಮನೆಯ ಗಂಡು ಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡದಿರುವುದು ಕಂಡು ಬರುತ್ತದೆ.

ಆದರೆ, ಎಷ್ಟೇ ಪ್ರಭಾವ ಬೀರಿದರೂ ಭಾರತೀಯ ಸಮಾಜದ ಪಿತೃಪ್ರಧಾನತೆಯು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಜನರನ್ನು ಪ್ರೇರೇಪಿಸಿವುದರಿಂದ ಅರ್ಧದಷ್ಟು ಜನರಲ್ಲಿ ಶಿಕ್ಷಣ ಕೊಡಿಸುವಲ್ಲಿ ಲಿಂಗ ತಾರತಮ್ಯವನ್ನು ಅನುಸರಿಸುತ್ತಾರೆ.

ಪಾಲಕರು, ಮನೆಯ ವಾತಾವರಣ ಹಾಗೂ ಕೌಟುಂಬಿಕ ಸಂಬಂಧಗಳು ಮಗುವಿನ ಶೈಕ್ಷಣಿಕ ಸಾಧನೆಯೊಂದಿಗೆ ನೇರ ಸಂಬಂಧವನ್ನು ಹೊಂದಿವೆ."[೫]

ಕುಟುಂಬವು ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಕುಟುಂಬವು ಅತಿ ಮಹತ್ವವಾದ ಶಿಕ್ಷಣ ಸಂಸ್ಥೆ. ಕುಟುಂಬವು ಮಗುವಿನ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ಅವಿರತವಾಗಿ ಶ್ರಮಿಸುತ್ತದೆ. ಕುಟುಂಬದ ಸ್ವರೂಪವು ಹೆಣ್ಣುಮಕ್ಕಳ ಶಿಕ್ಷಣದ ಮೇಲೆ ನೇರ ಪ್ರಭಾವವನ್ನು ಬೀರುವ ಅಂಶವಾಗಿದೆ. ಆದುದರಿಂದ ಕುಟುಂಬವನ್ನು ಆಧಾರವಾಗಿಟ್ಟುಕೊಂಡು ಮಹಿಳಾ ಶಿಕ್ಷಣದ ಸ್ಥಿತಿಗತಿಯನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಪಟ್ಟಿ ೬.೪

ವಿದ್ಯಾರ್ಥಿಗಳ ಸಂದರ್ಶನ: ಕುಟುಂಬದ ಸ್ವರೂಪ ಮತ್ತು ಗಂಡು-ಹೆಣ್ಣಿನ ಶಿಕ್ಷಣಕ್ಕೆ ಇರುವ ತಾರತಮ್ಯ

ಕುಟುಂಬದ ಸ್ವರೂಪ	ಹೌದು	ಇಲ್ಲ	ಒಟ್ಟು
ಅವಿಭಕ್ತ ಕುಟುಂಬ	೫೮	೦೨	೬೦
ವಿಭಕ್ತ ಕುಟುಂಬ	೦೫	೩೫	೪೦
ಒಟ್ಟು	**೬೩**	**೩೭**	**೧೦೦**

ನಗರಕ್ಕೆ ಹತ್ತಿರವಿರುವ ಗ್ರಾಮಗಳ ೫೦ ಮಹಿಳಾ ವಿದ್ಯಾರ್ಥಿಗಳನ್ನು ನಗರಕ್ಕೆ ದೂರವಿರುವ ಗ್ರಾಮಗಳ ೫೦ ಮಹಿಳಾ ವಿದ್ಯಾರ್ಥಿಗಳನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಒಟ್ಟು ೧೦೦ ಮಹಿಳಾ ವಿದ್ಯಾರ್ಥಿಗಳಲ್ಲಿ ಶೇ.೬೦ ರಷ್ಟು ಮಹಿಳಾ ವಿದ್ಯಾರ್ಥಿಗಳು ಅವಿಭಕ್ತ ಕುಟುಂಬಗಳಿಂದ ಬಂದವರಾಗಿದ್ದಾರೆ. ಶೇ.೪೦ರಷ್ಟು ಮಹಿಳಾ ವಿದ್ಯಾರ್ಥಿಗಳು ವಿಭಕ್ತ ಕುಟುಂಬಗಳಿಂದ ಬಂದವರಾಗಿ ದ್ದಾರೆ. ವಿದ್ಯಾರ್ಥಿಗಳನ್ನು ನಿಮಗೆ ಮತ್ತು ನಿಮ್ಮ ಮನೆಯ ಗಂಡು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ನಿಮ್ಮ ಕುಟುಂಬದಲ್ಲಿ ತಾರತಮ್ಯ ಮಾಡುತ್ತಾರೆಯೇ ಎಂದು ಪ್ರಶ್ನಿಸಲಾಗಿದೆ.

ಈ ಸಂದರ್ಶನದಲ್ಲಿ ಅವಿಭಕ್ತ ಕುಟುಂಬದಿಂದ ಬಂದ ಶೇ.೫೮ ರಷ್ಟು ವಿದ್ಯಾರ್ಥಿಗಳು ನಮಗೆ ಮತ್ತು ನಮ್ಮ ಮನೆಯ ಗಂಡು ಮಕ್ಕಳಿಗೆ ಶಿಕ್ಷಣವನ್ನು ನೀಡುವಲ್ಲಿ ತಾರತಮ್ಯಮಾಡುತ್ತಾರೆ ಎಂದು ಉತ್ತರಿಸಿದ್ದಾರೆ. ಅವಿಭಕ್ತ ಕುಟುಂಬದ ಶೇ.೨ರಷ್ಟು ಮಹಿಳಾ ವಿದ್ಯಾರ್ಥಿಗಳು ನಮಗೆ ಮತ್ತು ನಮ್ಮ ಮನೆಯ ಗಂಡು ಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ ಲಿಂಗ ತಾರತಮ್ಯ ಮಾಡುವುದಿಲ್ಲ ಎಂದು ಉತ್ತರಿಸಿದ್ದಾರೆ. ಆ ಕುಟುಂಬಗಳಲ್ಲಿ ಹೆಚ್ಚಿನ ಸದಸ್ಯರು ವಿದ್ಯಾವಂತರಾಗಿರುವುದರಿಂದ ಅವರು ಶಿಕ್ಷಣದಲ್ಲಿ ತಾರತಮ್ಯ ಮಾಡದಿರುವುದು ಕಂಡುಬರುತ್ತದೆ.

ವಿಭಕ್ತ ಕುಟುಂಬದಿಂದ ಬಂದ ೪೦ ಮಹಿಳಾ ವಿದ್ಯಾರ್ಥಿಗಳಲ್ಲಿ ಶೇ.೦೫ ರಷ್ಟು ವಿದ್ಯಾರ್ಥಿಗಳು ಲಿಂಗ ತಾರತಮ್ಯ ಮಾಡುತ್ತಾರೆ ಎಂದು ಉತ್ತರಿಸಿದ್ದಾರೆ. ಕಾರಣ ಅವರ ಪೋಷಕರು ಅವಿದ್ಯಾವಂತರಾಗಿದ್ದು ಅವರು ಮಗನ ಮತ್ತು ಮಗಳ ಶಿಕ್ಷಣದಲ್ಲಿ ಹೆಚ್ಚು ತಾರತಮ್ಯಮಾಡುತ್ತಾರೆ. ಶೇ.೩೫ ರಷ್ಟು ವಿಭಕ್ತ ಕುಟುಂಬದ ಮಹಿಳಾ ವಿದ್ಯಾರ್ಥಿಗಳು ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಮಾಡುವುದಿಲ್ಲ ಎಂದು ಉತ್ತರಿಸಿದ್ದಾರೆ.

ಈ ಸಂದರ್ಶನದಿಂದ ತಿಳಿದು ಬರುವುದೇನೆಂದರೆ ಕುಟುಂಬದ ಸ್ವರೂಪಕ್ಕೂ ಮತ್ತು ಶಿಕ್ಷಣ ನೀಡುವಲ್ಲಿನ ಲಿಂಗ ತಾರತಮ್ಯಕ್ಕೂ ನೇರ ಸಂಬಂಧವಿರುವುದು ತಿಳಿದು ಬರುತ್ತದೆ. ಅವಿಭಕ್ತ ಕುಟುಂಬಗಳಲ್ಲಿ ಲಿಂಗ ತಾರತಮ್ಯ ಹೆಚ್ಚಾಗಿದ್ದು ಅವರು ಶಿಕ್ಷಣ ನೀಡುವಲ್ಲಿ ತಮ್ಮ ಮನೆಯ ಗಂಡು ಮಕ್ಕಳಿಗೆ ಉತ್ತಮ ಉನ್ನತ ಶಿಕ್ಷಣವನ್ನು ನೀಡುತ್ತಾರೆ. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿದರೂ ಗಂಡು ಮಕ್ಕಳ ಶಿಕ್ಷಣದಷ್ಟು ಆದ್ಯತೆ ಮತ್ತು ಮಹತ್ವವನ್ನು ಹೆಣ್ಣುಮಕ್ಕಳ ಶಿಕ್ಷಣಕ್ಕೆ ನೀಡುವುದಿಲ್ಲ. ಅವಿಭಕ್ತ ಕುಟುಂಬಗಳಲ್ಲಿ ವಿಭಕ್ತ ಕುಟುಂಬಗಳಿಗಿಂತ ಹೆಚ್ಚು ಪಿತೃಪ್ರದಾನ ಮೌಲ್ಯಗಳು ಪಾತ್ರವಹಿಸುತ್ತವೆ. ಅವಿಭಕ್ತ ಕುಟುಂಬಗಳಲ್ಲಿ ಯಾವುದೇ ಸೌಲತ್ತು ಸಿಗಬೇಕಾದರೂ ಮೊದಲು ಗಂಡು ಮಕ್ಕಳಿಗೆ ಸಿಗುವುದು ಕಂಡುಬರುತ್ತದೆ. ಅವಿಭಕ್ತ ಕುಟುಂಬಗಳಲ್ಲಿ ಯಾವುದೇ ಸೌಲಭ್ಯ ಸಿಗುವಾಗ ಎಲ್ಲಾ ತಂದೆಯರ ಮಕ್ಕಳಲ್ಲಿ ಸಮಾನತೆಯನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಆದುದರಿಂದ ಎಷ್ಟೋ ಸಂದರ್ಭದಲ್ಲಿ ಚುರುಕಾಗಿ ಓದುವ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸದೆ ಮದುವೆ ಮಾಡುವುದು ಕಂಡುಬರುತ್ತದೆ.

ವಿಭಕ್ತ ಕುಟುಂಬದ ಗಾತ್ರ ಚಿಕ್ಕದಾಗಿದ್ದು ಮಕ್ಕಳನ್ನು ಸಾಕಿ ಸಲಹುವ ಹೊಣೆಗಾರಿಕೆ ತಂದೆ ತಾಯಿಯ ಮೇಲಿರುತ್ತದೆ. ಅವರು ತಮ್ಮ ಸಾಕಿಸಲುಹುವ ಶಕ್ತಿಗನುಗುಣವಾಗಿ ಮಕ್ಕಳನ್ನು ಪಡೆಯುತ್ತಾರೆ. ವಿಭಕ್ತ ಕುಟುಂಬಗಳಲ್ಲಿ ಪಿತೃಪಧಾನ ಮೌಲ್ಯಗಳಿದ್ದರೂ ಹೆಚ್ಚು ಪ್ರಭಾವ ಬೀರುವ ಅಂಶಗಳಾಗಿರುವುದಿಲ್ಲ. ಗಂಡು ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೆಚ್ಚು ಲಿಂಗತಾರತಮ್ಯದೋರಣೆಯನ್ನು ಅನುಸರಿಸುವುದಿಲ್ಲ. ಆದುದರಿಂದ ತಮ್ಮ ಮಗನಿಗೆ ಮತ್ತು ಮಗಳಿಗೆ ಸಮಾನವಾದ ಶಿಕ್ಷಣ ನೀಡುತ್ತಾರೆ.

ಅವಿಭಕ್ತ ಕುಟುಂಬಗಳಲ್ಲಿ ವಿಭಕ್ತ ಕುಟುಂಬಗಳಿಗಿಂತ ಹೆಚ್ಚು ಲಿಂಗ ತಾರತಮ್ಯ ಕಂಡು ಬರುತ್ತದೆ. ಅವಿಭಕ್ತ ಕುಟುಂಬಗಳಲ್ಲಿ ಗಂಡು ಮಕ್ಕಳನ್ನು ಹೆಚ್ಚಾಗಿ ಕುಟುಂಬದ ಆಸ್ತಿಯೆಂದು ಪರಿಗಣಿಸುತ್ತಾರೆ. ಆದುದರಿಂದ ಅವಿಭಕ್ತ ಕುಟುಂಬಗಳಲ್ಲಿ ಹೆಚ್ಚು ಗಂಡು ಮಕ್ಕಳಿಗೆ ಜನ್ಮನೀಡುವುದು ಮತ್ತು ಯಾವುದೇ ಸೌಲಭ್ಯಗಳನ್ನು ಗಂಡು ಮಕ್ಕಳಿಗೆ ಮೊದಲು ನೀಡುವುದು ಕಂಡುಬರುತ್ತದೆ. ಅವಿಭಕ್ತ ಕುಟುಂಬದಲ್ಲಿ ಕುಟುಂಬದ ನಿರ್ವಹಣೆ ಕರ್ತ(ಮನೆಯ ಯಜಮಾನ)ನ

ಹೊಣೆಯಾಗಿರುತ್ತದೆ ಮತ್ತು ಕುಟುಂಬ ಮಕ್ಕಳನ್ನು ಸಾಕಿಸಲುಹುವ ಹೊಣೆಗಾರಿಗೆ ತಂದೆ ತಾಯಿಗಳಿಗಿಂತ ಕರ್ತನಿಗಿರುತ್ತದೆ. ಆದುದರಿಂದ ಕರ್ತನು ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ನೀಡುವುದು ಮತ್ತು ಅವರ ಮದುವೆಯನ್ನು ಮುಂದೂಡುವುದನ್ನು ಮಾಡದೆ ಆದಷ್ಟು ಬೇಗ ಹೆಣ್ಣುಮಕ್ಕಳಿಗೆ ಮದುವೆ ಮಾಡಿ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದನ್ನು ನೋಡುತ್ತಾರೆ. ಆದುದರಿಂದ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದಲ್ಲಿ ಅವಿಭಕ್ತ ಕುಟುಂಬಗಳು ಹೆಚ್ಚು ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ.

"ಭಾರತದಲ್ಲಿರುವ ಪಿತೃಪ್ರಧಾನ ವಾರಸುದಾರಿಕೆಯಿಂದಾಗಿ ಪಾಲಕರು ಮಹಿಳೆಯ ಶಿಕ್ಷಣಕ್ಕೆ ಎಷ್ಟು ಮಹತ್ವನೀಡಬೇಕೊ ಅಷ್ಟು ಮಹತ್ವ ನೀಡುತ್ತಿಲ್ಲ. ಏಕೆಂದರೆ ಮಹಿಳೆಗೆ ಶಿಕ್ಷಣ ಕೊಡಿಸುವುದೆಂದರೆ ಪಕ್ಕದ ಮನೆಯ ಗಿಡಕ್ಕೆ ನೀರೆರೆದಂತೆ ಎಂಬ ನಾಣ್ನುಡಿ ಜನರಲ್ಲಿ ಗಟ್ಟಿಯಾಗಿ ನೆಲೆಗೊಂಡು ಬಿಟ್ಟಿದೆ."[೬]

ಭಾರತದಲ್ಲಿ ಶೇ.೮೫ ರಷ್ಟು ಗ್ರಾಮೀಣ ಕುಟುಂಬಗಳು ಅವಿಭಕ್ತ ಸ್ವರೂಪದವುಗಳಾಗಿವೆ. ಅವು ಎಲ್ಲಾ ವಿಚಾರಗಳಲ್ಲಿ ಗಂಡು ಮಕ್ಕಳಿಗೆ ನೀಡುವ ಆದ್ಯತೆ ಹೆಣ್ಣುಮಕ್ಕಳಿಗೆ ನೀಡುವುದಿಲ್ಲ. ಆದುದರಿಂದ ಲಿಂಗ ತಾರತಮ್ಯ ಹೆಚ್ಚಾಗಿ ಕಂಡು ಬರುವುದು. ಅವಿಭಕ್ತ ಕುಟುಂಬಗಳಲ್ಲಿಯೇ ಆಗಿದೆ.

ಈ ಅಧ್ಯಾಯದಲ್ಲಿ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಾಲಾ ಮುಖ್ಯೋಪಾಧ್ಯಾಯರನ್ನು ಮತ್ತು ಮಹಿಳಾ ವಿಧ್ಯಾರ್ಥಿಗಳನ್ನು ಸಂದರ್ಶಿಸಲಾಗಿದೆ.

ಶಾಲಾ ಮುಖೋಪಾಧ್ಯಾಯರು ನೀಡಿರುವ ಅಭಿಪ್ರಾಯಗಳು ಆ ಶಾಲೆಗಳಲ್ಲಿಯ ಪರಿಸ್ಥಿತಿಗಳನ್ನು ವಿವರಿಸುತ್ತವೆ. ಆದುದರಿಂದ ಈ ಅಧ್ಯಯನದಲ್ಲಿ ಹೆಬ್ಬುಗೋಡಿ ಪಂಚಾಯಿತಿಯ ನಗರಕ್ಕೆ ಹತ್ತಿರವಿರುವ ೧೦ ಖಾಸಗಿ ಮತ್ತು ೧೦ ಸರ್ಕಾರಿ ಶಾಲೆಗಳು ಆಯ್ಕೆಮಾಡಿಕೊಂಡು ಮುಖೋಪಾಧ್ಯಾಯರನ್ನು ಸಂದರ್ಶಿಸಿದಾಗ, ಹೆಣ್ಣುಮಕ್ಕಳು ಶಾಲೆ ಬಿಡುವ ಸಂಖ್ಯೆ ಕಡಿಮೆ ಎಂಬ ಉತ್ತರವನ್ನು ನೀಡಿದ್ದಾರೆ. ಒಬ್ಬ ಸರ್ಕಾರಿ ಶಾಲೆಯ ಮುಖೋಪಾಧ್ಯಾಯರು ಮಾತ್ರ ಸಾಧಾರಣ ಎಂದು ಉತ್ತರಿಸಿದ್ದಾರೆ. ಈ ಪಂಚಾಯಿತಿ ಪೋಷಕರ ಉತ್ತಮ ಆರ್ಥಿಕ ಸ್ಥಿತಿ, ಉತ್ತಮ ಶಿಕ್ಷಣ ಮಟ್ಟ, ಮತ್ತು ನಗರೀಕರಣ ಮತ್ತು ಆಧುನೀಕರಣದ ಪ್ರಭಾವದಿಂದಾಗಿ ಮಹಿಳಾ ಶಿಕ್ಷಣ ಪ್ರಾಮುಖ್ಯತೆಯ ಅರಿವಿದ್ದು ಅವರು ಹೆಣ್ಣುಮಕ್ಕಳನ್ನು ಶಾಲೆ ಬಿಡಿಸುವುದಿಲ್ಲ ಎಂದು ಮುಖೋಪಾಧ್ಯಾಯರು ತಿಳಿಸಿದ್ದಾರೆ. ಖಾಸಗಿ ಶಾಲೆಗಳಿಗೆ ಬರುವ ಹೆಣ್ಣುಮಕ್ಕಳ ಪೋಷಕರು ಆರ್ಥಿಕವಾಗಿ ಸ್ಥಿತಿವಂತರು, ತಂದೆ ತಾಯಿಗಳು ವಿದ್ಯಾವಂತರು ಮತ್ತು ಆಧುನೀಕರಣ

ಗೊಂಡವರಾದುದರಿಂದ ಶಾಲೆ ಬಿಡಿಸುವ ಪ್ರಕರಣಗಳು ಕಂಡು ಬರುವುದಿಲ್ಲ. ಸರ್ಕಾರಿ ಶಾಲೆಯಲ್ಲಿ ಆರ್ಥಿಕ ಸಂಕಷ್ಟದಿಂದಾಗಿ ಶಾಲೆ ಬಿಡಿಸಿರುವ ಪ್ರಸಂಗ ಕಂಡುಬಂದಿದೆ.

ನಗರದಿಂದ ದೂರವಿರುವ ಸಮಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ೧೦ ಖಾಸಗಿ ಮತ್ತು ೧೦ ಸರ್ಕಾರಿ ಶಾಲಾ ಮುಖೋಪಾಧ್ಯಾಯರನ್ನು ಸಂದರ್ಶನ ಮಾಡಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಹೆಣ್ಣುಮಕ್ಕಳು ಶಾಲೆ ಬಿಡುವ ಪ್ರಕರಣ ಹೆಚ್ಚು ಎಂದು ಹೇಳಿದ್ದಾರೆ. ಅದಕ್ಕೆ ಕಾರಣವಾಗಿ ಬಡತನ, ಪೋಷಕರ ಅನಕ್ಷರತೆಯು ಕಾರಣವೆಂದು ನಾವು ಎಷ್ಟೇ ಮಹಿಳಾ ಶಿಕ್ಷಣದ ಜಾಗೃತಿ ಮೂಡಿಸಿದರೂ ಅವರಿಗೆ ಅರ್ಥವಾಗುವುದಿಲ್ಲವೆಂಬ ಬೇಸರಿಕೆ ಉತ್ತರ ನೀಡಿದ್ದಾರೆ.

ನಗರದಿಂದ ದೂರವಿರುವ ಖಾಸಗಿ ಶಾಲಾ ಮುಖೋಪಾಧ್ಯಾಯರು ಸಾಧಾರಣ, ಕಡಿಮೆ ಎಂಬ ಉತ್ತರ ನೀಡಿದ್ದಾರೆ. ಅವರು ನೀಡಿರುವ ಕಾರಣ ನಮ್ಮ ಶಾಲೆಯ ಪೋಷಕರು ಉತ್ತಮ ಆರ್ಥಿಕ ಸ್ಥಿತಿಗತಿಯನ್ನು ಹೊಂದಿದ್ದಾರೆ ಮತ್ತು ವಿದ್ಯಾವಂತರಾಗಿರುವ ಕಾರಣ ಅವರು ಹೆಣ್ಣುಮಕ್ಕಳನ್ನು ಶಾಲೆ ಬಿಡಿಸುವುದಿಲ್ಲವೆಂದು ಹೇಳಿದ್ದಾರೆ.

ನಗರದಿಂದ ದೂರವಿರುವ ಸಮಂದೂರು ಪಂಚಾಯಿತಿ ಶಾಲೆಗಳಲ್ಲಿ ಶಾಲೆಯನ್ನು ಬಿಡುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾರಿಗುವುದು ಕಂಡುಬರುತ್ತದೆ. ಅವರಲ್ಲಿರುವ ಬಡತನ, ಪೋಷಕರ ಅಜ್ಞಾನ ಮತ್ತು ಸಾಂಪ್ರದಾಯಿಕ ಮನೋಭಾವನೆ ಕಾರಣವಾಗಿದೆ.

ಮನೆಯ ಗಂಡು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ ಲಿಂಗತಾರತಮ್ಯ ಮಾಡುತ್ತಾರೆಯೇ ಎಂಬುದನ್ನು ತಿಳಿಯಲು ಶಾಲಾ ವಿದ್ಯಾರ್ಥಿಗಳನ್ನೇ ಸಂದರ್ಶಿಸಲಾಗಿದೆ.

ನಗರದಿಂದ ದೂರವಿರುವ ಸಮಂದೂರು ಪಂಚಾಯಿತಿ ಖಾಸಗಿ ಮತ್ತು ಸರ್ಕಾರಿ ಶಾಲಾ ಹೆಚ್ಚಿನ ವಿದ್ಯಾರ್ಥಿಗಳು ಶಿಕ್ಷಣ ಕೊಡಿಸುವಲ್ಲಿ ನಮ್ಮ ಮತ್ತು ನಮ್ಮ ಮನೆಯ ಗಂಡು ಮಕ್ಕಳಿಗೆ ತಾರತಮ್ಯ ಮಾಡುತ್ತಾರೆ ಎಂದು ಹೇಳಿದ್ದಾರೆ. ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಲಿಂಗತಾರತಮ್ಯ ಮಾಡುವುದಿಲ್ಲವೆಂದು ಹೇಳಿದ್ದಾರೆ.

ನಗರಕ್ಕೆ ಹತ್ತಿರವಿರುವ ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ಹೆಚ್ಚಿನ ವಿದ್ಯಾರ್ಥಿಗಳು ಲಿಂಗ ತಾರತಮ್ಯ ಮಾಡುವುದಿಲ್ಲವೆಂದು, ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಲಿಂಗ ತಾರತಮ್ಯ ಮಾಡುತ್ತಾರೆಂಬ ಭಾವನೆ ವ್ಯಕ್ತಪಡಿಸಿದ್ದಾರೆ.

ಈ ಅಧ್ಯಯನದಲ್ಲಿ ತಿಳಿದು ಬರುವುದೇನೆಂದರೆ, ಲಿಂಗತಾರತಮ್ಯ ಮಾಡುವ ಪೋಷಕರ ಸಾಂಪ್ರದಾಯಿಕ ಭಾವನೆ ಮತ್ತು ಸ್ತ್ರೀ ಪುರುಷರಿಗೆ ಸಂಬಂಧಿಸಿದಂತೆ ಇರುವ ದ್ವಿಮುಖ ನೀತಿಯೇ ಕಾರಣವಾಗಿದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಪೋಷಕರಲ್ಲಿ ಸ್ತ್ರೀ ಪುರುಷರಿಗೆ ಸಂಬಂಧಿಸಿದಂತೆ ಸಮಾನ ಮೌಲ್ಯಗಳನ್ನು ಅಳವಡಿಸಿಕೊಂಡಿರುವುದರಿಂದ ಅವರಲ್ಲಿ ಲಿಂಗತಾರತಮ್ಯ ಧೋರಣೆ ಕಂಡುಬರುವುದಿಲ್ಲ. ನಗರೀಕರಣವು ಸಮಾನ ಮೌಲ್ಯಗಳನ್ನು ಅಳವಡಿಸಿಕೊಳ್ಳುವಲ್ಲಿ ಸಹಕರಿಸುತ್ತದೆ.

ಅವಿಭಕ್ತ ಕುಟುಂಬದಲ್ಲಿ ಶಿಕ್ಷಣ ನೀಡುವಲ್ಲಿ ಲಿಂಗತಾರತಮ್ಯ ಕಂಡುಬರುತ್ತದೆ. ಈ ಕುಟುಂಬಗಳಲ್ಲಿ ಕರ್ತನ ಯಜಮಾನಿಕೆ ಇದ್ದು, ಪಿತೃಪ್ರಧಾನ ಮೌಲ್ಯಗಳ ಪ್ರಮುಖ ಸ್ಥಾನಮಾನ ಹೊಂದಿರುವುದರಿಂದ ಸ್ತ್ರೀಯರಿಗೆ ದ್ವಿತೀಯ ಸ್ಥಾನಮಾನಗಳಿರುತ್ತದೆ. ಆದುದರಿಂದ ಲಿಂಗತಾರತಮ್ಯ ಹೆಚ್ಚಾಗಿ ಅವಿಭಕ್ತ ಕುಟುಂಬಗಳಲ್ಲಿ ಕಂಡುಬರುತ್ತದೆ. ಅವಿಭಕ್ತ ಕುಟುಂಬಗಳು ನಗರದಿಂದ ದೂರವಿರುವ ಗ್ರಾಮಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ವಿಭಕ್ತ ಕುಟುಂಬಗಳಲ್ಲಿ ಶಿಕ್ಷಣ ನೀಡುವಲ್ಲಿ ಹೆಚ್ಚು ತಾರತಮ್ಯ ಮಾಡಿರುವುದು ಕಂಡು ಬರುತ್ತದೆ. ಇಲ್ಲಿ ಕುಟುಂಬದ ಪುರುಷ ಮತ್ತು ಸ್ತ್ರೀಯರಿಗೆ ಸಮಾನತೆ ಇರುತ್ತದೆ. ಈ ಕುಟುಂಬಗಳು ನಗರಗಳಲ್ಲಿ ನಗರೀಕರಣಗೊಂಡ ಹೆಬ್ಬಗೋಡಿ ಗ್ರಾಮಪಂಚಾಯಿತಿ ಗ್ರಾಮಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ನಗರೀಕರಣ, ಆಧುನೀಕರಣವು ಸ್ತ್ರೀವಾದಿ ದೃಷ್ಟಿಕೋನಕ್ಕೆ ಪೂರಕವಾಗಿದ್ದು ಮಹಿಳಾ ಶಿಕ್ಷಣಕ್ಕೆ ಆದ್ಯತೆಯನ್ನು ನೀಡುವುದು ಈ ಅಧ್ಯಯನದಿಂದ ಕಂಡುಬರುತ್ತದೆ.

ಸ್ತ್ರೀ ಶಿಕ್ಷಣದ ಮುನ್ನಡೆಯಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ

ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವುದರಲ್ಲಿ ಶಿಕ್ಷಣ ಸಂಸ್ಥೆಗಳ ಕರ್ತವ್ಯಗಳಿವೆ:

೧. ಹೆಣ್ಣುಮಕ್ಕಳು ಸ್ವಪರಿಕಲ್ಪನೆ ಮತ್ತು ಆತ್ಮವಿಶ್ವಾಸಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಹಾಗೂ ಸ್ವಾವಲಂಬನೆಯನ್ನು ಹೆಚ್ಚಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ.

೨. ಹೆಣ್ಣುಮಕ್ಕಳಲ್ಲಿ ಕೀಳರಿಮೆಯನ್ನು ಹೋಗಲಾಡಿಸಿ, ಸ್ವತಂತ್ರ ಯೋಚನೆಗೆ ಹಾಗೂ ವೈಯಕ್ತಿಕ ನಿರ್ಣಯಗಳನ್ನು ಕೈಗೊಳ್ಳಲು ಸೂಕ್ತ ಪರಿಸರ ನಿರ್ಮಾಣ ಮಾಡಬೇಕು.

೩. ಹುಡುಗಿಯರಲ್ಲಿ ವಿದ್ಯಾರ್ಥಿ ಮುಖಂಡರನ್ನು ಆಯ್ಕೆಮಾಡಿ, ನಾಯಕತ್ವಗುಣಗಳನ್ನು ಬೆಳೆಸಬೇಕು.

೪. ಶಿಕ್ಷಣ ಸಂಸ್ಥೆಗಳು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಸೂಕ್ತ ಮಾರ್ಗದರ್ಶನ ನೀಡಬೇಕು. ಅವರಿಗಾಗಿ ಪ್ರತ್ಯೇಕ ತರಗತಿಗಳನ್ನು ತೆರೆಯಬೇಕು.

೫. ಹೆಣ್ಣುಮಕ್ಕಳ ಆರೋಗ್ಯ ತಪಾಸಣೆಗಾಗಿ ಮಹಿಳಾ ವೈದ್ಯರ ಸಲಹೆ ಪಡೆಯಬೇಕು.

೬. ಶಿಕ್ಷಣ ಸಂಸ್ಥೆಗಳಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯ ಹಾಗೂ ನಿರೀಕ್ಷಣಾ ಕೊಠಡಿಗಳನ್ನು ವ್ಯವಸ್ಥೆಗೊಳಿಸಬೇಕು.

೭. ಶಾಲೆಗಳಲ್ಲಿ ಲಿಂಗತಾರತಮ್ಯವನ್ನು ಹೋಗಲಾಡಿಸಿ, ಸಮಾಜದಲ್ಲಿ ಮಹಿಳೆಯರ ಸ್ಥಾನದ ಪ್ರಾಮುಖ್ಯತೆಯನ್ನು ತಿಳಿಸಬೇಕು.

೮. ಹೆಣ್ಣುಮಕ್ಕಳು ಆರ್ಥಿಕ ಸ್ವಾವಲಂಬಿಯಾಗಲು ಹೆಣ್ಣುಮಕ್ಕಳಿಗಾಗಿ ವಿಶೇಷ ಕೋರ್ಸ್‌ಗಳನ್ನು ತೆರೆಯಬೇಕು.

ಈ ಎಲ್ಲಾ ಕ್ರಮಗಳನ್ನು ಶಿಕ್ಷಣ ಸಂಸ್ಥೆ ಕೈಗೊಂಡಾಗ ಮಹಿಳಾ ಶಿಕ್ಷಣ ಹೆಚ್ಚು ಅಭಿವೃದ್ಧಿಯಾಗುತ್ತದೆ.

ಕೊನೆ ಟಿಪ್ಪಣಿಗಳು

೧ "ಶಿಕ್ಷಣ ಸಮಾಜಶಾಸ್ತ್ರ", ರಂಗಸ್ವಾಮಿ ಬೆಳಕವಾಡಿ, ಸುಭಾಷ್ ಬುಕ್ ಸ್ಟೋರ್, ಬೆಂಗಳೂರು, ಪು.

೨ "ಭಾರತೀಯ ಸ್ತ್ರೀ ಜೀವನ", ಡಾ. ವಿಠಲರಾವ್ ಟಿ. ಗಾಯಕ್ವಾಡ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯, ಪು.೧೩೩.

೩ ಜೀನ್ ಡ್ರೀಜ್, ಅಮರ್ತ್ಯಸೆನ್, ೨೦೦೨, ಇಂಡಿಯಾ: "ಡೆವಲಪ್‌ಮೆಂಟ್ ಅಂಡ್ ಪಾರ್ಟಿಸಿಪೇಷನ್", ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ, ಪು.

೪ "ನಗರ ಸಮಾಜಶಾಸ್ತ್ರ" ಎಚ್.ಡಿ. ಲಕ್ಷ್ಮೀನಾರಾಯಣ, ಚಂದ್ರು ಪ್ರಕಾಶನ, ಬೆಂಗಳೂರು, ೧೯೯೮, ಪು.೧೨೨.

೫ "ಶಿಕ್ಷಣ ಮತ್ತು ಜೀವನ ಶೈಲಿ", ಚಿದಾನಂದ ಸಾಲಿ ಮಂಟಪ ಮಾಲೆ ೧೯೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨೦.

೬ *ಸಾಕ್ಷರತೆಯ ಲಿಂಗ ಸಂಬಂಧಿ ಆಯಾಮಗಳು: ಕರ್ನಾಟಕದಲ್ಲಿ ಮಹಿಳಾ ಸಾಕ್ಷರತೆಯ ಸ್ವರೂಪ*, ಟಿ.ಆರ್. ಚಂದ್ರಶೇಖರ, "ಮಹಿಳಾ ಅಧ್ಯಯನ", ಸಂಪುಟ ೯, ಸಂಚಿಕೆ ೨, ಜುಲೈ–ಡಿಸೆಂಬರ್, ೨೦೦೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೯೫.

ಅಧ್ಯಾಯ ಏಳು

ಭಾರತದಲ್ಲಿ ಸಾಕ್ಷರತೆಯ ಪರಿಶೀಲನೆ ಲಿಂಗಸಂಬಂಧದ ನೆಲೆಯಲ್ಲಿ

ಅಧ್ಯಾಯ ಏಳು

ಭಾರತದಲ್ಲಿ ಸಾಕ್ಷರತೆಯ ಪರಿಶೀಲನೆ ಲಿಂಗಸಂಬಂಧದ ನೆಲೆಯಲ್ಲಿ

ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಸರಿ ಸುಮಾರು ಅರ್ಧದಷ್ಟು ಇದ್ದಾರೆ. ಸ್ತ್ರೀ-ಪುರುಷ ಶಿಕ್ಷಣದ ನಡುವೆ ಅಂತರವಿದೆ. ಗ್ರಾಮೀಣ ಸ್ತ್ರೀ-ಪುರುಷ ಶಿಕ್ಷಣದ ನಡುವೆ ಅಂತರ ಹೆಚ್ಚಾಗಿದೆ.

೧೯೫೧ರಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ೮.೮೯ ರಷ್ಟಿದೆ. ಅದು ೨೦೧೧ರಲ್ಲಿ ೬೫.೪೬ ರಷ್ಟಾಗಿದೆ. ಆದರೆ ೧೯೫೧ರಲ್ಲಿ ಪುರುಷ ಸಾಕ್ಷರತೆಯ ಪ್ರಮಾಣ ೨೭.೧೬ ರಷ್ಟಿದ್ದರೆ ಅದು ೨೦೧೧ರಲ್ಲಿ ೮೨.೧೪ ರಷ್ಟಾಗಿದೆ. ಇದನ್ನು ನೋಡಿದರೆ ಈ ಸಮಾಜದಲ್ಲಿ ಶಿಕ್ಷಣ ನೀಡುವಲ್ಲಿ ಲಿಂಗತಾರತಮ್ಯ ಎಷ್ಟಿರ ಮಟ್ಟಿಗೆ ಇದೆ ಎಂಬುದು ಕಂಡುಬರುತ್ತದೆ.

ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಸರಿಸುಮಾರು ಅರ್ಧದಷ್ಟು ಇದ್ದಾರೆ. ಸ್ತ್ರೀ-ಪುರುಷರ ಶಿಕ್ಷಣದ ನಡುವೆ ಅಂತರವಿದೆ. ಮಹಿಳಾ ಸಾಕ್ಷರತೆಯ ಪ್ರಮಾಣ ೧೯೫೧ರಲ್ಲಿ ಶೇಕಡ ೮.೮೬ರಷ್ಟಿದ್ದರೆ ಅದು ೨೦೦೧ರಲ್ಲಿ ಶೇಕಡ ೫೪.೧೬ರಷ್ಟು ಕಂಡುಬರುತ್ತದೆ. ಆದರೆ ಪುರುಷರ ಸಾಕ್ಷರತೆಯ ಪ್ರಮಾಣವು ೧೯೫೧ರಲ್ಲಿ ೨೭.೧೬ರಷ್ಟಿದ್ದರೂ ಅದು ೨೦೦೧ರಲ್ಲಿ ಶೇಕಡಾ ೩೫.೮೫ ಪ್ರಮಾಣದಲ್ಲಿ ಏರಿರುವುದು ಕಂಡುಬರುವುದು. ಇದನ್ನು ನೋಡಿದರೆ ಈ ಸಮಾಜದಲ್ಲಿ ಶಿಕ್ಷಣ ಅವಕಾಶದ ಬಳಕೆಯಲ್ಲಿ ಲಿಂಗತಾರತಮ್ಯವು ಎಷ್ಟರ ಮಟ್ಟಿಗೆ ಇತ್ತು ಎಂಬುದು ಮನದಟ್ಟಾಗುತ್ತದೆ(ಪಟ್ಟಿ ೭.೧).

ಪಟ್ಟಿ ೭.೧

ಭಾರತದಲ್ಲಿ ಮಹಿಳೆಯರ ಮತ್ತು ಪುರುಷರ ಶೇಕಡಾವಾರು ಸಾಕ್ಷರತಾ ಪ್ರಮಾಣ

ವರ್ಷ	ಪುರುಷ	ಮಹಿಳೆ	ದೇಶದಒಟ್ಟು ಸಾಕ್ಷರತಾ ಪ್ರಮಾಣ
೧೯೫೧	೨೭.೧೬	೮.೮೯	೧೮.೩೩
೧೯೬೧	೪೦.೪೦	೧೫.೩೪	೨೮.೩೧
೧೯೭೧	೪೫.೯೫	೨೧.೯೭	೩೪.೪೫
೧೯೮೧	೫೩.೪೫	೨೮.೪೬	೪.೪೭
೧೯೯೧	೬೪.೧೩	೩೯.೨೯	೫೨.೨೧
೨೦೦೧	೭೫.೨೬	೫೩.೬೭	೬೪.೮೪
೨೦೦೧ ಗ್ರಾಮೀಣ	೭೦.೭	೪೬.೧೩	೫೮.೭೪
೨೦೦೧ ನಗರ	೮೬.೨೭	೭೩.೮೬	೭೯.೯೨
೨೦೧೧	೮೨.೧೪	೬೫.೪೬	೭೪.೦೪
೨೦೧೧ ಗ್ರಾಮೀಣ	೭೭.೧೫	೫೭೯೩	೬೨.೭೭
೨೦೧೧ ನಗರ	೮೮.೭೬	೭೯.೧೧	೮೪.೧೧

ಆಧಾರ: ೨೦೦೧ರ ಜನಗಣತಿ ಪು. ಸಂ. ೨೫೧. ನಗರ

ಸ್ತ್ರೀ–ಪುರುಷರ ಸಾಕ್ಷರತೆಯ ಪ್ರಮಾಣದಲ್ಲಿ ವ್ಯತ್ಯಾಸವಿರುವುದಷ್ಟೇ ಅಲ್ಲದೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲೂ; ಸಾಕ್ಷರತೆಯ ಪ್ರಮಾಣದಲ್ಲಿ ಅಗಾಧವಾದ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ನಗರ ಪ್ರದೇಶದಲ್ಲಿ ಸ್ತ್ರೀ ಸಾಕ್ಷರತೆ ಪ್ರಮಾಣ ೭೩.೮೬ ರಷ್ಟಿದ್ದು ಅದು ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣವು ಶೇಕಡ ೪೬.೧೩ರಷ್ಟು ಮಾತ್ರವಿದ್ದುದು ಈ ಮೇಲಿನ ಕೋಷ್ಟಕದಿಂದ ಕಂಡುಬರುತ್ತದೆ.

೨೦೧೧ರ ಜನಗಣತಿಯಂತೆ ಸ್ತ್ರೀ–ಪುರುಷರ ಸಾಕ್ಷರತೆಯ ಪ್ರಮಾಣದಲ್ಲಿ ವ್ಯತ್ಯಾಸವಿರುವುದು. ಅಲ್ಲದೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲೂ ಸಾಕ್ಷರತೆಯ ಪ್ರಮಾಣದಲ್ಲಿ ಅಗಾಧವಾದ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ನಗರ ಪ್ರದೇಶದಲ್ಲಿ ಸ್ತ್ರೀ ಸಾಕ್ಷರತೆ ಪ್ರಮಾಣ ೭೯.೧೧ ರಷ್ಟಿದ್ದು ಅದು ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣವು ಶೇಕಡ ೫೭.೯೩ರಷ್ಟು ಮಾತ್ರವಿದ್ದುದು ಮತ್ತು ನಗರ–ಗ್ರಾಮೀಣ ಮಹಿಳಾ ಸಾಕ್ಷರತೆ ವ್ಯತ್ಯಾಸವು ೨೧.೧೮ರಷ್ಟು ಈ ಮೇಲಿನ ಕೋಷ್ಟಕದಿಂದಕಂಡುಬರುತ್ತದೆ.[೧]

ಗ್ರಾಮ-ನಗರಗಳಲ್ಲಿ ನಾವು ಅನಕ್ಷರತೆ, ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಮತ್ತು ಪದವಿ ಶಿಕ್ಷಣದ ಪ್ರಮಾಣ ನೋಡಿದಾಗ ನಗರ ಮತ್ತು ಗ್ರಾಮಗಳಲ್ಲಿ ಅಜಗಜಾಂತರ ವ್ಯತ್ಯಾಸವಿರುವುದು ಕಂಡುಬರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ೧೯೮೩ರ ಸುಮಾರಿಗೆ ಶೇಕಡ ೮೬.೨ರಷ್ಟು ಜನ ಅನಕ್ಷರಸ್ಥರಾಗಿದ್ದರು. ಇದು ೧೯೯೪ರಲ್ಲಿ ಅಂದರೆ ಸುಮಾರು ಹನ್ನೊಂದು ವರ್ಷಗಳ ನಂತರವೂ ಕೇವಲ ಅವರ ಅನಕ್ಷರತೆಯ ಮಟ್ಟ ಶೇಕಡಾ ೭ರಷ್ಟು ಮಾತ್ರ ಕಡಿಮೆಯಾದದ್ದು ಕಂಡುಬರುತ್ತದೆ. ಇದರಿಂದ ಗ್ರಾಮೀಣ ಪ್ರದೇಶದ ಬದಲಾವಣೆಗೆ ಅವಶ್ಯಕವಾಗಿರುವ ಶೈಕ್ಷಣಿಕ ಸ್ಥಿತಿಗತಿ ಚಿಂತಾಜನಕವಾಗಿರುವುದು ನಮಗೆ ಮನದಟ್ಟಾಗುತ್ತದೆ(ಪಟ್ಟಿ ೭.೨).

ಪಟ್ಟಿ ೭.೨

ಗ್ರಾಮೀಣ ಮತ್ತು ನಗರಗಳಲ್ಲಿ ಮಹಿಳೆಯರ ಸಾಕ್ಷರತೆ ಮತ್ತು ಶೈಕ್ಷಣಿಕ ಪ್ರಮಾಣದ ಕೋಷ್ಟಕ

ಸಾಕ್ಷರತಾ ಪ್ರಮಾಣ	೧೯೮೩		೧೯೮೮		೧೯೯೪	
	ಗ್ರಾಮೀಣ	ನಗರ	ಗ್ರಾಮೀಣ	ನಗರ	ಗ್ರಾಮೀಣ	ನಗರ
ಅನಕ್ಷರಸ್ಥರು	೮೯.೨	೫೬.೫	೮೨.೩	೫೧.೮	೭೯.೦	೪೪.೫
ಪ್ರಾಥಮಿಕ ಹಂತ	೧೦.೨	೧೭.೭	೧೨.೦	೧೯.೦	೧೩.೭	೧೭.೭
ಮಾಧ್ಯಮಿಕ ಹಂತ	೨.೧	೬.೩	೩.೨	೭.೩	೩.೯	೮.೧
ಪ್ರೌಢ ಹಂತ	೧.೨	೧೧.೬	೨.೦	೧೨.೩	೨.೭	೧೫.೧
ಪದವಿ ಹಂತ	೦.೩	೦	೦.೪	೯.೬	೦.೭	೧೪.೬

ಆಧಾರ: ನ್ಯಾಶನಲ್ ಸ್ಯಾಂಪಲ್ ಸರ್ವೆ.

"ಗ್ರಾಮಗಳಲ್ಲಿ ಪದವಿ ಪಡೆದುಕೊಂಡವರ ಸಂಖ್ಯೆಯಂತೂ ತೀರ ನಗಣ್ಯವಾಗಿದೆ.ಅದು ಶೇಕಡ ೦.೭ರಷ್ಟು ಮಾತ್ರವಾಗಿದೆ. ಆದರೆ ಇದು ನಗರ ಪ್ರದೇಶದಲ್ಲಿ ಶೇಕಡಾ ೧೪.೬ರಷ್ಟು ಇದ್ದುದು ಕಂಡುಬರುತ್ತದೆ. ಹಳ್ಳಿಗಳಿಗೆ ಹೋಲಿಸಿದರೆ ಪಟ್ಟಣದ ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿನ ಹೆಚ್ಚಳವು ಗೋಚರಿಸುತ್ತದೆ."[೨]

ಗ್ರಾಮೀಣ ಭಾಗದ ಹೆಣ್ಣುಮಕ್ಕಳ ಶಿಕ್ಷಣದ ವಿಷಯದಲ್ಲಿ ನಿರಾಶಾಜನಕ ಸಂಗತಿಯೆ ಇದೆ. ಪಾಲಕರ ಅಜ್ಞಾನ, ದಾರಿದ್ರ್ಯ, ಅಲ್ಪವೇತನದ ಮೇಲೆ ಮಕ್ಕಳನ್ನು ದುಡಿಸುವ ಅಗತ್ಯ, ಮನೆಯ ಅಡಚಣೆಗಳು, ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ, ಹೊಲದ ಕೆಲಸ ಮತ್ತು

ದನಕರುಗಳ ಪಾಲನೆ ಇತ್ಯಾದಿ ಕಾರಣಗಳಿಗಾಗಿ ಹೆಣ್ಣುಮಕ್ಕಳು ಶಾಲೆಗೆ ಹೋಗದಿರುವುದು ಮತ್ತು ಹೋದರೂ ಮಧ್ಯದಲ್ಲಿಯೇ ಬಿಟ್ಟುಬಿಡುವುದು ಸಾಮಾನ್ಯವಾಗಿದೆ."[೩]

ಸ್ವತಂತ್ರ ಭಾರತದಲ್ಲಿ ಸ್ತ್ರೀಯರಿಗೆ ಆರ್ಥಿಕ, ಸಾಮಾಜಿಕ ಹಕ್ಕುಗಳು ಪ್ರಾಪ್ತವಾದವು.ಸ್ತ್ರೀ ಸಮಾನತೆ ತರುವ ಎಲ್ಲಾ ಪ್ರಯತ್ನಗಳನ್ನು ಸಂವಿಧಾನ ಮತ್ತು ಕಾನೂನಿನಲ್ಲಿ ತರಲಾಯಿತು. ಅವುಗಳಲ್ಲಿ ಸ್ತ್ರೀ ಸ್ಥಾನಮಾನ ಉತ್ತಮಪಡಿಸಲು ಸ್ತ್ರೀಯರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿಯನ್ನು ತರಲಾಯಿತು. ಸ್ತ್ರೀಯರಿಗೆ ಪ್ರೌಢಶಿಕ್ಷಣದವರೆವಿಗೂ ಉಚಿತ ಶಿಕ್ಷಣವನ್ನು ನೀಡಲು ಭಾರತ ಮುಂದಾಯಿತು.

ಸ್ವತಂತ್ರ್ಯ ಭಾರತದಲ್ಲಿ ಕೇಂದ್ರ ಮತ್ತುರಾಜ್ಯ ಸರ್ಕಾರಗಳು ಹತ್ತು ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಮಹಿಳಾ ಶಿಕ್ಷಣದ ಅಭಿವೃದ್ಧಿಯ ಕಡೆಗೆ ವಿಶೇಷ ಗಮನಹರಿಸಿದವು. ಮಹಿಳೆಯರಿಗೆ ಶಿಕ್ಷಣ ನೀಡುವುದರಿಂದದೇಶದ ಪ್ರಗತಿ ಸಾಧ್ಯವೆಂಬುದನ್ನು ಅರಿತು ಆ ನಿಟ್ಟಿನಲ್ಲೇ ಕಾರ್ಯೋನ್ಮುಖವಾದವು. ಮಹಿಳೆಯರಿಗೆ ಪ್ರಾಥಮಿಕ ಹಂತದಿಂದಉನ್ನತ ಹಂತದವರೆವಿಗೆ ಉಚಿತ ಶಿಕ್ಷಣ ನೀಡುವುದು, ವಸತಿ ನಿಲಯಗಳ ಸ್ಥಾಪನೆ, ವಿದ್ಯಾರ್ಥಿವೇತನಗಳನ್ನು ನೀಡುವುದು, ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ, ರಾಜಕೀಯ ಕ್ಷೇತ್ರ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಹಾಗೂ ಇನ್ನೂ ಮುಂತಾದ ಜನಪರ ಕಾರ್ಯಕ್ರಮಗಳನ್ನು ಕೈಗೊಂಡು ಮಹಿಳೆಯರ ಸ್ಥಿತಿಗತಿ ಗಳನ್ನು ಹೆಚ್ಚಿಸಲು ಈ ಸರ್ಕಾರಗಳು ಪ್ರಯತ್ನಿಸಿವೆ ಮತ್ತು ಪ್ರಯತ್ನಿಸುತ್ತಲೂ ಇವೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ವಿವಿಧ ವರ್ಷಗಳಲ್ಲಿ ಹಂತಹಂತವಾಗಿ ಹೇಗೆ ಏರಿಕೆಯಾಗುತ್ತಾ ಬಂದಿತೆಂಬುದನ್ನು ಕೋಷ್ಟಕದಿಂದ ತಿಳಿಯಬಹುದಾಗಿದೆ.[೪]

ಪಟ್ಟಿ ೭.೩

ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ಶೇಕಡವಾರು ಪ್ರಮಾಣ

ವರ್ಷ	೧೯೫೧	೧೯೬೧	೧೯೭೧	೧೯೮೧	೧೯೯೧	೨೦೦೧	೨೦೧೧
ಪುರುಷರು	೨೭.೧೬	೪೦.೪೦	೪೫.೯೬	೫೬.೩೮	೬೪.೧೩	೭೫.೨೬	೮೨.೧೪
ಮಹಿಳೆಯರು	೮.೮೬	೧೫.೩೫	೨೧.೯೭	೨೯.೭೬	೩೯.೨೯	೫೩.೬೭	೬೫.೪೬
ಒಟ್ಟು	೧೮.೩೩	೨೮.೩೦	೩೪.೪೫	೪೩.೫೭	೫೨.೨೧	೬೪.೮೪	೭೪.೦೪

ಆಧಾರ: ೨೦೦೧ರ ಜನಗಣತಿ.

೨೦೧೧ರ ಜನಗಣತಿಯಂತೆ ಭಾರತದಲ್ಲಿನ ಸಾಕ್ಷರತೆಯ ಪ್ರಮಾಣ ಶೇ.೭೪.೦೪ ರಷ್ಟು ಆದಲ್ಲಿ, ಪುರುಷರ ಸಾಕ್ಷರತೆಯ ಪ್ರಮಾಣ ಶೇ.೮೨.೧೪ ರಷ್ಟಿದೆ. ಸ್ತ್ರೀ ಸಾಕ್ಷರತೆಯ ಪ್ರಮಾಣ

ಶೇ.೬೮.೧ ರಷ್ಟು ಆಗಿದೆ. ಪುರುಷ–ಸ್ತ್ರೀ ಸಾಕ್ಷರತೆಯ ವ್ಯತ್ಯಾಸ ಶೇ.೮.೬೬ ರಷ್ಟಿರುವುದನ್ನು ನೋಡಿದಾಗ ಮಹಿಳಾ ಸಾಕ್ಷರತೆಯ ಅಸಮಾನತೆಯನ್ನು ಗಮನಿಸಬಹುದು.

೨೦೧೧ರ ಜನಗಣತಿಯಂತೆ ಕರ್ನಾಟಕದ ಸಾಕ್ಷರತೆಯ ಪ್ರಮಾಣ ಶೇ.೭೫.೬೧ ರಷ್ಟು ಆಗಿದೆ. ಪುರುಷರ ಸಾಕ್ಷರತೆಯ ಪ್ರಮಾಣ ಶೇ.೮೨.೧೮ ರಷ್ಟು ಆಗಿದೆ. ಸ್ತ್ರೀಯರ ಸಾಕ್ಷರತೆಯ ಪ್ರಮಾಣ ಶೇ.೬೮.೧ ರಷ್ಟು ಆಗಿದೆ. ಕರ್ನಾಟಕದಲ್ಲಿಯೂ ಪುರುಷ ಮತ್ತು ಸ್ತ್ರೀ ಸಾಕ್ಷರತೆ ಪ್ರಮಾಣ ಸಮಾನವಾಗಿಲ್ಲದಿರುವುದನ್ನು ಗಮನಿಸಿದಾಗ ಇದು ಸ್ತ್ರೀ ಅಸಮಾನತೆಗೆ ಕನ್ನಡಿ ಹಿಡಿದಂತೆ ಇದೆ.

೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ.೭೮.೨೯ ರಷ್ಟಿದೆ. ಪುರುಷ ಸಾಕ್ಷರತೆಯ ಪ್ರಮಾಣ ಶೇ.೮೫.೪೪ ರಷ್ಟಿದೆ. ಸ್ತ್ರೀಯರ ಸಾಕ್ಷರತೆಯ ಪ್ರಮಾಣ ಶೇ.೭೦.೭೩ ರಷ್ಟಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಸ್ತ್ರೀ–ಪುರುಷ ಸಾಕ್ಷರತೆಯಲ್ಲಿ ಸಮಾನತೆಕಂಡು ಬರುವುದಿಲ್ಲ.

ಕರ್ನಾಟಕದ ರಾಜಧಾನಿ ಬೆಂಗಳೂರಾಗಿದ್ದರೂ, ಬೆಂಗಳೂರು ಗ್ರಾಮಾಂತರದಲ್ಲಿಯೆ ಸ್ತ್ರೀ ಪುರುಷ ಶಿಕ್ಷಣದಲ್ಲಿ ಅಗಾಧ ವ್ಯತ್ಯಾಸಕಂಡುಬರುತ್ತಿದ್ದು, ರಾಜಧಾನಿಯಿಂದದೂರವಿರುವ ಮತ್ತು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಸ್ತ್ರೀ ಸಾಕ್ಷರತೆ ತುಂಬಾ ಕೆಳಮಟ್ಟದಲ್ಲಿರುತ್ತದೆ. ಸ್ತ್ರೀಯರ ಶಿಕ್ಷಣಕ್ಕೆ ಬೇಕಾದ ಸೌಲಭ್ಯ ಶಾಲಾ ಕಾಲೇಜುಗಳು ಬೆಂಗಳೂರಿನಲ್ಲಿದ್ದರೂ, ಬೆಂಗಳೂರು ಗ್ರಾಮಾಂತರ ಹಳ್ಳಿಗಳ ಜನರು ಮಹಿಳಾ ಶಿಕ್ಷಣಕ್ಕೆ ಆಸಕ್ತಿಯನುತೋರಿಸುತ್ತಿಲ್ಲ. ಜನರಲ್ಲಿ ಮಹಿಳಾ ಶಿಕ್ಷಣದ ಜಾಗೃತಿ ಮೂಡಬೇಕಾದಅವಶ್ಯಕತೆತುಂಬಾಇದೆ.

ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿದ್ದರೂ, ಬೆಂಗಳೂರು ನಗರಕ್ಕೆ ಹತ್ತಿರವಿರುವ ಗ್ರಾಮಾಂತರ ಜಿಲ್ಲೆಯಲ್ಲಿಯೇ ಮಹಿಳಾ ಶಿಕ್ಷಣದ ಅಸಮಾನತೆಯು ಮಹಿಳಾ ಅಸಮಾನತೆಯನ್ನು ಬಿಂಬಿಸುತ್ತದೆ.

೨೦೦೧ರ ಜನಗಣತಿಯ ಪ್ರಕಾರ ಆನೇಕಲ್ ತಾಲ್ಲೂಕಿನ ಪುರುಷ ಸಾಕ್ಷರತೆ ಪ್ರಮಾಣ ಶೇ.೮೫.೯೪ ರಷ್ಟಿದೆ. ಸ್ತ್ರೀ ಸಾಕ್ಷರತೆಯ ಪ್ರಮಾಣ ಶೇ.೭೩.೪೬ ರಷ್ಟಿದೆ. ಪುರುಷ ಮತ್ತು ಸ್ತ್ರೀ ಸಾಕ್ಷರತೆಯ ವ್ಯತ್ಯಾಸ ೧೫.೫೧ ಆಗಿದೆ. ಇದರಿಂದ ತಿಳಿದುಬರುವುದೇನೆಂದರೆ, ಆನೇಕಲ್ ತಾಲ್ಲೂಕಿನಲ್ಲೂ ಪುರುಷ ಮತ್ತು ಸ್ತ್ರೀ ಶಿಕ್ಷಣ ಮತ್ತು ಸ್ಥಾನಮಾನದಲ್ಲಿ ಅಸಮಾನತೆಯನ್ನು ಎದ್ದು ಕಾಣುತ್ತದೆ.

ನಗರಕ್ಕೆ ಕೇವಲ ೩೫ ಕಿ.ಮಿ. ದೂರದಲ್ಲಿರುವಆನೇಕಲ್‌ತಾಲ್ಲೂಕಿನ ಪುರುಷ–ಸ್ತ್ರೀ ಶಿಕ್ಷಣದ ಹೆಚ್ಚಿನ ವ್ಯತ್ಯಾಸವನ್ನು ನೋಡಿದಾಗ ಸ್ತ್ರೀ ಅಸಮಾನತೆಯ ಮಟ್ಟ ಹೆಚ್ಚಾಗಿರುವುದು ತಿಳಿದುಬರುತ್ತದೆ.

ಈ ಎಲ್ಲಾ ಪ್ರಗತಿಪರ ಮಹಿಳಾ ಶಿಕ್ಷಣ ಕಾರ್ಯಕ್ರಮಗಳನ್ನು ಕೈಗೊಂಡಿದ್ದರೂ ಸರ್ಕಾರ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಸ್ತ್ರೀ ಶಿಕ್ಷಣ ಮಟ್ಟವು ಪ್ರಗತಿ ಸಾಧಿಸಲಿಲ್ಲ. ಕಾರಣ ಸಮಾಜದಲ್ಲಿ ಸ್ತ್ರೀ ಮತ್ತು ಪುರುಷರ ಬಗ್ಗೆ ಇರುವ ಅಸಮಾನ ಮನೋಭಾವನೆಗಳು, ಲಿಂಗ ತಾರತಮ್ಯಕ್ಕೆ ಕಾರಣವಾಗಿ ಸ್ತ್ರೀ ಶಿಕ್ಷಣದ ಬಗ್ಗೆ ಸಮಾಜದಲ್ಲಿ ಉದಾಸೀನತೆಯ ಭಾವನೆಯನ್ನು ಜನರು ವ್ಯಕ್ತಪಡಿಸಿದ್ದಾರೆ.

ಭಾರತವು ಗ್ರಾಮಗಳ ದೇಶವಾಗಿದ್ದು ಶೇ ೮೦ಕ್ಕೂ ಹೆಚ್ಚು ಜನಸಂಖ್ಯೆ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಭಾರತದ ಜನಸಂಖ್ಯೆಯ ಅರ್ಧದಷ್ಟು ಭಾಗ ಮಹಿಳೆಯರಿದಾರೆ. ಭಾರತದ ಸಾಕ್ಷರತೆಯಲ್ಲಿ ಪುರುಷ ಮತ್ತು ಸ್ತ್ರೀ ಶಿಕ್ಷಣದ ಪ್ರಮಾಣದ ಹೆಚ್ಚಿನ ವ್ಯತ್ಯಾಸಗಳಿರುವುದು ಕಂಡು ಬರುತ್ತದೆ. ಅಂದರೆ ಭಾರತದ ಶಿಕ್ಷಣದಲ್ಲಿ ಲಿಂಗ ತಾರತಮ್ಯ ಭಾವನೆ ಹೆಚ್ಚಾಗಿರುವುದು ಕಂಡುಬರುತ್ತದೆ. ಸ್ವಾತಂತ್ರ್ಯನಂತರ ಸರ್ಕಾರ ದಿನದಿಂದ ದಿನಕ್ಕೆ ಮಹಿಳಾ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡುತ್ತ ಬಂದಿದೆ. ಆದರ ಸೌಲತ್ತುಗಳನ್ನು ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ ಒದಗಿಸಿಕೊಡುವಲ್ಲಿ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಗಂಡು ಮಗುವಿನ ಶಿಕ್ಷಣಕ್ಕೆ ನೀಡುವ ಪ್ರಾಮುಖ್ಯತೆಯನ್ನು ಹೆಣ್ಣುಮಗುವಿನ ಶಿಕ್ಷಣಕ್ಕೆ ನೀಡದಿರುವುದೇ ಪುರುಷ ಮತ್ತು ಸ್ತ್ರೀ ಶಿಕ್ಷಣ ವ್ಯತ್ಯಾಸಕ್ಕೆ ಕಾರಣವಾಗಿದೆ. ಭಾರತದ ಹೆಚ್ಚಿನ ಗ್ರಾಮಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದು, ನಗರಗಳಿಂದ ದೂರದಲ್ಲಿ ಭೌಗೋಳಿಕವಾಗಿ ನೆಲೆಯಾಗಿವೆ. ಈ ಗ್ರಾಮಗಳ ಜನರು ಇನ್ನೂ ಸಂಪ್ರದಾಯಬದ್ಧರಾಗಿದ್ದು ಆಧುನಿಕತೆಯನ್ನು ಮೈಗೂಡಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ.ಆದುದರಿಂದಅವರ ಯೋಚನೆ ಕ್ರಮಗಳು ಸಹ ಲಿಂಗತಾರತಮ್ಯತೆಯಿಂದ ಕೂಡಿದೆ. ಇವರು ತಮ್ಮ ಗಂಡುಮಕ್ಕಳ ಶಿಕ್ಷಣಕ್ಕೆ ನೀಡುವ ಕಾಳಜಿಯನ್ನು ಹೆಣ್ಣುಮಕ್ಕಳಿಗೆ ನೀಡದೆ ಅವರ ವಿವಾಹಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡದ ಪೋಷಕರು, ಹೆಣ್ಣು ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿ ಮದುವೆ ಮಾಡುವುದು, ಪ್ರಮುಖ ಜವಾಬ್ದಾರಿಯೆಂದು ಭಾವಿಸಿದ್ದಾರೆ. ಕೆಲವು ಜಾತಿಗಳಲ್ಲಿ ಮಹಿಳೆಗೆ ಶಿಕ್ಷಣ ನೀಡುವುದನ್ನು ವಿರೋಧಿಸುತ್ತಾರೆ. ಇದು ಸಹ ಮಹಿಳಾ ಶಿಕ್ಷಣದ ಹಿನ್ನೆಡೆಗೆ ಕಾರಣವಾಗಿದೆ. ಕೆಲವು ಪೋಷಕರ ದೃಷ್ಟಿಯಲ್ಲಿ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದಕ್ಕಿಂತ ಮನೆ ಕೆಲಸಗಳನ್ನು ಸರಿಯಾಗಿ ಕಲಿಯಲಿ, ಗಂಡನ ಮನೆಯಲ್ಲಿ ಬಾಳಬೇಕಾದರೆ ಅವಳಿಗೆ ಎಲ್ಲಾ ಮನೆ ಕೆಲಸಗಳು ಬರಬೇಕು. ಆದುದರಿಂದ ಮನೆ ಕೆಲಸಗಳನ್ನು ಸರಿಯಾಗಿ ಕಲಿಯಲಿ ಎಂದು ಚಿಕ್ಕವಯಸ್ಸಿನಲ್ಲಿ ಶಾಲೆಯನ್ನು ಬಿಡಿಸಿ ಮನೆ ಕೆಲಸಗಳನ್ನು ಮಾಡಲು ಮನೆಯಲ್ಲಿರಿಸಿ ಕೊಳ್ಳುತ್ತಾರೆ. ಇನ್ನೂ ಬಡ ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ಎಷ್ಟೇ ಪ್ರತಿಭಾವಂತರಾದರು ಶಾಲೆಗಳಿಗೆ ಕಳುಹಿಸುವುದಿಲ್ಲ, ಗಂಡು ಮಕ್ಕಳನ್ನು ಶಾಲೆಗೆ ಕಳುಹಿಸುವುದು ಹೆಣ್ಣುಮಕ್ಕಳನ್ನು ಮನೆಯಲ್ಲಿರಿಸಿಕೊಳ್ಳುವುದು ಕಂಡು ಬರುತ್ತದೆ. ಬಡ

ಗ್ರಾಮೀಣ ಜನರಲ್ಲಿ ಹೆಣ್ಣು ಮಕ್ಕಳು ಹೆಚ್ಚು ಓದಿದಷ್ಟು ಅವಳಿಗಿಂತ ಹೆಚ್ಚು ಓದಿದ ವರನನ್ನು ಹುಡುಕಬಾಕಾಗುತ್ತದೆ. ಆಗ ನಾವು ಹೆಚ್ಚು ವರದಕ್ಷಿಣೆಕೊಡಬೇಕಾಗುತ್ತದೆ, ಮದುವೆಗೆ ಹೆಚ್ಚು ಖರ್ಚು ಬರುತ್ತದೆ, ಸಾಲ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ಹೆಣ್ಣುಮಕ್ಕಳನ್ನು ಹೆಚ್ಚು ಓದಿಸುವುದೇ ಬೇಡ ಎಂದು ಶಾಲಾ ಶಿಕ್ಷಣದ ನಂತರ ಶಿಕ್ಷಣವನ್ನು ಮಟುಕುಗೊಳಿಸುವುದು ಕಂಡುಬರುತ್ತದೆ. ಇನ್ನೂ ಹೆಚ್ಚು ಗ್ರಾಮೀಣ ಪೋಷಕರು ಹೆಣ್ಣುಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋಗುವುದರಿಂದ ಅವಳು ಶಿಕ್ಷಣ ಪಡೆದರೆ ಅವರಿಗೆ ಲಾಭವೇ ವಿನಃ ನಮಗಲ್ಲ ಎಂದು ತಿಳಿದು ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುವುದಿಲ್ಲ.

ಭಾರತದಲ್ಲಿ ಪುರುಷ ಮತ್ತು ಮಹಿಳಾ ಶಿಕ್ಷಣದಲ್ಲಿನ ವ್ಯತ್ಯಾಸಕ್ಕೆ ಭಾರತೀಯರಲ್ಲಿರುವ ಲಿಂಗತಾರತಮ್ಯ ಧೋರಣೆಯೇ ಪ್ರಮುಖಕಾರಣಎಂಬುದು ತಿಳಿದುಬರುತ್ತದೆ.

ಹಿಂದಿನಕಾಲದಿಂದಲೂ ಹೆಣ್ಣುಮಗುವಿನ ಬಗ್ಗೆ ಕುಟುಂಬದಲ್ಲಿತಾರತಮ್ಯವಿದೆ. ಈ ತಾರತಮ್ಯ ಗ್ರಾಮೀಣ ಕುಟುಂಬಗಳಲ್ಲಿ ಹೆಚ್ಚು. ಪ್ರತಿ ಕುಟುಂಬದಲ್ಲಿಯೂ ಪ್ರತ್ಯೇಕವಾಗಿ ಮತ್ತು ಪರೋಕ್ಷವಾಗಿ ಸ್ತ್ರೀಯರಿಗಿಂತ ಪುರುಷರಿಗೆ ಹೆಚ್ಚು ಮರ್ಯಾದೆ, ಗೌರವ ಮತ್ತು ವಾತ್ಸಲ್ಯ ಪ್ರತಿ ಕುಟುಂಬದಲ್ಲಿ ಗಂಡುಮಗುವಿಗೆ ಸಿಗುವಷ್ಟು ಸವಲತ್ತು ಹೆಣ್ಣುಮಕ್ಕಳಿಗೆ ಸಿಗುವುದಿಲ್ಲ. ಒಂದೇ ಮನೆಯಲ್ಲಿ ಹುಟ್ಟಿದ ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ಗಂಡು ಮಗನನ್ನು ಉತ್ತಮ ಶಾಲೆಗೆ ದಾಖಲಿಸಿದರೆ ಹೆಣ್ಣುಮಕ್ಕಳನ್ನು ಸೌಲಭ್ಯಗಳೇ ಇಲ್ಲದ ಶಾಲೆಗೆ ಸೇರಿಸುತ್ತಾರೆ. ಶಿಕ್ಷಣದಲ್ಲಿ ಗಂಡು ಮಗುವಿಗೆ ತೋರಿಸಿದಷ್ಟು ಒಲವನ್ನು ಹೆಣ್ಣುಮಕ್ಕಳಿಗೆ ತೋರಿಸುವುದಿಲ್ಲ. ಹೆಣ್ಣು ಮಗುವಿನ ಶಿಕ್ಷಣದಲ್ಲಿ ತಾತ್ಸಾರ ಮನೋಭಾವನೆ ಹೊಂದಿದವರಾಗಿರುತ್ತಾರೆ. ಎಷ್ಟು ಓದಿಸಿದರೂ ಇವಳೇನು ನಮಗೆ ದುಡಿದು ಹಾಕುತ್ತಾಳೆಯೇ? ಎಂಬ ಭಾವನೆ ಗ್ರಾಮೀಣ ಪೋಷಕರಲ್ಲಿ ಇದೆ. ಪೋಷಕರಲ್ಲಿರುವ ಲಿಂಗತಾರತಮ್ಯ ಭಾವನೆಯನ್ನು ಹೋಗಲಾಡಿಸಲು ಮಹಿಳಾ ಶಿಕ್ಷಣದ ಮಹತ್ವದ ಬಗ್ಗೆ ಜಾಗೃತಿಯನ್ನು ಮೂಡಿಸಬೇಕಾಗಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಲಿಂಗಸಮಾನತೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಯಾವುದೇ ಕಾರ್ಯ ಯಶಸ್ವಿಗೊಳ್ಳಲು ಸ್ತ್ರೀ ಪುರುಷರುಅನ್ಯೋನ್ಯವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

ಸರ್ಕಾರವು ಮಹಿಳಾ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ನೀಡುತ್ತಿದೆ.ಇದರಜೊತೆಗೆರಾಜ್ಯ ಸರ್ಕಾರವು ಶಿಕ್ಷಣದಲ್ಲಿ ಲಿಂಗತಾರತಮ್ಯವನ್ನು ಹೋಗಲಾಡಿಸಲು ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಆಸಕ್ತಿ ವಹಿಸಿ, ಕ್ರಮಗಳನ್ನು ಕೈಗೊಂಡಿರುವುದುಉಲ್ಲೇಖನಾರ್ಹವಾಗಿದೆ.

೧. ಹೆಣ್ಣುಮಕ್ಕಳಿಗೆ ೧ರಿಂದ ೧೦ನೇ ತರಗತಿಯವರೆಗೆ ಉಚಿತ ಪಠ್ಯಪುಸ್ತಕಗಳು, ಸಮವಸ್ತ್ರ ನೀಡುತ್ತಿದೆ.

೨. ವಿದ್ಯಾರ್ಥಿನಿ ಹಾಜರಾತಿ ವೇತನವನ್ನು ನೀಡುತ್ತಿದೆ. ಅಲ್ಲದೆ ಹೆಣ್ಣುಮಕ್ಕಳಿಗೆ ಶಾಲಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ.

೩. ರಾಜ್ಯ ಶಿಕ್ಷಣ ನಿರ್ದೇಶನಾಲಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಪ್ರತ್ಯೇಕ ವಿಭಾಗಗಳನ್ನು ತೆರೆಯಲಾಗಿದೆ.

೪. ಹೆಣ್ಣುಮಕ್ಕಳಿಗೆ ವಿಶೇಷ ಪಾಲಿಟೆಕ್ನಿಕ್‌ಗಳನ್ನು ತೆರೆದು ಸಂಕ್ಷಿಪ್ತಗೊಳಿಸಿದ ಕೋರ್ಸ್‌ಗಳನ್ನು ಅಳವಡಿಸಿದೆ.

೫. ಮಹಿಳಾ ಶಿಕ್ಷಣಕ್ಕಾಗಿ ದುಡಿಯುತ್ತಿರುವ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡುತ್ತಿದೆ.

೬. ಹೆಣ್ಣುಮಕ್ಕಳಿಗಾಗಿ ಉಚಿತ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗಿದೆ.

೭. ಹೆಣ್ಣುಮಕ್ಕಳಿಗಾಗಿ ಉದ್ಯೋಗದಲ್ಲಿ ಹಾಗೂ ಉನ್ನತ ಶಿಕ್ಷಣ ಪ್ರವೇಶಕ್ಕೆ ಮೀಸಲಾತಿ ಕಲ್ಪಿಸಿದೆ.

ಈ ಎಲ್ಲಾ ಸೌಲಭ್ಯಗಳು ಮಹಿಳಾ ಶಿಕ್ಷಣಕ್ಕೆ ಸರ್ಕಾರವು ನೀಡಿದ್ದರು ಗ್ರಾಮೀಣ ಅನಕ್ಷರಸ್ಥ ಪೋಷಕರಿವೆ ಇವುಗಳು ತಿಳಿದಿಲ್ಲ. ಆದುದರಿಂದಲೂ ಸಹ ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡದರೆಆರ್ಥಿಕ ಹೊರೆ ಎಂದು ಭಾವಿಸಿ ಶಾಲೆಗೆ ಕಳುಹಿಸದೆ ಇರುವ ಪ್ರಸಂಗಗಳು ಸಾಕಷ್ಟಿವೆ. ಆದುದರಿಂದ ಶಾಲಾ ಶಿಕ್ಷಕರು ಮತ್ತು ಸರ್ಕಾರ ಮಾಧ್ಯಮಗಳ ಮುಖಾಂತರ ಹೆಣ್ಣುಮಕ್ಕಳ ಶಿಕ್ಷಣದ ಮಹತ್ವ ಮತ್ತು ಸರ್ಕಾರದ ಸೌಲತ್ತುಗಳ ಬಗ್ಗೆ ಅರಿವು ಮೂಡಿಸಬೇಕಾದ ಅಗತ್ಯವಿದೆ.೫

ಜೊತೆಗೆ ಸರ್ಕಾರವು ಪ್ರತಿ ಹಳ್ಳಿಯಲ್ಲಿಯೂ ಶಾಲೆಗಳನ್ನು ತೆರೆಯಬೇಕು. ಇದು ಸಾಧ್ಯ ವಾಗದಿದ್ದರೆ ಉಚಿತ ಸರ್ಕಾರಿ ಬಸ್ ಸೌಲಭ್ಯವನ್ನು ಒದಗಿಸಬೇಕು. ಉನ್ನತ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಕೆಲವು ಹಳ್ಳಿಗಳನ್ನು ಒಳಗೊಂಡಂತೆ ಕಾಲೇಜು ಶಿಕ್ಷಣದ ವ್ಯವಸ್ಥೆ, ವೃತ್ತಿ ತರಬೇತಿ ಕೇಂದ್ರಗಳು, ಕಂಪ್ಯೂಟರ್ ಕೇಂದ್ರಗಳನ್ನು ತೆರೆಯಬೇಕು. ಹೆಣ್ಣುಮಕ್ಕಳಿಗೆ ಅನುಕೂಲ ವಾಗುವಂತೆ ಎಲ್ಲರೀತಿಯ ಸೌಕರ್ಯವಿರುವ ವಿದ್ಯಾರ್ಥಿನಿಲಯಗಳನ್ನು ದೊಡ್ಡ ಪ್ರಮಾಣದಲ್ಲಿ ಉಚಿತವಾಗಿ ಅಥವಾ ಕಡಿಮೆ ವೆಚ್ಚದಲ್ಲಿ ಒದಗಿಸಬೇಕು. ಹೆಣ್ಣುಮಕ್ಕಳ ಶಿಕ್ಷಣವೆಂದರೆ ಅವಶ್ಯಕ ಮೂಲ ಶಿಕ್ಷಣ ಮಾತ್ರವಲ್ಲಅವರು ಸಂಪೂರ್ಣವಾಗಿ ಸ್ವಾವಲಂಬಿಗಳಾಗುವ ನೆಲೆಯಲ್ಲಿ ಎಲ್ಲ ರೀತಿಯ ಅನುಕೂಲವನ್ನು ಸರ್ಕಾರ ಮಾಡಿಕೊಡಬೇಕು.

ಕೊನೆ ಟಿಪ್ಪಣಿಗಳು

೧. ೨೦೦೧ರ ಭಾರತದ ಜನಗಣತಿ.

೨. ಭಾರತೀಯ ನ್ಯಾಷನಲ್ ಸ್ಯಾಂಪಲ್ ಸರ್ವೆ, ಪು.೨೫೧.

೩. "ಭಾರತೀಯ ಸ್ತ್ರೀ ಜೀವನ", ಡಾ. ವಿಠಲರಾವ್ ಟಿ. ಗಾಯಕ್ವಾಡ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೪. ಎಸ್. ಶಿವಯ್ಯ, "ಉದಯೋನ್ಮುಖ ಭಾರತದಲ್ಲಿ ಶಿಕ್ಷಣ", ಪೂಜಾ ಪ್ರಕಾಶನ, ದಾವಣಗೆರೆ, ೨೦೦೭.

೫. "ಆಧುನಿಕ ಶಿಕ್ಷಣದ ಒಲವುಗಳು", ಸಿ.ವಿ. ಜಯಣ್ಣ, ಸಪ್ನ ಬುಕ್‌ಹೌಸ್, ಬೆಂಗಳೂರು ಪು.೧೦೦–೧೦೧.

ಅಧ್ಯಾಯ ಎಂಟು

ಸಮಾರೋಪ

ಅಧ್ಯಾಯ ಎಂಟು

ಸಮಾರೋಪ

ಭಾರತವು ಗ್ರಾಮಗಳ ದೇಶವಾಗಿದ್ದು, ಭಾರತದ ಶೇಕಡ ೮೦ರಷ್ಟು ಜನಸಂಖ್ಯೆ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರೇ ಆಗಿದ್ದಾರೆ. ಭಾರತೀಯ ಮಹಿಳೆ ವಿಶೇಷವಾಗಿ ಗ್ರಾಮೀಣ ಮಹಿಳೆ ಶಿಕ್ಷಣದಿಂದ ವಂಚಿತಳಾಗಿದ್ದಾಳೆ. ಅಂದರೆ ದೇಶದ ಪ್ರಮುಖ ಸಾಮಾಜಿಕ ಸಮಸ್ಯೆಗಳಲ್ಲಿ ಮಹಿಳಾ ಶಿಕ್ಷಣದ ಸಮಸ್ಯೆಯು ಒಂದಾಗಿದೆ. ಮಹಿಳಾ ಶಿಕ್ಷಣದ ಅಭಿವೃದ್ಧಿಯಾಗದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ೨೦೧೧ರ ಜನಗಣತಿಯಂತೆ ರಾಷ್ಟ್ರೀಯ ಸಾಕ್ಷರತಾ ಪ್ರಮಾಣ ೭೪.೦೪ರಷ್ಟು ಇರುತ್ತದೆ. ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೬೫.೪೬ ರಷ್ಟು ಇದೆ. ದೇಶದಲ್ಲಿ ಲಿಂಗ ಪ್ರಮಾಣ ಪ್ರತಿ ೧೦೦೦ ಪುರುಷರಿಗೆ ೯೩೩ ಮಹಿಳೆಯರಿದ್ದಾರೆ. ಗ್ರಾಮೀಣ ಮಹಿಳಾ ಸಾಕ್ಷರತೆ ತುಂಬ ಕೆಳಮಟ್ಟದಲ್ಲಿದೆ.

ಭಾರತವು ಸ್ವಾತಂತ್ರ್ಯ ಪಡೆದನಂತರ ಮಹಿಳೆಯರ ಶಿಕ್ಷಣ ಉತ್ತಮಪಡಿಸಲು ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಜಾಗತೀಕರಣದ ನಂತರವಂತೂ ಭಾರತ ವಿಶೇಷ ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗದಲ್ಲಿ ಮಹಿಳೆಯರಿಗೆ ಒದಗಿಸುತ್ತಿದೆ. ಆದರೆ ಸಮಾಜದಲ್ಲಿ ಜಾಗತೀಕರಣ ಪ್ರಕ್ರಿಯೆಯು ವೇಗದಲ್ಲಿ ಜನರ ಮನೋಭಾವನೆಗಳು ಬದಲಾವಣೆಯಾಗುತ್ತಿಲ್ಲ ಎಂಬುದು ಸಂಶೋಧನೆಗಳಿಂದ ದೃಡಪಟ್ಟಿದೆ. ಇಂದಿಗೂ ಲಾಭದಾಯಕ ಶಿಕ್ಷಣ ನೀಡುವಲ್ಲಿ ಲಿಂಗತಾರತಮ್ಯವನ್ನು ನೋಡಬಹುದು. ಪುರುಷಪ್ರಧಾನ ಸಮಾಜವಾದ ಭಾರತದಲ್ಲಿ ಪೋಷಕರು ಉನ್ನತ ಮತ್ತು ಲಾಭದಾಯಕ ಶಿಕ್ಷಣವನ್ನು ಗಂಡು ಮಕ್ಕಳಿಗೆ ನೀಡುತ್ತಿರುವುದು ಕಂಡುಬರುತ್ತದೆ. ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಇರುವ ಕುಟುಂಬಗಳಲ್ಲಿ ಹೆಣ್ಣುಮಕ್ಕಳಿಗಿಂತ ಗಂಡು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ನೀಡುತ್ತಿರುವುದು ಕಂಡುಬರುತ್ತದೆ. ಗಂಡು ಮಕ್ಕಳನ್ನು ಕುಟುಂಬದ ಆಸ್ತಿ ಎಂದು ಪರಿಗಣಿಸುವುದರ ಮೂಲಕ ಎಲ್ಲಾ ಸೌಲತ್ತುಗಳನ್ನು ಮೊದಲು ಗಂಡು ಮಕ್ಕಳಿಗೆ

ನೀಡುತ್ತಾರೆ. ಇಂದು ಜಾಗತೀಕ ಸಮಾಜದಲ್ಲಿಯೂ ಕಂಡುಬರುವ ಲಿಂಗತಾರತಮ್ಯ ಧೋರಣೆಯಾಗಿದೆ. ಗ್ರಾಮೀಣ ಸಮಾಜದಲ್ಲಂತೂ ಜಾಗತೀಕರಣದ ತೀವ್ರ ಪರಿಣಾಮ ಕಂಡುಬರುವುದಿಲ್ಲ. ಸಾಂಪ್ರದಾಯಿಕ ಮನೋಭಾವನೆಗಳು ಬಹುಪಾಲು ಗ್ರಾಮೀಣರಲ್ಲಿ ಬದಲಾಗಿಲ್ಲ. ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಮಹಿಳಾ ಶಿಕ್ಷಣವನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯತೆ ತುಂಬ ಇದೆ. ಆದುದರಿಂದ ಯೋಜನಾ ತಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಸಾಮಾಜಿಕ ನೀತಿ ನಿರೂಪಕರು ಮಹಿಳಾ ಶಿಕ್ಷಣವನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಆದುದರಿಂದ ಮಹಿಳಾ ಶಿಕ್ಷಣದ ಬಗ್ಗೆ ವಿಶೇಷವಾಗಿ ಗ್ರಾಮೀಣ ಮಹಿಳಾ ಶಿಕ್ಷಣದ ಬಗ್ಗೆ ಹೆಚ್ಚು ಸಂಶೋಧನೆಗಳು ನಡೆಯುತ್ತಲಿವೆ. ಸಂಶೋಧನಾ ಫಲಿತಾಂಶಗಳ ಆಧಾರದ ಮೇಲೆ ಸಾಮಾಜಿಕ ಯೋಜನೆಗಳನ್ನು ಸಿದ್ಧಪಡಿಸಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ನೀಡಲಾಗುತ್ತಿದೆ.

ಪುರುಷರ ಶಿಕ್ಷಣ ಮತ್ತು ಸ್ತ್ರೀಯರ ಶಿಕ್ಷಣಗಳ ನಡುವೆ ಬಹು ದೊಡ್ಡ ಅಂತರವಿರುವುದು ಕಂಡು ಬರುತ್ತದೆ. ಇದಕ್ಕೆ ನಮ್ಮ ದೇಶಗಳಲ್ಲಿರುವ ಲಿಂಗತಾರತಮ್ಯ ಭಾವನೆಯೇ ಆಗಿದೆ. ಈ ಲಿಂಗತಾರತಮ್ಯವನ್ನು ಹೋಗಲಾಡಿಸಿ ಶಿಕ್ಷಣದಲ್ಲಿ ಸಮಾನತೆಯನ್ನು ತರಲು ಸ್ವಾತಂತ್ರ್ಯ ಭಾರತದಲ್ಲಿ ಸಾಕಷ್ಟು ಪ್ರಯತ್ನಗಳನ್ನು ಸರ್ಕಾರ ಮಾಡುತ್ತಿದೆ. ಈ ಸಂಶೋಧನೆಯಲ್ಲಿ ಗ್ರಾಮೀಣ ಮಹಿಳೆಯರ ಶಿಕ್ಷಣದ ಪ್ರಮುಖ ಸಮಸ್ಯೆಗಳನ್ನು ಸ್ತ್ರೀವಾದಿ ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯನವನ್ನು ಮಾಡಲಾಗಿದ್ದು ಈ ಅಧ್ಯಯನದ ಫಲಿತಾಂಶಗಳು ಈ ಕೆಳಗಿನಂತಿವೆ.

ಸ್ತ್ರೀ ಶಿಕ್ಷಣವು ಸಂತೃಪ್ತಿಕರ ಮತ್ತು ಆರೋಗ್ಯಕರ ಮನೆವಾತಾವರಣ ಸಮಾಜ ಸುಧಾರಣೆಗೆ ಆರ್ಥಿಕ ಪುರೋಭಿವೃದ್ಧಿ ಹಾಗೂ ರಾಷ್ಟ್ರೀಯ ಸೌಹಾರ್ದತೆಗೆ ಅತ್ಯಂತ ಅವಶ್ಯಕವಾಗಿದೆ.

ಭಾರತದಲ್ಲಿ ಸ್ತ್ರೀ ಶಿಕ್ಷಣ ಪ್ರಗತಿಪರವಾಗಿದೆ ಎಂಬುದು ನಿಸ್ಸಂದೇಹವೆನಿಸಿದರೂ ಇತರ ದೇಶಗಳಿಗೆ ಹೋಲಿಸಿದಾಗ ಅದು ಮಂದಗತಿಯಲ್ಲಿಯೇ ಸಾಗುತ್ತಿದೆ. ಭಾರತದಲ್ಲಿ ಬಹುಸಂಖ್ಯಾತ ಸ್ತ್ರೀಯರು ಶಿಕ್ಷಣ ಪಡೆಯುವುದರಿಂದ ವಂಚಿತರಾಗಿದ್ದಾರೆ. ಪುರುಷ ಶಿಕ್ಷಣ ಮತ್ತು ಸ್ತ್ರೀ ಶಿಕ್ಷಣದ ನಡುವೆ ಬಹುದೊಡ್ಡ ಅಂತರವಿರುವುದು ಕಂಡುಬರುತ್ತದೆ.

ಭಾರತ ಗ್ರಾಮಗಳ ದೇಶವಾಗಿದ್ದು ಪರಂಪರೆಯಲ್ಲಿ ರೂಢಿಗತವಾಗಿ ಬಂದ ಸಂಪ್ರದಾಯಗಳು ವಾಡಿಕೆಯಲ್ಲಿವೆ. ಹೆಣ್ಣಿಗೆ ಬಾಲ್ಯದಲ್ಲಿಯೇ ಶಿಕ್ಷಣದಿಂದ ದೂರವಿಡುವ ಪ್ರಕ್ರಿಯೆ ಕಂಡುಬರುತ್ತದೆ. ಮಗು ಹುಟ್ಟುವಾಗಲೇ ಲಿಂಗತಾರತಮ್ಯನೀತಿ ಪ್ರಾರಂಭವಾಗುತ್ತದೆ. ಗ್ರಾಮೀಣ ಗಂಡು ಮಕ್ಕಳಿಗಿರುವಷ್ಟು ಶೈಕ್ಷಣಿಕ ಸೌಲಭ್ಯಗಳು ಗ್ರಾಮೀಣ ಹೆಣ್ಣುಮಕ್ಕಳಿಗೆ ಸಿಗುವುದಿಲ್ಲ. ಗಂಡು ಮಕ್ಕಳನ್ನು ಹೆಣ್ಣು ಮಕ್ಕಳಿಗಿಂತ ಶ್ರೇಷ್ಠ, ವಂಶದ ಕುಡಿ ಎಂದು ಭಾವಿಸುವ ಮೂಲಕ ಸಾಮಾಜಿಕ ದೃಷ್ಟಿಕೋನವು ರೂಪಗೊಂಡಿರುವುದನ್ನು ಕಾಣಬಹುದಾಗಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹಣ

ಖರ್ಚು ಮಾಡುವುದು ವ್ಯರ್ಥ, ಹೆಣ್ಣಿಗೆ ಶಿಕ್ಷಣ ಇಲ್ಲದಿದ್ದರೂ ನಡೆಯುತ್ತದೆ ಎಂಬ ಭಾವನೆ ಅನೇಕ ಗ್ರಾಮೀಣರಲ್ಲಿ. ಹೆಣ್ಣು ಮಕ್ಕಳನ್ನು ಹೆಚ್ಚು ವಿದ್ಯಾವಂತರಾದಷ್ಟು ಅವರಿಗೆ ಹೆಚ್ಚು ವಿದ್ಯಾವಂತರಾದ ವರನನ್ನು ಹುಡುಕಬೇಕಾಗುತ್ತದೆ ಮತ್ತು ಹೆಚ್ಚು ವರದಕ್ಷಿಣೆ ಖರ್ಚು, ಹೆಣ್ಣು ಮಕ್ಕಳು ಪರರಸ್ವತ್ತು ಎಂಬ ಮನಸ್ಥಿತಿಯಿಂದಾಗಿ ಗ್ರಾಮೀಣ ಜನರು ಹೆಣ್ಣುಮ್ಮಕ್ಕಳ ಶಿಕ್ಷಣವನ್ನು ಉಪೇಕ್ಷೆ ಮಾಡುತ್ತಾ ಬರುತ್ತಾರೆ.

ನಗರದಲ್ಲಿ ಹೆಣ್ಣು ಮಗುವಿನ ಶಿಕ್ಷಣಕ್ಕಿರುವ ಅವಕಾಶಗಳಿಗೂ ಗ್ರಾಮೀಣ ಹೆಣ್ಣುಮಗುವಿನ ಶಿಕ್ಷಣಕ್ಕೆ ಇರುವ ಅವಕಾಶಗಳಿಗೂ ಬಹಳ ಅಂತರವಿದೆ. ಈ ಅಂತರವು ಅವರಿಬ್ಬರ ಜೀವನ ಕ್ರಮ ಮತ್ತು ಜೀವನ ಶೈಲಿಯಲ್ಲಿ ವ್ಯತ್ಯಾಸವನ್ನುಂಟುಮಾಡುತ್ತವೆ. ಗ್ರಾಮೀಣ ಹೆಣ್ಣುಮಗು ನಗರದ ಹೆಣ್ಣುಮಗುವಿಗಿಂತ ವಂಚನೆಗೊಳಗಾಗಿದ್ದಾಳೆ.

ಗ್ರಾಮೀಣ ಸಮಾಜದಲ್ಲಿ ಯಾವುದೇ ಸವಲತ್ತು ಸಿಗುವಾಗಲೂ ಅದು ಮೊದಲು ಗಂಡಿಗೆ ದೊರೆಯುತ್ತದೆ. ಅನಂತರ ಹೆಣ್ಣುಮಗುವಿಗೆ ಸಿಗುತ್ತದೆ. ಈ ರೀತಿ ವ್ಯತ್ಯಾಸಗಳಿಂದ ಮಹಿಳೆ ಗಂಡಿನಂತೆ ಎಲ್ಲಾ ರಂಗದಲ್ಲೂ ಪ್ರವಿಶಿಸಲು ಸಾಧ್ಯವಾಗುತ್ತಿಲ್ಲ.

ಈ ಅಧ್ಯಯನವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಒಟ್ಟು ೮ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಅಧ್ಯಾಯ ೧: ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ: ಈ ಅಧ್ಯಾಯದಲ್ಲಿ ಅಧ್ಯಯನವನ್ನು ಯಾವ ಉದ್ದೇಶಕ್ಕೆ ಕೈಗೊಂಡಿದ್ದೇವೆ, ಈ ಅಧ್ಯಯನದಲ್ಲಿ ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಇರುವ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಗ್ರಾಮೀಣ ಮಹಿಳಾ ಶಿಕ್ಷಣದ ಮಹತ್ವವನ್ನು ವಿವರಿಸಲಾಗಿದೆ. ಮಹಿಳೆಯು ಶಿಕ್ಷಣವನ್ನು ಪಡೆಯುವುದರಿಂದ ಅವಳ ಸ್ಥಾನಮಾನಗಳು ಹೇಗೆ ಉತ್ತಮಗೊಳ್ಳುತ್ತವೆ ಎಂಬುದನ್ನು ವಿವರಿಸಲಾಗಿದೆ.

ವಿಶೇಷವಾಗಿ ಗ್ರಾಮೀಣ ಮಹಿಳಾ ಶಿಕ್ಷಣದ ಮೇಲೆ ಪ್ರಭಾವ ಬೀರುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವುದಾಗಿದೆ. ವಿಶೇಷವಾಗಿ ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಇರುವ ಅಡೆ-ತಡೆಗಳಾವುವು ಎಂದು ಗುರುತಿಸುವುದು, ಗ್ರಾಮೀಣ ಮಹಿಳೆಯರ ಎಲ್ಲ ಸಮಸ್ಯೆಗಳಿಗೆ ಗ್ರಾಮೀಣ ಮಹಿಳಾ ಶಿಕ್ಷಣದ ಹಿನ್ನಡೆಯೆ ಕಾರಣ ಎಂಬುದನ್ನು ಅಧ್ಯಯನದ ಮೂಲಕ ದೃಢೀಕರಿಸುವುದು.

ಗ್ರಾಮೀಣ ಮಹಿಳಾ ಶಿಕ್ಷಣದ ಬಗ್ಗೆ ಈಗಾಗಲೇ ಇರುವ ಪೂರ್ವ ಕಲ್ಪಿತ ಪ್ರಾಕ್ ಕಲ್ಪನೆ ಸರಿಯಿದೆಯೇ ಎಂದು ಪರಿಶೀಲಿಸುವುದು ಹಾಗೂ ಭಿನ್ನತೆಯಿದ್ದಲ್ಲೆ ಕಾರಣಗಳನ್ನು ಕಂಡು

ಕೊಳ್ಳುವುದು. ಶಿಕ್ಷಣ ಸಂಸ್ಥೆಗಳಲ್ಲಿ ಲಿಂಗ ಅಸಮಾನತೆ ಅವುಗಳನ್ನು ಒಳಗೊಂಡಿದೆಯೇ ಎಂಬುದನ್ನು ತಿಳಿಯುವುದು ಮತ್ತು ಅಸಮಾನತೆಗೆ ಪರಿಹಾರಗಳನ್ನು ಕಂಡುಕೊಳ್ಳುವುದು.

ಗ್ರಾಮೀಣ ಮಹಿಳಾ ಶಿಕ್ಷಣವನ್ನು ಸ್ತ್ರೀವಾದಿ ದೃಷ್ಟಿಕೋನದಲ್ಲಿ ಅರ್ಥೈಸುವುದು. ಗ್ರಾಮೀಣ ಮಹಿಳೆ ಮತ್ತು ಗ್ರಾಮೀಣ ಪುರುಷರಿಗೆ ಸಂಬಂಧಿಸಿದಂತೆ ಇರುವ ಶೈಕ್ಷಣಿಕ ತಾರತಮ್ಯಗಳ ಕಾರಣಗಳನ್ನು ತಿಳಿಯುವುದಾಗಿದೆ.

ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರ ತನ್ನ ಪಂಚವಾರ್ಷಿಕ ಯೋಜನೆಗಳಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ತಿಳಿಯುವುದಾಗಿದೆ.

ಈ ಅಧ್ಯಾಯದಲ್ಲಿ ಪೂರ್ವ ಕಲ್ಪನೆಗಳನ್ನು ರಚಿಸಲಾಗಿದೆ.

ಈ ಅಧ್ಯಯದಲ್ಲಿ, ಅಧ್ಯಯನದ ವ್ಯಾಪ್ತಿಯನ್ನು ಗುರುತಿಸಲಾಗಿದೆ. ಈ ಅಧ್ಯಯನದಲ್ಲಿ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ೨ ಗ್ರಾಮ ಪಂಚಾಯಿತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬೆಂಗಳೂರು ನಗರಕ್ಕೆ ಹತ್ತಿರವಿರುವ (೨೦ ಕಿ.ಮಿ. ದೂರ) ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ೪ ಗ್ರಾಮಗಳಾದ ವೀರಸಂದ್ರ, ಗೊಲ್ಲಹಳ್ಳಿ, ಹೆಬ್ಬಗೋಡಿ ಜನತಾ ಕಾಲೋನಿ, ಹೆಬ್ಬಗೋಡಿ ಗ್ರಾಮಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಪ್ರತಿ ಗ್ರಾಮದಲ್ಲಿಯೂ ೨೫ ಜನ ಒಕ್ಕಲಿಗ ಮತ್ತು ೨೫ ಜನ ಪರಿಶಿಷ್ಟ ಜಾತಿಯ ಹಿರಿಯ ಮಹಿಳೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವರನ್ನು ಸಂದರ್ಶನ ಮಾಡಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲಾಗಿದೆ.

ಬೆಂಗಳೂರು ನಗರದಿಂದ ದೂರವಿರುವ(೪೫ ಕಿ.ಮಿ. ದೂರ) ಸಮಂದೂರು ಗ್ರಾಮ ಪಂಚಾಯಿತಿಯಲ್ಲಿ ಬರುವ ೪ ಗ್ರಾಮಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ಗ್ರಾಮಗಳೆಂದರೆ ಸಮಂದೂರು, ಎಸ್. ತಿಮ್ಮಸಂದ್ರ, ಎಸ್. ಮಡಿವಾಳ, ಮಾರನಾಯಕನ ಹಳ್ಳಿ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ಇಲ್ಲಿಯೂ ಸಹ ೨೫ ಜನ ಒಕ್ಕಲಿಗ ಮತ್ತು ೨೫ ಜನ ಪರಿಶಿಷ್ಟ ಜಾತಿಯ ಹಿರಿಯ ಮಹಿಳೆಯರನ್ನು ಸಂದರ್ಶನ ಮಾಡಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲಾಗಿದೆ.

ಹೆಬ್ಬಗೋಡಿ ಗ್ರಾಮ ಪಂಚಾಯಿತಿಯಲ್ಲಿ ಬರುವ ೨ ಖಾಸಗಿ ಶಾಲೆಯ ೧೦ ಶಿಕ್ಷಕರನ್ನು, ೧೨ ಮಹಿಳಾ ವಿದ್ಯಾರ್ಥಿಗಳನ್ನು, ೨ ಸರ್ಕಾರಿ ಶಾಲೆಯ ೧೦ ಶಿಕ್ಷಕರನ್ನು, ೧೩ ಮಹಿಳಾ ವಿಧ್ಯಾರ್ಥಿಗಳನ್ನು ಸಂದರ್ಶನಮಾಡಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲಾಗಿದೆ.

ಸಮಂದೂರು ಗ್ರಾಮ ಪಂಚಾಯಿತಿಯಲ್ಲಿ ಬರುವ ೨ ಖಾಸಗಿ ಶಾಲೆಯ ೧೦ ಶಿಕ್ಷಕರನ್ನು, ೧೨ ಮಹಿಳಾ ವಿದ್ಯಾರ್ಥಿಗಳನ್ನು, ೨ ಸರ್ಕಾರಿ ಶಾಲೆಯ ೧೦ ಶಿಕ್ಷಕರನ್ನು, ೧೩ ಮಹಿಳಾ ವಿಧ್ಯಾರ್ಥಿಗಳನ್ನು ಸಂದರ್ಶನಮಾಡಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲಾಗಿದೆ.

ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ೪ ಗ್ರಾಮಗಳಲ್ಲಿ ತಲಾ ೨೫ ಹಿರಿಯ ನಾಗರೀಕರನ್ನು, ಸಮಂದೂರು ಗ್ರಾಮ ಪಂಚಾಯಿತಿಯ ೪ ಗ್ರಾಮಗಳಲ್ಲಿ ತಲಾ ೨೫ ಹಿರಿಯ ನಾಗರೀಕರನ್ನು ಸಂದರ್ಶನಮಾಡಿ ಅಧ್ಯಯನದ ಮಾಹಿತಿಯನ್ನು ಪಡೆಯಲಾಗಿದೆ. ಈ ಅಧ್ಯಯನದಲ್ಲಿ ಒಕ್ಕಲಿಗ ಮತ್ತು ಪರಿಶಿಷ್ಟ ಜಾತಿಯವರನ್ನು ಆಯ್ದುಕೊಳ್ಳಲಾಗಿದೆ. ಈ ಅಧ್ಯಯದಲ್ಲಿ ಅಧ್ಯಯನದ ವಿಧಿವಿಧಾನ ಮತ್ತು ವ್ಯವಧಾನಿಕತೆಯನ್ನು ವಿವರಿಸಲಾಗಿದೆ.

ಪ್ರಾಥಮಿಕ ಮೂಲದ ಮಾಹಿತಿ ಸಂಗ್ರಹಿಸಲು ಪಾಲು ನಮೂನೆ ಮಾದರಿಯನ್ನು ಅಳವಡಿಸಲಾಗಿದೆ. ಪ್ರಶ್ನಾವಳಿಗಳ ಮೂಲಕ ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಜೊತೆಗೆ ಅಧ್ಯಯನಕ್ಕೆ ಅನುಷಂಗಿಕ ಆಕರಗಳಿಂದ ಸಮಗ್ರ ಮಾಹಿತಿ ಸಂಗ್ರಹಿಸಲಾಗಿದೆ.

ಈ ಅಧ್ಯಾಯದಲ್ಲಿ ಅಧ್ಯಯನದ ಶೈಕ್ಷಣಿಕ ಮಹತ್ವ ಸಮಾಜ ಮತ್ತು ರಾಷ್ಟ್ರಕ್ಕೆ ಪ್ರಸ್ತುತ ಅಧ್ಯಯನದ ಅವಶ್ಯಕತೆಯನ್ನು ವಿವರಿಸಲಾಗಿದೆ. ಅಧ್ಯಯನದ ಆಳವಾದ ಜ್ಞಾನಕ್ಕಾಗಿ ಅಧ್ಯಯನಕ್ಕೆ ಸಂಬಂಧಿಸಿದ ಸಾಹಿತ್ಯ ಸಮೀಕ್ಷೆಯನ್ನು ಮಾಡಲಾಗಿದೆ. ಅಧ್ಯಾಯದ ಕೊನೆಯಲ್ಲಿ ಅಧ್ಯಯನದಲ್ಲಿ ಬರುವ ಅಧ್ಯಾಯಗಳ ಸಾರಾಂಶವನ್ನು ವಿವರಿಸಲಾಗಿದೆ.

ಅಧ್ಯಾಯ ೨ರಲ್ಲಿ ಮಹಿಳೆ: ಶಿಕ್ಷಣ: ಚಾರಿತ್ರಿಕ ನೋಟದ ಬಗ್ಗೆ ವಿವರಿಸಲಾಗಿದೆ. ಈ ಅಧ್ಯ್ಯದಲ್ಲಿ ವಿವಿಧ ಕಾಲಪುಯ್ದುದಲ್ಲಿ ಮಹಿಳಾ ಶಿಕ್ಷಣದ ಸ್ಥಿತಿಗತಿಯನ್ನು ವಿವರಿಸಲಾಗಿದೆ. ಅವುಗಳೆಂದರೆ:

೧. ಪ್ರಾಚೀನ ಭಾರತದಲ್ಲಿ ಮಹಿಳಾ ಶಿಕ್ಷಣ

೨. ಮಧ್ಯಕಾಲೀನ ಭಾರತ ಅಥವಾ ಬ್ರಿಟೀಷ್ ಭಾರತದಲ್ಲಿ ಮಹಿಳಾ ಶಿಕ್ಷಣ

೩. ಆಧುನಿಕ ಭಾರತದಲ್ಲಿ ಮಹಿಳಾ ಶಿಕ್ಷಣ ಎಂಬ ಉಪಭಾಗಗಳಾಗಿ ವಿಂಗಡಿಸಿ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಪ್ರಾಚೀನ ಭಾರತದಲ್ಲಿ ಮಹಿಳೆಯ ಔಪಚಾರಿಕ ಶಿಕ್ಷಣ ಪ್ರಾರಂಭವಾಗದಿದ್ದರೂ ಅನೌಪಚಾರಿಕ ಶಿಕ್ಷಣವನ್ನು ಮೇಲ್ವರ್ಗದ ಮಹಿಳೆಯರು ಪಡೆಯುತ್ತಿದ್ದುದು ಕಂಡುಬರುತ್ತದೆ. ಅಲ್ಲಿಯೂ ಸಾಮಾನ್ಯ ಸ್ತ್ರೀಯರು ಶಿಕ್ಷಣ ಪಡೆಯುವುದಕ್ಕೆ ಅವಕಾಶಗಳಿರಲಿಲ್ಲವೆಂಬುದು ತಿಳಿದು ಬರುತ್ತದೆ.

ಬ್ರಿಟಿಷ್ ಭಾರತದಲ್ಲಿ ಮಹಿಳಾ ಶಿಕ್ಷಣದ ಸ್ಥಿತಿಗತಿಗಳನ್ನು ಸಮಗ್ರವಾಗಿ ವಿವರಿಸಲಾಗಿದೆ. ಭಾರತದಲ್ಲಿ ಔಪಚಾರಿಕ ಶಿಕ್ಷಣ ಪ್ರಾರಂಭವಾದುದು ಬ್ರಿಟೀಷರ ಕಾಲದಲ್ಲಿಯೇ ಅವರು ಆಂಗ್ಲ ಶಿಕ್ಷಣವನ್ನು ಎಲ್ಲಾ ವರ್ಗದ ಜನರಿಗೆ ಜಾತಿಬೇಧವಿಲ್ಲದೆ ನೀಡಲು ಪ್ರಾರಂಭಿಸಿದರು. ಬ್ರಿಟಿಷ್ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸಮಾಜ ಸುಧಾರಕರ ಹೋರಾಟದ ಫಲವಾಗಿ ಭಾರತೀಯ ಮಹಿಳೆಯರು ಔಪಚಾರಿಕ ಶಿಕ್ಷಣ ಪಡೆಯುವಂತಾಯಿತು.

ಸ್ವತಂತ್ರ ಭಾರತದಲ್ಲಿ ಮಹಿಳಾ ಶಿಕ್ಷಣದ ಮಹತ್ವವನ್ನು ಅರಿತ ಭಾರತ ಸರ್ಕಾರವು ಶೈಕ್ಷಣಿಕ ಯೋಜನೆಗಳನ್ನು ಮತ್ತು ಶಿಕ್ಷಣ ಆಯೋಗಗಳನ್ನು ರೂಪಿಸುವುದರ ಮೂಲಕ ಮಹಿಳಾ ಶಿಕ್ಷಣಕ್ಕೆ ವಿಶೇಷ ಆದ್ಯತೆಯನ್ನು ನೀಡಲಾಯಿತು. ಇದರಿಂದ ಮಹಿಳಾ ಸಬಲೀಕರಣ ಮತ್ತು ಲಿಂಗತಾರತಮ್ಯವನ್ನು ಹೋಗಳಾಡಿಸಿ, ಸ್ತ್ರೀ ಪುರುಷರ ನಡುವೆ ಸಮಾನತೆಯನ್ನು ತರಲು ಪ್ರಯತ್ನಿಸಲಾಗಿತು.

ಅಧ್ಯಾಯ ೩ರಲ್ಲಿ ಮಹಿಳಾ ಶಿಕ್ಷಣ: ಸರಕಾರಿ ಯೋಜನೆಗಳ ಬಗ್ಗೆ ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ಅಭಿವೃದ್ಧಿಯಲ್ಲಿ ಯೋಜನೆಯ ಮಹತ್ವವನ್ನು ವಿವರಿಸಲಾಗಿದೆ. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು–ಮೊದಲನೆ ಪಂಚವಾರ್ಷಿಕ ಯೋಜನೆಯಿಂದ ಹನ್ನೆರಡನೆ ಪಂಚವಾರ್ಷಿಕ ಯೋಜನೆಯವರೆಗೂ ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳನ್ನು ವಿವರಿಸಲಾಗಿದೆ. ಮೊದಲನೆ ಪಂಚವಾರ್ಷಿಕ ಯೋಜನೆಯಿಂದ ಹನ್ನೆರಡನೆ ಪಂಚವಾರ್ಷಿಕ ಯೋಜನೆಯವರಿಗೂ ಗಮನಿಸಿದಾಗ ಕಂಡುಬರುವ ಅಂಶವೇನೆಂದರೆ ಒಂದು ಯೋಜನೆಯಿಂದ ಮತ್ತೊಂದು ಯೋಜನೆಯಲ್ಲಿ ಮಹಿಳಾ ಶಿಕ್ಷಣಕ್ಕೆ ಆದ್ಯತೆ ಹೆಚ್ಚಾಗುತ್ತ ಹೋಗುತ್ತದೆ. ಅಂದರೆ ಭಾರತ ಸರ್ಕಾರವು ಪುರುಷ ಮತ್ತು ಸ್ತ್ರೀ ಶಿಕ್ಷಣದಲ್ಲಿ ಸಮಾನತೆಯನ್ನು ತರುವಲ್ಲಿ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುತ್ತಿರುವುದು ಮತ್ತು ಮಹಿಳಾ ಸಬಲೀಕರಣಕ್ಕೆ ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ.

ಈ ಅಧ್ಯಾಯದಲ್ಲಿ ಭಾರತದ ಶಿಕ್ಷಣ ಆಯೋಗಗಳನ್ನು ವಿವರಿಸಲಾಗಿದೆ. ಈ ಆಯೋಗಗಳಲ್ಲಿ ಮಹಿಳಾ ಶಿಕ್ಷಣದ ಅಭಿವೃದ್ಧಿಪಡಿಸಲು ಆಯೋಗ ನೀಡಿರುವ ಶಿಪಾರಸ್ಸುಗಳನ್ನು ವಿವರಿಸಲಾಗಿದೆ. ಪ್ರತಿ ಆಯೋವು ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ತಮ್ಮದೇ ಆದ ಶಿಫಾರಸ್ಸು ಗಳನ್ನು ಮಾಡಿರುವುದು ಕಂಡುಬರುತ್ತದೆ.

ಕೊನೆಯದಾಗಿ ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ಭಾರತ ಮತ್ತು ಕರ್ನಾಟಕ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳ ಬಗ್ಗೆ ವಿವರಿಸಲಾಗಿದೆ. ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಎರಡು ಸರ್ಕಾರಗಳು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿರುವುದು. ಪ್ರತಿ

ಯೋಜನೆ ಮತ್ತು ಬಜೆಟ್‌ನಲ್ಲು ಮಹಿಳಾ ಶಿಕ್ಷಣದ ಅಭಿವೃಧ್ಧಿಗೆಂದೆ ಹಣವನ್ನು ಮೀಸಲಿರಿಸಿರುವುದು ಕಂಡು ಬರುತ್ತದೆ.

ಅಧ್ಯಾಯ ೪ರಲ್ಲಿ ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು-ಕೌಟುಂಬಿಕ ನೆಲೆಗಳಲ್ಲಿ ಎಂಬ ಅಧ್ಯಯನದ ವಿಷಯವಾಗಿದೆ. ಈ ಅಧ್ಯಾಯದಲ್ಲಿ ಎರಡು ಗ್ರಾಮ ಪಂಚಾಯಿತಿಯ ಕುಟುಂಬದ ಹಿರಿಯ ಮಹಿಳೆಯರನ್ನು ಸಂದರ್ಶನ ಮಾಡಿ ಮಾಹಿತಿ ಪಡೆಯಲಾಗಿದೆ.

ಈ ಅಧ್ಯಾಯದಲ್ಲಿ ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವುದರ ಬಗ್ಗೆ ಅಭಿಪ್ರಾಯವನ್ನು ಹೊಂದಿದ್ದಾರೆ ಮತ್ತು ಮಗನ ಮತ್ತು ಮಗಳಿಗೆ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಮಾಡುತ್ತಾರೆಯೇ ಎಂಬುದನ್ನು ಅರಿಯುವುದಾಗಿದೆ.

ನಗರಕ್ಕೆ ಹತ್ತಿರವಿರುವ ಹೆಬ್ಬಗೋಡಿ ಪಂಚಾಯಿತಿಯ ಗ್ರಾಮಗಳ ಮಹಿಳೆಯರು ಮಗಳಿಗೆ ಶಿಕ್ಷಣ ನೀಡುವಲ್ಲಿ ಸಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ಮಗನಿಗೆ ಮತ್ತು ಮಗಳಿಗೆ ಶಿಕ್ಷಣ ನೀಡುವಲ್ಲಿ ಹೆಚ್ಚು ಲಿಂಗತಾರತಮ್ಯ ಭಾವನೆಯನ್ನು ಹೊಂದಿಲ್ಲ. ಈ ಗ್ರಾಮಗಳ ಮಹಿಳೆಯರು ಮಹಿಳಾ ಶಿಕ್ಷಣದ ಉಪಯೋಗವನ್ನು ಚೆನ್ನಾಗಿ ಅರಿತಿದ್ದಾರೆ. ಅವರು ತಮ್ಮ ಹೆಣ್ಣು ಮಕ್ಕಳನ್ನು ನಗರದ ಶಾಲಾ ಕಾಲೇಜುಗಳಿಗೆ ಕಳುಹಿಸಿ ಶಿಕ್ಷಣ ನೀಡುತ್ತಿರುವುದು ಕಂಡುಬರುತ್ತದೆ.

ನಗರದಿಂದ ದೂರವಿರುವ ಸಮಂದೂರು ಗ್ರಾಮಪಂಚಾಯಿತಿಯ ಗ್ರಾಮಗಳು ಮಹಿಳೆಯರು ತಮ್ಮ ಮಗಳಿಗೆ ಶಿಕ್ಷಣ ನೀಡುವ ಬಗ್ಗೆ ಹೆಚ್ಚು ಸಕಾರಾತ್ಮಕ ಭಾವನೆ ಹೊಂದಿಲ್ಲ. ಕೇವಲ ವಿದ್ಯಾವಂತ ಮಹಿಳೆಯರು ಮಾತ್ರ ಮಗಳ ಶಿಕ್ಷಣದ ಬಗ್ಗೆ ಉತ್ಸುಕರಾಗಿದ್ದಾರೆ. ಈ ಗ್ರಾಮಗಳ ಹೆಚ್ಚಿನ ಮಹಿಳೆಯರು ಮಗನಿಗೆ ಮತ್ತು ಮಗಳಿಗೆ ಶಿಕ್ಷಣ ನೀಡುವಲ್ಲಿ ಹೆಚ್ಚಿನ ಲಿಂಗತಾರತಮ್ಯ ಭಾವನೆಯನ್ನು ಹೊಂದಿದ್ದಾರೆ. ಈ ಗ್ರಾಮಗಳ ಜನರು ತಮ್ಮ ಹೆಣ್ಣುಮಕ್ಕಳನ್ನು ದೂರದ ಶಾಲಾ ಕಾಲೇಜುಗಳಿಗೆ ಕಳುಹಿಸಲು ಹಿಂಜರಿಯುತ್ತಾರೆ.

ಈ ಅಧ್ಯಯನದಿಂದ ತಿಳಿದುಬರುವುದೇನೆಂದರೆ ಮಹಿಳೆಯ ಶಿಕ್ಷಣ ಮಟ್ಟವು ಮಗಳಿಗೆ ಶಿಕ್ಷಣ ನೀಡುವುದರಲ್ಲಿ ನೇರ ಪ್ರಭಾವ ಬೀರುತ್ತದೆ ಎಂಬುದು ತಿಳಿದುಬರುತ್ತದೆ.

ಗ್ರಾಮಗಳ ಭೌಗೋಳಿಕ ನೆಲೆಯು ಸಹ ಮಹಿಳೆಯರ ಮನಸ್ಥಿತಿಯ ಮೇಲೆ ಪ್ರಭಾವ ಬೀರುತ್ತವೆ ಎಂಬುದು ಅಧ್ಯಯನದಿಂದ ಕಂಡುಬಂದಿದೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳು ನಗರೀಕರಣ ಮತ್ತು ಕೈಗಾರಿಕೀಕರಣಕ್ಕೆ ಒಳಗಾಗಿದ್ದು, ಲಾಭದಾಯಕ ಹುದ್ದೆಗಳಲ್ಲಿ ಪುರುಷರು ಮತ್ತು ಸ್ತ್ರೀಯರು ದುಡಿಯುತ್ತಿರುವುದರಿಂದ ಈ ಗ್ರಾಮಗಳಲ್ಲಿ ಆರ್ಥಿಕ ಪರಿಸ್ಥಿತಿಯು ಸುಧಾರಿಸಿದ್ದು ಅವರು ತಮ್ಮ ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಮುಂದಾಗಿದ್ದಾರೆ.

ಈ ಗ್ರಾಮಗಳ ಎಲ್ಲಾ ಮಹಿಳೆಯರು ಮಹಿಳಾ ಶಿಕ್ಷಣದ ಲಾಭವನ್ನು ತಿಳಿದುಕೊಂಡಿದ್ದಾರೆ. ಆದರೆ ನಗರದಿಂದ ದೂರವಿರುವ ಸಮಂದೂರು ಪಂಚಾಯಿತಿ ಗ್ರಾಮಗಳ ಮೇಲೆ ನಗರೀಕರಣ ಮತ್ತು ಕೈಗಾರಿಕೀಕರಣದ ಪ್ರಭಾವ ಹೆಚ್ಚಾಗಿ ಆಗಿಲ್ಲ. ಈ ಗ್ರಾಮಗಳ ಜನರು ಇನ್ನೂ ಕೃಷಿಯನ್ನೇ ಮೂಲ ಉದ್ಯೋಗವನ್ನಾಗಿ ಅವಲಂಭಿಸಿದ್ದು ಅವರ ಆರ್ಥಿಕ ಸ್ಥಿತಿಗತಿಗಳು ಅಷ್ಟಾಗಿ ಸುಧಾರಿಸಿಲ್ಲ. ಈ ಗ್ರಾಮಗಳಲ್ಲಿ ವಿದ್ಯಾವಂತ ಮಹಿಳೆಯರು ಮಾತ್ರ ಶಿಕ್ಷಣದ ಬಗ್ಗೆ ಒಲವನ್ನು ತೋರಿದ್ದಾರೆ. ಅನಕ್ಷರಸ್ಥ ಮಹಿಳೆಯರು ಶಿಕ್ಷಣದ ಲಾಭವನ್ನು ತಿಳಿದುಕೊಂಡಿಲ್ಲ. ಇವರು ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಾ ಮಗನ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುವುದು ಕಂಡುಬರುತ್ತದೆ. ಈ ಅಧ್ಯಾಯದಿಂದ ತಿಳಿದು ಬರುವುದೇನೆಂದರೆ ನಗರದ ಭೌಗೋಳಿಕ ನೆಲೆಯು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಂಶಗಳಲ್ಲಿ ಬದಲಾವಣೆಯನ್ನು ತರುವುದರ ಮೂಲಕ ಮಹಿಳೆಯರ ಶಿಕ್ಷಣದ ಬಗ್ಗೆ ಮಹಿಳೆಯರ ಮನೋಭಾವನೆಯನ್ನು ಬದಲಾಯಿಸಬಲ್ಲೆವು ಎಂಬುದು ಕಂಡು ಬರುತ್ತದೆ. ಜಾತಿಯು ಮಹಿಳಾ ಶಿಕ್ಷಣದ ಮೇಲೆ ಪ್ರಭಾವ ಬೀರುವ ಅಂಶವಾಗಿದ್ದರೂ ಜಾತಿಗಿಂತ ಗ್ರಾಮದ ಭೌಗೋಳಿಕ ನೆಲೆಯು ಮಹಿಳಾ ಶಿಕ್ಷಣದ ಮೇಲೆ ಹೆಚ್ಚಿನ ಪ್ರಭಾವ ಬೀರುವ ಅಂಶವಾಗಿ ಕಂಡುಬಂದಿದೆ.

ಅಧ್ಯಾಯ ೫: ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು: ಸಾಮಾಜಿಕ ನೆಲೆಗಳಲ್ಲಿ: ಈ ಅಧ್ಯಾಯವು ಮಹಿಳೆಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮಾಜದಲ್ಲಿ ಯಾವ ಭಾವನೆ ಇದೆ ಎಂಬುದನ್ನು ತಿಳಿಯಲು ಎರಡು ಪಂಚಾಯಿತಿಯ ಹಿರಿಯ ನಾಗರಿಕರನ್ನು ಸಂದರ್ಶನ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಮಾಜದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಗಂಡು ಮತ್ತು ಹೆಣ್ಣು ಮಕ್ಕಳಲ್ಲಿ ಸಮಾನತೆಯಿದೆಯೇ ಅಥವಾ ಲಿಂಗತಾರತಮ್ಯವನ್ನು ಸಮಾಜದ ಜನರು ಮಾಡುತ್ತಾರೆಯೇ ಎಂಬುದನ್ನು ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ. ಹಿರಿಯ ನಾಗರಿಕರು ಹಿಂದಿನ ಪೀಳಿಗೆಯವರಾಗಿದ್ದು ಅವರ ಭಾವನೆ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂಪ್ರದಾಯಬದ್ಧವಾಗಿದೆಯೇ ಅಥವ ಸಕಾರಾತ್ಮಕವಾಗಿದೆಯೇ ಎಂಬುದನ್ನು ತಿಳಿದುಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಕಂಡುಬಂದ ವಿಷಯವೇನೆಂದರೆ, ಮಹಿಳಾ ಶಿಕ್ಷಣದ ವಿಚಾರದಲ್ಲಿ ಅವರ ವಯಸ್ಸಿಗಿಂತ ಗ್ರಾಮದ ಭೌಗೋಳಿಕೆ ನೆಲೆಯು ಗ್ರಾಮದ ನಾಗರೀಕರ ಮೇಲೆ ಪರಿಣಾಮ ಕಾರಿ ಪ್ರಭಾವವನ್ನು ಬೀರಿರುವುದು ಕಂಡುಬರುತ್ತದೆ.

ನಗರದಿಂದ ದೂರವಿರುವ ಸಮಂದೂರು ಗ್ರಾಮ ಪಂಚಾಯಿತಿಯ ಗ್ರಾಮಗಳ ಹೆಚ್ಚಿನ ನಾಗರೀಕರು ಮಹಿಳೆಯ ಶಿಕ್ಷಣ ಅದರಲ್ಲೂ ಮಹಿಳಾ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು

ನೀಡುವುದಿಲ್ಲ. ಹೆಣ್ಣುಮಕ್ಕಳಿಗೆ ಶಿಕ್ಷಣ ಅವಶ್ಯಕತೆ ಇಲ್ಲ, ಗಂಡು ಮಕ್ಕಳಿಗೆ ಮಾತ್ರ ಶಿಕ್ಷಣ ಬೇಕೆಬೇಕು ಎಂಬ ಲಿಂಗತಾರತಮ್ಯ ಧೋರಣೆಯನ್ನು ವ್ಯಕ್ತಪಡಿಸಿದ್ದಾರೆ. ಮಹಿಳಾ ಶಿಕ್ಷಣದ ಬಗ್ಗೆ ಹೆಚ್ಚು ನಕಾರಾತ್ಮಕ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಹೆಬ್ಬಗೋಡಿ ಗ್ರಾಮ ಪಂಚಾಯಿತಿಯ ಗ್ರಾಮಗಳ ನಾಗರೀಕರು ಮಹಿಳಾ ಶಿಕ್ಷಣದ ಬಗ್ಗೆ ಹೆಚ್ಚು ಸಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ಈ ಗ್ರಾಮಗಳ ಜನರು ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರಿಗೂ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳುವ ಮೂಲಕ ಲಿಂಗತಾರತಮ್ಯ ಭಾವನೆಯನ್ನು ವ್ಯಕ್ತಪಡಿಸುವುದಿಲ್ಲ.

ಈ ಎರಡೂ ಗ್ರಾಮಗಳ ಹಿರಿಯ ನಾಗರೀಕರ ವಯಸ್ಸು ಮತ್ತು ತಲೆಮಾರು ಒಂದೇ ಆಗಿದ್ದರೂ ಅವರ ಮನೋಭಾವನೆಯಲ್ಲಿ ಸಾಕಷ್ಟು ವ್ಯತ್ಯಾಸಗಳಿರುವುದು ಕಂಡು ಬರುತ್ತದೆ. ವಯಸ್ಸಿಗಿಂತ ಗ್ರಾಮದ ಭೌಗೋಳಿಕ ನೆಲೆಯು ಹಿರಿಯ ನಾಗರೀಕರ ಮನಸ್ಥಿತಿಯ ಮೇಲೆ ನೇರ ಪ್ರಭಾವ ಬೀರಿದೆ.

ಅಧ್ಯಾಯ ೬: ಮಹಿಳೆಯರ ಶೈಕ್ಷಣಿ ಸಮಸ್ಯೆಗಳು–ಶೈಕ್ಷಣಿಕ ಸಂಸ್ಥೆಗಳ ನೆಲೆಯಲ್ಲಿ : ಈ ಅಧ್ಯಾಯದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿನ ಶಿಕ್ಷಕರನ್ನು ಮತ್ತು ಮಹಿಳಾ ವಿಧ್ಯಾರ್ಥಿಗಳನ್ನು ಸಂದರ್ಶನ ಮಾಡಲಾಗಿದೆ. ಮಹಿಳೆಯರ ಶಿಕ್ಷಣಕ್ಕೆ ಶಿಕ್ಷಣ ಸಂಸ್ಥೆಗಳಲ್ಲಿರುವ ಸಮಸ್ಯೆಗಳೇನು ಎಂಬುದನ್ನು ಶಿಕ್ಷಕರಿಂದ ಮಾಹಿತಿ ಪಡೆಯಲಾಗಿದೆ. ಜೊತೆಗೆ ಮಹಿಳಾ ವಿದ್ಯಾರ್ಥಿಗಳು ಶಾಲೆ ಬಿಡುವುದಕ್ಕೆ ಇರುವ ಕಾರಣಗಳನ್ನು ಕುರಿತು ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಹೆಣ್ಣುಮಕ್ಕಳು ಶಾಲೆ ಯನ್ನು ಬಿಡುವುದಕ್ಕೆ ಶಿಕ್ಷಣ ಸಂಸ್ಥೆಗಳಲ್ಲಿ ಏನಾದರು ಸಮಸ್ಯೆಗಳಿವೆಯೇ ಎಂಬುದನ್ನು ಅರಿಯು ವುದಾಗಿದೆ. ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಲಾಗಿದ್ದು ಅವರ ಕುಟುಂಬಗಳಲ್ಲಿ ಗಂಡು ಮಕ್ಕಳ ಮತ್ತು ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಲಿಂಗತಾರತಮ್ಯ ಮಾಡುತ್ತಾರೆಯೇ ಎಂಬುದನ್ನು ನೇರವಾಗಿ ಮಾಹಿತಿ ಪಡೆಯಲಾಗಿದೆ. ನಗರಕ್ಕೆ ಹತ್ತಿರವಿರುವ ಗ್ರಾಮಪಂಚಾಯಿತಿಯಲ್ಲಿರುವ ಗ್ರಾಮಗಳ ವಿದ್ಯಾರ್ಥಿಗಳು ಲಿಂಗತಾರತಮ್ಯ ಮಾಡುವುದಿಲ್ಲ ಎಂದು ಹೆಚ್ಚಿನ ಸಂಖ್ಯೆಯಲ್ಲಿ ತಿಳಿಸಿದ್ದಾರೆ. ಜೊತೆಗೆ ಈ ಗ್ರಾಮಗಳಲ್ಲಿ ಹೆಚ್ಚಾಗಿ ವಿಭಕ್ತ ಕುಟುಂಬಗಳಿದ್ದು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುವುದು ಕಂಡುಬರುತ್ತದೆ. ಈ ಗ್ರಾಮಗಳಲ್ಲಿ ಕುಟುಂಬದ ಪ್ರಮುಖ ಉದ್ಯೋಗ ಕೃಷಿಯೇತರವಾಗಿದ್ದು ಕೈಗಾರಿಕೆ, ವ್ಯಾಪಾರ, ವಾಣಿಜ್ಯ ಮತ್ತು ಇತರೆ ವೃತ್ತಿಗಳನ್ನು ಅನುಸರಿಸುತ್ತಿದ್ದು ಅವರ ಆರ್ಥಿಕ ಸ್ಥಿತಿಯು ಉತ್ತಮವಾಗಿದೆ. ಅವರು ನಗರೀಕರಣದ ಪ್ರಭಾವಕ್ಕೆ ಒಳಗಾಗಿದ್ದವರಾಗಿದ್ದು ಅವರಿಗೆ ಮಹಿಳಾ ಶಿಕ್ಷಣದ ಲಾಭ ತಿಳಿದಿದೆ. ಅವರು ತಮ್ಮ ಮಗನ ಮತ್ತು ಮಗಳ ಶಿಕ್ಷಣದಲ್ಲಿ ತಾರತಮ್ಯ ಮಾಡದಿರುವುದು ಕಂಡುಬರುತ್ತದೆ.

ನಗರದಿಂದ ದೂರವಿರುವ ಪಂಚಾಯಿತಿಯ ಗ್ರಾಮಗಳಲ್ಲಿ ಶಾಲಾ ಕಟ್ಟಡದ ಸಮಸ್ಯೆ, ಶೌಚಾಲಯದ ಸಮಸ್ಯೆ ಮತ್ತು ಸ್ಥಳೀಯ ಮಟ್ಟದಲ್ಲಿ ಶಾಲೆಗಳು ಕಂಡು ಬರದಿರುವುದು ಇಲ್ಲಿನ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಬೇರೆ ಊರುಗಳಿಗೆ ಶಾಲೆಗಳಿಗೆ ಕಳುಹಿಸದಿರುವುದನ್ನು ಶಿಕ್ಷಕರು ತಿಳಿಸಿದ್ದಾರೆ. ಈ ಗ್ರಾಮಗಳ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿದಾಗ ಕಂಡು ಬಂದ ಅಂಶವೆಂದರೆ, ಹೆಚ್ಚಿನ ಮಹಿಳಾ ವಿದ್ಯಾರ್ಥಿಗಳು ಅವಿಭಕ್ತ ಕುಟುಂಬಗಳಿಂದ ಬಂದವರಾಗಿದ್ದು ಈ ಕುಟುಂಬಗಳಲ್ಲಿ ಗಂಡು ಮಕ್ಕಳ ಮತ್ತು ಹೆಣ್ಣು ಮಕ್ಕಳ ಶಿಕ್ಷಣ ವಿಷಯದಲ್ಲಿ ಲಿಂಗತಾರತಮ್ಯ ಮಾಡುವುದನ್ನು ಮಹಿಳಾ ವಿದ್ಯಾರ್ಥಿಗಳು ತಿಳಿಸಿದ್ದಾರೆ. ಈ ಗ್ರಾಮಗಳ ಪ್ರಮುಖ ಉದ್ಯೋಗ ಕೃಷಿ ಮತ್ತು ಕೃಷಿ ಸಂಬಂಧಿತ ವ್ಯಕ್ತಿಗಳಾಗಿದ್ದು ಹೆಚ್ಚಿನ ಕುಟುಂಬಗಳ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲ. ಈ ಗ್ರಾಮಗಳಲ್ಲಿ ಪೋಷಕರಿಗೆ ಮಹಿಳಾ ಶಿಕ್ಷಣದ ಮಹತ್ವವು ತಿಳಿದಿಲ್ಲ. ಅವರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಮಗನ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದ್ದು ಮಗಳ ಶಿಕ್ಷಣ ಆದ್ಯತೆ ನೀಡದಿರುವುದು ಕಂಡು ಬರುತ್ತದೆ.

ಕೆಲವು ಸಂದರ್ಭಗಳಲ್ಲಿ ಹೆಣ್ಣು ಮಕ್ಕಳನ್ನು ಪ್ರತಿಭಾವಂತವಾದ ಶಾಲೆಗೆ ಕಳುಹಿಸದೆ ಮನೆಯಲ್ಲಿಸಿರುವುದು, ಗಂಡು ಮಕ್ಕಳನ್ನು ಮಾತ್ರ ಶಾಲೆಗಳಿಗೆ ಕಳುಹಿಸುವುದು, ಇನ್ನೂ ಕೆಲವು ಸಂದರ್ಭದಲ್ಲಿ ಮನೆಯ ಗಂಡುಮಕ್ಕಳನ್ನು ಆಂಗ್ಲ ಮತ್ತು ಉತ್ತಮ ಖಾಸಗಿ ಶಾಲೆಗಳಿಗೆ ಕಳುಹಿಸುವುದು, ಹೆಣ್ಣು ಮಕ್ಕಳನ್ನು ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗೆ ಕಳುಹಿಸುವುದನ್ನು ಮಹಿಳಾ ವಿಧ್ಯಾರ್ಥಿಗಳು ಸಂದರ್ಶನದ ಸಂದರ್ಭದಲ್ಲಿ ಮಾಹಿತಿಯನ್ನು ನೀಡಿದ್ದಾರೆ.

ನಗರದಿಂದ ದೂರವಿರುವ ಗ್ರಾಮಗಳಲ್ಲಿ ಮಹಿಳಾ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಹಲವಾರು ಸಮಸ್ಯೆಗಳಿರುವುದು ಮತ್ತು ಕುಟುಂಬಗಳಲ್ಲಿ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುವುದು ಕಂಡು ಬರುತ್ತದೆ.

ಇದರಿಂದ ತಿಳಿದು ಬರುವುದೇನೆಂದರೆ ಮಹಿಳಾ ಶಿಕ್ಷಣದ ವಿಚಾರದಲ್ಲಿ ಗ್ರಾಮದ ಭೌಗೋಳಿಕ ನೆಲೆಯು ಗ್ರಾಮಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗಳ ಮೇಲೆ ಪ್ರಭಾವ ಬೀರುವ ಅಂಶಗಳಾಗಿದ್ದು ಮಹಿಳಾ ಶಿಕ್ಷಣವನ್ನು ನಿರ್ಧರಿಸುವಂತಾಗಿದೆ. ಆಧುನಿಕ, ಕೈಗಾರಿಕೀಕರಣ ಗೊಂಡ ಜಾಗತಿಕ ಸಮಾಜದಲ್ಲಿ ಜಾತಿಗಿಂತ ಗ್ರಾಮದ ಭೌಗೋಳಿಕ ನೆಲೆಯು ಪ್ರಭಾವಿ ಅಂಶವಾಗಿದ್ದು ಗ್ರಾಮಗಳ ಜನರ ಮನೋಭಾವನೆಯನ್ನು ಪ್ರೇರೇಪಿಸುತ್ತವೆ.

ಅಧ್ಯಾಯ ೭: ಭಾರತದಲ್ಲಿ ಸಾಕ್ಷರತೆಯ ಪರಿಶೀಲನೆ: ಲಿಂಗ ಸಂಬಂಧದ ನೆಲೆಯಲ್ಲಿ: ಈ ಅಧ್ಯಾಯದಲ್ಲಿ ಭಾರತದ ಜನಗಣತಿಯ ಮತ್ತು ನ್ಯಾಷನಲ್ ಸ್ಯಾಂಪಲ್ ಸರ್ವೆಯ ಅಂಕಿ

ಅಂಶಗಳನ್ನು ವಿಶ್ಲೇಷಿಸಲಾಗಿದೆ. ಅಧ್ಯಯನದ ಅಂಕಿ ಅಂಶಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಮಹಿಳಾ ಶಿಕ್ಷಣದ ಪರಿಸ್ಥಿತಿಯನ್ನು ಅರಿಯುವ ಕಾರಣದಿಂದಾಗಿ ಅಧ್ಯಾಯವನ್ನು ವಿಶ್ಲೇಷಿಸಲಾಗಿದೆ.

ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಪುರುಷ ಮತ್ತು ಮಹಿಳಾ ಶಿಕ್ಷಣದಲ್ಲಿ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ಅಂತೆಯೇ ಭಾರತದ ಮತ್ತು ಕರ್ನಾಟಕದ ಗ್ರಾಮೀಣ ಪುರುಷ ಮತ್ತು ಸ್ತ್ರೀ ಶಿಕ್ಷಣದಲ್ಲಿ ಹೆಚ್ಚಿನ ವ್ಯತ್ಯಾಸಗಳಿರುವುದು ಅಂಕಿ–ಅಂಶಗಳಿಂದ ಕಂಡುಬರುತ್ತವೆ.

ಸ್ವಾತಂತ್ರ್ಯನಂತರ ಪಂಚವಾರ್ಷಿಕ ಯೋಜನೆಗಳಲ್ಲಿ, ಯೋಜನೆಯಿಂದ ಯೋಜನೆಗೆ ಮಹಿಳಾ ಶಿಕ್ಷಣಕ್ಕೆ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಮಹಿಳೆಯ ಶಿಕ್ಷಣದ ಸುಧಾರಣೆಗೆ ಹೆಚ್ಚು ಹಣವನ್ನು ವಿನಿಯೋಗಿಸಲಾಗುತ್ತಿದೆ. ಹಲವಾರು ಮಹಿಳಾ ಶಿಕ್ಷಣ ಪರವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಒಂದು ಜನಗಣತಿಯಿಂದ ಮತ್ತೊಂದು ಜನಗಣತಿಯಲ್ಲಿ ಮಹಿಳಾ ಶಿಕ್ಷಣದ ಮಟ್ಟ ಹೆಚ್ಚಾಗಿರುವುದು ಅಂಕಿ–ಅಂಶಗಳಿದ ತಿಳಿದುಬರುತ್ತದೆ. ಆದರೆ ಇದುವರೆಗೂ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪುರುಷ ಮತ್ತು ಮಹಿಳಾ ಶಿಕ್ಷಣದಲ್ಲಿ ಸಮಾನತೆಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಪುರುಷಪ್ರಧಾನ ಮೌಲ್ಯಗಳು ಮತ್ತು ಪುರುಷ ಮತ್ತು ಮಹಿಳೆಯರ ಬಗ್ಗೆ ಇರುವ ಮೇಲು ಕೀಳು ಭಾವನೆಯಾಗಿದೆ. ಗ್ರಾಮೀಣ ಸಮಾಜದಲ್ಲಿ ಶೇ ೮೦ರಷ್ಟು ಪೋಷಕರು ಅನಕ್ಷರಸ್ಥರಾಗಿದ್ದು ಅವರಿಗೆ ಮಹಿಳಾ ಶಿಕ್ಷಣದ ಲಾಭಗಳು ತಿಳಿದಿಲ್ಲ. ಗ್ರಾಮ ಸಮಾಜದಲ್ಲಿ ಬಡತನವು ಸಹ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅಡ್ಡಿಯನ್ನುಂಟು ಮಾಡಿದೆ. ಅನಕ್ಷರತೆಯ ಕಾರಣದಿಂದಾಗಿ ಪೋಷಕರು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ನಕಾರಾತ್ಮಕ ಭಾವನೆ ಹೊಂದಿರುವುದು ಕಂಡು ಬರುತ್ತದೆ. ಎಷ್ಟೇ ಸರ್ಕಾರವು ಮಹಿಳಾ ಶಿಕ್ಷಣದ ಅಭಿವೃದ್ಧಿ ಕ್ರಮ ಕೈಗೊಂಡರೂ, ಜನರು ಮಹಿಳಾ ಶಿಕ್ಷಣದ ಬಗ್ಗೆ ಸಕಾರಾತ್ಮಕ ಭಾವನೆ ತಾಳದಿದ್ದರೆ, ಪುರುಷ ಮತ್ತು ಮಹಿಳಾ ಶಿಕ್ಷಣದಲ್ಲಿ ಸಮಾನತೆಯನ್ನು ತರಲು ಸಾಧ್ಯವಿಲ್ಲ.

ಅಧ್ಯಾಯ ೮ರಲ್ಲಿ ಅಧ್ಯಯನದ ಫಲಿತಾಂಶಗಳ ಅಥವಾ ಸಮಾರೋಪವನ್ನು ವಿವರಿಸಲಾಗಿದೆ. ಮಹಿಳಾ ಶಿಕ್ಷಣ ಮಟ್ಟವನ್ನು ನಿರ್ದರಿಸುವಲ್ಲಿ ಜಾತಿ, ಕುಟುಂಬದ ಆರ್ಥಿಕಸ್ಥಿತಿ, ಪೋಷಕರ ಶಿಕ್ಷಣ ಮಟ್ಟ, ಮಹಿಳಾ ಶಿಕ್ಷಣದ ಜಾಗೃತಿ ಪ್ರಮುಖ ಅಂಶಗಳಾಗಿವೆ.

ಈ ಅಧ್ಯಯನದಲ್ಲಿ ಕಂಡು ಬರುವ ವಿಶೇಷ ಅಂಶವೆಂದರೆ ಮಹಿಳೆಯ ಶಿಕ್ಷಣದ ಮೇಲೆ ಗ್ರಾಮದ ಭೌಗೋಳಿಕ ನೆಲೆಯು ಇತರ ಅಂಶಗಳಂತೆ ಪ್ರಭಾವ ಬೀರುವ ಅಂಶವಾಗಿ ಕಂಡು ಬರುತ್ತದೆ.

ಮಹಿಳೆಯರು ತಮ್ಮ ಮಗನಿಗೆ ಮತ್ತು ಮಗಳಿಗೆ ಶಿಕ್ಷಣ ಕೊಡಿಸುವಲ್ಲಿ ಲಿಂಗತಾರತಮ್ಯ ಮಾಡುತ್ತಾರೆಯೇ ಅಥವಾ ಇಲ್ಲವೆ ಎಂದು ತಿಳಿಯಲು ಸಂದರ್ಶನ ಮಾಡಲಾಗಿದೆ. ನಗರಕ್ಕೆ

ಹತ್ತಿರವಾಗಿರುವ ಮತ್ತು ನಗರಕ್ಕೆ ದೂರವಿರುವ ಗ್ರಾಮಗಳ ಹೆಚ್ಚು ವಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರು ತಮ್ಮ ಗಂಡು ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಿದ್ದಾರೆ. ಅವರು ಮುಂದೆ ದುಡಿದು ಕುಟುಂಬಕ್ಕೆ ಆದಾಯವನ್ನು ತರುತ್ತಾರೆಂಬ ಭಾವನೆ ಇದೆ. ಆದುದರಿಂದ ಗಂಡು ಮಕ್ಕಳಿಗೆ ಹೆಚ್ಚು ಕಾಲೇಜು ಶಿಕ್ಷಣ ನೀಡಬೇಕೆಂಬ ಅಭಿಪ್ರಾಯವನ್ನು ತಿಳಿದಿದ್ದಾರೆ.

ಈ ಸಂಶೋಧನೆಯಲ್ಲಿ ತಿಳಿದು ಬರುವುದೇನೆಂದರೆ ಪೋಷಕರ ಶಿಕ್ಷಣ ಅವರ ಮಗಳಿಗೆ ಶಿಕ್ಷಣ ಕೊಡಿಸುವುದರ ಮೇಲೆ ನೇರ ಪ್ರಭಾವವನ್ನು ಬೀರುತ್ತದೆ.

ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ತಮ್ಮ ಮಗಳಿಗೆ ಉತ್ತಮ ಶಿಕ್ಷಣ ನೀಡಬೇಕೆಂಬ ಅಭಿಪ್ರಾಯ ಹೊಂದಿದ್ದಾರೆ. ಕಡಿಮೆ ಶಿಕ್ಷಣ ಪಡೆದ ಮಹಿಳೆಯರು ತಮ್ಮ ಮಗಳಿಗೆ ಮಗನಿಗಿಂತ ಕಡಿಮೆ ಶಿಕ್ಷಣ ನೀಡುವ ಅಭಿಪ್ರಾಯವನ್ನು ಹೊಂದಿದ್ದಾರೆ.

ನಗರಕ್ಕೆ ಹತ್ತಿರವಾಗಿರುವ ವಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಹೆಚ್ಚಿನ ಮಹಿಳೆಯರು ತಮ್ಮ ಮಗನಿಗೆ ಮತ್ತು ಮಗಳಿಗೆ ಲಿಂಗತಾರತಮ್ಯ ಮಾಡದೆ ಶಿಕ್ಷಣವನ್ನು ನೀಡುವ ಅಭಿಪ್ರಾಯವನ್ನು ಹೊಂದಿದ್ದಾರೆ.

ನಗರದಿಂದ ದೂರವಿರುವ ಹೆಚ್ಚಿನ ವಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರು ಮಗನಿಗೆ ಮತ್ತು ಮಗಳಿಗೆ ಶಿಕ್ಷಣ ಕೊಡಿಸುವಲ್ಲಿ ಲಿಂಗತಾರತಮ್ಯ ಧೋರಣೆಯನ್ನು ಹೊಂದಿದ್ದಾರೆ. ಅದೇ ರೀತಿ ಯಾವುದೇ ಜಾತಿಯ ಬೇಧವಿಲ್ಲದೆ ಎಲ್ಲಾ ಪೋಷಕರ ಶಿಕ್ಷಣಮಟ್ಟ ಹೆಚ್ಚಾದಂತೆ ಅವರು ತಮ್ಮ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿರುವುದು ಕಂಡು ಬರುತ್ತದೆ. ಈ ಸಂಶೋಧನೆಯಿಂದ ತಿಳಿದುಬರುವ ಅಂಶವೆಂದರೆ, ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುವಲ್ಲಿ ನಗರ–ಗ್ರಾಮ ಅಂತರ ಮತ್ತು ಪೋಷಕರ ಶಿಕ್ಷಣ ಮಟ್ಟವು ಗಣನೀಯವಾದ ಪಾತ್ರವನ್ನು ವಹಿಸುತ್ತದೆ.

ಈ ಅಧ್ಯಯನದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವ ಬಗೆಗಿನ ಅಭಿಪ್ರಾಯವನ್ನು ಸಂದರ್ಶಿತರಿಂದ ಕೇಳಿ ತಿಳಿದುಕೊಳ್ಳಲಾಗಿದೆ. ಇಲ್ಲಿಯೂ ಸಹ ಸಂದರ್ಶಿತರ ಶಿಕ್ಷಣ ಮಟ್ಟ, ನಗರ ಮತ್ತು ಗ್ರಾಮ ಅಂತರ ಮತ್ತು ಜಾತಿಯು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವ ಅಭಿಪ್ರಾಯದ ಮೇಲೆ ನೇರ ಪ್ರಭಾವ ಬೀರುವುದು ಕಂಡು ಬರುತ್ತದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಶಿಕ್ಷಣ ಪಡೆದ ಮತ್ತು ಶಿಕ್ಷಣ ಪಡೆಯದ ವಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಎಲ್ಲಾ ಸಂದರ್ಶಿತರು ಹೆಣ್ಣುಮಕ್ಕಳ ಶಿಕ್ಷಣದ ಲಾಭವನ್ನು

ಅರಿತಿದ್ದಾರೆ. ಯಾವ ಒಬ್ಬ ಸಂದರ್ಶಿತರು ಸಹ ಮಹಿಳಾ ಶಿಕ್ಷಣದಿಂದ ಲಾಭವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದರಿಂದ ಅವಳ ಸ್ಥಾನಮಾನ ಗೌರವ ಹೆಚ್ಚುತ್ತದೆ. ಉದ್ಯೋಗಾವಕಾಶಗಳು ಹೆಚ್ಚುತ್ತದೆ. ಅವರ ಮದುವೆಗೆ ಮತ್ತು ವ್ಯವಹರಿಸಲು ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ದೂರವಿರುವ ಗ್ರಾಮಗಳ ಸಂದರ್ಶಿತರಲ್ಲಿ ಶೇ.೫೪ರಷ್ಟು ಸಂದರ್ಶಿತರು ತಮ್ಮ ಮಗಳಿಗೆ ಶಿಕ್ಷಣ ಕೊಡುವುದರಿಂದ ಲಾಭವಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೪೬ ರಷ್ಟು ಸಂದರ್ಶಿತರು ಮಾತ್ರ ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಲಾಭವಿದೆ ಎಂದು ಅರಿತಿದ್ದಾರೆ. ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅದರ ಲಾಭ ಅವಳ ಗಂಡನ ಮನೆಗೆ ಸಿಗುತ್ತದೆ. ಹೆಚ್ಚು ಶಿಕ್ಷಣ ಕೊಟ್ಟಷ್ಟು ನಾವು ಅವಳಿಗೆ ಅನುಗುಣವಾದ ಗಂಡನ್ನು ಹುಡುಕಲು ಹೆಚ್ಚು ವರದಕ್ಷಿಣೆ ಕೊಡಬೇಕಾಗುತ್ತದೆ. ಹೆಣ್ಣುಮಕ್ಕಳು ಹೆಚ್ಚು ಕಲಿತಷ್ಟು ಅವರು ನಮ್ಮ ಮಾತು ಕೇಳುವುದಿಲ್ಲ. ಆದುದರಿಂದ ಅವರಿಗೆ ಮದುವೆ ಮಾಡುವುದೇ ಒಳ್ಳೆಯದು. ಗಂಡು ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಅವರು ದುಡಿದು ಕುಟುಂಬಕ್ಕೆ ಆದಾಯ ತರುತ್ತಾರೆ. ಆದರೆ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ಅದರ ಲಾಭ ಗಂಡನ ಮನೆಗೆ ಸಿಗುತ್ತದೆಯೇ ವಿನಃ ನಮಗಲ್ಲವೆಂಬ ನಕಾರಾತ್ಮಕ ಭಾವನೆಯನ್ನು ಹೆಚ್ಚು ಪೋಷಕರು ಹೊಂದಿದ್ದಾರೆ.

ನಗರದಿಂದ ದೂರವಿರುವ ಒಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರು ನಗರೀಕರಣದ ಪ್ರಭಾವಕ್ಕೆ ಒಳಗಾಗಿಲ್ಲ. ಅವರು ಹೆಚ್ಚು ಸಂಪ್ರದಾಯಸ್ಥರಾಗಿದ್ದು ಲಿಂಗತಾರತಮ್ಯ ಭಾವನೆಯನ್ನು ಹೊಂದಿದ್ದಾರೆ. ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ತುಂಬ ಇದೆ ಎಂಬ ಅರಿವು ಅವರಿಗಿಲ್ಲ. ಗ್ರಾಮ–ನಗರ ಅಂತರವು ಸಂದರ್ಶಿತರ ಅಭಿಪ್ರಾಯಗಳ ಮೇಲೆ ನೇರ ಪ್ರಭಾವ ಬೀರುತ್ತದೆ ಎಂಬುದು ಈ ಅಧ್ಯಯನದಿಂದ ತಿಳಿದು ಬರುತ್ತದೆ.

ಕುಟುಂಬದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು, ಜಾತಿ, ಸಂದರ್ಶಿತರ ಶಿಕ್ಷಣಮಟ್ಟ ಮತ್ತು ಗ್ರಾಮ–ನಗರ ಅಂತರವು ಸಂದರ್ಶಿತರ ಅಭಿಪ್ರಾಯ, ಆಲೋಚನೆಗಳ ಮೇಲೆ ನೇರ ಪ್ರಭಾವ ಬೀರುವ ಅಂಶಗಳಾಗಿವೆ.

ಮಗಳನ್ನು ದೂರದ ಶಾಲಾ ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸುವ ಬಗ್ಗೆ ಮತ್ತು ಮಗನನ್ನು ದೂರದ ಶಾಲಾ ಕಾಲೇಜುಗಳಿಗೆ ಶಿಕ್ಷಣಕ್ಕೆ ಕಳುಹಿಸುವ ಬಗ್ಗೆ ಅಭಿಪ್ರಾಯವನ್ನು ಕೇಳಲಾಗಿದೆ. ನಗರಕ್ಕೆ ಹತ್ತಿರವಿರುವ ಹಳ್ಳಿಗಳ ಅನಕ್ಷರಸ್ಥ ಮತ್ತು ಅಕ್ಷರಸ್ಥ ಒಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಎಲ್ಲಾ ಸಂದರ್ಶಿತರು ಯಾವುದೇ ಲಿಂಗತಾರತಮ್ಯ ಮಾಡದೆ ತಮ್ಮ ಮಗನನ್ನು ಮತ್ತು ಮಗಳನ್ನು ದೂರದ ಶಾಲಾ ಕಾಲೇಜುಗಳಿಗೆ ಶಿಕ್ಷಣ ಪಡೆಯಲು ಒಪ್ಪಿಗೆಯನ್ನು

ಸೂಚಿಸಿದ್ದಾರೆ. ಆದರೆ ನಗರದಿಂದ ದೂರವಿರುವ ಹಳ್ಳಿಗಳ ಸಂದರ್ಶಿತರು ತಮ್ಮ ಮಗನ ಮತ್ತು ಮಗಳ ಶಿಕ್ಷಣಕ್ಕೆ ದೂರದ ಊರಿಗೆ ಕಳುಹಿಸುವ ಬಗ್ಗೆ ಲಿಂಗತಾರತಮ್ಯವನ್ನು ಮಾಡಿದ್ದಾರೆ. ನಗರದಿಂದ ದೂರವಿರುವ ಹಳ್ಳಿಗಳ ಸಂದರ್ಶಿತರಲ್ಲಿ ಶೇ.೧೨ ರಷ್ಟು ಅನಕ್ಷರಸ್ಥ ಸಂದರ್ಶಿತರು ತಮ್ಮ ಮಗನನ್ನು ದೂರದ ಊರಿಗೆ ಕಳುಹಿಸಲು ಆಗುವ ಆರ್ಥಿಕ ಸಮಸ್ಯೆಯನ್ನು ಮತ್ತು ದುಬಾರಿ ವೆಚ್ಚವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಶೇ.೮೮ ರಷ್ಟು ಸಂದರ್ಶಿತರು ತಮ್ಮ ಮಗನನ್ನು ದೂರದ ಊರಿಗೆ ಶಿಕ್ಷಣಕ್ಕೆ ಕಳುಹಿಸಲು ಒಪ್ಪಿಗೆ ಸೂಚಿಸಿದ್ದಾರೆ. ಆದರೆ ಮಗಳನ್ನು ದೂರದ ಊರಿಗೆ ಶಿಕ್ಷಣಕ್ಕೆ ಕಳುಹಿಸಲು ಶೇ.೬೬ ರಷ್ಟು ಸಂದರ್ಶಿತರು ಒಪ್ಪಿಗೆ ಸೂಚಿಸಿದ್ದಾರೆ. ಶೇ.೩೪ ರಷ್ಟು ಸಂದರ್ಶಿತರು ದೂರದ ಊರಿಗೆ ಶಿಕ್ಷಣಕ್ಕೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸದೆ ಲಿಂಗತಾರತಮ್ಯವನ್ನು ಮಾಡಿದ್ದಾರೆ.

ಅಧ್ಯಾಯ ೫ರಲ್ಲಿ ಮಹಿಳೆಯರ ಶೈಕ್ಷಣಿಕ ಸಮಸ್ಯೆಗಳು – ಸಾಮಾಜಿಕ ನೆಲೆಯಲ್ಲಿ ಎಂಬ ವಿಷಯವಾಗಿ ಪ್ರಸ್ಥಾಪಿಸಲಾಗಿದೆ. ಸಮಾಜದಲ್ಲಿ ಸಾರ್ವಜನಿಕರು ಮಹಿಳೆಯರ ಶಿಕ್ಷಣದ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಗಂಡು ಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಅವರು ಸಮಾನ ಅಭಿಪ್ರಾಯ ಹೊಂದಿದ್ದಾರೆಯೇ ಅಥವಾ ಲಿಂಗತಾರತಮ್ಯ ಧೋರಣೆಯನ್ನು ಹೊಂದಿದ್ದಾರೆಯೆ ಎಂಬುದನ್ನು ಅರಿಯುವುದಾಗಿದೆ. ಸಂದರ್ಶನಕ್ಕೆ ಯಾವುದೇ ಜಾತಿ ಮತ್ತು ಲಿಂಗ ಭೇದವಿಲ್ಲದೆ ಎರಡು ಪಂಚಾಯಿತಿಯ ತಲಾ ೧೦೦ ಹಿರಿಯ ನಾಗರೀಕರನ್ನು ಸಂದರ್ಶನ ಮಾಡಲಾಗಿದೆ.

ಈ ಸಂದರ್ಶನದಲ್ಲಿ ನಗರಕ್ಕೆ ಹತ್ತಿರವಿರುವ ಗ್ರಾಮ ಪಂಚಾಯಿತಿಯ ಶೇ.೧೦೦ಕ್ಕೆ ೧೦೦ ರಷ್ಟು ಸಂದರ್ಶಿತರು ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನೂರು ಜನ ಹಿರಿಯ ನಾಗರೀಕರಲ್ಲಿ ಶೇ.೯೬ ರಷ್ಟು ಜನ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೪ ರಷ್ಟು ಜನ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಹೆಚ್ಚಿನ ಹಿರಿಯ ಗ್ರಾಮಸ್ಥರು ಶಿಕ್ಷಣ ಕೊಡಿಸುವ ವಿಚಾರದಲ್ಲಿ ಲಿಂಗತಾರತಮ್ಯ ಮಾಡಿಲ್ಲ. ಶೇ.೪ ರಷ್ಟು ಸಂದರ್ಶಿತರು ಮಾತ್ರ ಲಿಂಗತಾರತಮ್ಯವನ್ನು ಮಾಡಿರುವುದು ಕಂಡು ಬರುತ್ತದೆ.

ನಗರಕ್ಕೆ ದೂರವಾಗಿರುವ ಗ್ರಾಮಗಳ ಶೇ.೯೦ರಷ್ಟು ಹಿರಿಯ ನಾಗರೀಕರು ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.೧೦ರಷ್ಟು ಹಿರಿಯ ನಾಗರಿಕರು ಗಂಡು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿಲ್ಲ ಅವರು ಮನೆಯ ಕೃಷಿ

ಕೆಲಸಗಳಲ್ಲಿ ಭಾಗಿಯಾಗಬೇಕು ಮತ್ತು ಕುಲಕಸುಬನ್ನು ಅನುಸರಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂದಿಸಿದಂತೆ ಶೇ.೪೦ ರಷ್ಟು ಹಿರಿಯ ನಾಗರಿಕರು ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿದೆ ಎಂದು ಹೇಳಿದ್ದಾರೆ. ಶೇ.೬೦ ರಷ್ಟು ಜನ ಹಿರಿಯ ನಾಗರಿಕರು ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿಲ್ಲ ಎಂದು ಹೇಳಿದ್ದಾರೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಕೆಲವೇ ನಾಗರೀಕರು ಗಂಡು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಲಿಂಗತಾರತಮ್ಯ ಭಾವನೆ ಹೊಂದಿದ್ದಾರೆ. ಆದರೆ ನಗರದಿಂದ ದೂರವಿರುವ ಗ್ರಾಮಗಳ ಹೆಚ್ಚು ನಾಗರೀಕರು ತಮ್ಮ ಗಂಡು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಹೆಚ್ಚು ಲಿಂಗತಾರತಮ್ಯ ಭಾವನೆಯನ್ನು ಹೊಂದಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಗ್ರಾಮ ಮತ್ತು ನಗರ ಅಂತರವು ಹಿರಿಯ ನಾಗರೀಕರ ಭಾವನೆ ಮತ್ತು ಅಭಿಪ್ರಾಯಗಳ ಮೇಲೆ ನೇರ ಪ್ರಭಾವ ಬೀರುವ ಅಂಶಗಳಾಗಿವೆ ಎಂಬುದು ತಿಳಿದುಬಂದಿದೆ. ಲಿಂಗತಾರತಮ್ಯಕ್ಕೆ ಕಾರಣ ಕೇಳಿದಾಗ ಹೆಣ್ಣುಮಕ್ಕಳು ಕೃಷಿ ಕೆಲಸಗಳನ್ನು ಮಾಡಬೇಕು, ಶಿಕ್ಷಣ ಕೊಡಿಸುವುದರಿಂದ ನಮಗೇನು ಲಾಭವಿಲ್ಲ, ಹೆಣ್ಣುಮಕ್ಕಳು ಅಡುಗೆ, ಮನೆ ಕೆಲಸಗಳನ್ನು ಮಾಡಬೇಕು, ಹೆಣ್ಣುಮಕ್ಕಳು ಎಷ್ಟೇ ವಿದ್ಯಾವಂತರಾದರು ಮಡಿಕೆ ಗೀಚುವುದು ತಪ್ಪುವುದಿಲ್ಲ ಎಂಬ ನಿರಾಶಾದಾಯಕ ಉತ್ತರಗಳನ್ನು ನೀಡಿದ್ದಾರೆ. ಹೆಣ್ಣಿನ ಶಿಕ್ಷಣದ ಬಗ್ಗೆ ಜನರಲ್ಲಿ ಸಾಂಪ್ರದಾಯಿಕ ಮನೋಭಾವನೆ ಬದಲಾಗಿಲ್ಲ. ಆಧುನಿಕ ಮನೋ ಭಾವನೆಯುಂಟಾಗಲು, ಆಧುನಿಕ ಶಿಕ್ಷಣ, ನಗರೀಕರಣ ಮತ್ತು ಕೈಗಾರಿಕೀಕರಣವು ಬಹಳ ಪ್ರಮುಖ ಪಾತ್ರವಹಿಸುತ್ತದೆ.

ಅಧ್ಯಾಯ ೬ರಲ್ಲಿ ಮಹಿಳೆಯರ ಶೈಕ್ಷಣಿಕ ಸಮಸ್ಯೆಯನ್ನು ಅರಿಯಲು ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ವಿಧ್ಯಾರ್ಥಿಗಳನ್ನು ಸಂದರ್ಶನ ಮಾಡಲಾಗಿದೆ. ಅವರು ನೀಡಿದ ಮಾಹಿತಿಯ ಅಧಾರದ ಮೇಲೆ ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳೆಯರ ಶಿಕ್ಷಣಕ್ಕೆ ಇರುವ ಸಮಸ್ಯೆಯನ್ನು ಅರಿಯಲಾಗಿದೆ.

ಪಟ್ಟಿ ೫.೧ರಲ್ಲಿ ತಿಳಿದು ಬರುವುದೇನೆಂದರೆ, ನಗರದಿಂದ ದೂರ ಇರುವ ಸರ್ಕಾರಿ ಶಾಲೆಗಳಲ್ಲಿ ಶಾಲೆ ಬಿಟ್ಟುಬಿಡುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಿರುವುದು ಕಂಡು ಬರುತ್ತದೆ. ಇದಕ್ಕೆ ಪ್ರಮುಖ ಕಾರಣ ಸರ್ಕಾರಿ ಶಾಲಾ ಮಕ್ಕಳ ಪೋಷಕರಲ್ಲಿರುವ ಅಜ್ಞಾನ, ಬಡತನವು ಹೆಣ್ಣುಮಕ್ಕಳ ಶಿಕ್ಷಣಕ್ಕೆ ತೊಂದರೆಯನ್ನು ಉಂಟು ಮಾಡಿದೆ. ಅವರು ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಹೆಚ್ಚು ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ.

ಆದರೆ ನಗರದಿಂದ ದೂರವಿರುವ ಖಾಸಗಿ ಶಾಲಾ ಪೋಷಕರಲ್ಲಿನ ತಕ್ಕಮಟ್ಟಿನ ಆರ್ಥಿಕ ಸುಸ್ಥಿತಿ ಮತ್ತು ಅವರ ಶಿಕ್ಷಣ ಮಟ್ಟವು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಸಹಕರಿಸುತ್ತದೆ.

ನಗರಕ್ಕೆ ಹತ್ತಿರವಿರುವ ಸರ್ಕಾರಿ ಮತ್ತು ಖಾಸಗಿ ಶಾಲಾ ಮುಖ್ಯೋಪಾಧ್ಯಾಯರು ಶಾಲೆ ಬಿಟ್ಟು ಬಿಡುವ ಸಂಖ್ಯೆ ಶೇಕಡ ೦.೫ಎಂದು ಉತ್ತರಿಸಿದ್ದಾರೆ. ನಗರಕ್ಕೆ ಹತ್ತಿರವಿರುವ ಪೋಷಕರ ಉತ್ತಮ ಆರ್ಥಿಕ ಸ್ಥಿತಿಗತಿಗಳು ಮತ್ತು ಪೋಷಕರ ಉತ್ತಮ ಶಿಕ್ಷಣ ಮಟ್ಟವು ಮಹಿಳಾ ಶಿಕ್ಷಣದ ಮಹತ್ವದ ಬಗ್ಗೆ ಜಾಗೃತಿಯ ಕಾರಣ ಅವರು ಶಿಕ್ಷಣ ನೀಡುವಲ್ಲಿ ಲಿಂಗತಾರತಮ್ಯ ಮಾಡದೆ ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಾರೆ.

ಗ್ರಾಮ–ನಗರ ಅಂತರ ಮತ್ತು ಪೋಷಕರ ಶಿಕ್ಷಣ ಮಟ್ಟ ಮತ್ತು ಉತ್ತಮ ಶಾಲಾ ಕಾಲೇಜು, ಹಾಸ್ಟೆಲ್, ಸಾರಿಗೆ ಸಂಪರ್ಕಗಳು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಪಟ್ಟಿ ೫.೨ರಲ್ಲಿ ಹೆಣ್ಣುಮಕ್ಕಳು ಶಾಲಾ ಶಿಕ್ಷಣದ ನಂತರ ಕಾಲೇಜು ಶಿಕ್ಷಣವನ್ನು ಮುಂದುವರಿಸುತ್ತಾರೆಯೇ ಎಂಬುದನ್ನು ಅರಿಯುವುದಾಗಿದೆ. ಈ ಪಟ್ಟಿಯಿಂದ ತಿಳಿದು ಬರುವುದೇನೆಂದರೆ ನಗರಕ್ಕೆ ಹತ್ತಿರವಿರುವ ಪೋಷಕರು ತಮ್ಮ ಮಗಳನ್ನು ಕಾಲೇಜಿಗೆ ಕಳುಹಿಸುತ್ತಾರೆ. ಆದರೆ ನಗರದಿಂದ ದೂರವಿರುವ ಗ್ರಾಮಗಳ ಹೆಚ್ಚು ಪೋಷಕರು ತಮ್ಮ ಹೆಣ್ಣುಮಕ್ಕಳ ಶಿಕ್ಷಣವನ್ನು ಶಾಲಾ ಶಿಕ್ಷಣದ ನಂತರ ಮುಂದುವರಿಸುವುದಿಲ್ಲ.

ಕಾಲೇಜುಗಳು ನಗರಗಳಲ್ಲಿ ಕೇಂದ್ರಿಕೃತವಾಗಿದ್ದು, ಉತ್ತಮ ಸಾರಿಗೆ ಸಂಪರ್ಕ ಸೌಲಭ್ಯಗಳು ಮತ್ತು ಹಾಸ್ಟೆಲ್‌ಗಳು ನಗರಕ್ಕೆ ಹತ್ತಿರವಿರುವ ಗ್ರಾಮಗಳ ಜನರಿಗೆ ಅನುಕೂಲಕರವಾಗಿವೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳ ಜನರು ಆಧುನೀಕರಣಕ್ಕೆ ಒಳಗಾಗಿದ್ದು, ಹೆಚ್ಚು ಶಿಕ್ಷಣ ಪಡೆದವರಾಗಿದ್ದಾರೆ. ಅವರು ತಮ್ಮ ಹೆಣ್ಣುಮಕ್ಕಳಿಗೆ ಕಾಲೇಜು ಶಿಕ್ಷಣವನ್ನು ನೀಡುವುದರ ಮೂಲಕ ಅವರ ಅಭಿವೃದ್ಧಿಗೆ ನೆರವಾಗುತ್ತಾರೆ.

ನಗರದಿಂದ ದೂರವಿರುವ ಗ್ರಾಮಗಳ ಜನರು ಹೆಚ್ಚು ವಿದ್ಯಾವಂತರಲ್ಲ. ಆದುನೀಕರಣದ ಪ್ರಭಾವಕ್ಕೆ ಒಳಗಾಗಿಲ್ಲ. ಎಷ್ಟೋ ಜನರಿಗೆ ಕಾಲೇಜು ವಾತಾವರಣದ ಬಗ್ಗೆ ಒಳ್ಳೆಯ ಭಾವನೆಯಿಲ್ಲ. ಅವರು ಸಿನಿಮಾ ಸಂಪರ್ಕ ಮಾಧ್ಯಮಗಳಲ್ಲಿ ಕಂಡು ಬರುವ ಕಾಲೇಜುಗಳ ವಾತಾವರಣವನ್ನು ನಿಜವೆಂದು ನಂಬಿ ಶಾಲಾ ಶಿಕ್ಷಣದ ನಂತರ ತಮ್ಮ ಹೆಣ್ಣುಮಕ್ಕಳನ್ನು ದೂರದ ಕಾಲೇಜುಗಳಿಗೆ ಕಳುಹಿಸುವುದಿಲ್ಲ. ಕಾಲೇಜಿಗೆ ತಮ್ಮ ಹೆಣ್ಣುಮಕ್ಕಳನ್ನು ಕಳುಹಿಸಲು ಸರಿಯಾದ ರಕ್ಷಣೆಯಿಲ್ಲ, ಹೆಣ್ಣುಮಕ್ಕಳು ಕೆಟ್ಟು ಹೋಗುತ್ತಾರೆ ಎಂಬ ಭಾವನೆಯಿದೆ. ದೂರದ ಗ್ರಾಮಗಳ ಜನರಿಗೆ ಉತ್ತಮ ಸಾರಿಗೆ ಸಂಪರ್ಕ ಮತ್ತು ಸ್ಥಳೀಯ ಮಟ್ಟದಲ್ಲಿ ಕಾಲೇಜುಗಳು

ಇಲ್ಲದೇಯಿರುವುದರಿಂದ ಸಹ ತಮ್ಮ ಹೆಣ್ಣುಮಕ್ಕಳ ಶಿಕ್ಷಣವನ್ನು ಶಾಲಾ ಶಿಕ್ಷಣದ ನಂತರ ಮೊಟುಕುಗೊಳಿಸಲು ಪ್ರಮುಖ ಕಾರಣವಾಗಿದೆ.

ಪಟ್ಟಿ ೫.೩ ಮತ್ತು ಪಟ್ಟಿ ೫.೪ ರಲ್ಲಿ ಮಹಿಳಾ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.

ನಗರಕ್ಕೆ ಹತ್ತಿರವಿರುವ ಗ್ರಾಮಗಳ ಮಹಿಳಾ ವಿದ್ಯಾರ್ಥಿಗಳು ನಮಗೆ ಮತ್ತು ನಮ್ಮ ಮನೆಯ ಗಂಡು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಹೆಚ್ಚು ತಾರತಮ್ಯ ಮಾಡುವುದಿಲ್ಲವೆಂದು ಹೇಳಿದ್ದಾರೆ.

ಆದರೆ ನಗರದಿಂದ ದೂರವಿರುವ ಗ್ರಾಮಗಳ ಶೇ.೯೦ ರಷ್ಟು ವಿದ್ಯಾರ್ಥಿಗಳು ನಮಗೆ ಮತ್ತು ನಮ್ಮ ಮನೆಯ ಗಂಡು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುತ್ತಾರೆ ಎಂದು ಉತ್ತರಿಸಿದ್ದಾರೆ. ಶೇ.೧೦ ರಷ್ಟು ಮಂದಿ ತಾರತಮ್ಯ ಮಾಡುವುದಿಲ್ಲವೆಂದು ಉತ್ತರಿಸಿದ್ದಾರೆ.

ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಕುಟುಂಬದ ಸ್ವರೂಪವು ಸಹ ಪ್ರಮುಖ ಪಾತ್ರವಹಿಸುತ್ತದೆ ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ.

ವಿಭಕ್ತ ಕುಟುಂಬಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಿದ್ದು, ಮಕ್ಕಳನ್ನು ಸಾಕಿ ಸಲುಹುವ ಹೊಣೆಗಾರಿಕೆ ತಂದೆ ತಾಯಿಯ ಮೇಲಿರುತ್ತದೆ. ಅವರು ತಮ್ಮ ಮಗನಿಗೆ ಮತ್ತು ಮಗಳಿಗೆ ಶಿಕ್ಷಣ ನೀಡುವಲ್ಲಿ ಹೆಚ್ಚು ತಾರತಮ್ಯ ಮಾಡುವುದಿಲ್ಲ.

ಅವಿಭಕ್ತ ಕುಟುಂಬಗಳಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಿದ್ದು ಮಕ್ಕಳನ್ನು ಸಾಕಿಸಲುಹುವ ಹೊಣೆಗಾರಿಕೆ ಕುಟುಂಬದ ಯಜಮಾನನ ಮೇಲಿರುತ್ತದೆ. ಅವರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಬದಲು ಆದಷ್ಟು ಬೇಗ ಹೆಣ್ಣುಮಕ್ಕಳಿಗೆ ಮದುವೆ ಮಾಡುತ್ತಾರೆ ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಹೆಚ್ಚು ತಾರತಮ್ಯ ಮಾಡುತ್ತಾರೆ.

ಗ್ರಾಮ–ನಗರ ಅಂತರ ಮತ್ತು ಕುಟುಂಬದ ಸ್ವರೂಪವು ಸಹ ಜನರ ಮಾನಸಿಕ ಭಾವನೆಗಳ ಮೇಲೆ ನೇರ ಪ್ರಭಾವ ಬೀರುವ ಅಂಶಗಳಾಗಿವೆ.

ಪಿತೃಪ್ರಧಾನ, ಪಿತೃವಂಶೀಯ, ಪಿತೃಸ್ಥಳೀಯ ಕುಟುಂಬಗಳಲ್ಲಿ ಹೆಚ್ಚು ಸ್ವಾತಂತ್ರ್ಯ ಸವಲತ್ತುಗಳು ಮೊದಲು ಗಂಡಿಗೆ ದೊರೆಯುತ್ತವೆ. ಗಂಡುಮಕ್ಕಳು ಹುಟ್ಟಿ ಬೆಳೆದು ಶಿಕ್ಷಣ ಪಡೆದು ಕುಟುಂಬಕ್ಕೆ ಆದಾಯ ತರುತ್ತಾರೆ ಎಂಬ ಮನೋಭಾವನೆ ಹೆಚ್ಚು ಅನಕ್ಷರಸ್ಥ ಗ್ರಾಮೀಣರಲ್ಲಿ ಇರುವುದರಿಂದ ಗಂಡುಮಕ್ಕಳಿಗೆ ಎಲ್ಲಾ ಅವಕಾಶಗಳನ್ನು ಸವಲತ್ತುಗಳನ್ನು ನೀಡುತ್ತಾರೆ. ಹೆಣ್ಣುಮಕ್ಕಳು ಮದುವೆಯ ನಂತರ ಗಂಡನ ಮನೆಗೆ ಹೋಗುವುದರಿಂದ ಅವಳಿಗೆ ಶಿಕ್ಷಣ ಕೊಡಿಸುವುದು ಪಕ್ಕದ ಮನೆಯ

ಗಿಡಕ್ಕೆ ನೀರೆರೆದಂತೆ ಎಂಬ ಭಾವನೆಯಿದೆ. ಹೆಣ್ಣಿನ ಶಿಕ್ಷಣದ ಲಾಭ ಅವಳ ಗಂಡನ ಮನೆಗೆ ದೊರೆಯುತ್ತದೆಯೇ ವಿನಃ ಹುಟ್ಟಿದ ಮನೆಗಲ್ಲವೆಂಬ ಭಾವನೆ ಹೆಚ್ಚು ಅನಕ್ಷರಸ್ಥ ಗ್ರಾಮೀಣರಲ್ಲಿ ಇದೆ. ಅನಕ್ಷರಸ್ಥ ಗ್ರಾಮೀಣರು ಮಗನಿಗೆ ಶಿಕ್ಷಣ ಕೊಡಿಸಲು ತೋರುವ ಧಾರಾಳತನವನ್ನು ಮಗಳಿಗೆ ಶಿಕ್ಷಣ ಕೊಡಿಸುವುದರಲ್ಲಿ ತೋರುವುದಿಲ್ಲ. ಮಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಜಾರಿಕೆಯ ಉತ್ತರಗಳನ್ನು ನೀಡುತ್ತಾರೆ. ಅವುಗಳೆಂದರೆ ಶಿಕ್ಷಣದಿಂದ ಮಗಳಿಗೆ ಉಪಯೋಗವಿಲ್ಲ, ಮಗಳು ಮನೆಕೆಲಸಗಳನ್ನು ಮಾಡಬೇಕಾಗುತ್ತದೆ, ದೂರದ ಊರಿಗೆ ಹೋಗಲು ತೊಂದರೆ, ಆರ್ಥಿಕ ತೊಂದರೆಗಳು, ದುಬಾರಿ ವೆಚ್ಚ ಎಂಬ ಉತ್ತರಗಳನ್ನು ನೀಡುವುದರ ಮೂಲಕ, ಮಗಳ ಮತ್ತು ಮಗನ ಶಿಕ್ಷಣದ ನಡುವೆ ಲಿಂಗತಾರತಮ್ಯವನ್ನು ಮಾಡುತ್ತಾರೆ.

ಅಧ್ಯಾಯ ೭ರಲ್ಲಿ ಭಾರತದಲ್ಲಿ ಸಾಕ್ಷರತೆಯ ಪರಿಶೀಲನೆಃ ಲಿಂಗಸಂಬಂಧದ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಭಾರತ ದೇಶ ಸ್ವಾತಂತ್ರ್ಯನಂತರ ಪುರುಷರ ಮತ್ತು ಮಹಿಳೆಯರ ಶಿಕ್ಷಣಕ್ಕೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುತ್ತಿದೆ. ಜಾಗತೀಕರಣದ ನಂತರ ಮಹಿಳಾ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ಕೆಲವು ಸರ್ಕಾರದ ಆದೇಶಗಳು ಮಹಿಳಾ ಶಿಕ್ಷಣಕ್ಕೆ ಮಾರಕವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ ವಿದ್ಯಾರ್ಥಿಗಳಿದ್ದರೆ ಶಾಲೆಗಳನ್ನು ಮುಚ್ಚುವಂತೆ ಸರ್ಕಾರ ಆದೇಶ ಮಾಡಿರುವುದರಿಂದ ಆ ಗ್ರಾಮಗಳ ಹೆಣ್ಣುಮಕ್ಕಳನ್ನು ಹೆಚ್ಚಿನ ಪೋಷಕರು ಪಕ್ಕದ, ನೆರೆ ಗ್ರಾಮಗಳಿಗೆ ಶಾಲೆಗೆ ಕಳುಹಿಸದೆ ಶಾಲೆಗಳನ್ನು ಬಿಡಿಸುವ ಸಂಖ್ಯೆ ಹೆಚ್ಚುತ್ತಿದೆ. ಆಂಗ್ಲ ಶಾಲೆಗಳಿದ್ದರೂ ಹೆಚ್ಚಿನ ಸಂದರ್ಭಗಳಲ್ಲಿ ಹೆಣ್ಣುಮಕ್ಕಳನ್ನು ದುಬಾರಿ ಶುಲ್ಕ ನೀಡಿ ಆಂಗ್ಲ ಶಾಲೆಗಳಿಗೆ ಕಳುಹಿಸಲು ಗ್ರಾಮೀಣ ಜನರಿಗೆ ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಸಮಾಜದಲ್ಲಿ ಕೆಲವು ಪೋಷಕರು ತಮ್ಮ ಮಗನನ್ನು ದುಬಾರಿ ಶುಲ್ಕ ತೆತ್ತಾದರೂ ಆಂಗ್ಲ ಶಾಲೆಗೆ ಕಳುಹಿಸುವುದು, ತಮ್ಮ ಮಗಳನ್ನು ಸರ್ಕಾರಿ ಶಾಲೆಗೆ ಕಳುಹಿಸುವುದನ್ನು ನೋಡಬಹುದು. ಕೆಲ ಕುಟುಂಬಗಳಲ್ಲಿ ಮಗಳನ್ನು ಶಾಲೆಗೆ ಕಳುಹಿಸದೆ ಮನೆ ಕೆಲಸಗಳನ್ನು ಮಾಡಲು ಮನೆಯಲ್ಲಿರಿಸಿರುವುದು ಕಂಡುಬರುತ್ತದೆ.

ಅಧ್ಯಯನದಲ್ಲಿ ಕಂಡು ಬಂದ ವಿಶೇಷತೆಗಳು

ಅಧ್ಯಯನದಲ್ಲಿ ಕಂಡು ಬಂದ ವಿಶೇಷತೆಗಳೇನೆಂದರೆ ಮಹಿಳಾ ಶಿಕ್ಷಣ ಅಸಮಾನತೆಗೆ ಲಿಂಗತಾರತಮ್ಯ ಧೋರಣೆಯೇ ಮೂಲಕಾರಣ. ಈ ಧೋರಣೆಗೆ ಪ್ರಮುಖ ಕಾರಣ ಪಿತೃಪ್ರಾಧಾನ್ಯತೆ. ಗ್ರಾಮೀಣ ಮಹಿಳೆಯರ ಶಿಕ್ಷಣವನ್ನು ಪ್ರಭಾವಿಸುವ ಅಂಶವಾಗಿ ಗ್ರಾಮದ ಭೌಗೋಳಿಕ ನೆಲೆಯ(ಗ್ರಾಮ–ನಗರ ಅಂತರ) ಕಂಡುಬರುತ್ತದೆ.

ಗ್ರಾಮಗಳು ನಗರ ಪ್ರದೇಶಕ್ಕೆ ಹತ್ತಿರವಿದ್ದರೆ ಮಹಿಳೆಯರು ಹೆಚ್ಚು ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ. ಈ ಗ್ರಾಮಗಳಲ್ಲಿ ಮಹಿಳಾ ಸಾಕ್ಷರತೆಯ ಮಟ್ಟ ಹೆಚ್ಚಾಗಿ ಕಂಡು ಬರುತ್ತದೆ.

ಗ್ರಾಮಗಳು ನಗರ ಪ್ರದೇಶದಿಂದ ದೂರವಿದ್ದರೆ ಮಹಿಳೆಯರು ಹೆಚ್ಚು ಶಿಕ್ಷಣ ಪಡೆಯಲು ಸಾಧ್ಯವಿಲ್ಲ. ನಗರದಿಂದ ದೂರವಿರುವ ಗ್ರಾಮಗಳ ಮಹಿಳೆಯರ ಶಿಕ್ಷಣ ಮಟ್ಟ ಕೆಳಮಟ್ಟದಲ್ಲಿರುವುದು ಕಂಡುಬಂದಿದೆ.

ನಗರ ಪ್ರದೇಶಕ್ಕೆ ಹತ್ತಿವಿರುವ ಗ್ರಾಮ ಪಂಚಾಯಿತಿಯ ಗ್ರಾಮಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದುವರಿದ ಗ್ರಾಮಗಳಾಗಿ, ಈ ಗ್ರಾಮಗಳ ಜನರ ಜೀವನ ಮಟ್ಟ ತುಂಬಾ ಸುಧಾರಿಸಿದ್ದು ಉತ್ತಮ ಮಟ್ಟದಲ್ಲಿದೆ. ಈ ಗ್ರಾಮಗಳ ಜನರು ಕೈಗಾರಿಕೀಕರಣ ಮತ್ತು ನಗರೀಕರಣದ ಪ್ರಭಾವಕ್ಕೆ ಒಳಗಾಗಿದೆ. ಆದುದರಿಂದ ಅವರು ಆಧುನಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಗ್ರಾಮಗಳ ಜನರು ಕೃಷಿಯೇತರ ವೃತ್ತಿಗಳನ್ನು ಅನುಸರಿಸುತ್ತಾರೆ. ಕೈಗಾರಿಕೆಗಳಲ್ಲಿ, ವ್ಯಾಪಾರ, ವಾಣಿಜ ಮತ್ತು ಸಾರ್ವಜನಿಕ ವಲಯಗಳಲ್ಲಿ ದುಡಿಯುವವರಾಗಿದ್ದು ಅವು ಕೃಷಿಗೆ ಹೋಲಿಸಿದಾಗ ಲಾಭದಾಯಕ ವೃತ್ತಿಗಳಾಗಿವೆ. ಆದುದರಿಂದ ಅವರ ಜೀವನ ಮಟ್ಟ ಉತ್ತಮವಾಗಿದೆ. ಈ ಗ್ರಾಮಗಳಲ್ಲಿ ಜಾತಿಗಿಂತ ಆಧುನಿಕತೆ ಹೆಚ್ಚು ಪ್ರಭಾವಿ ಅಂಶವಾಗಿ ಕಂಡುಬರುತ್ತದೆ. ಈ ಗ್ರಾಮಗಳಲ್ಲಿ ಜನರ ಶಿಕ್ಷಣ ಮಟ್ಟ ಉತ್ತಮವಾಗಿದ್ದು ಹೆಚ್ಚಾಗಿ ವಿಭಕ್ತ ಕುಟುಂಬಗಳು ಕಂಡು ಬರುತ್ತವೆ.

ಈ ಗ್ರಾಮಗಳ ಜನರು ಕೈಗಾರಿಕೆ ಮತ್ತು ತೃತೀಯರಂಗದಲ್ಲಿ ತೊಡಗಿಸಿ ಕೊಂಡಿದ್ದು ಅವರ ಆದಾಯ ಮಟ್ಟವು ಉತ್ತಮವಾಗಿದೆ. ಈ ಗ್ರಾಮಗಳ ಹೆಚ್ಚಿನ ಮಹಿಳೆಯರ ಶಿಕ್ಷಣ ಉತ್ತಮವಾಗಿದೆ. ಈ ಗ್ರಾಮಗಳ ಜನರು ಮಹಿಳಾ ಶಿಕ್ಷಣದ ಉಪಯೋಗಗಳನ್ನು ಚೆನ್ನಾಗಿ ಅರಿತಿದ್ದಾರೆ. ಅವರು ಮಗನಿಗೆ ಮತ್ತು ಮಗಳಿಗೆ ಶಿಕ್ಷಣ ಕೊಡಿಸುವಲ್ಲಿ ಯಾವುದೇ ಲಿಂಗತಾರತಮ್ಯ ಮಾಡದಿರುವುದು ಕಂಡುಬರುತ್ತದೆ.

ನಗರದಿಂದ ದೂರವಿರುವ ಗ್ರಾಮಪಂಚಾಯಿತಿಯ ಗ್ರಾಮಗಳು ಹಿಂದುಳಿದ ಗ್ರಾಮಗಳಾಗಿವೆ. ಈ ಗ್ರಾಮಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದ ಗ್ರಾಮಗಳಾಗಿವೆ. ಈ ಗ್ರಾಮ ಗಳ ಪ್ರಮುಖ ಉದ್ಯೋಗ ಕೃಷಿ ಮತ್ತು ಕೃಷಿ ಸಂಬಂಧಿತವಾಗಿದೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳ ಜನರ ಜೀವನ ಮಟ್ಟಕ್ಕೆ ಹೋಲಿಸಿದರೆ ಈ ಗ್ರಾಮಗಳ ಜನರ ಜೀವನ ಮಟ್ಟ ಕೆಳಮಟ್ಟದಲ್ಲಿದೆ. ಈ ಗ್ರಾಮಗಳ ಮೇಲೆ ನಗರೀಕರಣ, ಕೈಗಾರೀಕೀಕರಣ ಪ್ರಭಾವಗಳು ಕಂಡು ಬರುವುದಿಲ್ಲ. ಆದುದರಿಂದ ಈ ಜನರಲ್ಲಿ ಆಧುನಿಕ ಮನೋಭಾವನೆಯು ಕಂಡುಬರುವುದಿಲ್ಲ.

ಈ ಗ್ರಾಮಗಳ ಜನರು ಸಂಪ್ರದಾಯಸ್ಥರಾಗಿದ್ದಾರೆ. ಈ ಗ್ರಾಮಗಳ ಮಹಿಳೆಯರ ಶಿಕ್ಷಣ ಮಟ್ಟವು ಉತ್ತಮವಾಗಿಲ್ಲ. ಈ ಗ್ರಾಮಗಳ ಹೆಚ್ಚಿನ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿವೆ. ಈ ಗ್ರಾಮದ ಜನರಲ್ಲಿ ಹೆಚ್ಚಾಗಿ ಲಿಂಗತಾರತಮ್ಯ ಭಾವನೆ ಕಂಡು ಬರುತ್ತದೆ. ಅವರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವ ಸಂದರ್ಭದಲ್ಲಿ ಗಂಡು ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡುವುದು ಮತ್ತು ವಿಶೇಷ ಆಧ್ಯತೆಯನ್ನು ನೀಡುವುದು ಕಂಡುಬರುತ್ತದೆ. ಆದರೆ ಹೆಣ್ಣು ಮಕ್ಕಳಿಗೆ ಕಡಿಮೆ ಶಿಕ್ಷಣ ನೀಡುವುದು. ಕೆಲವು ಕುಟುಂಬಗಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದೆ ಇರುವುದು ಕಂಡುಬರುತ್ತದೆ. ಶಿಕ್ಷಣ ನೀಡುವಲ್ಲಿ ಹೆಚ್ಚಿನ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುವುದು ಕಂಡುಬರುತ್ತದೆ. ಈ ಗ್ರಾಮಗಳ ಮಹಿಳೆಯರು ಹೆಚ್ಚಿನವರು ಅನಕ್ಷರಸ್ಥರು. ಈ ಗ್ರಾಮದ ಪೋಷಕರಿಗೆ ಮಹಿಳಾ ಶಿಕ್ಷಣ ಅನುಕೂಲಗಳು ತಿಳಿದಿಲ್ಲ. ಮಹಿಳಾ ಶಿಕ್ಷಣದ ವಿಚಾರಗಳು ನಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ಈ ಗ್ರಾಮಗಳಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಬೇಕಾದ ಅವಶ್ಯಕತೆ ಇದೆ.

ಈ ಅಧ್ಯಯನದಿಂದ ಕಂಡು ಬರುವ ವಿಷಯವೇನೆಂದರೆ ಗ್ರಾಮದ ಭೌಗೋಳಿಗ ನೆಲೆಯು ಜನರ ಮನೋಭಾವನೆಗಳ ಮೇಲೆ ನೇರ ಪ್ರಭಾವ ಬೀರುವ ಅಂಶವಾಗಿದೆ. ಮಹಿಳೆಯರ ಶಿಕ್ಷಣವನ್ನು ನಿರ್ಧರಿಸುವಲ್ಲಿ ಗ್ರಾಮದ ಭೌಗೋಳಿಗ ನೆಲೆಯು ಸಹ ಪ್ರಮುಖ ಅಂಶವಾಗಿದೆ ಎಂಬುದು ಈ ಅಧ್ಯಯನದಿಂದ ಕಂಡುಬರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪ್ರಮಾಣ ಕಡಿಮೆ ಇರುವುದಕ್ಕೆ ಅನೇಕ ಕಾರಣಗಳಿವೆ. ಸಂವಿಧಾನಾತ್ಮಕವಾಗಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿದ್ದರೂ, ಈಗ ಪ್ರೌಢ ಶಿಕ್ಷಣದವರೆಗೆ ಶಿಕ್ಷಣ ಉಚಿತವಾಗಿದ್ದರೂ ಕಲಿಯಲು ಶಾಲೆಗೆ ಹೋಗುವ ಸಮಯದಲ್ಲಿ ಮನೆ ಕೆಲಸಕ್ಕೆ, ಹೊರಗಿನ ಕೆಲಸಕ್ಕೆ ಮಗಳು ಜೊತೆ ನೀಡಿದರೆ ಕೆಲಸವೂ ಹಗುರ, ಹಣವನ್ನೂ ಸಂಪಾದನೆ ಮಾಡಬಹುದೆಂದು ಪೋಷಕರು ಯೋಚಿಸುತ್ತಾರೆ.

ಕುಟುಂಬದಲ್ಲಿ ಹೆಚ್ಚಿನ ಆರ್ಥಿಕ ಕಷ್ಟಗಳಿದ್ದರೆ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ನಿಲ್ಲಿಸಿ ಗಂಡು ಮಕ್ಕಳನ್ನು ಓದಲು ಕಳುಹಿಸುವ ಸಂಪ್ರದಾಯ ನಮ್ಮ ಹಿಂದುಳಿದ ಗ್ರಾಮಗಳಲ್ಲಿ ಇನ್ನೂ ಜೀವಂತವಾಗಿದೆ.

ಹಿಂದುಳಿದ ಗ್ರಾಮಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಕ್ಕದ ಹಳ್ಳಿಗಳಿಗೆ ಹೆಣ್ಣುಮಕ್ಕಳನ್ನು ಕಳುಹಿಸಲು ಸುರಕ್ಷತೆಯ ದೃಷ್ಟಿಯಿಂದ ಹೆದರುತ್ತಾರೆ. ಭಾರತೀಯ ಸಮಾಜದಲ್ಲಿ ಹೆಣ್ಣುಮಕ್ಕಳ 'ಶೀಲದ ಪರಿಕಲ್ಪನೆ, ಹೆಣ್ಣುಮಕ್ಕಳು ಮುಕ್ತವಾಗಿ ಸಮಾಜದಲ್ಲಿ ಬೆರೆಯುವ ಮತ್ತು ಬೆಳೆಯುವ ಸ್ವಾತಂತ್ರ್ಯವನ್ನು ಮೊಟುಕುಗೊಳಿಸುತ್ತದೆ. ಈ ನಿರ್ಬಂಧಗಳು ಸಹ ಗಂಡುಮಕ್ಕಳಂತೆ ಹೆಣ್ಣುಮಕ್ಕಳು

ಶಿಕ್ಷಣ ಪಡೆಯಲು ತೊಂದರೆಯನ್ನುಂಟು ಮಾಡುತ್ತದೆ. ಈಗಲೂ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳು ಋತುಮತಿಯಾದ ನಂತರ ಶಾಲೆಗೆ ಕಳುಹಿಸದೆ ಇರುವ ಪೋಷಕರ ಸಂಖ್ಯೆ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಹಿನ್ನಡೆಗೆ ಕಾರಣಗಳೆಂದರೆ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದಿರುವುದು, ಮಹಿಳಾ ಶಿಕ್ಷಕರ ಕೊರತೆಯೂ ಕಾರಣವಾಗಿದೆ.

ಪಿತೃಪ್ರಧಾನ, ಪಿತೃವಂಶೀಯ, ಪಿತೃಸ್ಥಳೀಯ ಕುಟುಂಬ ವ್ಯವಸ್ಥೆಗಳು ಭಾರತೀಯ ಸಮಾಜದಲ್ಲಿ ಕಂಡುಬರುತ್ತವೆ. ಶೇಕಡ ೫೦ ರಷ್ಟಕ್ಕೂ ಹೆಚ್ಚು ಭಾರತೀಯ ಕುಟುಂಬಗಳು ಪಿತೃಪ್ರಧಾನವಾಗಿವೆ. ಈ ಕುಟುಂಬ ವ್ಯವಸ್ಥೆ ಮತ್ತು ಸಮಾಜದಲ್ಲಿ ಸ್ತ್ರೀ ಪುರುಷರಿಗೆ ಸಂಬಂಧಿಸದೆ ಇರುವ ದ್ವಿಮುಖ ನೀತಿಗಳು ಸಾಮಾಜೀಕರಣದ ಪ್ರಕ್ರಿಯೆಯಲ್ಲಿಯೇ ಸ್ತ್ರೀ ಪುರುಷರ ಪಾತ್ರಗಳಲ್ಲಿ ಭಿನ್ನತೆಯನ್ನು ಸೃಷ್ಟಿಸುತ್ತದೆ. ಇವು ಭಾರತೀಯ ಸಮಾಜದಲ್ಲಿ ಬೇರೆ ಸಮಾಜಕ್ಕಿಂತ ಹೆಚ್ಚಿನ ಲಿಂಗತಾರತಮ್ಯವನ್ನು ಸೃಷ್ಟಿಸುತ್ತವೆ. ವಿಶೇಷವಾಗಿ ಲಿಂಗತಾರತಮ್ಯ ಮನೋಭಾವನೆ ನಗರವಾಸಿಗಳಿಗಿಂತ ಗ್ರಾಮೀಣ ಸಮಾಜದಲ್ಲಿ ಹೆಚ್ಚು. ಹಿಂದುಳಿದ ಗ್ರಾಮಗಳಲ್ಲಂತು ಇನ್ನೂ ಹೆಚ್ಚಾಗಿರುವುದು ಈ ಅಧ್ಯಯನದಿಂದ ಕಂಡು ಬರುತ್ತವೆ. ನಗರೀಕರಣ, ಆಧುನೀಕರಣ ಮತ್ತು ಕೈಗಾರಿಕೀಕರಣವು ಹೆಚ್ಚು ಪ್ರಭಾವ ಬೀರುವ ಅಂಶಗಳಾಗಿದ್ದು, ಈ ಪ್ರಕ್ರಿಯೆಗೆ ಹೆಚ್ಚಾಗಿ ಒಳಗಾಗುವವರು ನಗರವಾಸಿಗಳಾಗಿದ್ದಾರೆ. ಹಿಂದುಳಿದ ಗ್ರಾಮಗಳಲ್ಲಿ ಇವುಗಳ ಪ್ರಭಾವ ಅಷ್ಟಾಗಿ ಆಗಿಲ್ಲ. ಆದುದರಿಂದ ಗ್ರಾಮೀಣ ಜನರಲ್ಲಿ ವಿಶೇಷವಾಗಿ ಹಿಂದುಳಿದ ಗ್ರಾಮಗಳಲ್ಲಿ ಜನರ ಸಾಂಪ್ರದಾಯಿಕ ಮನೋಭಾವನೆ ಬದಲಾಗಿಲ್ಲ.

ಸಮಾಜದಲ್ಲಿ ಜಾಗತೀಕರಣದ ಪ್ರಭಾವ ನಗರ ಪ್ರದೇಶದ ಜನರ ಮೇಲೆ ಆದಷ್ಟು ವೇಗದಲ್ಲಿ ಗ್ರಾಮೀಣ ಜನರ ಮನೋಭಾವನೆಗಳು ಬದಲಾವಣೆಯಾಗುತ್ತಿಲ್ಲ ಎಂಬುದು ಸಂಶೋಧನೆಗಳಿಂದ ದೃಢಪಟ್ಟಿದೆ.

ಜಾಗತೀಕರಣದ ನಂತರ ಸ್ತ್ರೀ-ಪುರುಷರಿಗೆ ಸಮಾನ ಅವಕಾಶಗಳು ಕಂಡುಬರುತ್ತದೆ. ರಾಷ್ಟ್ರವು ಸಮಾನ ಅವಕಾಶಗಳನ್ನು ಸ್ತ್ರೀ-ಪುರುಷರಿಗೆ ಕಲ್ಪಿಸಿದೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ತ್ರೀ ಪುರುಷನಷ್ಟೇ ಸಮಾನ ಶಿಕ್ಷಣ ಪಡೆದು ದುಡಿಯುತ್ತಿರುವುದು ಕಂಡುಬರುತ್ತದೆ. ಆದರೆ ಪುರುಷರ ಸಂಖ್ಯೆಗೆ ಹೋಲಿಸಿದಾಗ ಸ್ತ್ರೀಯರ ಸಂಖ್ಯೆ ತೀರ ಕಡಿಮೆಯಿದೆ ಎಂಬುದು ಕಂಡುಬರುತ್ತದೆ. ಆಧುನಿಕ ಉನ್ನತ ಶಿಕ್ಷಣ ಪಡೆದುಕೊಳ್ಳುತ್ತಿರುವ ಮಹಿಳೆಯರಲ್ಲಿ ಮೇಲುಜಾತಿಯ ಮತ್ತು ಮೇಲ್ವರ್ಗದ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮಧ್ಯಮವರ್ಗದ, ಕೆಳವರ್ಗದ ಮತ್ತು ಕೆಳಜಾತಿಯ ಮಹಿಳೆಯರು ಇನ್ನೂ ಗಣನೀಯ ಮಟ್ಟದ ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಪಡಿದುಕೊಂಡಿಲ್ಲ. ಇದಕ್ಕೆ ಕಾರಣ ಬಡತನ, ಪೋಷಕರ ಅಜ್ಞಾನ ಮತ್ತು ಅವರಲ್ಲಿರುವ ಲಿಂಗತಾರತಮ್ಯದ ಧೋರಣೆಗಳೇ ಆಗಿವೆ.

ನಗರ ಸಮುದಾಯದ ಜನರು ವಿದ್ಯಾವಂತರು, ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರು, ತಮ್ಮ ಗಂಡು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಹೆಚ್ಚಿನ ತಾರತಮ್ಯಮಾಡದೆ ಸಮಾನ ಶಿಕ್ಷಣವನ್ನು ನೀಡುತ್ತಾರೆ. ಜಾಗತೀಕರಣದ ಪರಿಣಾಮವು ಗ್ರಾಮ ಸಮುದಾಯಕ್ಕಿಂತ ನಗರ ಸಮುದಾಯಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರಿದೆ. ಜಾಗತೀಕರಣದಿಂದಾಗಿ ಹೆಚ್ಚು ಪಾಶ್ಚ್ಯಾತೀಕರಣವುಂಟಾಗಿದೆ.

ಸುಪ್ರಸಿದ್ಧ ಸಮಾಜಶಾಸ್ತ್ರಜ್ಞರಾದ ಡಾ.ಎಂ.ಎನ್.ಶ್ರೀನಿವಾಸರ ಅಭಿಪ್ರಾಯದಂತೆ ಪಾಶ್ಚಾತೀಕರಣವು ಬ್ರಿಟಿಷರ ಆಡಳಿತದಲ್ಲೇ ಉಂಟಾಯಿತಾದರು ಅದರ ತೀವ್ರತೆ ಜಾಗತೀಕರಣದ ನಂತರ ಎಲ್ಲಾ ಸಮುದಾಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇಡೀ ವಿಶ್ವವನ್ನೇ ಒಂದಾಗಿ ನೋಡುವ ಭಾವನೆ ಜಾಗತೀಕರಣದ ನಂತರ ಬಂದಿದೆ. ಜಾಗತೀಕರಣವು ಒಂದು ದೃಷ್ಟಿಯಲ್ಲಿ ಮಹಿಳೆಗೆ ಸಮಾನತೆಯ ಅವಕಾಶಗಳನ್ನು ಒದಗಿಸಿದೆ. ಇಂದಿನ ಜಾಗತಿಕ ಸಮಾಜದಲ್ಲಿ ಜೀವನಮಟ್ಟ ದುಬಾರಿಯಾಗಿದ್ದು, ಪುರುಷನೊಬ್ಬನ ದುಡಿಮೆಯೊಂದೆ ಕುಟುಂಬದ ನಿರ್ವಹಣೆಗೆ ಸಾಕಾಗುವುದಿಲ್ಲ. ಪುರುಷ ಮತ್ತು ಸ್ತ್ರೀಯರಿಬ್ಬರು ಕುಟುಂಬದ ಹೊರಗೆ ದುಡಿದು ಆರ್ಥಿಕ ಆದಾಯ ತರಬೇಕಾಗಿದೆ.

ಇಂದು ಕೆಳವರ್ಗದ, ಕೆಳಜಾತಿಯ, ಗ್ರಾಮ ಸಮುದಾಯದ ಮಹಿಳೆಯರಿಗಿಂತ ನಗರ ಸಮುದಾಯದ, ಮೇಲ್ ಜಾತಿಗಳ, ಮೇಲ್ವರ್ಗದ ಮಹಿಳೆಯರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣವನ್ನು ಪಡೆದುಕೊಂಡು ದುಡಿಯುತ್ತಿರುವುದು ಕಂಡುಬರುತ್ತದೆ. ಜಾಗತೀಕರಣದ ಲಾಭವನ್ನು ಹೆಚ್ಚು ಪಡೆದವರು ಗ್ರಾಮೀಣ ಮಹಿಳೆಯರಿಗಿಂತ ನಗರ ಮಹಿಳೆಯರೇ ಆಗಿದ್ದಾರೆ. ಗ್ರಾಮೀಣ ಪೋಷಕರಲ್ಲಿರುವ ಅನಕ್ಷರತೆಯಿಂದಾಗಿ ಮಹಿಳಾ ಶಿಕ್ಷಣದ ಲಾಭಗಳು ಅವರಿಗೆ ತಿಳಿದಿಲ್ಲ. ಅವರು ಇನ್ನೂ ಸಾಂಪ್ರದಾಯಿಕ ಹಿನ್ನೆಲೆಯಲ್ಲಿಯೇ ಯೋಚಿಸುತ್ತ ಲಿಂಗತಾರತಮ್ಯ ಧೋರಣೆಯನ್ನು ಅನುಸರಿಸುತ್ತಾರೆ.

ಭಾರತೀಯ ಮಹಿಳೆಯು ಹೆಚ್ಚು ಕಡಿಮೆ ಎಲ್ಲಾ ರಂಗದಲ್ಲಿಯೂ ಹೊರತಳ್ಳಲ್ಪಟ್ಟ ಮಹಿಳೆಯಾಗಿರುವುದನ್ನು ಇತಿಹಾಸ ಹೇಳುತ್ತದೆ. ಇದಕ್ಕೆ ಮುಖ್ಯ ಕಾರಣ ಪುರುಷ ಪ್ರಧಾನ ವ್ಯವಸ್ಥೆ ಎಂದು ಹೇಳಬಹುದು. ಹಿಂದಿನಿಂದಲೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪುರುಷರು ಪ್ರಾಬಲ್ಯ ಸಾಧಿಸಿ ಎಲ್ಲಾ ಅವಕಾಶಗಳನ್ನು ಪಡೆದು ಕೊಂಡುದರಿಂದಲೇ ಇಂದು ಈ ಎರಡು ಗುಂಪುಗಳಲ್ಲಿ ಅಸಮಾನತೆಯ ಜ್ವಾಲೆ ಕಂಡುಬರುತ್ತಿದೆ. ಶಿಕ್ಷಣದ ಅವಕಾಶಗಳಲ್ಲಿ ಮಹಿಳೆಯು ಪುರುಷರಿಗಿಂತ ಕಡಿಮೆ ಅವಕಾಶಗಳನ್ನು ಪಡೆದಿದ್ದಾಳೆ. ಅಲ್ಲದೆ ಸಾಕ್ಷರತೆಯಲ್ಲಿ ಮಹಿಳೆಯರಲ್ಲಿ ಹೆಚ್ಚಿನ ಹಿಂದುಳಿದಿರುವಿಕೆಯಿದೆ. ಕೇರಳ ರಾಜ್ಯ (ಮಹಿಳೆಯರ ಸಾಕ್ಷರತೆ ಶೇಕಡ ೧೦೦ ಮತ್ತು ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಪ್ರಮಾಣ

ಶೇಕಡ ೫೨) ಎರಡನೆಯದಾಗಿ ಪಂಜಾಬ್ ಈ ಎರಡು ರಾಜ್ಯಗಳಲ್ಲಿ ಮಹಿಳೆಯರ ಸಾಕ್ಷರತೆ ದೇಶದ ಸರಾಸರಿ ಸಾಕ್ಷರತೆಯಷ್ಟಿದೆ. ಆದರೆ, ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ಪುರುಷರಿಗಿಂತ ಕಡಿಮೆ ಇದೆ ಎನ್ನಬಹುದು. ಈ ರೀತಿಯ ಶಿಕ್ಷಣದ ಅಸಮಾನತೆ ಕೇವಲ ಸಾಕ್ಷರತೆಗೆ ಸೀಮಿತವಾಗಿರದೇ ವಿವಿಧ ರೀತಿಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇವರ ಪ್ರವೇಶಾವಕಾಶ ಪುರುಷರಿಗಿಂತ ಕಡಿಮೆ ಎಂದೇ ಹೇಳಬೇಕು. ಅದೇ ರೀತಿ ಭಾರತೀಯ ಮಹಿಳೆಯರಲ್ಲಿ ಪುರುಷರಿಗೆ ಅನುತ್ತೀರ್ಣತೆ ಮತ್ತು ಅಪಮೌಲ್ಯ ಹೆಚ್ಚೆಂದೇ ಹೇಳಬೇಕು. ಇದಕ್ಕೆ ಕಾರಣಗಳೆಂದರೆ ಬಡತನ, ತಂದೆ–ತಾಯಿಯರ ವಿದ್ಯಾಭ್ಯಾಸ ಮಟ್ಟ, ಅವರ ಕಡಿಮೆ ತಿಳುವಳಿಕೆ, ಪೂರ್ವಾಗ್ರಹ ಅರಿವು, ಸಂಪ್ರದಾಯ, ಸಾಮಾಜಿಕ ನಿಯಮಗಳು ಇತ್ಯಾದಿ.

ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ, ಲಿಂಗಭೇದವನ್ನು ನಿಶೇಧಿಸಿತಾದರೂ ವಾಸ್ತವ್ಯದಲ್ಲಿ ಮಹಿಳೆಯ ಶಿಕ್ಷಣ ನಾವೆಣಿಸಿದಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ೧೯೫೧ರಲ್ಲಿ ಶೇಕದ ೮.೮೬ ರಷ್ಟಿದ್ದ ಸಾಕ್ಷರತೆಯ ಪ್ರಮಾಣ, ೨೦೧೧ರಲ್ಲಿ ಶೇಕಡ ೬೫.೪೬ ರಷ್ಟಿದ್ದು ಈ ಸಮಾಜದಲ್ಲಿ ಶಿಕ್ಷಣ ಅವಕಾಶಗಳ ಬಳಕೆಯಲ್ಲಿ ಲಿಂಗ ತಾರತಮ್ಯ ಎಷ್ಟರ ಮಟ್ಟಿಗೆ ಕಾರ್ಯ ಪ್ರವೃತ್ತವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂಬುದಾಗಿ ಪ್ರೊ. ಆರ್. ಇಂದಿರಾ ಅಭಿಪ್ರಾಯಪಡುತ್ತಾರೆ (ಇಂದಿರಾ, ಆರ್., ೨೦೦೨: ೮೫).

ಇನ್ನು ಶೈಕ್ಷಣಿಕ ಕ್ಷೇತ್ರದಂತೆ ಆರ್ಥಿಕ ಕ್ಷೇತ್ರದಲ್ಲಿಯೂ ಮಹಿಳೆಯು ಪುರುಷರಿಗಿಂತ ಹಿಂದಿದ್ದು, ಸಾಮಾಜಿಕವಾಗಿ ಹೊರತಳ್ಳಲ್ಪಡುವಿಕೆಯ ಸಮಸ್ಯೆಗೆ ಗುರಿಯಾಗಿದ್ದಾಳೆ. ಇದಕ್ಕೆ ಹಿಂದಿನಿಂದಲೂ ಬಲವಾಗಿ ರೂಢಿಗತವಾಗಿ ಬಂದಿರುವ ಪುರುಷ ಯಜಮಾನಿಕೆ ಮತ್ತು ಮಹಿಳೆಯು ಅಬಲಳು ಎಂಬ ಕುರುಡು ನಂಬಿಕೆ. ಜೊತೆಗೆ ಸಮಾಜಶಾಸ್ತ್ರೀಯ ದೃಷ್ಟಿಯಿಂದ ನೋಡುವುದಾದರೆ ಭಾರತೀಯ ಸಮಾಜವು ಮೂಲತ: ಪಿತೃಪ್ರಧಾನ ಸಮಾಜವಾಗಿರುವುದರಿಂದ ಇಲ್ಲಿ ಆಸ್ತಿಯು ಗಂಡು ಮಕ್ಕಳ ಮೂಲಕ ವರ್ಗಾವಣೆಯಾಗುತ್ತಿರುವುದರಿಂದ ಪಿತ್ರಾರ್ಜಿತ ಆಸ್ತಿಗೆ ಗಂಡು ಮಕ್ಕಳೇ ಒಡೆಯರಾಗುತ್ತಾರೆ. ಹೆಣ್ಣುಮಕ್ಕಳಿಗೆ ಇದುವರೆಗೆ ಆಸ್ತಿಯ ಹಕ್ಕು ಇರಲಿಲ್ಲ. ಆದರೆ ಇತ್ತೀಚೆಗೆ ಹೆಣ್ಣುಮಕ್ಕಳಿಗೂ ಆಸ್ತಿಯ ಹಕ್ಕು ಇರುವುದರಿಂದ ಸ್ತ್ರೀಯು ಪುರುಷರಷ್ಟೇ ಆಸ್ತಿಗೆ ಹಕ್ಕು ಬದ್ಧಳಾಗಿದ್ದರೂ, ಸಂಪ್ರದಾಯಸ್ತ ಭಾರತೀಯ ಸಮಾಜದಲ್ಲಿ ಒಡೆತನ ಇನ್ನೂ ಲಭ್ಯವಾಗಿಲ್ಲದಿರುವುದು ಅಸಮಾನತೆಯನ್ನು ಎತ್ತಿ ತೋರಿಸುತ್ತದೆ.

ಹಿಂದಿಗಿಂತಲೂ ಈಗ ಮಹಿಳಾ ಶಿಕ್ಷಣ ಪ್ರಗತಿ ಹೊಂದುತ್ತಾ ಬಂದಿದೆ ಆದರೆ ಅದು ಮಂದಗತಿಯಲ್ಲಿ ಪ್ರಗತಿ ಹೊಂದುತ್ತಿದೆ ಎಂದು ಹೇಳಬಹುದು. ಜಾಗತೀಕರಣಗೊಳ್ಳುತ್ತಿರುವ ಸಮಯದಲ್ಲಿಯೂ ಮಹಿಳಾ ಶಿಕ್ಷಣ ಪ್ರಗತಿಯತ್ತ ಸಾಗುವಲ್ಲಿ ಹಲವಾರು ಸಮಸ್ಯೆಗಳಿರುತ್ತವೆ.

ಅವುಗಳೆಂದರೆ(೧) ಸಂಪ್ರದಾಯ(೨) ಬಾಲ್ಯ ವಿವಾಹ ಪದ್ಧತಿ, (೩) ಬಡತನ, (೪) ಪೋಷಕರ ಅಜ್ಞಾನ, (೫) ಪ್ರತ್ಯೇಕ ಮಹಿಳಾ ಶಾಲೆಗಳು ಇಲ್ಲದಿರುವುದು, (೬) ಮಹಿಳಾ ಶಿಕ್ಷಕರ ಕೊರತೆ ಮುಂತಾದವುಗಳಿಂದ ಗ್ರಾಮೀಣ ಮಹಿಳಾ ಶಿಕ್ಷಣವು ಬಹಳ ಕುಂಠಿತವಾಗುತ್ತಾ ಬಂದಿದೆ.

ಭಾರತದ ಸಂವಿಧಾನದ ಪ್ರಕಾರ ಸ್ತ್ರೀ ಪುರುಷರಿಬ್ಬರಿಗೂ ಸಮಾನತೆ, ಸ್ವಾತಂತ್ರ್ಯವನ್ನು ಮೂಲಭೂತ ಹಕ್ಕಾಗಿ ೧೯೫೦ ರಲ್ಲೆ ನೀಡಲಾಗಿದೆ. ವಿದ್ಯಾಭ್ಯಾಸದಲ್ಲಿ ಕೂಡ ಸರಿಸಮಾನವಾದ ಹಕ್ಕುಗಳಿವೆ. ಆದರೆ ವಾಸ್ತವದಲ್ಲಿ ಮಹಿಳಾ ಶಿಕ್ಷಣ ಮತ್ತು ಸಮಾನತೆ ಸಂವಿಧಾನದ ಕಡತದಲ್ಲೇ ಉಳಿದು ಹೋಗಿದೆ. ಹೆಣ್ಣುಮಕ್ಕಳಿಗೆ ಸಾಮಾಜಿಕ ಹಾಗೂ ಕೌಟುಂಬಿಕವಾಗಿ ಇರುವ ಹೆಚ್ಚಿನ ಜವಾಬ್ದಾರಿಗಳು ಹಾಗೂ ಮಿತಿಗಳಿಂದಾಗಿ ಗಂಡು ಮಕ್ಕಳ ವಿದ್ಯಾಭ್ಯಾಸದಷ್ಟು ಸರಾಗವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಸಾಗುತ್ತಿಲ್ಲ.

ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪ್ರಮಾಣ ಕಡಿಮೆ ಇರುವುದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ಅವರಿಗೆ ಓದುವ ಅವಕಾಶಗಳೇ ಮಿತವಾಗಿವೆ. ಚಿಕ್ಕ ವಯಸ್ಸಿನಲ್ಲೇ ಹೆಣ್ಣುಮಕ್ಕಳಿಗೆ ಮದುವೆ ಮಾಡಿ ಮುಂದೆ ಅವರು ಕೇವಲ ಮಕ್ಕಳನ್ನು ಹಡೆದು, ಅವನ್ನು ಸಾಕಿ ಅದಕ್ಕಾಗೇ ಬದುಕನ್ನು ಮುಡುಪಾಗಿಡಬೇಕೆಂಬ ದೃಷ್ಟಿ ಇಂದಿಗೂ ಗ್ರಾಮೀಣ ಪ್ರದೇಶದಲ್ಲಿದೆ. ಜೊತೆಗೆ ಗಂಡು ಮಗನಾದರೆ ಓದಿ ವಿದ್ಯಾಭ್ಯಾಸ ಪಡೆದು, ಕೆಲಸಕ್ಕೆ ಸೇರಿ ತಮ್ಮನ್ನು ಸಾಕುತ್ತಾನೆ. ಹೆಣ್ಣು ಮಗಳಾದರೆ ಮದುವೆಯಾಗಿ ಗಂಡನ ಮನೆಗೆ ಹೋಗುವವಳು. ಅವಳಿಗಾಗಿ ಮಾಡುವ ಖರ್ಚು ವ್ಯರ್ಥ ಎಂಬ ಭಾವನೆ ಹಲವರಲ್ಲಿದೆ. ಸಂವಿಧಾನಾತ್ಮಕವಾಗಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿದ್ದರೂ, ಈಗ ಪ್ರೌಢ ಶಿಕ್ಷಣದವರೆಗೆ ಶಿಕ್ಷಣ ಉಚಿತವಾಗಿದ್ದರೂ ಕಲಿಯಲು ಶಾಲೆಗೆ ಹೋಗುವ ಸಮಯದಲ್ಲಿ ಮನೆ ಕೆಲಸಕ್ಕೆ, ಹೊರಗಿನ ಕೆಲಸಕ್ಕೆ ಮಗಳು ಜೊತೆ ನೀಡಿದರೆ ಕೆಲಸವೂ ಹಗುರ, ಹಣವನ್ನೂ ಸಂಪಾದಿಸಬಹುದೆಂಬ ಯೋಜನೆ ಹಲವರದು. ಕುಟುಂಬದಲ್ಲಿ ಆರ್ಥಿಕವಾಗಿ ಹೆಚ್ಚಿನ ಹೊರೆ ಬೀಳುತ್ತಿದ್ದರೆ ಅದಕ್ಕೆ ಹೆಣ್ಣುಮಕ್ಕಳು ವಿದ್ಯಾಭ್ಯಾಸಕ್ಕೆ ಕತ್ತರಿ ಹಾಕಿ ಗಂಡು ಮಕ್ಕಳನ್ನು ಓದಲು ಕಳಿಸುವ ಸಂಪ್ರದಾಯ ನಮ್ಮ ಗ್ರಾಮೀಣ ಪ್ರದೇಶದಲ್ಲಿದೆ. ಶಿಕ್ಷಣದಿಂದ ವಂಚಿತರಾದ ಅತಿ ಹೆಚ್ಚು ಕೂಲಿ ಕಾರ್ಮಿಕ ಹೆಣ್ಣುಮಕ್ಕಳು ವಿಶ್ವದಲ್ಲೇ ಅತಿ ಹೆಚ್ಚಾಗಿ ಇರುವುದು ಭಾರತದ ಗ್ರಾಮೀಣ ಪ್ರದೇಶಗಳಲ್ಲಿ.

ಜೊತೆಗೆ ಗ್ರಾಮೀಣ ಪದೇಶದ ಹೆಣ್ಣುಮಕ್ಕಳು ಓದಿನೊಂದಿಗೆ ನಿತ್ಯದ ಬಿಡುವಿಲ್ಲದ ಕೆಲಸದಲ್ಲಿಯೂ ತೊಡಗಿಕೊಳ್ಳಬೇಕು. ಪೌಷ್ಟಿಕ ಆಹಾರದ ಕೊರತೆಯೊಂದಿಗೆ ಹೊಲಗದ್ದೆ, ಕಸ-ಮುಸುರೆ, ಕೊಟ್ಟಿಗೆ ಕೆಲಸಗಳಲ್ಲಿ ಭಾಗಿಯಾಗುತ್ತಲೇ ಶಾಲೆಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಾಗ ಆಯಾಸ, ಒತ್ತಡಗಳಾಗುವುದು ಸಹಜ. ಇದನ್ನೂ ಮೀರಿ ವಿದ್ಯಾಭ್ಯಾಸವನ್ನು ಮುಂದುವರೆಸಿದರೂ

ಶಾಲೆಗಳು ಹತ್ತಿರವಿದ್ದಾಗ ನಿರಾತಂಕದಿಂದ ಕಳಿಸುವ ಪೋಷಕರು, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಕ್ಕದ ಹಳ್ಳಿಗೆ ಕಳುಹಿಸಬೇಕಾದಾಗ ಸುರಕ್ಷತೆಯನ್ನು ದೃಷ್ಟಿಯಿಂದ ಹೆದರುತ್ತಾರೆ. ಬೆಳೆದ ಹೆಣ್ಣುಮಕ್ಕಳ 'ಶೀಲ ರಕ್ಷಣೆ' ಸದ್ಯದ ಸಮಾಜದಲ್ಲಿ ಪೋಷಕರನ್ನು ಕಾಡುವ ವಿಷಯ. ಭಾರತೀಯ ಸಮಾಜದಲ್ಲಿ ಹೆಣ್ಣುಮಕ್ಕಳ 'ಶೀಲ'ದ ಪರಿಕಲ್ಪನೆ ಅವರು ಮುಕ್ತವಾಗಿ ಸಮಾಜದಲ್ಲಿ ಬೆರೆಯದ, ಬೆಳೆಯದ ಒಂದು ಚೌಕಟ್ಟನ್ನು ಹಾಕಿಬಿಟ್ಟಿದೆ. ಅದೊಂದು ಆತಂಕ, ನೆಪವಾಗಿ ಹೆಣ್ಣುಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಗ್ರಾಮೀಣ ಪ್ರದೇಶದ ಜನರಿಗೆ 'ರಿಸ್ಕ್' ಅನ್ನಿಸಿದೆ. ಮಹಿಳೆಯರನ್ನು ಒಂದು ಆಸ್ತಿಯಾಗಿ ಪರಿಗಣಿಸುವ ಪರಿಪಾಠದಿಂದಾಗಿ ಅವಳನ್ನು ಸಂರಕ್ಷಿಸುವ ಕೆಲಸದ ಮುಖಾಂತರ ಅವಳ ಶೀಲವನ್ನು ಜೋಪಾನ ಮಾಡುವ ಕೆಲಸ ನಡೆಯುತ್ತಾ ಬಂದಿದೆ. ಎಲ್ಲಿಯವರೆಗೆ ಪಾತಿವ್ರತ್ಯದ, ಕೌಮಾರ್ಯದ, ಶೀಲದ ಕಲ್ಪನೆಗಳು ನಮ್ಮ ಸಮಾಜವನ್ನು ಬಿಟ್ಟು ಹೋಗುವುದಿಲ್ಲವೋ ಅಲ್ಲಿಯವರೆಗೆ ಮಹಿಳೆಯ ಸಬಲೀಕರಣ ಸಾಧ್ಯವಿಲ್ಲ. ಹೀಗಾಗಿ ಇಂದಿಗೂ ಬಹು ಜನರ ದೃಷ್ಟಿಯಲ್ಲಿ ಹೆಣ್ಣುಮಕ್ಕಳ ಶಿಕ್ಷಣವೆಂದರೆ ಮದುವೆಯಾಗುವವರೆಗೂ ಹೊತ್ತು ಕಳೆಯುವ ಸಾಧನ ಎಂಬಂತಹ ಭಾವನೆ ಇದೆ. ಈಗಲೂ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳು ಋತುಮತಿಯಾದ ನಂತರ ಶಾಲೆಗೆ ಕಳುಹಿಸುವುದನ್ನೆ ನಿಲ್ಲಿಸುವ ಪೋಷಕರೂ ಇದ್ದಾರೆ. ಹಬ್ಬ ಹರಿದಿನಗಳಲ್ಲಿ, ಮಾಸಿಕ ಸ್ರಾವದ ದಿನಗಳಲ್ಲಿ, ಮನೆಯಲ್ಲಿ ಹೆಚ್ಚಿನ ಕೆಲಸಗಳಿದ್ದಾಗ, ಹೆಣ್ಣುಮಕ್ಕಳು ಶಾಲೆಗೆ ಹೋಗದೇ ಉಳಿದು ಬಿಡುತ್ತಾರೆ. ಕುಟುಂಬದಲ್ಲಿ ಹೆಚ್ಚಿನ ಮಕ್ಕಳಿದ್ದ ಸಂದರ್ಭದಲ್ಲಿ ಹೆಚ್ಚಿನ ಹೊರೆ ಅನಿವಾರ್ಯವಾಗಿ ಹೆಣ್ಣುಮಕ್ಕಳ ಮೇಲೇ ಬೀಳುವುದರಿಂದ, ಹಾಗೂ ಪಕ್ಕದ ಹಳ್ಳಿಗಳಿಗೆ ಓದಲು ಹೋಗಬೇಕಾದಾಗ ಆಗುವ ಆಯಾಸದಿಂದ ಕೂಡ ಹೆಣ್ಣುಮಕ್ಕಳ ವಿದ್ಯಾಭ್ಯಾಸ ನಿರೀಕ್ಷಿತ ಪ್ರಮಾಣದಲ್ಲಿ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಹೆಣ್ಣುಮಕ್ಕಳಿಗೆ ನೀಡುತ್ತಿರುವ ಉಚಿತ ಸೈಕಲ್ ಯೋಜನೆ ಒಂದಿಷ್ಟು ಬದಲಾವಣೆಯನ್ನು ತಂದಿದ್ದರೂ ಅದು ಇನ್ನೂ ಲಕ್ಷಾಂತರ ಬಾಲೆಯರನ್ನು ತಲುಪಬೇಕಿದೆ.

ಸ್ತ್ರೀ ಶಿಕ್ಷಣಕ್ಕೆ ಮಹತ್ವದ ಸ್ಥಾನ ಕಲ್ಪಿಸಲು, ಬಾಲಕರ ಮತ್ತು ಬಾಲಕಿಯರ ಶಿಕ್ಷಣದಲ್ಲಿ ಅಂತರವನ್ನು ತಗ್ಗಿಸಲು ಹೆಚ್ಚು ಹೆಚ್ಚು ಶಾಲೆಗಳನ್ನು ಬಾಲಕಿಯರಿಗಾಗಿ ತೆರೆಯಬೇಕು. ಈವರೆಗೆ ಪ್ರಾಯೋಗಿಕವಾಗಿ ನಿರ್ಲಕ್ಷಿಸಲ್ಪಟ್ಟ ಗ್ರಾಮಾಂತರ ಪ್ರದೇಶಗಳಿಗೆ ವಿಶೇಷ ಪ್ರಾತಿನಿಧ್ಯವನ್ನು ಕೊಡಬೇಕು. ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯಲು ಸಾಧ್ಯವಾಗದೆ ಇರುವ ಕಡೆ ಸಹಶಿಕ್ಷಣಕ್ಕೆ ಉತ್ತೇಜನ ನೀಡಬೇಕು. ಸ್ತ್ರೀ ಶಿಕ್ಷಣವನ್ನು ಪ್ರೋತ್ಸಾಹಿಸಲು ಅಧಿಕ ಸಂಖ್ಯೆಯಲ್ಲಿ ಶಿಷ್ಯವೇತನ ಕೊಡಬೇಕು. ಪ್ರತಿಯೊಂದು ಶಿಕ್ಷಣ ಯೋಜನೆಗಳಲ್ಲಿ ಬಾಲಕಿಯರ ಶಿಕ್ಷಣಕ್ಕೆ ಪ್ರಥಮ ಪ್ರಾತಿನಿಧ್ಯತೆ ಕೊಟ್ಟರೆ ಇಡೀ ರಾಷ್ಟ್ರದ ಶೈಕ್ಷಣಿಕ ಮುನ್ನಡೆಯನ್ನು ಸಾಧಿಸುವುದು ಖಂಡಿತ.

ಜಾಗತೀಕರಣದ ತೀವ್ರ ಪರಿಣಾಮ ಗ್ರಾಮ ಸಮಾಜಕ್ಕಿಂತ ನಗರ ಸಮಾಜಗಳಲ್ಲಿ ಹೆಚ್ಚು ಕಂಡು ಬರುತ್ತದೆ. ಹಿಂದುಳಿದ ನಗರದಿಂದ ದೂರವಿರುವ ಗ್ರಾಮೀಣರಲ್ಲಿ ಇಂದಿಗೂ ಸಾಂಪ್ರದಾಯಿಕ ಮನೋಭಾವನೆಗಳು ಬದಲಾಗಿಲ್ಲ. ಜಾಗತೀಕರಣದ ನಂತರ ಸ್ತ್ರೀ-ಪುರುಷರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದೆ. ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸ್ತ್ರೀ ಪುರುಷನಷ್ಟೇ ಆದರೆ ಪುರುಷರ ಸಂಖ್ಯೆಗೆ ಹೋಲಿಸಿದಾಗ ಸ್ತ್ರೀಯ ಸಂಖ್ಯೆ ತೀರಾ ಕಡಿಮೆಯಿದೆ ಎಂಬುದು ಕಂಡು ಬರುತ್ತದೆ.

ಆಧುನಿಕ ಶಿಕ್ಷಣ ಪಡೆದುಕೊಳ್ಳುವಲ್ಲಿ ಗ್ರಾಮೀಣ ಮಹಿಳೆಯರಿಗಿಂತ ನಗರ ಮಹಿಳೆಯರೆ ಹೆಚ್ಚು. ಜಾಗತೀಕರಣದ ನಂತರವೂ ಸಹ ಆಧುನಿಕ ಶಿಕ್ಷಣ ಪಡೆದು ಕೊಳ್ಳುವುದು ಹೆಚ್ಚಾಗಿ ಮೇಲುಜಾತಿಯ ಮೇಲ್‌ವರ್ಗದ ಮಹಿಳೆಯರೇ ಆಗಿದ್ದಾರೆ. ಮಧ್ಯಮ ವರ್ಗದ, ಕೆಳವರ್ಗದ ಮತ್ತು ಕೆಳಜಾತಿಯ ಮಹಿಳೆಯರು ಇನ್ನೂ ಗಣನೀಯಮಟ್ಟದಲ್ಲಿ ಶಿಕ್ಷಣ ಮತ್ತು ಉದ್ಯೋಗಾವಕಾಶ ಗಳನ್ನು ಪಡೆದುಕೊಂಡಿಲ್ಲ. ಇದಕ್ಕೆ ಕಾರಣ ಗ್ರಾಮೀಣ ಪೋಷಕರಲ್ಲಿರುವ ಬಡತನ, ಅಜ್ಞಾನ, ಸಂಪ್ರದಾಯ, ಬಾಲ್ಯವಿವಾಹ ಪದ್ಧತಿ, ಪ್ರತ್ಯೇಕ ಮಹಿಳಾ ಶಾಲೆಗಳು ಇಲ್ಲದಿರುವುದು, ಮಹಿಳಾ ಶಿಕ್ಷಕಿಯರ ಕೊರತೆ ಮುಂತಾದವುಗಳಾಗಿವೆ. ಗ್ರಾಮೀಣ ಜನರಲ್ಲಿ ಮಹಿಳಾ ಶಿಕ್ಷಣದ ಮಹತ್ವದ ಬಗ್ಗೆ ಜಾಗೃತಿಯನ್ನು ಮೂಡಿಸಬೇಕಾದ ಅವಶ್ಯಕತೆ ತುಂಬಾ ಇದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ಪ್ರಶ್ನಾವಳಿಗಳು

೧

ಪರಾಮರ್ಶನ ಗ್ರಂಥಗಳು

೧. ಅತ್ರೇಯ ವಿ.ಬಿ. ಅಂಡ್ ಚುನಾಕಾಂತ್ ಎಸ್.ಆರ್.,(೧೯೯೬), **ಲಿಟ್ರೆಸಿ ಅಂಡ್ ಎಮ್‌ಪವರ್‌ಮೆಂಟ್**, ಸೇಜ್, ನ್ಯೂಡೆಲ್ಲಿ.

೨. ಅಪರ್ಣಾ ಬಸು, (೧೯೮೨), **ಎಸ್ಸೇಸ್ ಇನ್ ದಿ ಹಿಸ್ಟರಿ ಆಫ್ ಇಂಡಿಯನ್ ಎಜುಕೇಷನ್**, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂ, ನವದೆಹಲಿ.

೩. ಇಂದಿರಾ, ಆರ್, (೧೯೯೯), **ಸ್ತ್ರೀವಾದ ದಿಕ್ಸೂಚಿ**, ಸಮತಾ ಅಧ್ಯಯನ ಕೇಂದ್ರ, ಮೈಸೂರು.

೪. ಇರಾವತಿ ಕರ್ವೆ, (೧೯೭೧) **ಯುಗಾಂತ**, ಪುಣೆ.

೫. ಉಷಾದೇವಿ, ಎಂ.ಡಿ., (೨೦೦೩), *"ಗ್ರಾಸ್‌ರೂಟ್ಸ್ ಸ್ಟ್ರಕ್ಚರ್ ಇನ್ ಡಿಸೆಂಟ್ರಲೈಸ್ಡ್ ಮ್ಯಾನೇಜ್‌ಮೆಂಟ್ ಆಫ್ ಎಲಿಮೆಂಟರಿ ಎಜುಕೇಷನ್ ಇನ್ ಕರ್ನಾಟಕ: ಕ್ರಿಟಿಕಲ್ ಇಶ್ಯೂಸ್ ಇನ್ ಕೆಪಾಸಿಟಿ ಬಿಲ್ಡಿಂಗ್"*, **ಇಂಡಿಯನ್ ಸೋಶಿಯಲ್ ಸೈನ್ಸ್ ರಿವ್ಯೂ**, ವಾಲ್ಯೂಮ್-೫, ನವೆಂಬರ್-ಡಿಸೆಂಬರ್ ೨, ಸೇಜ್, ನ್ಯೂಡೆಲ್ಲಿ.

೬. ಕರ್ನಾಟಕ ಸರ್ಕಾರ (೧೯೯೯), **ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ**, ಯೋಜನಾ ಇಲಾಖೆ, ಬೆಂಗಳೂರು.

೭. ಕಾಲಿ ಕಿಂಕಲ್ ದತ್ತ, (೧೯೬೧), **ಸರ್ವೇ ಆಫ್ ಇಂಡಿಯಾನ ಸೋಶಿಯಲ್ ಲೈಫ್ ಅಂಡ್ ಎಕಾನಿಮಿಕ್ ಕಂಡಿಷನ್ ಇನ್** ಸೆಂಚುರಿ (೧೭೦೭-೧೮೧೩), (ಕಲ್ಕತ್ತ, ಫರ್ಮಾ ಕೆ.ಎಲ್. ಮುಖ್ಯೋಪಾಧ್ಯಾಯ, ಪು.೨೩-೪.

೮. ಗವರ್ನ್‌ಮೆಂಟ್ ಆಫ್ ಇಂಡಿಯಾ, (೧೯೯೨), **ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್** (ರಿವೈಸ್ಡ್), ನ್ಯೂಡೆಲ್ಲಿ.

೯. ಗಾಯಿತ್ರಿ, ಎನ್, **ಮಹಿಳೆ–ಬಿಡುಗಡೆಯ ಹಾದಿಯಲ್ಲಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೧.

೧೦. ಗುರುಲಿಂಗಯ್ಯ, ಎಂ., (೨೦೧೦), **ಸಾಮಾಜಿಕ ಹೊರತಳ್ಳುವಿಕೆಯ ಪರಿಕಲ್ಪನೆ**, ಮಂಟಪ ಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೧೧. ಗೋವಿಂದರಾಜು, (೨೦೦೪), *"ಕರ್ನಾಟಕದಲ್ಲಿ ಮಹಿಳಾ ಶಿಕ್ಷಣದ ಪ್ರಗತಿ: ಒಂದು ಅವಲೋಕನ"*, **ಮಹಿಳಾ ಅಧ್ಯಯನ**, ಸಂಪುಟ ೬, ಸಂಯುಕ್ತ ಸಂಚಿಕೆ ೧–೨, ಜನವರಿ–ಡಿಸೆಂಬರ್ ೨೦೦೪, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಚಂದ್ರಶೇಖರ್, ಟಿ.ಆರ್., (೨೦೧೦), **ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦,

೧೩. ಚಂದ್ರಶೇಖರ್, ಟಿ.ಆರ್., (೨೦೦೨), *"ಸಾಕ್ಷರತೆಯ ಲಿಂಗ ಸಂಬಂಧಿ ಆಯಾಮಗಳು: ಕರ್ನಾಟಕದಲ್ಲಿ ಮಹಿಳಾ ಸಾಕ್ಷರತೆಯ ಸ್ವರೂಪ"*, **ಮಹಿಳಾ ಅಧ್ಯಯನ**, ಸಂಪುಟ ೯, ಸಂಚಿಕೆ ೨, ಜುಲೈ–ಡಿಸೆಂಬರ್, ೨೦೦೭

೧೪. ಚಂದ್ರಶೇಖರ್, ಟಿ.ಆರ್., (೨೦೦೬), *"ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ"* **ಅಭಿವೃದ್ಧಿ ಅಧ್ಯಯ ಸಮಾಜ ವಿಜ್ಞಾನ ಪತ್ರಿಕೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೧೫. ಚಿದಾನಂದ ಸಾಲಿ (೨೦೧೦), **ಶಿಕ್ಷಣ ಮತ್ತು ಜೀವನಶೈಲಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೬. ಜಯರಾಮ್, ಎನ್, (೧೯೭೬), **ಎಜುಕೇಷನ್ ಅಂಡ್ ಸೋಷಿಯಲ್ ಸ್ಟಕ್ಚರ್**, ಪಿಎಚ್.ಡಿ. ಪ್ರೌಢ ಪ್ರಬಂಧ, ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೭. ಜಯರಾಮ್, ಎನ್, (೧೯೯೦), **ಸೋಷಿಯಾಲಜಿ ಆಫ್ ಎಜುಕೇಷನ್ ಇನ್ ಇಂಡಿಯ**, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ.

೧೮. ಜಂತಲಿ, ಆರ್.ಟಿ., (೨೦೦೦), **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು**, ಭಾರತ ಪ್ರಕಾಶನ, ಧಾರವಾಡ.

೧೯. ಡ್ರೀಜ್ ಜೇನ್ ಅಂಡ್ ಕಿಂಗ್‌ಡಂ, ಗೀತಾ ಗಾಂಧಿ (೨೦೦೧), **ಸ್ಕೂಲ್ ಪಾರ್ಟಿಸಿಪೇಷನ್ ಇನ್ ರೂರಲ್ ಇಂಡಿಯ**, ರೆವ್ಯೂ ಆಫ್ ಡೆವೆಲಪ್‌ಮೆಂಟ್ ಎಕನಾಮಿಕ್ಸ್.

೨೦. ಜೀನ್ ಡ್ರೀಜ್, ಅಮರ್ತ್ಯಸೇನ್, (೨೦೦೧), **ಇಂಡಿಯಾ ಡೆವಲಪ್‌ಮೆಂಟ್ ಅಂಡ್ ಪಾರ್ಟಿಸಿಪೇಷನ್**, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.

೨೧. ತಿಲಕ್, ಜೆ.ಬಿ.ಜೆ. (೨೦೦೦), **ಡಿಟರ್ಮಿನೇಷನ್ಸ್ ಆಫ್ ಹೌಸ್ ಹೋಲ್ಡ್ ಎಕ್ಸ್‌ಪೆಂಡಿಚರ್ ಆನ್ ಎಜುಕೇಶನ್ ಇನ್ ರೂರಲ್ ಇಂಡಿಯ: ಎ ಸ್ಟಡಿ ಬೇಸ್ಡ್ ಆನ್ ದಿ ಎ.ಸಿ.ಇ.ಆರ್.ಟಿ ಸರ್ವೆ ಆನ್ ಹ್ಯೂಮನ್ ಡೆವಲಪ್‌ಮೆಂಟ್ ಇನ್ ಇಂಡಿಯ**, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಷನ್, ನ್ಯೂ ಡೆಲ್ಲಿ.

೨೨. ನಾಗರಾಜ, ಪಿ. (೨೦೦೨), **ಶಿಕ್ಷಣದಲ್ಲಿ ತತ್ವಶಾಸ್ತ್ರ ಮತ್ತು ಸಮಾಜ ಶಾಸ್ತ್ರ**, ವಿದ್ಯಾನಿಧಿ ಪ್ರಕಾಶನ, ಗದಗ.

೨೩. ನಿಕೋಲ್ ಮ್ಯಾಕಿನಿಕೋಲ್, (೧೯೨೬), **ಪಂಡಿತ ರಮಾಬಾಯಿ ಡಿ.ಎನ್. ಡಿ.ಎನ್.ಬಿ. ವಾಲ್ಯೂಮ್**, ಕಲ್ಕತ್ತ ಅಸೋಶಿಯೇಷನ್ ಪ್ರೆಸ್

೨೪. ನೇಮಿಚಂದ್ರ, (೨೦೦೧), **ಮಹಿಳಾ ಅಧ್ಯಯನ**, ಅಂಕಿತ ಪುಸ್ತಕ, ಬೆಂಗಳೂರು.

೨೫. ಪ್ರತಿಮಾ ಕುಮಾರಿ, (೧೯೮೮), **ಚೇಂಜಿಂಗ್ ವ್ಯಾಲೂಸ್ ಅಮಾಂಗ್ ಯಂಗ್ ವುಮೆನ್**, ಮರು ಪ್ರಕಾಶನ, ದೆಹಲಿ.

೨೬. ಪ್ರಮಿಳಾ ಕಪೂರ್, (೧೯೭೩), **ಮ್ಯಾರೇಜ್ ಅಂಡ್ ವರ್ಕಿಂಗ್ ವುಮೆನ್ ಇನ್ ಇಂಡಿಯ**, ವಿಕಾಸ್ ಪ್ರಕಾಶನ, ನವದೆಹಲಿ.

೨೮. ಪ್ರೀತಿ ಶುಭಚಂದ್ರ,(೨೦೦೨), **ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಪ್ರೋಬ್ (೧೯೯೯), **ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜುಕೇಷನ್ ಇನ್ ಇಂಡಿಯಾ** (ಟೀಮ್), ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.

೩೦. ಮಂಗಳಾ, ಚಿ.ನ, (೧೯೯೦), **ಎಚ್ಚೆತ್ತ ಹಾದಿಯಲ್ಲಿ ಮಹಿಳೆ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೧. ಮಾಥುರ್, ವೈ.ಬಿ. (೧೯೭೩), **ವುಮೆನ್ಸ್ ಎಜುಕೇಷನ್ ಇನ್ ಇಂಡಿಯಾ, ೧೮೧೩–೧೯೬೬**, ಏಷಿಯಾ ಪಬ್ಲಿಷಿಂಗ್, ೧೯೭೩), ಬಾಂಬೆ.

೩೨. ಯಾದವಾಡ, ಎಸ್.ಬಿ., (೨೦೦೪), **ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ**, ವಿದ್ಯಾನಿಧಿ ಪ್ರಕಾಶನ, ಗದಗ.

೩೩. ರಂಗಸ್ವಾಮಿ ಬೆಳಕವಾಡಿ, (೨೦೧೦), **ಶಿಕ್ಷಣ ಸಮಾಜಶಾಸ್ತ್ರ**, ಸುಭಾಷ್ ಬುಕ್ ಸ್ಟೋರ್, ಬೆಂಗಳೂರು.

೩೪. ರುದ್ರೇಶ, ಬಿ.ಎಸ್., (೨೦೦೪), **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ**, ವಿದ್ಯಾನಿದಿ ಪ್ರಕಾಶನ, ಗದಗ.

೩೫. ರೂಪ ಹಾಸನ, (೨೦೧೦), **ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು**, ಮಂಟಪ ಮಾಲೆ, ೧೯೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ.೧೦-೧೪.

೩೬. ರೇಖಾ ಕೌಲ್, (೧೯೯೩), **ಕ್ಯಾಸ್ಟ್, ಕ್ಲಾಸ್ ಅಂಡ್ ಎಜುಕೇಷನ್**, ಸೇಜ್, ನ್ಯೂಡೆಲ್ಲಿ.

೩೭. ರೇಖಾ ವಜೀರ್, (೨೦೦೦), **ದಿ ಜೆಂಡರ್ ಗ್ಯಾಪ್ಸ್ ಇನ್ ಬೇಸಿಕ್ ಎಜುಕೇಷನ್ ಎನ್.ಜಿ.ಓ. ಆಸ್ ಚೇಂಜ್ ಏಜನ್ಸಿ**, ಸೇಜ್, ನ್ಯೂಡೆಲ್ಲಿ.

೩೮. ಲಕ್ಷ್ಮೀನಾರಾಯಣ, ಎಚ್.ಡಿ.(೧೯೯೮), ನಗರ ಸಮಾಜಶಾಸ್ತ, ಚಂದ್ರು ಪ್ರಕಾಶನ, ಬೆಂಗಳೂರು.

೩೯. ಲೀಲಾ ಪಾಟೀಲ(ಮರಾಠಿಯಲ್ಲಿ), ಕನ್ನಡಕ್ಕೆ ಡಾ.ವಿಠಲರಾವ್ ಟಿ. ಗಾಯಕ್ವಾಡ್, (೨೦೦೯), **ಭಾರತೀಯ ಸ್ತ್ರೀ ಜೀವನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ಶಂಕರರಾವ್, ಚ.ನ., (೨೦೦೩) **ಸಮಾಜಶಾಸ್ತ್ರ**, ಜೈಭಾರತ್ ಪ್ರಕಾಶನ, ಮಂಗಳೂರು.

೪೧. ಶಾಂತಾ ಅಸ್ಟಿಗೆ, (೨೦೦೪), *"ಮೂರನೆಯ ಜಗತ್ತಿನ ರಾಷ್ಟ್ರಗಳಲ್ಲಿ ಮಹಿಳೆ ಮತ್ತು ಶೈಕ್ಷಣಿಕ ಆಯಾಮಗಳು"*, **ಮಹಿಳಾ ಅಧ್ಯಯನ**, ಸಂಪುಟ ೬, ಸಂಯುಕ್ತ ಸಂಚಿಕೆ ೧-೨, ಜನವರಿ-ಡಿಸೆಂಬರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ಶಿವಯ್ಯ, ಎಸ್, (೨೦೦೪), **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ**, ವಿದ್ಯಾನಿದಿ ಪ್ರಕಾಶನ, ಗದಗ.

೪೩. ಶ್ರೀಮತಿ, ಎಚ್.ಎಸ್., (೨೦೦೪), **ಸ್ತ್ರೀವಾದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೪. ಸರಸ್ವತಮ್ಮ ಎಚ್.ಡಿ.(೧೯೯೪), **ಎ ಸೋಷಿಯಲಾಜಿಕಲ್ ಸ್ಟಡಿ ಆಫ್** ಆಟಿಟ್ಯೂಡ್ ಆಫ್ ರೂರಲ್ ವುಮೆನ್ ಟು ಎಜುಕೇಷನ್ ಅಂಡ್ ಆಕ್ಯುಪೇಷನ್" ಎಂ.ಫಿಲ್. ಅಧ್ಯಯನ, ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪೫. ಸುನಂದಮ್ಮ, ಆರ್., (೨೦೦೬), *ಗ್ರಾಮೀಣ ಪ್ರದೇಶಗಳಿಗೆ ಜೆಂಡರ್ ತಿಳುವಳಿಕೆ ಕಾರ್ಯಕ್ರಮಗಳ ಅಗತ್ಯ: ಒಂದು ಪರಿಶೀಲನೆ*, **ಮಹಿಳಾ ಅಧ್ಯಯನ,** ಸಂಪುಟ ೮, ಸಂಚಿಕೆ ೧, ಜನವರಿ–ಜೂನ್, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ಸೇತಿ ರಾಜ್ ಮೋಹಿನಿ (೧೯೭೬), **ಮಾಡ್ರನೈಜೇಷನ್ ಆಫ್ ವರ್ಕಿಂಗ್ ವುಮೆನ್ ಇನ್ ಡೆವೆಲಪಿಂಗ್ ಸೊಸೈಟೀಸ್,** ನ್ಯಾಷನಲ್ ಪಬ್ಲಿಕೇಷನ್ ಹೌಸ್, ನ್ಯೂಡೆಲ್ಲಿ.

೪೭. ಹೇಮಲತಾ ಮಹಿಷಿ, (೧೯೮೩), **ಹಿಂದೂ ವಿವಾಹ,** ಭರಣಿ ಪ್ರಕಾಶನ.

ಇಂಗ್ಲಿಷ್ ಕೃತಿಗಳು

1. Aggarwal, J.C., (2002), **Theory and Principles of Education,** Vikas Publishing House Pvt. Ltd., New Delhi.

2. Aggarwal, J.C.,(1999), **Education in Emerging India,** Doala House, Delhi.

3. Ashok Kumar, (2004), **Current Trends in Indian Education,** Ashish Publishing House, New Delhi.

4. Dash, B N, (2007), **Teacher and Education in the Emerging Indian Society,** National Publications Pvt., Ltd., Hyderabad.

5. Gerald, Breeze, (1969), **Urbanisation in Newly Developing Countries,** Prentice Hall of India Pvt. Ltd., New Delhi.

6. Khanna, S.D. and Others, (2003), **Current Problems of Indian Education,** Doala House, Delhi.

7. Lydia Fernandes and Others, (2003), **Trends in Modern Education,** Vijayalakshmi Prakashana, Mysore.

8. Manikya Rao, B., (1989), **Philosophical and Sociological Foundations of Education,** Deepika Publications, Machilipatnam.

9. Manju Mishra, (2007), **Education in emerging Indian Society,** Alfa Publications, New Delhi.

10. Mishra, B K and Mohanty, R K, (2007), **Trends and Issues in Indian Education,** R Lall Book Depot, Meerut.

11. Rai, B C, (1993), **Problems of Indian Education,** Prakashan Kendra, Lucknow.

12. Shankuntala Rao Sastry, (1960), **Women in the Vedic Age,** Bharatiya Vidya Bhavan, Bangalore.

13. Shaya, R N, (2002), **Development Planning and Problems of Indian Education,** Dhanpat Rai Publishing Co. (P), Ltd., New Delhi.

14. Singh, C P,(2008), **Indian Education in Emerging Society,** Lotus Press, New Delhi.

15. Sjoberg, G, (1960), **The Pre-Industrial City,** The Free Press, New York.

16. Swaroop Saxena, (2005), **Education in emerging Indian Society,** R. Lall Book Depot, Meerut

ಅನುಬಂಧ ಎರಡು

ಕುಟುಂಬದ ಹಿರಿಯ ಮಹಿಳೆಗೆ ಮಾಡಿರುವ ಸಂದರ್ಶನ

ಪ್ರಶ್ನಾವಳಿ ೧

ಸಂದರ್ಶಕರ ಹೆಸರು :

ವಯಸ್ಸು :

ಲಿಂಗ :

ಜಾತಿ :

ಉದ್ಯೋಗ :

ಆದಾಯ :

ಸಾಮಾಜಿಕ ಸ್ಥಾನಮಾನ :

ಕ್ರಸಂ.	ಶಿಕ್ಷಣದ ಮಟ್ಟ	ಶೈಕ್ಷಣಿಕ ಸಂಸ್ಥೆಯ ಅಂತರ	ಸಂಸ್ಥೆಯ ಅಂಗ ಸಂಯೋಜನೆ	ಶಿಕ್ಷಣಕ್ಕೆ ಪ್ರೇರೇಪಿಸಿದ ವ್ಯಕ್ತಿ	ಶಾಲೆಯನ್ನು ಬಿಟ್ಟುಬಿಡಲು ಕಾರಣ
೧.	ಪೂರ್ವಶಾಲೆ				
೨.	ಪ್ರಾಥಮಿಕ ಶಿಕ್ಷಣ (೧ ರಿಂದ ೪)				
೩.	ಮಾಧ್ಯಮಿಕ ಶಾಲೆ (೫ ರಿಂದ ೭)				
೪.	ಪ್ರೌಢ ಶಾಲೆ (೮ ರಿಂದ ೧೦)				
೫.	ಪಿ.ಯು.ಸಿ. (೧೧, ೧೨)				
೬.	ಕಾಲೇಜು				
೭.	ಇತರೆ				

೩. ಸ್ವಂತಹಳ್ಳಿ : * ಪಕ್ಕದ ಹಳ್ಳಿ *ಸ್ವಂತ ಪಟ್ಟಣ *ಪಕ್ಕದ ಪಟ್ಟಣ *ನಗರ

೪. ಸಹಶಿಕ್ಷಣ : * ಮಹಿಳಾ ಶಾಲಾ/ಕಾಲೇಜು

೫. ಓದಲು ನಿಮಗೆ ಎಷ್ಟು ಆಸಕ್ತಿ ಇತ್ತು?

೬. ನಿಮ್ಮ ತಂದೆ ತಾಯಿಗಳು ನಿಮ್ಮನ್ನು ಎಷ್ಟು ವಿಧ್ಯಾಭ್ಯಾಸ ಮಾಡಿಸಿದರು?

೭. ಶಿಕ್ಷಣದಲ್ಲಿ ನೀವು ಯಾವುದಾದರು ಸಮಸ್ಯೆಯನ್ನು ಎದುರಿಸಿದ್ದೀರಾ?

ಹೌದು/ಇಲ್ಲ. ಹೌದಾದರೆ ಅದು ಏನು?

ಮಹಿಳಾ ಶಿಕ್ಷಣದ ಬಗೆಗಿನ ಅಭಿಪ್ರಾಯಗಳು

೧. ಮಹಿಳೆಗೆ ಶಿಕ್ಷಣದ ಅವಶ್ಯಕತೆ ಇದೆಯೇ?

ಅ. ಹೌದು ಆ. ಇಲ್ಲ

ಹೌದಾದರೆ ಶಿಕ್ಷಣದ ಅವಶ್ಯಕತೆ ಎಷ್ಟಿದೆ? ಏಕೆ? ಇಲ್ಲವಾದರೆ, ಏಕೆ?

೨. ಮಹಿಳೆ ಮತ್ತು ಪುರುಷರ ಶಿಕ್ಷಣವನ್ನು ಪಡೆಯಲು ಸಮಾನ ಅವಕಾಶಗಳಿವೆಯೇ?

ಅ. ಹೌದು ಆ. ಇಲ್ಲ

೩. ನಿಮ್ಮ ಮಗನಿಗೆ ಎಷ್ಟು ಶಿಕ್ಷಣ ಕೊಡಬೇಕೆಂದಿರುವಿರಿ?

೪. ನಿಮ್ಮ ಮಗಳಿಗೆ ಎಷ್ಟು ಶಿಕ್ಷಣ ಕೊಡಬೇಕೆಂದಿರುವಿರಿ?

೫. ನಿಮ್ಮ ಮಗಳಿಗೆ ಎಂತಹ ಶಿಕ್ಷಣವು ಸರಿಯಾದುದು?

೬. ಹಳ್ಳಿಯಿಂದ ಹೊರಗಡೆ ಇರುವ ಶಾಲೆ-ಕಾಲೇಜುಗಳಿಗೆ ನಿಮ್ಮ ಮಗಳನ್ನು ಕಳುಹಿಸುತ್ತೀರಾ?

ಶಾಲೆ : ಅ. ಹೌದು ಆ. ಇಲ್ಲ

ಕಾಲೇಜು : ಅ. ಹೌದು ಆ. ಇಲ್ಲ

ಇಲ್ಲವಾದರೆ ಏಕೆ?

೭ ಹಳ್ಳಿಯಿಂದ ಹೊರಗಡೆ ಇರುವ ಶಾಲೆ–ಕಾಲೇಜುಗಳಿಗೆ ನಿಮ್ಮ ಮಗನನ್ನು ಕಳುಹಿಸುತ್ತೀರಾ?

ಶಾಲೆ : ಅ. ಹೌದು ಆ. ಇಲ್ಲ

ಕಾಲೇಜು : ಅ. ಹೌದು ಆ. ಇಲ್ಲ

೮. ಶಾಲಾ ಶಿಕ್ಷಣದ ನಂತರ ನಿಮ್ಮ ಮಗಳನ್ನು ಕಾಲೇಜು ಶಿಕ್ಷಣಕ್ಕೆ ಕಳುಹಿಸುತ್ತೀರಾ?

ಹೌದು/ಇಲ್ಲ

೯. ಮಗಳಿಗೆ ಶಿಕ್ಷಣ ಕೊಡಿಸುವುದರಿಂದ ಅವಳ ಭವಿಷ್ಯ ಉತ್ತಮವಾಗುತ್ತದೆಯೇ?

ಹೌದು/ಇಲ್ಲ

೧೦. ನಿಮ್ಮ ಮಗಳು ಮನೆಕೆಲಸ ಮತ್ತು ಹೊಲಗದ್ದೆ ಕೆಲಸ ಮಾಡಬೇಕೆಂದು ಬಯಸುತ್ತೀರಾ?

ಹೌದು/ಇಲ್ಲ

೧೧. ಮಹಿಳಾ ಶಿಕ್ಷಣವು ಅವಳ ಕುಟುಂಬದ ಏಳಿಗೆಗೆ (ಒಳಿತಿಗೆ) ಸಹಾಯವಾಗುತ್ತದೆ. ಈ ಹೇಳಿಕೆಯನ್ನು ನೀವು ಒಪ್ಪುತ್ತೀರಾ?

೧. ತುಂಬಾ ಸಹಾಯಕ ೨. ಸಹಾಯಕ ೩. ಸ್ವಲ್ಪ ಸಹಾಯಕ ೪. ಪ್ರತಿಕೂಲ

೧೨. ನಿಮ್ಮ ಪ್ರಕಾರ ಶಿಕ್ಷಿತ ಮಹಿಳೆ ಮತ್ತು ಅಶಿಕ್ಷಿತ ಮಹಿಳೆಯ ಸ್ಥಾನಮಾನದಲ್ಲಿ ವ್ಯತ್ಯಾಸವಿದೆಯೇ?

೧. ಉತ್ತಮ ೨. ಸಮಾನ ೩. ಕೀಳು

೧೩. ಅಶಿಕ್ಷಿತ ಮಹಿಳೆಗಿಂತ, ಶಿಕ್ಷಿತ ಮಹಿಳೆಯರಿಗೆ ವಿವಾಹದ ಅವಕಾಶಗಳು ಹೆಚ್ಚಿದೆಯೇ?

೧. ತುಂಬ ಹೆಚ್ಚು ೨. ಹೆಚ್ಚು ೩. ಒಂದೇ ೪. ಕೀಳು ೫. ಬಹಳ ಕೀಳು

೧೪. ಮಹಿಳಾ ಶಿಕ್ಷಣವು ವೈವಾಹಿಕ ಸಾಮರಸ್ಯವನ್ನು ಕೆಡಿಸುತ್ತದೆ. ಈ ವಾದವನ್ನು ನೀವು ಒಪ್ಪುತ್ತೀರಾ?

೧. ಹೌದು ೨. ಇಲ್ಲ

೧೫. ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದರಿಂದ ಅವರು ಕೆಡುತ್ತಾರೆ ಎಂಬ ಭಾವನೆ ಹೆಚ್ಚು ಮಹಿಳೆ ಮತ್ತು ಪುರುಷರಲ್ಲಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

೧. ಹೌದು–ಹೆಚ್ಚು ಪ್ರಕರಣಗಳಲ್ಲಿ ೨. ಹೌದು–ಕೆಲವು ಪ್ರಕರಣಗಳಲ್ಲಿ

೩. ಹೌದು–ಕೆಲವೇ ಪ್ರಕರಣಗಳಲ್ಲಿ ೪. ಯಾವುದೇ ಪ್ರಕರಣಗಳಿಲ್ಲ.

ಅನುಬಂಧ ಮೂರು

ಗ್ರಾಮದ ಹಿರಿಯ ನಾಗರಿಕರಿಗೆ ಮಾಡಿರುವ ಸಂದರ್ಶನ

ಪ್ರಶ್ನಾವಳಿ ೨

ಸಂದರ್ಶಕರ ಹೆಸರು :

ವಯಸ್ಸು :

ಲಿಂಗ :

ಜಾತಿ :

ಉದ್ಯೋಗ :

ಆದಾಯ :

ಸಾಮಾಜಿಕ ಸ್ಥಾನಮಾನ :

೧. ಮಹಿಳೆಗೆ ಶಿಕ್ಷಣದ ಅವಶ್ಯಕತೆ ಇದೆಯೇ?

೧. ಹೌದು ೨. ಇಲ್ಲ ಹೌದಾದರೆ ಶಿಕ್ಷಣದ ಅವಶ್ಯಕತೆ ಎಷ್ಟಿದೆ? ಏಕೆ?

೨. ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆ ಶಿಕ್ಷಣ ಕೊಡಬೇಕೆಂದು ಭಾವಿಸುತ್ತೀರಾ?

೧. ಹೌದು ೨. ಇಲ್ಲ ಇಲ್ಲವಾದರೆ ಏಕೆ?

೩. ಹೆಣ್ಣು ಮಕ್ಕಳಿಗೆ ಶಾಲಾ ಶಿಕ್ಷಣದ ಅವಶ್ಯಕತೆ ಇದೆಯೇ?

೧. ಹೌದು ೨. ಇಲ್ಲ ಇಲ್ಲವಾದರೆ ಏಕೆ?

೪. ಹೆಣ್ಣು ಮಕ್ಕಳಿಗೆ ಕಾಲೇಜು ಶಿಕ್ಷಣದ ಅವಶ್ಯಕತೆ ಇದೆಯೇ?

೧. ಹೌದು ೨. ಇಲ್ಲ ಇಲ್ಲವಾದರೆ ಏಕೆ?

೫. ಓದಿದ ಹೆಣ್ಣು ಮಕ್ಕಳು ದೊಡ್ಡವರ ಮಾತು ಕೇಳುವುದಿಲ್ಲ ಎಂಬ ಅಭಿಪ್ರಾಯವಿದೆ. ಇದು ಸರಿಯೇ? ತಪ್ಪೆ?

೬. ಹೆಣ್ಣು ಮಕ್ಕಳನ್ನು ಹೆಚ್ಚು ಓದಿಸಿದಷ್ಟು ತಂದೆ ತಾಯಿಗಳಿಗೆ ಕಷ್ಟ ಎಂಬ ಭಾವನೆ ಬಹು ಜನರಲ್ಲಿ ಇದೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

೭. ದೂರದ ನಗರಗಳಿಗೆ ನಿಮ್ಮ ಹೆಣ್ಣು ಮಕ್ಕಳನ್ನು ಕಾಲೇಜುಗಳಿಗೆ ಕಳುಹಿಸುತ್ತೀರಾ?

೧. ಹೌದು ೨) ಇಲ್ಲ ಇಲ್ಲವಾದರೆ ಏಕೆ?

೮. ದೂರದ ಊರಿನಲ್ಲಿ ನಿಮ್ಮ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಲು ಉತ್ತಮ ವಾಹನ ಸೌಲಭ್ಯಗಳಿವೆಯೇ?

೧. ಹೌದು ೨. ಇಲ್ಲ

೯. ಹೆಣ್ಣು ಮಕ್ಕಳಿಗೆ ಎಷ್ಟು ಶಿಕ್ಷಣ ಕೊಡಿಸುವುದು ಸರಿ ಎಂದು ಭಾವಿಸುತ್ತೀರಾ?

೧೦. ಗಂಡು ಮಕ್ಕಳಿಗೆ ಎಷ್ಟು ಶಿಕ್ಷಣ ಕೊಡಿಸುವುದು ಸರಿ ಎಂದು ಭಾವಿಸುತ್ತೀರಾ?

೧೧. ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳಿಬ್ಬರಿಗೆ ಸಮಾನ ಶಿಕ್ಷಣ ನೀಡಬೇಕು ಎಂಬುದಕ್ಕೆ ನಿಮ್ಮ ಅಭಿಪ್ರಾಯವೇನು?

೧. ಹೌದು ೨. ಇಲ್ಲ ಇಲ್ಲವಾದರೆ ಏಕೆ?

ಅನುಬಂಧ ಮೂರು

ಶಾಲಾ ಮುಖೋಪಾಧ್ಯಾಯರಿಗೆ ಮಾಡಿರುವ ಸಂದರ್ಶನ

ಪ್ರಶ್ನಾವಳಿ ೩

ಶಾಲೆಯ ಹೆಸರು :

ಶಾಲೆ ಇರುವ ಊರಿನ ಹೆಸರು :

ಖಾಸಗಿ / ಸರ್ಕಾರಿ :

ಮುಖ್ಯೋಪಾಧ್ಯಾಯರ ಹೆಸರು :

ವಯಸ್ಸು :

ವಿದ್ಯಾರ್ಹತೆ :

ಲಿಂಗ :

ಜಾತಿ :

ಉದ್ಯೋಗ :

ಆದಾಯ :

ಶಾಲೆಯ ಸ್ವರೂಪ :

೧. ಹೆಣ್ಣು ಮಕ್ಕಳ ಶಾಲೆ

೨. ಸಹಶಿಕ್ಷಣ

ಅ. ಶಾಲೆಯಲ್ಲಿ ತರಗತಿಗಳು ಎಷ್ಟರಿಂದ ಎಷ್ಟರವರೆಗೆ ಇದೆ.

ಆ. ಕಲಿಕೆಯ ಮಾಧ್ಯಮ ೧. ಕನ್ನಡ ೨. ಆಂಗ್ಲ ೩. ಇತರೆ.

೩. ಶಾಲೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಅ. ಗಂಡು ಮಕ್ಕಳ ಸಂಖ್ಯೆ ______

ಆ. ಹೆಣ್ಣು ಮಕ್ಕಳ ಸಂಖ್ಯೆ _____

೪. ಶಾಲೆಯಲ್ಲಿ ಎಷ್ಟು ಶಿಕ್ಷಕರಿದ್ದಾರೆ?

ಅ. ಪುರುಷ ಶಿಕ್ಷಕರು ಎಷ್ಟು? ಆ. ಮಹಿಳಾ ಶಿಕ್ಷಕರು ಎಷ್ಟು?

೫. ಎಲ್ಲಾ ವಿಷಯಗಳ ಬೋಧನೆಗೆ ಅಧ್ಯಾಪಕರಿದ್ದಾರೆಯೇ?

ಇದ್ದಾರೆ/ಇಲ್ಲ

೬. ಶಾಲೆಯಲ್ಲಿ ಕುಡಿಯುವ ನೀರಿನ ಸೌಲಭ್ಯವಿದೆಯೇ?

ಇದೆ / ಇಲ್ಲ.

೭. ಹೆಣ್ಣು ಮಕ್ಕಳು ಪ್ರತಿದಿನ ತರಗತಿಗಳಿಗೆ ಹಾಜರಾಗುತ್ತಾರೆಯೇ?

ಅ. ಹೌದು ಆ. ಇಲ್ಲ. ಇಲ್ಲವಾದರೆ ಏಕೆ?

೮. ಶಾಲೆಯಲ್ಲಿ ಮಹಿಳಾ ಶೌಚಾಲಯವಿದೆಯೇ?

ಇದೆ/ಇಲ್ಲ

೯. ಹೆಣ್ಣು ಮಕ್ಕಳು ಒಮ್ಮೆ ಶಾಲೆಗೆ ಸೇರಿಕೊಂಡರೆ ಅವರು ನಿಮ್ಮ ಶಾಲೆಯಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸುತ್ತಾರೆಯೆ?

ಅ. ಹೌದು ಆ. ಇಲ್ಲ ಇಲ್ಲವಾದರೆ ಏಕೆ?

೧೦. ಶಾಲೆಯನ್ನು ಬಿಟ್ಟು ಬಿಡುವ ಹೆಣ್ಣು ಮಕ್ಕಳ ಸಂಖ್ಯೆ ಎಷ್ಟಿದೆ?

ಅ. ಹೆಚ್ಚು ಆ. ಸಾಧಾರಣ ಇ.ಕಡಿಮೆ ಈ. ಇಲ್ಲವೇ ಇಲ್ಲ

೧೧. ನೀವು ಪೋಷಕರ ಸಭೆಯನ್ನು ಕರೆಯುತ್ತೀರಾ?

ಅ. ಹೌದು ಆ. ಇಲ್ಲ ಇಲ್ಲವಾದರೆ ಏಕೆ?

೧೨. ಶಾಲೆಯನ್ನು ಬಿಟ್ಟುಬಿಡುವ ಹೆಣ್ಣುಮಕ್ಕಳ ಪೋಷಕರೊಡನೆ ನೀವು ಶಾಲೆಗೆ ಕಳುಹಿಸುವಂತೆ ಸಮಾಲೋಚನೆ ನಡೆಸುತ್ತೀರಾ?

ಅ. ಹೌದು ಆ. ಇಲ್ಲ

೧೩. ನೀವು ಹೆಣ್ಣುಮಕ್ಕಳ ಶಿಕ್ಷಣದ ಮಹತ್ವವನ್ನು ಪೋಷಕರಿಗೆ ತಿಳಿಸಿಕೊಡುತ್ತೀರಾ?

ಅ. ಹೌದು ಆ. ಇಲ್ಲ

ಹೌದಾದರೆ ಪ್ರತಿಕ್ರಿಯೆ ಏನು?

ಅ. ಉತ್ತಮ ಆ. ಸಾಧಾರಣ ಇ. ಏನೂ ಇಲ್ಲ

೧೪. ಶಾಲಾ ವಾತಾವರಣದಲ್ಲಿ ಹೆಣ್ಣುಮಕ್ಕಳಿಗೆ ಕೀಟಲೆ, ತಕರಾರು ಅಥವಾ ಲೈಂಗಿಕ ಕಿರುಕುಳಗಳಿವೆಯೇ?

ಅ. ಹೌದು ಆ. ಇಲ್ಲ

೧೫. ನಿಮ್ಮ ಶಾಲೆಗೆ ಬರುವ ಹೆಣ್ಣುಮಕ್ಕಳು ಎಂತಹ ಆರ್ಥಿಕ ಸ್ಥಿತಿ ಇರುವ ಕುಟುಂಬಗಳಿಂದ ಬರುತ್ತಾರೆ?

ಅ. ಶ್ರೀಮಂತರು ಆ. ಮಧ್ಯಮವರ್ಗ ಇ. ಬಡವರು ಈ. ಕಡುಬಡವರು

೧೬, ನಿಮ್ಮ ಪ್ರಕಾರ ಹೆಣ್ಣುಮಕ್ಕಳು ಶಾಲೆ ಬಿಟ್ಟುಬಿಡಲು ಪ್ರಮುಖ ಕಾರಣಗಳೇನು?

ಅನುಬಂಧ ಮೂರು

ವಿದ್ಯಾರ್ಥಿನಿಯರಿಗೆ ಮಾಡಿರುವ ಸಂದರ್ಶನ

ಪ್ರಶ್ನಾವಳಿ ೪

೧. ವಿದ್ಯಾರ್ಥಿನಿಯ ಹೆಸರು :

೨. ತರಗತಿ :

೩. ವಯಸ್ಸು :

೪. ಶಾಲೆಯ ಸ್ವರೂಪ :

ಅ. ಖಾಸಗಿ/ಸರ್ಕಾರಿ

ಆ. ಹೆಣ್ಣು ಮಕ್ಕಳ ಶಾಲೆ/ಸಹ ಶಿಕ್ಷಣ

೫. ಕುಟುಂಬದ ಸ್ವರೂಪ : ವಿಭಕ್ತ/ಅವಿಭಕ್ತ

೬. ಮನೆಯಲ್ಲಿ ಮಾತನಾಡುವ ಭಾಷೆ :

೭. ಶಾಲೆಯಲ್ಲಿ ಕಲಿಯುವ ಮಾಧ್ಯಮ :

೮. ಎರಡನೇ ಭಾಷೆ (Second Language) :

೯. ಊರು, ತಾಲ್ಲೂಕು, ಜಿಲ್ಲೆ :

೧೦. ವಿದ್ಯಾಭ್ಯಾಸದ ಮಟ್ಟ :

ಅ. ತಂದೆ :

ಆ. ತಾಯಿ :

೧೧. ನೀವು ಓದುವ ಶಾಲೆ ನಿಮ್ಮ ಊರಿನಲ್ಲೇ ಇದೆಯೇ? : ಇದೆ/ಇಲ್ಲ

ಇಲ್ಲವಾದರೆ ಎಷ್ಟು ದೂರದಲ್ಲಿ ಇದೆ? :

೧೨. ಶಾಲೆಗೆ ಹೋಗುವ ವಿಧಾನ

ಅ. ಕಾಲುನಡಿಗೆ :

ಆ. ಸೈಕಲ್ :

ಇ. ದ್ವಿಚಕ್ರವಾಹನ :

ಈ. ಬಸ್ಸು :

೧೩. ನಿಮ್ಮ ಶಾಲೆಯಲ್ಲಿ ಮಹಿಳಾ ಶೌಚಾಲಯ ಸೌಲಭ್ಯವಿದೆಯೇ? : ಇದೆ/ಇಲ್ಲ

ಇಲ್ಲವಾದರೆ ಬದಲಿ ವ್ಯವಸ್ಥೆ ಏನು?

೧೪. ನಿಮ್ಮ ಶಾಲೆಯಲ್ಲಿ ಕುಡಿಯುವ ನೀರಿನ ಸೌಲಭ್ಯವಿದೆಯೇ? : ಹೌದು/ಇಲ್ಲ

೧೫. ನಿಮ್ಮ ಶಾಲೆಯಲ್ಲಿ ಎಷ್ಟು ಜನ ಅಧ್ಯಾಪಕರಿದ್ದಾರೆ?

ಅ. ಮಹಿಳಾ ಅಧ್ಯಾಪಕರೆಷ್ಟು? :

ಆ. ಪುರುಷ ಅಧ್ಯಾಪಕರೆಷ್ಟು? :

೧೬. ನಿಮ್ಮ ಶಾಲೆಯಲ್ಲಿ ಅಧ್ಯಾಪಕರು ನಿಮ್ಮ ಶಿಕ್ಷಣವನ್ನು ಪ್ರೋತ್ಸಾಹಿಸುತ್ತಾರೆಯೇ? : ಅ. ಹೆಚ್ಚು ಆ. ಸಾಧಾರಣ ಇ. ಇಲ್ಲ

೧೭. ಶಾಲೆಯಲ್ಲಿ ಶಿಕ್ಷಕರು ಹೆಣ್ಣು ಮತ್ತು ಗಂಡು ಮಕ್ಕಳ ಮಧ್ಯೆ ತಾರತಮ್ಯ ಮಾಡುತ್ತಾರೆಯೇ? : ಹೌದು / ಇಲ್ಲ.

ಹೌದಾದರೆ ಯಾವ ತರಹ?

೧೮. ನೀವು ಶಾಲೆಗೆ ಪ್ರತಿದಿನ ಹೋಗುತ್ತೀರಾ? : ಅ. ಹೌದು ಆ. ಇಲ್ಲ

ಇಲ್ಲವಾದರೆ ಏಕೆ?

೧೯. ಶಾಲೆಗೆ ಹೋಗಲು ನಿಮಗೆ ಸಂತೋಷವಾಗುತ್ತದೆಯೇ? : ಅ. ಹೌದು ಆ. ಇಲ್ಲ

ಇಲ್ಲವಾದರೆ ಏಕೆ?

೨೦. ನೀವು ಎಲ್ಲಿಯವರೆಗೆ ಓದಬೇಕೆಂದಿರುವಿರಿ? :

೨೧. ನಿಮ್ಮ ಮನೆಯಲ್ಲಿ ನಿಮ್ಮನ್ನು ಎಲ್ಲಿಯ ವರೆಗೆ ಓದಿಸಬೇಕೆಂದಿದ್ದಾರೆ? :

೨೨. ನಿಮ್ಮ ಮನೆಯಲ್ಲಿ ಗಂಡು ಮಕ್ಕಳಿಗೆ ಮತ್ತು ನಿಮಗೆ ಶಿಕ್ಷಣ ನೀಡುವಲ್ಲಿ ತಾರತಮ್ಯ ಮಾಡುತ್ತಾರೆಯೇ? : ಅ. ಹೌದು ಆ. ಇಲ್ಲ
ಹೌದಾದರೆ ಯಾವ ರೀತಿ?

೨೩. ನಿಮ್ಮ ಮನೆಯಲ್ಲಿ ಮನೆ ಕೆಲಸವನ್ನು ಮಾಡಿ ಶಾಲೆಗೆ ಬರಬೇಕೆ? : ಹೌದು / ಇಲ್ಲ

೨೪. ನಿಮ್ಮ ಮನೆಯಲ್ಲಿ ನಿಮಗೆ ಶಿಕ್ಷಣ ನೀಡುವಲ್ಲಿನ ಅಭಿಪ್ರಾಯವೇನು? :

೨೫. ನಿಮ್ಮ ಶಾಲಾ ವಾತಾವರಣ ಹೆಣ್ಣು ಮಕ್ಕಳಿಗೆ ಅಥವಾ ನಿಮಗೆ ಕೀಟಲೆ/ ತಕರಾರು ಅಥವಾ ಲೈಂಗಿಕ ಕಿರುಕುಳಗಳಿವೆಯೇ? : ಹೌದು / ಇಲ್ಲ

೨೬. ಹೆಣ್ಣು ಮಕ್ಕಳಿಗೆ ಕಾಲೇಜು ಶಿಕ್ಷಣದ ಅವಶ್ಯಕತೆ ಇದೆಯೇ? : ಅ. ಹೌದು ಆ. ಇಲ್ಲ
ಅ. ಹೌದಾದರೆ ಏಕೆ?
ಆ. ಇಲ್ಲವಾದರೆ ಏಕೆ?

೨೭. ನೀವು ದೂರದ ಊರಿನಲ್ಲಿ ಶಿಕ್ಷಣ ಪಡೆಯಲು ನಿಮ್ಮ ಮನೆಯಲ್ಲಿ ಒಪ್ಪುತ್ತಾರೆಯೇ? : ಹೌದು / ಇಲ್ಲ
ಇಲ್ಲವಾದರೆ ಏಕೆ?

೨೮. ದೂರದ ಊರಿನಲ್ಲಿ ಶಿಕ್ಷಣ ಪಡೆಯಲು ಉತ್ತಮ ವಾಹನ ಸೌಲಭ್ಯಗಳಿವೆಯೇ? : ಹೌದು / ಇಲ್ಲ

೨೯. ಮಹಿಳೆ ಮತ್ತು ಪುರುಷರು ಶಿಕ್ಷಣವನ್ನು ಪಡೆಯಲು ಸಮಾನ ಅವಕಾಶಗಳಿವೆಯೇ? : ಅ. ಹೌದು ಆ. ಇಲ್ಲ

೩೦. ನೀವು ದೂರದ ಊರಿನಲ್ಲಿ ಶಾಲಾ-ಕಾಲೇಜುಗಳಲ್ಲಿ ಶಿಕ್ಷಣ ಪಡೆಯಲು ಇಷ್ಟಪಡುತ್ತೀರಾ? : ಹೌದು / ಇಲ್ಲ
ಇಲ್ಲವಾದರೆ ಕಾರಣವೇನು?

ಮಹಿಳಾ ಅಧ್ಯಯನ ವಿಭಾಗ